ಶನಿವಾರ, ಮಾರ್ಚ್ 20, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 79 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಎಷ್ಟು ಮಕ್ಕಳನ್ನು ಮಾಡಿಕೊಳ್ಳಬೇಕು ಎಂದು ಸಲಹೆ ಕೊಡುವ ರೂಢಿ ಇದ್ದರೂ ತಮ್ಮ ಆರೋಗ್ಯ, ಆರ್ಥಿಕ ಸ್ಥಿತಿ ನೋಡಿಕೊಂಡು ಇನ್ನೊಂದು ಮಗು ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಿದೆ.



ಪ್ರಸಿದ್ಧ ಕೃಷ್ಣನಿಗೆ ಕೂಡಿಬಂದ ಕಾಲ 13

ಆಳ-ಅಗಲ
ರೈತರ ಬೆವರಿಗೆ ಸಂಘದ ಬಲ

ಜೆಡಿಎಸ್ ಪಟ್ಟು: ಕಲಾಪಕ್ಕೆ ಪೆಟ್ಟು 6

ಸೆನ್ಸೆಕ್ಸ್	ನಿಫ್ಟಿ	₹/$
49,858	14,744	72.52

‘ನ್ಯಾಯದ ದೀಪ’ ಆರಿದರೆ ಅರಾಜಕತೆ • ವಿಧಾನಸಭೆಯಲ್ಲಿ ಪಕ್ಷಭೇದ ಮರೆತು ಚರ್ಚೆ

‘ನ್ಯಾಯಾಂಗ ಭ್ರಷ್ಟಾಚಾರ’: ಪ್ರಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯದ ದೀಪ ಹೊಯ್ದಾಡುತ್ತಿದ್ದು, ಅದು ಆರಿ ಹೋದರೆ ದೇಶದಲ್ಲಿ ಅರಾಜಕತೆಯ ಕಾರ್ಗತ್ತಲು ಕವಿಯುತ್ತದೆ. ನ್ಯಾಯಾಂಗದಲ್ಲಿ ವಿಪರೀತ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನ್ಯಾಯಾಧೀಶರು ಜನಪ್ರತಿನಿಧಿಗಳನ್ನು ಕಳ್ಳ–ಕಾಕರಂತೆ ನೋಡುತ್ತಾರೆ...’

ವಿಧಾನಸಭೆಯಲ್ಲಿ ಶುಕ್ರವಾರ ಬಜೆಟ್ ಮೇಲಿನ ಚರ್ಚೆಯ ವೇಳೆ ಪಕ್ಷಭೇದ ಮರೆತು ಶಾಸಕರು ನ್ಯಾಯಾಂಗ ವ್ಯವಸ್ಥೆಯನ್ನು ಈ ಮೇಲಿನಂತೆ ಕಟುವಾಗಿಯೇ ಒರೆಗೆ ಹಚ್ಚಿದರು.

‘ನ್ಯಾಯಾಂಗ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅಕ್ರಮಗಳು ಮತ್ತು ಭ್ರಷ್ಟಾಚಾರದ ಬಗ್ಗೆ ಹೊರಗೆ ಎಲ್ಲೂ ಧ್ವನಿ ಎತ್ತಲು ಸಾಧ್ಯವಿಲ್ಲ. ಮಾತನಾಡಿದರೆ ಮಾರನೇ ದಿನವೇ ನೋಟಿಸ್ ಬರುತ್ತದೆ. ಇಲ್ಲಿ (ಸದನದಲ್ಲಿ) ಮಾತ್ರ ನಮಗೆ ರಕ್ಷಣೆ ಇದೆ. ಇಲ್ಲಿಯೇ ವಿಮರ್ಶಾತ್ಮಕವಾಗಿ ಮಾತನಾಡದಿದ್ದರೆ ಇನ್ನೆಲ್ಲಿ ಮಾತನಾಡುವುದು’ ಎಂದು ಶಾಸಕರು ಕೇಳಿದರು.

ಈ ಗಂಭೀರ ಚರ್ಚೆಗೆ ಪೀಠಿಕೆ ಹಾಕಿದ್ದು ಕಾಂಗ್ರೆಸ್‌ನ ಕೆ.ಆರ್. ರಮೇಶ್‌ಕುಮಾರ್. ಚರ್ಚೆ ಇನ್ನಷ್ಟು ವಿಸ್ತಾರ ಪಡೆದುಕೊಳ್ಳಲು ಪ್ರೇರಣೆ ನೀಡಿ, ಎಲ್ಲ ಪಕ್ಷಗಳ ಹಿರಿಯ ಶಾಸಕರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವಂತೆ ಮಾಡಿದ್ದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ.

‘ಶಾಸಕಾಂಗ ಮತ್ತು ಕಾರ್ಯಾಂಗ ತಮ್ಮ ಜವಾಬ್ದಾರಿಗಳನ್ನು ಮರೆತಿದ್ದಾಗ ‘ನ್ಯಾಯಾಂಗ ಕ್ರಿಯಾಶೀಲತೆ’ (ಜುಡಿಷಿಯಲ್ ಆಕ್ಟಿವಿಸಮ್) ಆರಂಭವಾಯಿತು. ಈಗೀಗ ನ್ಯಾಯಾಲಯಗಳಿಂದ ಹೊರ ಬೀಳುತ್ತಿರುವ ತೀರ್ಪುಗಳನ್ನು ನೋಡಿದರೆ ಆತಂಕವಾಗುತ್ತದೆ. ನ್ಯಾಯದ ದೀಪ ಹೊಯ್ದಾಡುತ್ತಿದ್ದು, ಎಲ್ಲಿ ಆರಿ ಹೋಗುವುದೊ ಎಂಬ ಆತಂಕ ಕಾಡುತ್ತಿದೆ’ ಎಂದು ರಮೇಶ್‌ಕುಮಾರ್ ಹೇಳಿದರು.

ಆಗ ಮಧ್ಯಪ್ರವೇಶಿಸಿದ ಕಾಗೇರಿ, ‘ನ್ಯಾಯಾಲಯಗಳಲ್ಲಿ ಇತ್ಯರ್ಥಗೊಳ್ಳದ ಪ್ರಕರಣಗಳು ಭಾರಿ ಪ್ರಮಾಣದಲ್ಲಿ ಬಾಕಿ ಉಳಿದಿವೆ. ಈ ವಿಚಾರದಲ್ಲಿ ಶಾಸಕಾಂಗ ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲವೆ’ ಎಂದು ರಮೇಶ್ ಕುಮಾರ್ ಅವರನ್ನು ಕೇಳಿದರು.

‘ಈ ವಿಚಾರದಲ್ಲಿ ನಾವು ಖಂಡಿತಾ ಮಧ್ಯ ಪ್ರವೇಶಿಸಲು ಸಾಧ್ಯವಿದೆ. ಆ ಅಧಿಕಾರ ಶಾಸಕಾಂಗಕ್ಕೆ ಇದೆ. ಬಳಸಬೇಕು’ ಎಂದು ರಮೇಶ್‌ಕುಮಾರ್ ಹೇಳಿದರು.

ನಿವೇಶನ ಹಗರಣದ ಬಗ್ಗೆ ಕ್ರಮ ಯಾಕಿಲ್ಲ?: ಚರ್ಚೆ ಅಪೂರ್ಣವಾಗಿದ್ದನ್ನು ಮನಗಂಡ ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ಅದನ್ನು ಇನ್ನಷ್ಟು ಬೆಳೆಸಲು ಮುಂದಾದರು.

6ನೇ ಪುಟ ನೋಡಿ

‘ಶೇ 50 ರಷ್ಟು ಭ್ರಷ್ಟಾಚಾರ’

‘ಸುಪ್ರೀಂಕೋರ್ಟ್‌ನ ಕೆಲವು ನಿವೃತ್ತ ನ್ಯಾಯಾಧೀಶರು ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಬಗ್ಗೆ ಹೇಳಿಕೊಂಡಿದ್ದಾರೆ. ನಾವಾಗೇ ಅಲ್ಲಿನ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ನ್ಯಾಯಾಂಗ ನಿಂದನೆ ಆಗುತ್ತದೆ ಎಂದು ಹೆದರಿಸುತ್ತಾರೆ’ ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಹೇಳಿದರು.

‘ನ್ಯಾಯಾಂಗದಲ್ಲಿ ಶೇ 50 ರಷ್ಟು ಭ್ರಷ್ಟಾಚಾರ ತುಂಬಿದೆ ಎಂದು ನಿವೃತ್ತ ನ್ಯಾಯಾಧೀಶರೇ ಹೇಳುತ್ತಾರೆ. ಭ್ರಷ್ಟಾಚಾರ ನಡೆಸುವ ನ್ಯಾಯಾಧೀಶರ ಮೇಲೆ ದಾಳಿ ನಡೆಸುವವರು ಯಾರು? ನ್ಯಾಯಾಂಗ ತನ್ನ ಗೌರವನ್ನು ಉಳಿಸಿಕೊಂಡು ಹೋಗಬೇಕು. ನ್ಯಾಯಾಂಗ ಕೆಟ್ಟು ಹೋದರೆ, ಅರಾಜಕತೆ ಸೃಷ್ಟಿಯಾಗುತ್ತದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ನಮ್ಮನ್ನು ಕಳ್ಳರಂತೆ ನೋಡುತ್ತಾರೆ’

‘ನ್ಯಾಯಾಧೀಶರು ಜನಪ್ರತಿನಿಧಿಗಳನ್ನು ಕಳ್ಳರಂತೆ ನೋಡುತ್ತಾರೆ. ನಮ್ಮ ಕ್ಷೇತ್ರಗಳಲ್ಲಿ ಯಾವುದೇ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರೆ, ನಮ್ಮ ಪಕ್ಕದಲ್ಲಿ ಕೂರುವುದಿಲ್ಲ, ನಾವೇನು ಕಳ್ಳರಾ, ಕ್ರಿಮಿನಲ್‌ಗಳಾ’ ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಪ್ರಶ್ನಿಸಿದರು.

ಈಗಂತೂ ಕೆಲವು ನ್ಯಾಯಾಧೀಶರು ರಸ್ತೆಗೆ ಇಳಿದು ಸುದ್ದಿಗೋಷ್ಠಿ ಮಾಡುವ ಮಟ್ಟಕ್ಕೆ ಇಳಿದಿದ್ದಾರೆ
ಎಚ್‌.ಕೆ.ಪಾಟೀಲ, ಕಾಂಗ್ರೆಸ್

ನ್ಯಾಯಾಧೀಶರು ಸೇರಿದಂತೆ ಯಾರೂ ದೇವಲೋಕದಿಂದ ಇಳಿದು ಬಂದಿಲ್ಲ. ಎಲ್ಲರೂ ತಾಯಿ ಗರ್ಭದಿಂದಲೇ ಬಂದವರು
ಕೆ.ಎಂ.ಶಿವಲಿಂಗೇಗೌಡ, ಜೆಡಿಎಸ್

ನ್ಯಾಯಾಲಯ ಎಂದರೆ ಜನರಲ್ಲಿ ಗೌರವ ಮತ್ತು ಭಕ್ತಿ ಇದೆ. ಆದರೆ ಅಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ
ಜಗದೀಶ ಶೆಟ್ಟರ್, ಕೈಗಾರಿಕಾ ಸಚಿವ

ನ್ಯಾಯಾಂಗ ಎಲ್ಲೆ ಮೀರಿದಾಗ ನ್ಯಾಯಾಂಗದಲ್ಲಿ ಸುಧಾರಣೆಗಳನ್ನು ತರಲು ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ
ಬಸವರಾಜ ಬೊಮ್ಮಾಯಿ
ಕಾನೂನು ಸಚಿವ

ವಾಟ್ಸ್‌ಆ್ಯಪ್ ಹೊಸ ಗೋಪ್ಯತಾ ನೀತಿಗೆ ತಡೆ ನೀಡಿ: ಕೇಂದ್ರ

ನವದೆಹಲಿ(ಪಿಟಿಐ): ಫೇಸ್‌ಬುಕ್ ಒಡೆತನದ ವಾಟ್ಸ್‌ಆ್ಯಪ್ ಹೊಸ ಗೋಪ್ಯತಾ ನೀತಿ ಮತ್ತು ಸೇವಾ ನಿಯಮಗಳನ್ನು ಮೇ 15ರಿಂದ ಜಾರಿಗೆ ತರಲು ನಿರ್ಧರಿಸಿದ್ದು, ಇದಕ್ಕೆ ತಡೆ ನೀಡಬೇಕೆಂದು ಕೇಂದ್ರ ಸರ್ಕಾರವು ಶುಕ್ರವಾರ ದೆಹಲಿ ಹೈಕೋರ್ಟ್‌ಗೆ ಕೋರಿದೆ.

ಸಾಮಾಜಿಕ ಜಾಲತಾಣ ವೇದಿಕೆ ವಾಟ್ಸ್‌ಆ್ಯಪ್‌ನ ಹೊಸ ಗೋಪ್ಯತಾ ನೀತಿಯನ್ನು ಪ್ರಶ್ನಿಸಿ ಅರ್ಜಿದಾರರಾದ ಸೀಮಾ ಸಿಂಗ್, ಮೇಘನ್ ಹಾಗೂ ವಿಕ್ರಮ್ ಸಿಂಗ್ ಎಂಬುವರು ಸಲ್ಲಿಸಿದ ಅರ್ಜಿಗೆ ಪ್ರತಿಕ್ರಿಯೆಯಾಗಿ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ತನ್ನ ಅಫಿಡವಿಟ್‌ನಲ್ಲಿ ಈ ಮಾಹಿತಿಯನ್ನು ನೀಡಿದೆ.


ಭಾರತದ ದತ್ತಾಂಶ ಸಂರಕ್ಷಣೆ ಹಾಗೂ ಗೋಪ್ಯತಾ ಕಾನೂನುಗಳಲ್ಲಿ ಇರುವ ಲೋಪಗಳತ್ತ ವಾಟ್ಸ್‌ಆ್ಯಪ್‌ನ ಹೊಸ ಗೋಪ್ಯತಾ ನೀತಿ ಬೆಳಕು ಚೆಲ್ಲಿದೆ ಎಂದು ಅರ್ಜಿದಾರರರು ವಾದಿಸಿದ್ದಾರೆ.

ವಾಟ್ಸ್‌ಆ್ಯಪ್‌ನ ಹೊಸ ನೀತಿಯ ಪ್ರಕಾರ, ಬಳಕೆದಾರರು ಈ ನೀತಿಯನ್ನು ಒಪ್ಪಿಕೊಳ್ಳಬಹುದು ಇಲ್ಲವೇ ಆ್ಯಪ್ಲಿಕೇಷನ್‌ನಿಂದ ನಿರ್ಗಮಿಸಬಹುದು. ಆದರೆ, ಬಳಕೆದಾರರು ತಮ್ಮ ಡೇಟಾವನ್ನು (ದತ್ತಾಂಶ) ಇತರ ಫೇಸ್‌ಬುಕ್ ಒಡೆತನ ಅಥವಾ ಮೂರನೇ ವ್ಯಕ್ತಿಯ ಅಪ್ಲಿಕೇಶನ್‌ನೊಂದಿಗೆ ಹಂಚಿಕೊಳ್ಳದಂತೆ ಇರಲು ಯಾವುದೇ ಆಯ್ಕೆಯ ಅವಕಾಶವನ್ನು ಹೊಂದಿರುವುದಿಲ್ಲ.

‘ಜನವರಿ 4ರಂದು ಪ್ರಕಟಿಸಿದ್ದ ಹೊಸ ಗೋಪ್ಯತಾ ನೀತಿಯನ್ನು ವಾಟ್ಸ್‌ಆ್ಯಪ್ ಭಾರತೀಯರಿಗೆ ಕಡ್ಡಾಯಗೊಳಿಸಿತ್ತು. ಹೊಸ ನಿಯಮ, ಷರತ್ತುಗಳಿಗೆ ಒಪ್ಪದಿದ್ದರೆ ಅವರಿಗೆ ಅಪ್ಲಿಕೇಷನ್ ಪ್ರವೇಶ ನಿರಾಕರಿಸಲಾಗುವುದು ಎಂದು ಹೇಳಿದೆ. ಆದರೆ, ಮತ್ತೊಂದೆಡೆ ಯುರೋಪಿಯನ್ ಬಳಕೆದಾರರಿಗೆ ಹೊಸ ನೀತಿಯಿಂದ ಹೊರಗುಳಿಯುವ ಆಯ್ಕೆಯನ್ನು ವಾಟ್ಸ್ ಆ್ಯಪ್ ನೀಡಿದೆ’ ಎಂದು ಅರ್ಜಿದಾರರು ವಾದಿಸಿದ್ದಾರೆ.

10ನೇ ಪುಟ ನೋಡಿ

ಹೊಸನೀತಿ ಜಾರಿ ಮುಂದೂಡಿದ್ದು ಏಕೆ?



ಖಾಸಗಿತನಕ್ಕೆ ಸಂಬಂಧಿಸಿದ ತನ್ನ ಹೊಸ ನಿಯಮವನ್ನು ಬಳಕೆದಾರರು ಅಷ್ಟು ಸುಲಭಕ್ಕೆ ಒಪ್ಪಿಕೊಳ್ಳುವುದಿಲ್ಲ ಎನ್ನುವುದು ವಾಟ್ಸ್‌ಆ್ಯಪ್ ಗಮನಕ್ಕೆ ಬಂದಿತ್ತು. ಈ ಬಗ್ಗೆ ವಾಟ್ಸ್‌ಆ್ಯಪ್ ಜಾಹೀರಾತು ಮತ್ತು ತನ್ನ ಇನ್ ಆ್ಯಪ್ ಸ್ಟೇಟಸ್‌ಗಳಲ್ಲೂ ಪದೇಪದೇ ಸ್ಪಷ್ಟನೆ ನೀಡಿತ್ತು.

ಖಾಸಗಿತನಕ್ಕೆ ಧಕ್ಕೆ ಒದಗುವ ಕುರಿತು ಬಳಕೆದಾರರು, ಪ್ರಮುಖ ಉದ್ಯಮಿಗಳಿಂದ ತೀವ್ರ ಆಕ್ರೋಶ ಎದುರಾದ ಬೆನ್ನಲ್ಲೇ, ವಾಟ್ಸ್ ಆ್ಯಪ್ ಫೆ. 8ರಿಂದ ಜಾರಿಗೊಳಿಸಲು ಹೊರಡಿಸಿದ್ದ ತನ್ನ ಹೊಸ ನಿಯಮವನ್ನು ಮೇ 15ಕ್ಕೆ ಮುಂದೂಡಿತ್ತು.

ಎಷ್ಟು ತಲೆಮಾರು ಮೀಸಲಾತಿ ಬೇಕು: ಸುಪ್ರೀಂ ಪ್ರಶ್ನೆ

ನವದೆಹಲಿ (ಪಿಟಿಐ): ಉದ್ಯೋಗ ಮತ್ತು ಶಿಕ್ಷಣದಲ್ಲಿ ಇನ್ನು ಎಷ್ಟು ತಲೆಮಾರುಗಳವರೆಗೆ ಮೀಸಲಾತಿ ಮುಂದುವರಿಸಬೇಕು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಪ್ರಶ್ನೆ ಮಾಡಿದೆ.

ಮರಾಠಾ ಕೋಟಾ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ ಮಂಡಲ್ ತೀರ್ಪಿನ ಬಗ್ಗೆ ಮರುಪರಿಶೀಲಿಸಬೇಕಾದ ಅಗತ್ಯವಿದೆಯೇ ಎಂಬ ವಿಚಾರವನ್ನು ಅವಲೋಕಿಸುವ ವೇಳೆ ಸುಪ್ರೀಂ ಕೋರ್ಟ್ ಈ ಪ್ರಶ್ನೆ ಕೇಳಿತು.

3ನೇ ಪುಟ ನೋಡಿ

‘ಹೆಚ್ಚುವರಿ ಶುಲ್ಕಕ್ಕೆ ಒತ್ತಡ ಹೇರಿದರೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ರಾಯಲ್ ಕಾನ್ಕಾರ್ಡ್ ಶಾಲೆಯಲ್ಲಿ ಹೆಚ್ಚುವರಿ ಶುಲ್ಕ ಪಾವತಿಸದ ವಿದ್ಯಾರ್ಥಿಗಳನ್ನು ಪರೀಕ್ಷೆಯಿಂದ ಹೊರಗಿಟ್ಟ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಕೆಂಬ್ರಿಡ್ಜ್ ಪಬ್ಲಿಕ್ ಸ್ಕೂಲ್‌ನಲ್ಲಿ ಶುಲ್ಕ ವಿಚಾರದಲ್ಲಿ ನಡೆದಂಥ ಪ್ರಕರಣಗಳು ಮರುಕಳಿಸಿದರೆ ಶಿಕ್ಷಣ ಇಲಾಖೆ ತನ್ನ ಪರಮಾಧಿಕಾರ ಚಲಾಯಿಸಬೇಕಾದೀತು’ ಎಂದು ರಾಜ್ಯದ ಖಾಸಗಿ ಶಾಲಾ ಆಡಳಿತ ಮಂಡಳಿಗಳಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.



‘ಸಾಮಾಜಿಕ ಸಂಕಷ್ಟದ ಪರಿಸ್ಥಿತಿಯಲ್ಲಿ ನಡೆಯುತ್ತಿರುವ ಇಂಥ ಪ್ರಕರಣಗಳು ವಿದ್ಯಾರ್ಥಿಗಳ ಆತ್ಮವಿಶ್ವಾಸ ಕುಂದಿಸಲಿವೆ. ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದಲೂ ಇಂಥ ಪ್ರಕರಣಗಳಿಗೆ ದಾರಿ ಮಾಡಿಕೊಡದಂತೆ ವರ್ತಿಸಬೇಕಾದ ಅಗತ್ಯವನ್ನು ಪದೇ ಪದೇ ಹೇಳಿದ್ದೇನೆ. ಮತ್ತೆ ಮರುಕಳಿಸದಂತೆ ಖಾಸಗಿ ಶಾಲೆಗಳು ಅಗತ್ಯ ಕ್ರಮ ವಹಿಸಬೇಕು’ ಎಂದು ಅವರು ಸೂಚಿಸಿದ್ದಾರೆ.

‘ಶಾಲಾ ಆಡಳಿತ ಮಂಡಳಿಗಳು ಮತ್ತು ಪೋಷಕರ ನಡುವಿನ ಸಂಘರ್ಷಗಳು ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಈ ಹಿಂದೆ ಬೆಂಗಳೂರಿನ ಕೋರಮಂಗಲದ ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬನನ್ನು ಇದೇ ರೀತಿ ನಡೆಸಿಕೊಂಡಿದ್ದರಿಂದ, ಆತ ಆತ್ಮಹತ್ಯೆಗೆ ಯತ್ನಿಸಿದ್ದನ್ನು ನಾವೆಲ್ಲ ಯೋಚಿಸಬೇಕಾಗಿದೆ. ಹೀಗಾಗಿ, ಇಂಥ ಪ್ರಕರಣಗಳು ಅದೆಷ್ಟು ಆಘಾತಕಾರಿ ಎಂಬುದನ್ನು ಗಮನದಲ್ಲಿ ಇರಿಸಿಕೊಳ್ಳಬೇಕಾಗಿದೆ’ ಎಂದು ಅವರು ಹೇಳಿದ್ದಾರೆ.

‘ಅತಿಸೂಕ್ಷ್ಮವಾದ ವಿಷಯವನ್ನು ನಾಜೂಕಿನಿಂದ ನಿರ್ವಹಿಸಬೇಕಾದ ಅಂಶವನ್ನು ಹೈಕೋರ್ಟ್ ಕೂಡಾ ಒತ್ತಿ ಹೇಳಿದೆ. ಎಲ್ಲ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಮಕ್ಕಳ ಹಿತವನ್ನು ಗಮನದಲ್ಲಿಟ್ಟುಕೊಂಡು ಸಂವೇದನೆಯಿಂದ ವರ್ತಿಸಬೇಕು. ಕೊರೊನಾ ವಿಷಮ ಕಾಲಘಟ್ಟದ ಸಂದರ್ಭದಲ್ಲಿ ಇಂಥ ಪ್ರಕರಣಗಳು ಮರುಕಳಿಸದಂತೆ ಸಾಮಾಜಿಕ ಜವಾಬ್ದಾರಿ ಅರಿತು ವರ್ತಿಸಬೇಕು’ ಎಂದೂ ಅವರು ಸಲಹೆ ನೀಡಿದ್ದಾರೆ.

ಮಹದಾಯಿ: ಸಮಿತಿಯಿಂದ ಪರಿಶೀಲನೆ

ಖಾನಾಪುರ (ಬೆಳಗಾವಿ): ಕಳಸಾ ಬಂಡೂರಿ ಯೋಜನಾ ಪ್ರದೇಶವಾದ ತಾಲ್ಲೂಕಿನ ಕಣಕುಂಬಿಗೆ ಶುಕ್ರವಾರ ಭೇಟಿ ನೀಡಿದ ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರದ ನೀರಾವರಿ ಇಲಾಖೆಗಳ ಮೂವರು ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳನ್ನು ಒಳಗೊಂಡ ಜಂಟಿ ಪರಿಶೀಲನಾ ಸಮಿತಿಯು ಸ್ಥಳ ಪರಿಶೀಲನೆ ನಡೆಸಿತು.

ಕರ್ನಾಟಕದಿಂದ ನವಿಲುತೀರ್ಥ ಜಲಾಶಯದ ಎಸ್‌ಇ ಕೃಷ್ಣೋಜಿರಾವ್, ಗೋವಾದ ಎಂ.ಕೆ. ಪ್ರಸಾದ್ ಮತ್ತು ಮಹಾರಾಷ್ಟ್ರದ ವಿಜಯಕುಮಾರ ಥೋರಟ್ ಅವರನ್ನು ಒಳಗೊಂಡ ಸಮಿತಿಯು ಕಣಕುಂಬಿ ಪ್ರವಾಸಿ ಮಂದಿರದ ಹಿಂಭಾಗ ಮತ್ತು ಮಾವುಲಿ ದೇವಸ್ಥಾನದ ಮುಂಭಾಗದಲ್ಲಿ ಕರ್ನಾಟಕ ಸರ್ಕಾರದಿಂದ ನಿರ್ಮಿಸಿರುವ ಕಾಲುವೆಯನ್ನು ವೀಕ್ಷಿಸಿತು.

ಬಳಿಕ ಪ್ರವಾಸಿ ಮಂದಿರದಲ್ಲಿ ಮಹದಾಯಿ ಮತ್ತು ಕಳಸಾ ಯೋಜನೆಗಳ ನೀಲನಕ್ಷೆ ಹಾಗೂ ಕಾಮಗಾರಿಯ ಕಡತ ಪರಿಶೀಲಿಸಿ ನೀರಾವರಿ ನಿಗಮದ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿತು.

ಕರ್ನಾಟಕವು ಈಗಾಗಲೇ ಕಳಸಾ ನೀರನ್ನು ತಿರುಗಿಸಿಕೊಂಡಿದೆ ಎಂಬ ಗೋವಾದ ಆರೋಪದ ಹಿನ್ನೆಲೆಯಲ್ಲಿ ಜಂಟಿ ಸಮಿತಿ ರಚಿಸಿ ಪರಿಶೀಲಿಸಬೇಕು ಮತ್ತು ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸಬೇಕು ಎಂಬ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಈ ಪ್ರಕ್ರಿಯೆ ನಡೆಯಿತು.

‘ಸಮಿತಿಯ ಸದಸ್ಯರಿಗೆ ಮಹದಾಯಿ, ಕಳಸಾ ಯೋಜನೆಯ ನೀಲನಕ್ಷೆ ಪ್ರತಿ ನೀಡಿ ಕಾಮಗಾರಿಯ ಕುರಿತು ಅಗತ್ಯ ಮಾಹಿತಿ ನೀಡಲಾಗಿದೆ. ನ್ಯಾಯಾಲಯದ ಸೂಚನೆಯಂತೆ ಸಮಿತಿಯ ಸದಸ್ಯರ ಭೇಟಿಗೆ ಅಗತ್ಯ ವ್ಯವಸ್ಥೆ ಮತ್ತು ಭದ್ರತೆ ಕಲ್ಪಿಸಲಾಯಿತು. ಸಂಜೆಯವರೆಗೂ ಚರ್ಚೆ ನಡೆಯಿತು’ ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ಸುಪ್ರೀಂ ಕೋರ್ಟ್ ಆದೇಶದಂತೆ ಪರಿಶೀಲನೆ ನಡೆಸಿ ವರದಿಯನ್ನು ನೇರವಾಗಿ ನ್ಯಾಯಾಲಯಕ್ಕೇ ಸಲ್ಲಿಸಲಾಗುವುದು. ಮುಂದಿನ ವಿಚಾರಣೆಯು ಏ.4ಕ್ಕೆ ನಿಗದಿಯಾಗಿದೆ’ ಎಂದು ಮೂಲಗಳು ತಿಳಿಸಿವೆ.

ಬಲವಂತದ ಹೇಳಿಕೆ ಪಡೆದ ಆರೋಪ

ಕೇರಳ: ಇ.ಡಿ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲು

ತಿರುವನಂತಪುರ (ಪಿಟಿಐ): ಚಿನ್ನ ಕಳ್ಳಸಾಗಣೆ ಪ್ರಕರಣದ ಪ್ರಮುಖ ಆರೋಪಿ ಸ್ವಪ್ನಾ ಸುರೇಶ್ ಅವರಿಂದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ವಿರುದ್ಧ ಬಲವಂತವಾಗಿ ಹೇಳಿಕೆ ಕೊಡಿಸಿದ ಆರೋಪ ಸಂಬಂಧ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳ ವಿರುದ್ಧ ಕೇರಳ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಸ್ವಪ್ನಾ ಸುರೇಶ್

ಸ್ವಪ್ನಾ ಅವರ ಧ್ವನಿಯ ಆಡಿಯೊ ಸೋರಿಕೆ ಬಗ್ಗೆ ತನಿಖೆ ನಡೆಸುತ್ತಿರುವ ಅಪರಾಧ ವಿಭಾಗದ ಪೊಲೀಸ್ ತಂಡ ಸಲ್ಲಿಸಿದ ವರದಿ ಆಧಾರದ ಮೇಲೆ ಎರಡು ದಿನಗಳ ಹಿಂದೆಯೇ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ವಿಭಾಗದ ಪೊಲೀಸರು, ಇ.ಡಿ ಅಧಿಕಾರಿಗಳ ವಿರುದ್ಧ ಸೆಕ್ಷನ್ 120–ಬಿ (ಕ್ರಿಮಿನಲ್ ಪಿತೂರಿ), 167 (ಸಾರ್ವಜನಿಕ ಸೇವೆಯಲ್ಲಿರುವವರಿಗೆ ಗಾಸಿ ಉಂಟುಮಾಡಲು ಸುಳ್ಳು ದಾಖಲೆ ಸೃಷ್ಟಿಸುವುದು), 192 (ನಕಲಿ ಸಾಕ್ಷ್ಯ ಸೃಷ್ಟಿ) ಸೇರಿದಂತೆ ಭಾರತೀಯ ದಂಡ ಸಂಹಿತೆಯ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎಫ್‌ಐಆರ್ ಪ್ರಕಾರ, ‘ಚಿನ್ನ ಕಳ್ಳಸಾಗಣೆ ಪ್ರಕರಣದ ತನಿಖೆ ನಡೆಸುತ್ತಿರುವ ಇ.ಡಿ ಅಧಿಕಾರಿಗಳು ಸ್ವಪ್ನಾ ಪ್ರಭಾ ಸುರೇಶ್ ಎಂಬ ಆರೋಪಿಯನ್ನು 2020ರ ಆಗಸ್ಟ್ 12 ಮತ್ತು 13 ರಂದು ವಿಚಾರಣೆ ನಡೆಸುವಾಗ ನಕಲಿ ಸಾಕ್ಷ್ಯಗಳನ್ನು ಸೃಷ್ಟಿಸುವ ಸಲುವಾಗಿ ರಾಜ್ಯದ ಮುಖ್ಯಮಂತ್ರಿಯ ವಿರುದ್ಧ ಸುಳ್ಳು ಹೇಳಿಕೆ ನೀಡುವಂತೆ ಒತ್ತಾಯಿಸಿದ್ದಾರೆ’.

ಪ್ರಕರಣ ದಾಖಲಾಗಿದ್ದರೆ ಅದನ್ನು ಕಾನೂನಾತ್ಮಕವಾಗಿಯೇ ಎದುರಿಸಲಾಗುವುದು ಎಂದು ಇ.ಡಿ ಮೂಲಗಳು ತಿಳಿಸಿವೆ.

ಯುಎಇ ಕಾನ್ಸುಲೇಟ್‌ನ ಮಾಜಿ ಉದ್ಯೋಗಿಯಾದ ಸ್ವಪ್ನಾ ಸುರೇಶ್ ಸುಮಾರು ₹14.82 ಕೋಟಿ ಮೌಲ್ಯದ 30 ಕೆ.ಜಿ. ಚಿನ್ನ ಕಳ್ಳಸಾಗಣೆ ಪ್ರಕರಣದ ಪ್ರಮುಖ ಆರೋಪಿಯಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಕಾಮೆಡ್‌–ಕೆ ಯುಜಿಇಟಿ ಪ್ರವೇಶ ಪರೀಕ್ಷೆ ಜೂನ್ 20ಕ್ಕೆ

ಬೆಂಗಳೂರು: ಖಾಸಗಿ ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಸೀಟುಗಳ ಭರ್ತಿಗೆ ನಡೆಸುವ ಕಾಮೆಡ್‌–ಕೆ ಯುಜಿಇಟಿ ಮತ್ತು ಯೂನಿಗೇಜ್ ಪ್ರವೇಶ ಪರೀಕ್ಷೆ ಜೂನ್ 20ರಂದು ನಡೆಯಲಿದೆ.

ಕರ್ನಾಟಕ ಪ್ರೊಫೆಷನಲ್ ಕಾಲೇಜುಗಳ ಫೌಂಡೇಷನ್ ಟ್ರಸ್ಟ್ ಮತ್ತು ಯೂನಿ–ಗೇಜ್‌ನಿಂದ ಮಾನ್ಯತೆ ಹೊಂದಿರುವ ಕಾಲೇಜುಗಳ ಬಿಇ/ ಬಿ.ಟೆಕ್ ಕೋರ್ಸ್‌ಗಳ ಪ್ರವೇಶಕ್ಕೆ ಈ ಪರೀಕ್ಷೆ ನಡೆಯಲಿದೆ. ಅರ್ಜಿ ಸಲ್ಲಿಕೆ ಮತ್ತು ಪರೀಕ್ಷಾ ಪ್ರಕ್ರಿಯೆಯು ಸಂಪೂರ್ಣ ಆನ್‌ಲೈನ್‌ನಲ್ಲಿ ನಡೆಯಲಿದೆ ಎಂದು ಕಾಮೆಡ್‌–ಕೆ ಕಾರ್ಯಕಾರಿ ಕಾರ್ಯದರ್ಶಿ ಡಾ. ಕುಮಾರ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಮಾರ್ಚ್ 22ರಿಂದ ಮೇ 20ರವರೆಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ನಡೆಯಲಿದೆ. www.comedk.org ಅಥವಾ www.unigauge.com ವೆಬ್‌ಸೈಟ್ ಮೂಲಕ ವಿದ್ಯಾರ್ಥಿಗಳು ನೋಂದಣಿ ಮಾಡಿಸಬಹುದು.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಗುಂಡೇಟಿನಿಂದ ನಾಲ್ಕು ದಿನಗಳ ಹಿಂದೆಯೇ ಸಾವು

ಕೊಡಗು: ಗಂಡು ಹುಲಿಯ ಕಳೇಬರ ಪತ್ತೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಪೊನ್ನಂಪೇಟೆ ತಾಲ್ಲೂಕಿನ ನಾಲ್ಕೇರಿಯ ಕೋತೂರು ಗ್ರಾಮದ ಲಕ್ಕುಂದದಲ್ಲಿ, ಗಂಡು ಹುಲಿಯ ಕಳೇಬರ ಶುಕ್ರವಾರ ಪತ್ತೆಯಾಗಿದೆ. ಕಾರ್ಯಾಚರಣೆ ತಂಡಕ್ಕೆ, ನಾಗರಹೊಳೆ ರಾಷ್ಟ್ರೀಯ ಉದ್ಯಾನ ಹಾಗೂ ಖಾಸಗಿ ತೋಟದ ಮಧ್ಯದಲ್ಲಿರುವ ಕಂದಕದಲ್ಲಿ ಕೊಳೆತ ಸ್ಥಿತಿಯಲ್ಲಿ ಹುಲಿಯ ಕಳೇಬರ ಸಿಕ್ಕಿದೆ.

ಜನ ಹಾಗೂ ಜಾನುವಾರುಗಳ ಮೇಲೆ ದಾಳಿ ನಡೆಸಿ, ಅಪಾಯಕಾರಿ ಎನಿಸಿದ್ದು ಇದೇ ಹುಲಿ ಎಂಬ ನಿರ್ಧಾರಕ್ಕೆ ಅರಣ್ಯಾಧಿಕಾರಿಗಳು ಬಂದಿದ್ದಾರೆ. ಆದರೆ, ರೈತರು ಇದನ್ನು ಒಪ್ಪುತ್ತಿಲ್ಲ.

‘ಕಾರ್ಮಿಕರ ಮೇಲೆ ದಾಳಿ ನಡೆದಿದ್ದ ಸ್ಥಳದಲ್ಲಿ ಅಳವಡಿಸಿದ್ದ ಕ್ಯಾಮೆರಾದಲ್ಲಿ ಸೆರೆಯಾಗಿರುವ ಹುಲಿಯ ಛಾಯಾಚಿತ್ರಕ್ಕೂ, ಸತ್ತಿರುವ ಹುಲಿಗೂ ಹೊಂದಾಣಿಕೆ ಆಗಿದೆ. ಈ ಹುಲಿಯ ದಾಳಿಯಿಂದ ಇಬ್ಬರು ಬಾಲಕರು, ಒಬ್ಬರು ವೃದ್ಧೆ ಮೃತಪಟ್ಟಿದ್ದರು. ಮೃತಪಟ್ಟವರ ಮೇಲೆ ಬಿದ್ದಿದ್ದ ರಕ್ತದ ಮಾದರಿ, ಹುಲಿ ಕೂದಲನ್ನು ಹೈದರಾಬಾದ್‌ನ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಪರೀಕ್ಷೆಯಿಂದ ಗಂಡು ಹುಲಿ ಎಂಬುದು ಖಚಿತವಾಗಿತ್ತು. ಹೈಸೊಡ್ಲೂರು ಎಂಬಲ್ಲಿ, ಕಾರ್ಯಾಚರಣೆ ನಡೆಸಿದ ವೇಳೆ ಹಾರಿಸಿದ್ದ ಗುಂಡೇಟು ಇದೇ ಹುಲಿಗೆ ತಗುಲಿ, ವಾರದ ಬಳಿಕ ಸತ್ತಿದೆ’ ಎಂದು ಅರಣ್ಯಾಧಿಕಾರಿಗಳು ಹೇಳಿದರು.

ಈ ಹುಲಿ ನಾಲ್ಕು ದಿನಗಳ ಹಿಂದೆಯೇ ಮೃತಪಟ್ಟಿದೆ ಎನ್ನಲಾಗಿದೆ. ಆದರೆ, ಈ ಅವಧಿಯಲ್ಲೂ ಹುಲಿ ದಾಳಿಗೆ ಜಾನುವಾರುಗಳು ಬಲಿಯಾಗಿರುವುದು ರೈತರ ಅನುಮಾನ ಹಾಗೂ ಆತಂಕ ಹೆಚ್ಚಿಸಿದೆ. ಸ್ಥಳದಲ್ಲಿಯೇ ಹುಲಿಯ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಅದರ ದೇಹದ ಮಾದರಿ ಹಾಗೂ ಗುಂಡುಗಳನ್ನು ಸಂಗ್ರಹಿಸಿ, ಮತ್ತೆ ಪ್ರಯೋಗಾಲಯಕ್ಕೆ ಕಳುಹಿಸಲು ನಿರ್ಧರಿಸಲಾಗಿದೆ.

ತಗುಲಿತ್ತೇ ಗುಂಡೇಟು?: ಕಳೆದ ವಾರ ಪೊನ್ನಂಪೇಟೆ ತಾಲ್ಲೂಕಿನ ಹೈಸೊಡ್ಲೂರಿನ ಕಾಫಿ ತೋಟದಲ್ಲಿ ನಡೆಯುತ್ತಿದ್ದ ಕಾರ್ಯಾಚರಣೆ ವೇಳೆ ಎದುರಾಗಿದ್ದ ಅಪಾಯಕಾರಿ ಹುಲಿಗೆ, ಕಾರ್ಯಾಚರಣೆ ಸಿಬ್ಬಂದಿ ಮೂರು ಸುತ್ತು ಗುಂಡು ಹಾರಿಸಿದ್ದರು.

4ನೇ ಪುಟ ನೋಡಿ



ಹುಲಿಯ ಕಳೇಬರವನ್ನು ಕಾರ್ಯಾಚರಣೆ ತಂಡವು ಪರಿಶೀಲಿಸಿತು

ಇದೇ ಅಪಾಯಕಾರಿ ಹುಲಿಯೆಂದು ಅಧಿಕಾರಿಗಳು ಹೇಳಿದ್ದು, ಕಾರ್ಯಾಚರಣೆ ನಿಲ್ಲಿಸುವ ನಿರ್ಧಾರಕ್ಕೆ ಬಂದಿದ್ದಾರೆ. ಪ್ರಯೋಗಾಲಯದ ವರದಿ ಬರುವುದಕ್ಕೂ ಮುನ್ನ ಕಾರ್ಯಾಚರಣೆ ಸ್ಥಗಿತಗೊಳಿಸಬಾರದು
ಆಲೆಮಾಡ ಮಂಜುನಾಥ್, ರೈತ ಮುಖಂಡ, ಹುದಿಕೇರಿ

‘ಕಾರ್ಯಾಚರಣೆ ಸ್ಥಗಿತ ಬೇಡ’

ಹುಲಿಯ ಕಳೇಬರ ಸಿಕ್ಕ ಮೇಲೆ, ಕಾರ್ಯಾಚರಣೆ ಸ್ಥಗಿತಗೊಳಿಸುವುದಾಗಿ ಅರಣ್ಯಾಧಿಕಾರಿಗಳು ಹೇಳಿದರು. ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ ರೈತರು, ‘ಶುಕ್ರವಾರ ಬೆಳಿಗ್ಗೆಯೂ ಹುಲಿ ದಾಳಿಗೆ ಒಂದು ಜಾನುವಾರು ಬಲಿಯಾಗಿದೆ. ಸಂಪೂರ್ಣ ಕಾರ್ಯಾಚರಣೆ ಮಾಡಬೇಕು. ನಮಗೆ ನೆಮ್ಮದಿಯಿಂದ ಜೀವನ ನಡೆಸಲು ಅವಕಾಶ ಕಲ್ಪಿಸಬೇಕು’ ಎಂದು ಆಗ್ರಹಿಸಿದರು.

ಹುಲಿಯ ಮೈಮೇಲಿನ ಪಟ್ಟೆಗಳ ಮಾದರಿ ಹೊಂದಾಣಿಕೆಯಾಗಿದೆ. ಹಲ್ಲಿನ ಗುರುತು ಸಹ ತಾಳೆಯಾಗುತ್ತಿದೆ
ತಕತ್ ಸಿಂಗ್ ರಣಾವತ್
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ







ಕೇಂದ್ರ ಹಣಕಾಸು ಸಚಿವರಿಗೆ ಮುಖ್ಯಮಂತ್ರಿ ಮೂಲಕ ಪತ್ರ– ವಿ. ಸೋಮಣ್ಣ

‘ಆವಾಸ್: ಶೇ 6 ಬಡ್ಡಿ ದರದಲ್ಲಿ ಸಾಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯ ಫಲಾನುಭವಿಗಳಿಗೆ ಬ್ಯಾಂಕುಗಳಿಂದ ಶೇ 6ರ ಬಡ್ಡಿ ದರದಲ್ಲಿ ₹ 2.25 ಲಕ್ಷ ಸಾಲ ನೀಡುವಂತೆ ಮುಖ್ಯಮಂತ್ರಿ ಮೂಲಕ ಕೇಂದ್ರ ಹಣಕಾಸು ಸಚಿವರಿಗೆ ಮನವಿ ಸಲ್ಲಿಸಲಾಗುವುದು’ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಒದಗಿಸುವ ಕುರಿತು ಬ್ಯಾಂಕುಗಳ ಅಧಿಕಾರಿಗಳ ಜೊತೆ ಗುರುವಾರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಮತ್ತು ರಾಜೀವ್ ಗಾಂಧಿ ಗೃಹ ನಿರ್ಮಾಣ ಮಂಡಳಿ ಅಡಿ ಯೋಜನೆಯ ಫಲಾನುಭವಿಗಳಿಗೆ ತ್ವರಿತವಾಗಿ ಸಾಲ ಸೌಲಭ್ಯ ಒದಗಿಸುವಂತೆ ಬ್ಯಾಂಕ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದರು.

ವಿ. ಸೋಮಣ್ಣ

‘ಎರಡೂ ನಿಗಮಗಳ ಮೂಲಕ 3.24 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿಯಿದೆ. ಈ ಪೈಕಿ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಮೂಲಕ 83,119 ಮನೆಗಳನ್ನು ನಿರ್ಮಿಸಲಾಗುತ್ತಿದ್ದು, 54 ಸಾವಿರ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 97,134 ಮನೆಗಳ ಫಲಾನುಭವಿಗಳ ಪಟ್ಟಿಯನ್ನು ಪರಿಗಣಿಸಿ 34,008 ಮಂದಿಗೆ ಸಾಲ ನೀಡಲು ವಿವಿಧ ಬ್ಯಾಂಕುಗಳು ತಾತ್ವಿಕ ಒಪ್ಪಿಗೆ ನೀಡಿವೆ’ ಎಂದೂ ಅವರು ತಿಳಿಸಿದರು.

‘ವಿವಿಧ ಕಾರ್ಯಕ್ರಮಗಳಡಿ ನಿರ್ಮಾಣವಾಗುತ್ತಿರುವ ಮನೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಹಣದ ಅಡಚಣೆಯಿಲ್ಲ. ಹಿಂದಿನ ಸರ್ಕಾರದಲ್ಲಿ ಆರಂಭಗೊಂಡಿದ್ದ ಹಲವು ಗೃಹ ನಿರ್ಮಾಣ ಯೋಜನೆಗಳು ಗೊಂದಲದ ಗೂಡಾಗಿ ನನೆಗುದಿಗೆ ಬಿದ್ದಿತ್ತು. ಪ್ರಧಾನಿ ಆಶಯದಂತೆ ಬಡವರಿಗೆ ಮನೆಗಳನ್ನು ನಿರ್ಮಿಸಿಕೊಡುವ ಯೋಜನೆಗಳನ್ನು ಆದ್ಯತೆಯ ಮೇರೆಗೆ ಅನುಷ್ಠಾನ ಮಾಡುವ ಸಂಕಲ್ಪವನ್ನು ನಮ್ಮ ಸರ್ಕಾರ ತೊಟ್ಟಿದೆ’ ಎಂದರು.

‘ಕೊಳಚೆ ಅಭಿವೃದ್ಧಿ ಮಂಡಳಿಯಡಿ ಫಲಾನುಭವಿಗಳಿಗೆ ವಿತರಿಸಲಾಗಿರುವ 3.13 ಲಕ್ಷ ಸ್ವತ್ತುಗಳಿಗೆ ಸಂಬಂಧಿಸಿದಂತೆ ಹಕ್ಕು ಹಸ್ತಾಂತರಿಸಲು ತೀರ್ಮಾನಿಸಲಾಗಿದೆ. ಹಕ್ಕುಪತ್ರ ಪಡೆದುಕೊಳ್ಳಲು ನಿಗದಿಪಡಿಸಿರುವ ಶುಲ್ಕ ಕಡಿಮೆ ಮಾಡುವಂತೆ ಬೇಡಿಕೆ ಇದೆ. ಈ ಬಗ್ಗೆ ಮುಖ್ಯಮಂತ್ರಿ ಅವರನ್ನು ಕೋರಲಾಗಿದ್ದು, ಮುಂದಿನ ಸಚಿವ ಸಂಪುಟ ಸಭೆಗೆ ಈ ಪ್ರಸ್ತಾವ ಮಂಡಿಸಲಾಗುವುದು’ ಎಂದರು.

‘ಪಟ್ಟಣ ಪಂಚಾಯತಿ, ಪುರಸಭೆ ಹಾಗೂ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ₹ 1200ರಿಂದ ₹ 10 ಸಾವಿರವರೆಗೆ ದರ ನಿಗದಿಪಡಿಸಲಾಗಿತ್ತು. ಈ ದರಗಳನ್ನು ₹ 1200ರಿಂದ ₹ 4 ಸಾವಿರಕ್ಕೆ ಕಡಿಮೆ ಮಾಡಲು ಕ್ರಮ ವಹಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಹಾಗೂ ವರ್ಗದವರಿಗೆ ಶೇ 50ರಷ್ಟು ರಿಯಾಯತಿ ಸಿಗಲಿದೆ’ ಎಂದೂ ಸಚಿವರು ವಿವರಿಸಿದರು.

ಮೇ 30ಗಳಲ್ಲಿ ಫ್ಯಾಷನ್ ಶೋ

ಬೆಂಗಳೂರು: ಡಿಎಚ್2 ಫ್ಯಾಷನ್ ಮೀಡಿಯಾ ಸಂಸ್ಥೆಯು ಮೇ ತಿಂಗಳಿನಲ್ಲಿ 2021ನೇ ಸಾಲಿನ ಟಾಪ್ ಸ್ಟಾರ್ ಮಾಡೆಲ್ ಫ್ಯಾಷನ್ ಶೋ ಕಾರ್ಯಕ್ರಮ ಹಮ್ಮಿಕೊಂಡಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿಎಚ್2 ಫ್ಯಾಷನ್ ಸಂಸ್ಥೆಯ ನಿರ್ದೇಶಕಿ ಶ್ವೇತಾ ‘ಕೋವಿಡ್ ಕಾರಣ ಈ ಬಾರಿ ಕಾಲೇಜುಗಳಿಗೆ ಭೇಟಿ ನೀಡಲು ಆಗುತ್ತಿಲ್ಲ. ಹೀಗಾಗಿ ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲೇ ಆಡಿಷನ್ ನಡೆಸುತ್ತಿದ್ದೇವೆ. ಇದರಲ್ಲಿ 30 ಮಂದಿಯನ್ನು ಆಯ್ಕೆ ಮಾಡುತ್ತೇವೆ. ಗೋವಾದಲ್ಲಿ ಕಾರ್ಯಕ್ರಮ ಆಯೋಜಿಸಿದ್ದೇವೆ. ವಿಜೇತರಿಗೆ ₹1 ಲಕ್ಷ ನಗದು ಬಹುಮಾನ ನೀಡಲಾಗುತ್ತದೆ’ ಎಂದರು.

‘ಇಂದು 100 ಮಂದಿ ಸಾಧಕಿಯರಿಗೆ ಪ್ರಶಸ್ತಿ’

ಬೆಂಗಳೂರು: ‘ಬಿ ಕ್ಲಿಪ್ ಅಲ್ಯುಮ್ನಿ ಸಂಸ್ಥೆಯು ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ 100 ಮಹಿಳೆಯರಿಗೆ ‘ಬೆಂಗಳೂರು ವಿಮೆನ್ ಅಚೀವರ್ಸ್’ ಪ್ರಶಸ್ತಿ ನೀಡಲು ನಿರ್ಧರಿಸಿದೆ. ಈ ಕಾರ್ಯಕ್ರಮ ಇದೇ 20ರಂದು ವಾಸವಿ ಆಡಿಟೋರಿಯಂನಲ್ಲಿ ನಡೆಯಲಿದೆ’ ಎಂದು ಕವಿತಾ ರೆಡ್ಡಿ ತಿಳಿಸಿದರು.



ಕೇಂದ್ರ ಸರ್ಕಾರದ ಬೆಲೆ ಏರಿಕೆ ಮತ್ತು ಇತರ ನೀತಿಗಳನ್ನು ಖಂಡಿಸಿ ಸೋಷಿಯಲಿಸ್ಟ್ ಯೂನಿಟ್ ಸೆಂಟರ್ ಆಫ್ ಇಂಡಿಯಾದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

‘ರಾಜಕಾರಣಿಗಳು ದಲಿತ ಕೇರಿ ಪ್ರವೇಶಿಸಲು ಬಿಡಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣೆಯ ವೇಳೆ ರಾಜಕಾರಣಿಗಳಿಗೆ ದಲಿತ ಕೇರಿ ಪ್ರವೇಶಿಸಲು ಬಿಡಬೇಡಿ’ ಎಂದು ನ್ಯಾ. ಸದಾಶಿವ ವರದಿ ಜಾರಿ ಹೋರಾಟ ಸಮಿತಿಯ ಮಹಾ ಸಂಚಾಲಕ ಹೆಣ್ಣೂರು ಲಕ್ಷ್ಮೀನಾರಾಯಣ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗವು ವರದಿ ನೀಡಿ ವರ್ಷಗಳೇ ಉರುಳಿವೆ. ಸುದೀರ್ಘ ಹೋರಾಟ ನಡೆಸಿದರೂ ಒಳಮೀಸಲಾತಿ ಜಾರಿಯಾಗಿಲ್ಲ. ಇದಕ್ಕೆ ಆಳುವವರ ನಿರ್ಲಕ್ಷವೇ ಕಾರಣ. ವರದಿ ಜಾರಿಗೆ ನಮ್ಮ ಸರ್ಕಾರವು ಪ್ರಯತ್ನಿಸಲಿದೆ ಎಂದು ಬಿಜೆಪಿ ಮುಖಂಡರು ಶಿರಾ ವಿಧಾನಸಭಾ ಚುನಾವಣೆಯ ವೇಳೆ ಹೇಳಿದ್ದರು. ಅದು ಭರವಸೆಯಾಗಿಯೇ ಉಳಿದಿದೆ. ಈಗಲಾದರೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಆಯೋಗದ ವರದಿ ಮಂಡಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

‘ಇದೇ 8ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದಿದ್ದ ಪ್ರತಿಭಟನೆಯ ವೇಳೆ ಸ್ಥಳಕ್ಕೆ ಭೇಟಿ ನೀಡಿದ್ದ ಸಚಿವ ಬಿ.ಶ್ರೀರಾಮುಲು ನಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಹೇಳಿದ್ದರು. ಇದೀಗ ಉಪ ಸಮಿತಿ ರಚಿಸುವುದಾಗಿ ಹೇಳುವ ಮೂಲಕ ವಿಳಂಬ ನೀತಿ ಅನುಸರಿಸುತ್ತಿದ್ದಾರೆ’ ಎಂದು ದೂರಿದರು.

ನಗರದಲ್ಲಿ ಹೆಚ್ಚುತ್ತಿರುವ ಕೋವಿಡ್ ಪ್ರಕರಣ– ಬಿಬಿಎಂಪಿ ಪ್ರಸ್ತಾವನೆ

ಚಿತ್ರಮಂದಿರ: ಶೇ 50 ಮಂದಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಿತ್ರಮಂದಿರಗಳಲ್ಲಿ ಶೇ 50ರಷ್ಟು ಜನರಿಗೆ ಮಾತ್ರ ಅವಕಾಶ, ಬಿಬಿಎಂಪಿ ಪಾರ್ಕ್‌ಗಳಲ್ಲಿನ ಜಿಮ್‌ಗಳನ್ನು ಮುಚ್ಚುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ’ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್ ತಿಳಿಸಿದರು.

‘ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರೊಂದಿಗೆ ಮಾತನಾಡಲಾಗಿದೆ’ ಎಂದು ಹೇಳಿದರು.

‘ನಗರದಲ್ಲಿ ಗುರುವಾರ ಒಂದೇ ದಿನ 1,048 ಕೋವಿಡ್ ಪ್ರಕರಣಗಳು ವರದಿಯಾಗಿದೆ. ಹೊರ ರಾಜ್ಯದಿಂದ ಬಂದವರಲ್ಲೇ ಹೆಚ್ಚಾಗಿ ಸೋಂಕು ಪತ್ತೆಯಾಗುತ್ತಿದೆ. ಸ್ಲಂಗಳಲ್ಲಿ ಸೋಂಕು ಹರಡುತ್ತಿಲ್ಲ. ಬದಲಿಗೆ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಹರಡುತ್ತಿದೆ. ಅಲ್ಲಿನ ಆಟದ ಮೈದಾನ, ಜಿಮ್, ಪಾರ್ಟಿ ಹಾಲ್, ಈಜುಕೊಳಗಳನ್ನು ಬಂದ್ ಮಾಡುವ ಬಗ್ಗೆಯೂ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ’ ಎಂದು ವಿವರಿಸಿದರು.

ಮಂಜುನಾಥ ಪ್ರಸಾದ್

‘ಮದುವೆ ಸಮಾರಂಭ, ಹೋಟೆಲ್ ಸಭಾಂಗಣದಲ್ಲಿ ನಡೆಯುತ್ತಿರುವ ವಸ್ತು-ಪ್ರದರ್ಶನಗಳಲ್ಲಿ ಕೋವಿಡ್ ನಿಯಮ ಪಾಲನೆ ಆಗದಿದ್ದರೆ ಆಯೋಜಕರು ಮತ್ತು ಹೋಟೆಲ್, ಕಲ್ಯಾಣ ಮಂಟಪಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

‘ಪೂರ್ವ, ಪಶ್ಚಿಮ, ದಕ್ಷಿಣ, ಮಹದೇವಪುರ, ಬೊಮ್ಮನಹಳ್ಳಿ ವಲಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿವೆ. ಯಲಹಂಕ, ದಾಸರಹಳ್ಳಿ, ರಾಜರಾಜೇಶ್ವರಿನಗರ ವಲಯದಲ್ಲಿ ಕಡಿಮೆ ಪ್ರಮಾಣದಲ್ಲಿ ಇದೆ. ಪ್ರತಿದಿನ 44 ಸಾವಿರ ಜನರಿಗೆ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ಒಂದು ವಾರದಲ್ಲಿ ಇದನ್ನು 50 ಸಾವಿರಕ್ಕೆ ಹೆಚ್ಚಿಸಲಾಗುವುದು‘ ಎಂದು ತಿಳಿಸಿದರು.

‘ಸೋಂಕು ದೃಢಪಟ್ಟ ಕುಟುಂಬದವರನ್ನ ಪರೀಕ್ಷೆಗೆ ಒಳಪಡಿಸಿದಾಗ ಎಲ್ಲರಿಗೂ ಪಾಸಿಟಿವ್ ವರದಿ ಬರುತ್ತಿದೆ. ಲಕ್ಷಣ ಕಾಣಿಸಿಕೊಂಡ ಕೂಡಲೇ ಪ್ರತ್ಯೇಕವಾಗಿ ಇರದ ಕಾರಣ ಈ ರೀತಿ ಆಗುತ್ತಿದೆ. ಲಕ್ಷಣ ಇದ್ದವರು ಕೂಡಲೇ ಪ್ರತ್ಯೇಕವಾಗಿ ಇರಬೇಕು. 10 ವರ್ಷಕ್ಕೂ ಒಳಗಿನ ಮತ್ತು 60 ವರ್ಷ ಮೇಲ್ಪಟ್ಟವರು ಸಾಧ್ಯವಾದಷ್ಟು ಮನೆಯಲ್ಲೇ ಇರಬೇಕು’ ಎಂದು ಮನವಿ ಮಾಡಿದರು.

12 ಕಂಟೈನ್‌ಮೆಂಟ್ ವಲಯ

‘ಒಂದೇ ಕಡೆ 5ಕ್ಕೂ ಹೆಚ್ಚು ಜನರಿಗೆ ಕೋವಿಡ್ ದೃಢಪಟ್ಟರೆ ಅವುಗಳನ್ನು ಕ್ಲಸ್ಟರ್ ಎಂದು ಪರಿಗಣಿಸಿ ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಲಾಗುತ್ತದೆ. ಈ ರೀತಿಯ 12 ವಲಯಗಳು ಬೆಂಗಳೂರಿನಲ್ಲಿವೆ’ ಎಂದು ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

‘ನಗರದ 198 ವಾರ್ಡ್‌ಗಳಿಗೂ ತಲಾ ಒಂದು ಆಂಬುಲೆನ್ಸ್ ನಿಯೋಜಿಸಲಾಗುತ್ತಿದೆ. ಆಂಬುಲೆನ್ಸ್‌ಗಳನ್ನು ಬಾಡಿಗೆಗೆ ಪಡೆಯಲಾಗುವುದು. ಸರ್ಕಾರಿ ಆಸ್ಪತ್ರೆಗಳಲ್ಲೇ ಸಾಕಷ್ಟು ಹಾಸಿಗೆ ಲಭ್ಯ ಇರುವ ಕಾರಣ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುವ ಅಗತ್ಯ ಸದ್ಯಕ್ಕೆ ಇಲ್ಲ’ ಎಂದರು.


ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,15,447 ಒಟ್ಟು ಸೋಂಕಿತರು

4,02,280 ಗುಣಮುಖರಾದವರು

8,623 ಸಕ್ರಿಯ ಪ್ರಕರಣ

4,543 ಸಾವು



ಶುಕ್ರವಾರದ ಏರಿಕೆ

1,037 ದೃಢಪಟ್ಟ ಪ್ರಕರಣ

530 ಗುಣಮುಖ

06 ಸಾವು

‘ರಾಸಾಯನಿಕ ಬೆಲ್ಲ: ಗಂಭೀರವಾಗಿ ಪರಿಗಣಿಸಿ’

ನವದೆಹಲಿ: ದೇಶದಾದ್ಯಂತ ರಾಸಾಯನಿಕ ಮಿಶ್ರಣ ಮಾಡಿ ಬೆಲ್ಲ ತಯಾರಿಸುವ ಘಟಕಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ, ಅವುಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಮಂಡ್ಯದ ಪಕ್ಷೇತರ ಸದಸ್ಯೆ ಸುಮಲತಾ ಅಂಬರೀಷ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ಲೋಕಸಭೆಯ ಶೂನ್ಯವೇಳೆಯಲ್ಲಿ ಶುಕ್ರವಾರ ಈ ವಿಷಯ ಪ್ರಸ್ತಾಪಿಸಿದ ಅವರು, ಬೆಲ್ಲದ ಬಣ್ಣವನ್ನು ಬದಲಿಸುವ ನಿಟ್ಟಿನಲ್ಲಿ ರಾಸಾಯನಿಕ ಬಳಸುವುದರಿಂದ ಗ್ರಾಹಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ ಎಂದರು. ಸಾವಯವ ಬೆಲ್ಲದ ಉತ್ಪಾದನೆಗೆ ಹೆಸರಾಗಿರುವ ಮಂಡ್ಯ ಜಿಲ್ಲೆಯಲ್ಲಿರುವ ಬೆಲ್ಲದ ಉದ್ಯಮದ ಉತ್ತೇಜನಕ್ಕೆ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಚ್ಚರಿಕೆ

‘ತಂಬಾಕು ಸೇವನೆಯಿಂದ ಕೋವಿಡ್ ಅಪಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಂಬಾಕು ಸೇವನೆಯಿಂದ ಬಾಯಿಯ ಕ್ಯಾನ್ಸರ್ ಜತೆಗೆ ಕೋವಿಡ್ ಅಪಾಯ ಹೆಚ್ಚಲಿದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಚ್ಚರಿಸಿದೆ.

ಈ ಸಂಬಂಧ ಇಲಾಖೆ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ಪ್ರಾರಂಭಿಸಿದೆ. ‘ಧೂಮಪಾನವು ಶ್ವಾಸಕೋಶದ ಕಾರ್ಯಕ್ಷಮತೆ ಹದಗೆಡಿಸಿ, ರೋಗ ನಿರೋಧಕ ಶಕ್ತಿ ಕುಗ್ಗಿಸುತ್ತದೆ. ಕೊರೊನಾ ಸೋಂಕಿಗೆ ತುತ್ತಾಗುವ ಧೂಮಪಾನಿಗಳು ಹೆಚ್ಚಿನ ತೊಂದರೆ ಅನುಭವಿಸುವುದಲ್ಲದೆ, ಮೃತಪಡುವ ಸಾಧ್ಯತೆ ಹೆಚ್ಚಿರುತ್ತದೆ. ಧೂಮಪಾನ ನಿಲ್ಲಿಸಿದ 20 ನಿಮಿಷಗಳ ನಂತರ ರಕ್ತದೊತ್ತಡವು ಸಾಮಾನ್ಯ ಸ್ಥಿತಿಗೆ ಬರುತ್ತದೆ ಎಂದು ಅಧ್ಯಯನಗಳು ತಿಳಿಸುತ್ತವೆ. ಕೆಲವೇ ದಿನಗಳ ನಂತರ ದೇಹದಲ್ಲಿನ ನಿಕೋಟಿನ್ ಪ್ರಮಾಣ ಕಡಿಮೆಯಾಗುತ್ತದೆ. ಒಂದು ವರ್ಷದ ಬಳಿಕ ಹೃದಯಾಘಾತದ ಅಪಾಯ ಕೂಡ ಕಡಿಮೆಯಾಗುತ್ತದೆ’ ಎಂದು ಇಲಾಖೆ ತಿಳಿಸಿದೆ.

‘ಧೂಮಪಾನದಿಂದ ಹೃದಯಾಘಾತಕ್ಕೆ ಹತ್ತಿರವಾಗುತ್ತಾ ಹೋಗುತ್ತಾರೆ. ಕೋವಿಡ್ ಅಪಾಯವನ್ನು ಕೂಡ ಎದುರಿಸಬೇಕಾಗುತ್ತದೆ. ಹಾಗಾಗಿ, ತಂಬಾಕು ಉತ್ಪನ್ನಗಳ ಸೇವನೆಯನ್ನು ತ್ಯಜಿಸಬೇಕು’ ಎಂದು ಹೇಳಿದೆ.

‘ತಂಬಾಕು ಉತ್ಪನ್ನಗಳ ಸೇವನೆಯಿಂದ ಆಗುವ ದುಷ್ಪರಿಣಾಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ಇದರಿಂದ ಹಲವರು ಧೂಮಪಾನ ಹಾಗೂ ತಂಬಾಕು ಉತ್ಪನ್ನವನ್ನು ತ್ಯಜಿಸುತ್ತಿದ್ದಾರೆ. ಇನ್ನಷ್ಟು ಜಾಗೃತಿ ಮೂಡಬೇಕಿದೆ’ ಎಂದು ಇಲಾಖೆಯ ಉಪನಿರ್ದೇಶಕ ಡಾ.ಎಂ. ಸೆಲ್ವರಾಜನ್ ತಿಳಿಸಿದ್ದಾರೆ.

ಪ್ರಧಾನಿ ಜೊತೆ ‘ಪರೀಕ್ಷಾ ಪೇ ಚರ್ಚಾ’: ರಾಜ್ಯದ ಇಬ್ಬರು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಜೊತೆ ‘ಪರೀಕ್ಷಾ ಪೇ ಚರ್ಚಾ’ ಸಂವಾದದಲ್ಲಿ ಭಾಗವಹಿಸಲು ಆಯ್ಕೆಯಾದ ದೇಶದ ಮೂವತ್ತು ವಿದ್ಯಾರ್ಥಿಗಳಲ್ಲಿ ರಾಜ್ಯದ ಇಬ್ಬರು ಇದ್ದಾರೆ.

ಉಡುಪಿ ಜಿಲ್ಲೆಯ ಚಾರ್ಮಕ್ಕಿ ನಾರಾಯಣ ಶೆಟ್ಟಿ ಸ್ಮಾರಕ ಸರ್ಕಾರಿ ಪ್ರೌಢಶಾಲೆ ಆರ್ಡಿ (ನಮ್ಮೂರ ಶಾಲೆ) ವಿದ್ಯಾರ್ಥಿನಿ ಅನುಷಾ ಮತ್ತು ಹೊಸಕೋಟೆ ತಾಲ್ಲೂಕಿನ ತಾವರಕೆರೆ ಸರ್ಕಾರಿ ಪ್ರೌಢಶಾಲೆಯ ಮನೋಜ್ ಆಯ್ಕೆಯಾದವರು. ಈ ಇಬ್ಬರಿಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅಭಿನಂದನೆ ಸಲ್ಲಿಸಿದ್ದಾರೆ.

ಅನುಷಾ ಜೊತೆ ದೂರವಾಣಿಯಲ್ಲಿ ಮಾತನಾಡಿದ ಸುರೇಶ್ ಕುಮಾರ್, ಆಕೆಯ ಕುಟುಂಬ, ತಂದೆ-ತಾಯಿ ಕುರಿತು ಮಾಹಿತಿ ಪಡೆದರು. ಪ್ರಧಾನಿ ಜೊತೆ ಸಂವಾದಕ್ಕೆ ಆಯ್ಕೆಯಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿ, ಚೆನ್ನಾಗಿ ಓದಿ ಶಾಲೆಗೆ ಹಾಗೂ ರಾಜ್ಯಕ್ಕೆ ಕೀರ್ತಿ ತರುವಂತೆ ಹಾರೈಸಿದರು.

ಮನೋಜ್ ಕಲಿಯುವ ಶಾಲೆಗೆ ಭೇಟಿ ಮಾಡಿದ ಸಚಿವರು, ಪ್ರಧಾನಿ ಜೊತೆ ಆತ್ಮವಿಶ್ವಾಸದಿಂದ ಮಾತನಾಡುವಂತೆ ಸಲಹೆ ನೀಡಿದರು. ಶಾಲೆಯ ಇತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಸಚಿವರು, ಪರೀಕ್ಷೆ, ಶಾಲೆ, ತರಗತಿ, ಪಠ್ಯ, ಆರೋಗ್ಯ ರಕ್ಷಣೆ, ಸಾಂಕ್ರಾಮಿಕ ರೋಗಗಳಿಂದ ದೂರ ಇರುವುದು ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಿದರು.

‘ಇಬ್ಬರು ವಿದ್ಯಾರ್ಥಿಗಳೂ ಗ್ರಾಮೀಣ ಭಾಗದವರು. ಅನುಷಾಳ ತಂದೆ ಗಾರೆ ಕೆಲಸಗಾರರಾಗಿದ್ದರೆ, ಮನೋಜ್‌ನ ತಂದೆ ಹೂವಿನ ವ್ಯಾಪಾರಿ. ಬಡತನದ ಕುಟುಂಬಕ್ಕೆ ಸೇರಿದವರು. ಪ್ರತಿಭೆ ಎಲ್ಲಿದ್ದರೂ ಅರಳುತ್ತದೆ ಎಂಬುದಕ್ಕೆ ಈ ವಿದ್ಯಾರ್ಥಿಗಳು ಸಾಕ್ಷಿ’ ಎಂದು ಸುರೇಶ್ ಕುಮಾರ್ ಹೇಳಿದ್ದಾರೆ.

ಹಾಸ್ಟೆಲ್ ಅವ್ಯವಸ್ಥೆ: ವಿದ್ಯಾರ್ಥಿಗಳಿಂದ ಪ್ರತಿಭಟನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಬಿಸಿಎಂ ಹಾಸ್ಟೆಲ್ ಅವ್ಯವಸ್ಥೆಯ ಆಗರವಾಗಿದೆ ಎಂದು ಆರೋಪಿಸಿ ನೂರಾರು ವಿದ್ಯಾರ್ಥಿಗಳು ಶುಕ್ರವಾರ ಪ್ರತಿಭಟನೆ ನಡೆಸಿದರು.

‘ಹಾಸ್ಟೆಲ್‌ನಲ್ಲಿ ಗುಣಮಟ್ಟದ ಊಟ ನೀಡುತ್ತಿಲ್ಲ. ಈ ಬಗ್ಗೆ ಹಲವು ಬಾರಿ ದೂರು ನೀಡಿದರೂ ಹಾಸ್ಟೆಲ್ ವಾರ್ಡನ್ ಮತ್ತು ಬಿಸಿಎಂ ಹಾಸ್ಟೆಲ್‌ಗಳ ಜಿಲ್ಲಾ ಅಧಿಕಾರಿಯವರು ಸ್ಪಂದಿಸಿಲ್ಲ’ ಎಂದು ವಿದ್ಯಾರ್ಥಿಗಳು ದೂರಿದರು.

‘ಗ್ರಂಥಾಲಯವನ್ನು ನಿಗದಿತ ಸಮಯಕ್ಕಿಂತ ಮೊದಲೇ ಮುಚ್ಚಲಾಗುತ್ತಿದೆ. ಸಂಜೆ 7ಗಂಟೆಯಿಂದಲೇ ಓದುವುದನ್ನು ನಿಲ್ಲಿಸಿ ಬಾಗಿಲು ಮುಚ್ಚಬೇಕು ಎನ್ನುತ್ತಾರೆ. ರಾತ್ರಿ 8.30ರ ನಂತರ ಹೋದರೆ ಬಾಗಿಲು ತೆಗೆಯುವುದೇ ಇಲ್ಲ’ ಎಂದು ಆರೋಪಿಸಿದರು.

‘ಬೆಳಿಗ್ಗೆ ತರಗತಿಗೆ ಹೋಗಿ, ನಂತರ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಮುಗಿಸಿಕೊಂಡು ನಾವು ಗ್ರಂಥಾಲಯಕ್ಕೆ ಹೋಗುವುದೇ ಸಂಜೆ 6.30 ಆಗುತ್ತದೆ. ತರಗತಿಯ ಪಠ್ಯಕ್ರಮ ಮಾತ್ರ ಓದಬೇಕು, ಈ ಲೈಬ್ರರಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದಲು ಅವಕಾಶ ಇಲ್ಲ ಎನ್ನುತ್ತಾರೆ. ನಮ್ಮ ಊರು ಬಿಟ್ಟು ಓದಲೆಂದೇ ಇಲ್ಲಿಗೆ ಬಂದಿದ್ದೇವೆ. ಅದಕ್ಕೂ ಅವಕಾಶ ಇಲ್ಲ ಎಂದರೆ ಹೇಗೆ’ ಎಂದು ವಿದ್ಯಾರ್ಥಿಗಳು ಪ್ರಶ್ನಿಸಿದರು. ‘ಈ ಬಗ್ಗೆ ಪ್ರಶ್ನಿಸಿದರೆ ನೋಟಿಸ್ ನೀಡಲಾಗುತ್ತಿದೆ’ ಎಂದು ದ್ವಿತೀಯ ವರ್ಷದ ವಿದ್ಯಾರ್ಥಿಗಳು ದೂರಿದರು. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಹಾಸ್ಟೆಲ್ ವಾರ್ಡನ್ ಮಂಜುಳಾ ಅವರನ್ನು ಸಂಪರ್ಕಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ಸೌಂದರ್ಯ ಸಾಹಿತ್ಯ ವೇದಿಕೆ ಉದ್ಘಾಟನೆ

ಬೆಂಗಳೂರು: ಶಿಕ್ಷಣವು ಅನ್ನ ಗಳಿಕೆಯ ಮಾರ್ಗವಾದರೆ, ಸಾಂಸ್ಕೃತಿಕ ಚಟುವಟಿಕೆಗಳು ಹೃದಯವನ್ನು ಅರಳಿಸಿ ಅಂತರಂಗದ ವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಗುತ್ತದೆ ಎಂದು ಕತೆಗಾರ ಪ್ರೊ. ನಾಗರಾಜ ವಸ್ತಾರೆ ಹೇಳಿದರು.

ನಗರದ ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಸೌಂದರ್ಯ ಸಾಹಿತ್ಯ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು. ‘ವ್ಯಾವಹಾರಿಕ ಸೌಕರ್ಯಕ್ಕಾಗಿ ಇಂಗ್ಲಿಷ್ ಅನಿವಾರ್ಯ. ನಮ್ಮ ಭಾವನೆ, ಸೃಜನಶೀಲ ಅಭಿವ್ಯಕ್ತಿಗಾಗಿ ಮಾತೃಭಾಷೆ ಕನ್ನಡವೇ ಮೂಲ ಸೆಲೆ’ ಎಂದು ವಸ್ತಾರೆ ಪ್ರತಿಪಾದಿಸಿದರು.



ನಾಗರಾಜ ವಸ್ತಾರೆ ವಿದ್ಯಾರ್ಥಿಯೊಬ್ಬರಿಗೆ ಬಹುಮಾನ ವಿತರಿಸಿದರು

ಸೌಂದರ್ಯ ಎಜುಕೇಷನ್ ಟ್ರಸ್ಟ್‌ನ ಕಾರ್ಯನಿರ್ವಹಣಾಧಿಕಾರಿ ಕೀರ್ತನ್‌ಕುಮಾರ್, ಪ್ರಾಂಶುಪಾಲ ಡಾ.ಸುರೇಶ್ ಸಿ ಹೆಗಡಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಬಿ.ಪ್ರಹ್ಲಾದ ರೆಡ್ಡಿ ಮುಂತಾದವರು ಮಾತನಾಡಿದರು.

ಎಷ್ಟು ತಲೆಮಾರು ಮೀಸಲಾತಿ ಬೇಕು: ಸುಪ್ರೀಂ ಪ್ರಶ್ನೆ

ಒಂದನೇ ಪುಟದಿಂದ

ಒಂದು ವೇಳೆ ಮೀಸಲಾತಿಯ ಶೇ 50ರಷ್ಟು ಮಿತಿಯನ್ನು ತೆಗೆದುಹಾಕಿದರೆ ‘ಫಲಿತಾಂಶದಲ್ಲಿ ಅಸಮಾನತೆ’ ಇರುತ್ತದೆಯಾ ಎಂದೂ ಕೇಳಿತು.

ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನ ಪೀಠವು ಮಹಾರಾಷ್ಟ್ರದ ಪರ ಹಾಜರಾದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರಲ್ಲಿ ಈ ವಿಚಾರ ಕೇಳಿತು.

‘ಬದಲಾದ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಮೀಸಲಾತಿ ಕೋಟಾಗಳನ್ನು ಸರಿಪಡಿಸಲು ನ್ಯಾಯಾಲಯಗಳು ಅದನ್ನು ರಾಜ್ಯಗಳಿಗೆ ಬಿಡಬೇಕು ಮತ್ತು 1931ರ ಜನಗಣತಿಯ ಆಧಾರದಲ್ಲಿ ಮಂಡಲ್ ತೀರ್ಪನ್ನು ರೂಪಿಸಲಾಯಿತು, ಈಗ ಜನಸಂಖ್ಯೆ ಅಧಿಕವಾಗಿದೆ, ದೊಡ್ಡ ಸಂಖ್ಯೆಯಲ್ಲಿ ಜನರು ಈಗಲೂ ಹಿಂದುಳಿದಿದ್ದಾರೆ, ಹೀಗಾಗಿ ಮೀಸಲಾತಿ ಪ್ರಮಾಣವನ್ನು ಶೇ 50ರ ಮಿತಿಯಿಂದ ಹೆಚ್ಚಿಸುವ ಅಗತ್ಯ ಇದೆ’ ಎಂದು ವಾದಿಸಿದರು.

‘ಆರ್ಥಿಕವಾಗಿ ದುರ್ಬಲ ವರ್ಗದ ಜನರಿಗೆ ಶೇ 10 ರಷ್ಟು ಮೀಸಲಾತಿ ಕೋಟಾ ನೀಡಿರುವ ಕೇಂದ್ರದ ನಿರ್ಧಾರವು ಶೇ 50ರ ಮೀಸಲಾತಿ ಮಿತಿಯನ್ನು ಉಲ್ಲಂಘಿಸಿದೆ’ ಎಂದರು.

‘ಸ್ವಾತಂತ್ರ್ಯ ಬಂದು 70 ವರ್ಷಗಳು ಕಳೆದಿವೆ. ರಾಜ್ಯಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸಿವೆ. ಆದರೆ, ಯಾವುದೇ ಅಭಿವೃದ್ಧಿ ನಡೆದಿಲ್ಲ, ಯಾವುದೇ ಹಿಂದುಳಿದ ಜಾತಿಗಳು ಮುಂದುವರಿದಿಲ್ಲ ಎಂದು ನಾವು ಒಪ್ಪಿಕೊಳ್ಳಬಹುದೇ’ ಎಂದು ನ್ಯಾಯಪೀಠ ಪ್ರಶ್ನಿಸಿತು.

‘ಹಿಂದುಳಿದ ಜಾತಿಯಲ್ಲಿದ್ದು ಮುಂದೆ ಬಂದವರನ್ನು ಮೀಸಲಾತಿಯಿಂದ ಹೊರಗಿಡುವುದಕ್ಕಾಗಿಯೇ ಮಂಡಲ್ ತೀರ್ಪಿನ ಪುನರ್ ಪರಿಶೀಲನೆಯ ಅಗತ್ಯ ಎದುರಾಗಿದೆ’ ಎಂದು ಪೀಠ ಹೇಳಿತು. ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಲಾಯಿತು.

ಆರ್‌ಐಎಂ ಘಟಿಕೋತ್ಸವ: 227 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಆರ್‌ಐಎಂ) 24ನೇ ಘಟಿಕೋತ್ಸವ ಸಮಾರಂಭ ನಡೆಯಿತು.

ಶಿಕ್ಷಣ ತಜ್ಞ ಪ್ರೊ. ಎಂ.ಕೆ.ಶ್ರೀಧರ್ ಅವರು ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಬಾರಿ ಒಟ್ಟು 227 ವಿದ್ಯಾರ್ಥಿಗಳಿಗೆ ಪದವಿ (ಸ್ನಾತಕೋತ್ತರ ಡಿಪ್ಲೊಮಾ) ಪ್ರದಾನ ಮಾಡಲಾಯಿತು.

ಶೈಕ್ಷಣಿಕ ಮತ್ತು ಸಹ ಪಠ್ಯ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕೆ.ಆರ್.ಕೀರ್ತನಾ ಅವರಿಗೆ ಚಿನ್ನದ ಪದಕ ನೀಡಲಾಯಿತು. ಅವರು ಅತ್ಯುತ್ತಮ ವಿದ್ಯಾರ್ಥಿನಿ (2018–20) ಗೌರವಕ್ಕೂ ಪಾತ್ರರಾದರು.

‘ನಾವು ಏನು ಮಾಡುತ್ತೇವೆ ಎನ್ನುವುದಕ್ಕಿಂತಲೂ ನಾವು ಏನನ್ನು ಕಲಿತಿದ್ದೇವೆ ಎಂಬುದು ಬಹಳ ಮುಖ್ಯ. ಜೀವನದಲ್ಲಿ ಸಾಕಷ್ಟು ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಹಿಮ್ಮೆಟ್ಟಿಸಿ ಛಲದಿಂದ ಮುನ್ನುಗ್ಗುವ ಗುಣವನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು’ ಎಂದು ಎಂ.ಕೆ.ಶ್ರೀಧರ್ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗೋಕುಲ ಎಜುಕೇಷನ್ ಫೌಂಡೇಷನ್‌ನ (ಜಿಇಎಫ್) ಮುಖ್ಯಸ್ಥ ಎಂ.ಆರ್. ಜಯರಾಮ್ ‘ಉತ್ತಮ ಸಮಾಜ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ ಬಹುದೊಡ್ಡದು. ಅದನ್ನು ಅರಿತು ಮುನ್ನಡೆಯಿರಿ’ ಎಂದು ಕಿವಿಮಾತು ಹೇಳಿದರು.

ಜಿಇಎಫ್‌ನ ನಿರ್ದೇಶಕ ಹಾಗೂ ಟ್ರಸ್ಟಿ ಎಂ.ಆರ್.ಆನಂದರಾಮ್, ಎಂಜಿನಿಯರಿಂಗ್ ಮತ್ತು ಜನರಲ್ ಸೈನ್ಸಸ್ ವಿಭಾಗದ ಮುಖ್ಯ ಕಾರ್ಯನಿರ್ವಾಹಕ ಬಿ.ಎಸ್.ರಾಮಪ್ರಸಾದ್, ಜಿಇಎಫ್‌ನ ಹಣಕಾಸು ವಿಭಾಗದ ಮುಖ್ಯಸ್ಥ ಜಿ.ರಾಮಚಂದ್ರ, ಆರ್‌ಐಎಂ ನಿರ್ದೇಶಕಿ (ಶೈಕ್ಷಣಿಕ) ಮಾನಸ ನಾಗಭೂಷಣಂ ಮತ್ತು ಮೌಲ್ಯಮಾಪನ ವಿಭಾಗದ ರಿಜಿಸ್ಟ್ರಾರ್ ಸವಿತಾ ರಾಣಿ ರಾಮಚಂದ್ರನ್ ಇದ್ದರು.



ಚಿನ್ನದ ಪದಕ ಹಾಗೂ ಅತ್ಯುತ್ತಮ ವಿದ್ಯಾರ್ಥಿನಿ ಪ್ರಶಸ್ತಿ ಸ್ವೀಕರಿಸಿದ ಕೆ.ಆರ್.ಕೀರ್ತನಾ

ಕೈಗಾರಿಕಾ ನೀತಿಯಲ್ಲಿ ಸೇರ್ಪಡೆ: ಸಚಿವ ಶೆಟ್ಟರ್ ಹೇಳಿಕೆ

‘ಕೌಶಲ ತರಬೇತಿ ಕೊಟ್ಟು ಉದ್ಯೋಗ ನೀಡಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಗಳು ಮತ್ತು ಅದಕ್ಕಾಗಿ ರಸ್ತೆಗಳಂತಹ ಮೂಲಸೌಕರ್ಯಗಳಿಗೆ ಜಮೀನು ಬಿಟ್ಟುಕೊಡುವ ಕುಟುಂಬಗಳ ಸದಸ್ಯರಿಗೆ ಅಗತ್ಯವಿರುವ ಕೌಶಲ ತರಬೇತಿ ನೀಡಿಯೇ ಉದ್ಯೋಗ ಕಲ್ಪಿಸಬೇಕು ಎಂಬ ಅಂಶವನ್ನು ಕೈಗಾರಿಕಾ ನೀತಿಗೆ ಸೇರಿಸಲಾಗುವುದು ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಹೇಳಿದರು.


ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಉದ್ಯಮಗಳು ಭೂಮಿ ಕಳೆದುಕೊಂಡ ಕುಟುಂಬಗಳಿಗೆ ಉದ್ಯೋಗ ನೀಡದೇ ಇದ್ದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ತಮ್ಮ ಉದ್ಯಮಕ್ಕೆ ಅಗತ್ಯವಿರುವ ಕೌಶಲವಿಲ್ಲ ಎಂದು ತಿರಸ್ಕರಿಸುವ ಪ್ರಶ್ನೆಯೇ ಇಲ್ಲ. ಮೊದಲಿಗೆ ಅಂತಹ ಕೌಶಲದ ತರಬೇತಿ ನೀಡಬೇಕು. ಬಳಿಕ ಉದ್ಯೋಗ ನೀಡಬೇಕು ಎಂದು ಅವರು ಹೇಳಿದರು.

‘ಸಾಕಷ್ಟು ಕಂಪನಿಗಳು ಕೌಶಲ ಇಲ್ಲ ಎಂದು ಉದ್ಯೋಗ ನೀಡುತ್ತಿಲ್ಲ. ರೈತರ ಮೇಲೆ ಬಲ ಪ್ರಯೋಗ ಮಾಡುತ್ತಿದ್ದಾರೆ. ಕೈಗಾರಿಕಾ ಟೌನ್‌ಶಿಪ್‌ಗೆ ರಸ್ತೆ ನಿರ್ಮಿಸಲು ಭೂಮಿ ಕೊಟ್ಟವರಿಗೂ ಉದ್ಯೋಗ ನೀಡುತ್ತಿಲ್ಲ’ ಎಂದು ಯತೀಂದ್ರ ಗಮನ ಸೆಳೆದರು.

ರಸ್ತೆಗೆ ಭೂಮಿ ಕೊಟ್ಟಿದ್ದರೂ ಉದ್ಯಮಗಳು ಉದ್ಯೋಗ ನೀಡಬೇಕಾಗುತ್ತದೆ. ರಸ್ತೆ ಕೂಡಾ ಕೈಗಾರಿಕಾ ವಸಾಹತುವಿನ ಒಂದು ಭಾಗವಾಗಿದ್ದು, ನಿರಾಕರಿಸಲು ಸಾಧ್ಯವಿಲ್ಲ ಎಂದು ಶೆಟ್ಟರ್ ಹೇಳಿದರು.

ಯಾವುದೇ ಉದ್ಯಮವಾಗಲಿ ಕೌಶಲ ಕೊಟ್ಟೇ ಉದ್ಯೋಗ ಕೊಡಬೇಕು. ಕೈಗಾರಿಕಾ ಘಟಕ ಆರಂಭ ಆಗುವುದಕ್ಕೆ ಮೊದಲೇ ತರಬೇತಿ ನೀಡಬೇಕು. ಘಟಕ ಆರಂಭಕ್ಕೆ ಮೊದಲೇ ನೇಮಕಾತಿ ಮಾಡಬೇಕು. ಈ ವಿಷಯವನ್ನು ಕೈಗಾರಿಕಾ ನೀತಿಗೆ ಸೇರಿಸಬೇಕು ಎಂದು ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ ತಿಳಿಸಿದರು.


ಜಗದೀಶ ಶೆಟ್ಟರ್

ಏಷ್ಯನ್ ಪೇಂಟ್ಸ್ ನಿದರ್ಶನ

ಮೈಸೂರು ಜಿಲ್ಲೆಯಲ್ಲಿ ಏಷ್ಯನ್ ಪೇಂಟ್ಸ್ ಭೂಮಿ ಬಿಟ್ಟುಕೊಟ್ಟವರಿಗೆ 70 ಜನರಿಗೆ ಉದ್ಯೋಗ ಕೊಡದಿದ್ದಾಗ, ಮುಂಬೈನಿಂದ ಕಂಪನಿಯವರನ್ನು ಕರೆಸಿದೆವು. ಮಾತುಕತೆ ನಡೆಸಿದ ಬಳಿಕ, 54 ಜನರಿಗೆ ಉದ್ಯೋಗ ನೀಡಿದರು. ಉಳಿದವರಿಗೆ ಉದ್ಯೋಗ ಕೊಡಿಸಲು ಕ್ರಮ ವಹಿಸಲಾಗಿದೆ. ಯಾರೇ ಆಗಲಿ ಷರತ್ತು ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಖಡಕ್ ಎಚ್ಚರಿಕೆ ನೀಡಿದರು.

ಸುದ್ದಿ 2 ನಿಮಿಷ

ಹೇಮಂತ್ ನಿಂಬಾಳ್ಕರ ವಿರುದ್ಧ ವಿಚಾರಣೆ ರದ್ದು

ಬೆಂಗಳೂರು: ಐ ಮಾನಿಟರಿ ಅಡ್ವೈಸರಿ (ಐಎಂಎ) ಹಗರಣದಲ್ಲಿ ಐಪಿಎಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್, ಪ್ರಾಸಿಕ್ಯೂಷನ್ ಅನುಮತಿ ಮತ್ತು ದೋಷಾರೋಪ ಪಟ್ಟಿಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಐಎಂಎ ಪರವಾಗಿ ವರದಿಗಳನ್ನು ಸಿದ್ಧಪಡಿಸಿ ಕ್ಲೀನ್ ಚಿಟ್ ನೀಡಿದ್ದರು ಎಂಬ ಆರೋಪದಲ್ಲಿ 2019ರಲ್ಲಿ ನಿಂಬಾಳ್ಕರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು. 2020ರಲ್ಲಿ ಭ್ರಷ್ಟಾಚಾರ ತಡೆ(ಪಿ.ಸಿ) ಕಾಯ್ದೆಯಡಿ ಮತ್ತೊಂದು ಎಫ್‌ಐಆರ್ ದಾಖಲಿಸಿತ್ತು.

ಪಿ.ಸಿ ಕಾಯ್ದೆಯ ಸೆಕ್ಷನ್ 17ಎ(ಬಿ) ಅಡಿಯಲ್ಲಿ ವಿಚಾರಣೆ ನಡೆಸಲು 2020ರ ಜನವರಿ 7ರಂದು ಅನುಮತಿ ನೀಡಲಾಗಿದೆ. ಆದರೆ, ಅದಕ್ಕೂ ಮುನ್ನ 2019ರ ನವೆಂಬರ್ 8ರಂದೇ ನಿಂಬಾಳ್ಕರ ಅವರ ಮನೆ ಮತ್ತು ಕಚೇರಿಗಳಲ್ಲಿ ಶೋಧ ನಡೆಸಿರುವುದನ್ನು ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಅವರಿದ್ದ ಪೀಠ ಗಮನಿಸಿತು.

‘ಸಾರ್ವಜನಿಕ ಅಧಿಕಾರಿ ತನ್ನ ಕರ್ತವ್ಯ ನಿರ್ವಹಣೆ ವೇಳೆ ಮಾಡಿದ ಯಾವುದೇ ಶಿಫಾರಸು ಮತ್ತು ನಿರ್ಧಾರಕ್ಕೆ ಸಂಬಂಧಿಸಿದಂತೆ ತನಿಖೆ ಮಾಡುವುದು ಪಿ.ಸಿ ಕಾಯ್ದೆಯ ಸೆಕ್ಷನ್ 17ರ ಪ್ರಕಾರ ನಿಷಿದ್ಧ’ ಎಂದು ಪೀಠ ಅಭಿಪ್ರಾಯಪಟ್ಟಿತು. ‘ಈ ಕಾಯ್ದೆ ಉಲ್ಲಂಘಿಸಿ ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ವಿಚಾರಣೆಗೆ ಅನುಮತಿ ನೀಡಬಾರದು’ ಎಂದು ಪೀಠ ತಿಳಿಸಿತು.



ಡಿ.ಜೆ.ಹಳ್ಳಿ ಗಲಭೆ ಆರೋಪಿಗೆ ಜಾಮೀನು

ಬೆಂಗಳೂರು: ಡಿ.ಜೆ.ಹಳ್ಳಿ ಹಿಂಸಾಚಾರ ಪ್ರಕರಣದಲ್ಲಿ ಆರೋಪಿಯಾಗಿದ್ದ ಬಿಬಿಎಂಪಿ ಮಾಜಿ ಮೇಯರ್ ಸಂಪತ್‌ರಾಜ್ ಅವರ ಹಿಂಬಾಲಕ ಎಸ್. ಸಂತೋಷ್‌ಕುಮಾರ್‌ಗೆ ಹೈಕೋರ್ಟ್ ಜಾಮೀನು ನೀಡಿದೆ.

‘₹5 ಲಕ್ಷ ಮೌಲ್ಯದ ಬಾಂಡ್ ಜತೆಗೆ ಇಬ್ಬರ ಶ್ಯೂರಿಟಿ ನೀಡಬೇಕು. ಈ ರೀತಿಯ ಚಟುವಟಿಕೆಗಳನ್ನು ಭಾಗಿಯಾಗಬಾರದು, ನಿಯಮಿತವಾಗಿ ವಿಚಾರಣೆಗೆ ಹಾಜರಾಗಬೇಕು’ ಎಂದು ಜಾನ್ ಮೈಕಲ್ ಕುನ್ಹಾ ಅವರಿದ್ದ ಪೀಠ ನಿರ್ದೇಶನ ನೀಡಿತು.

‘ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುವ ಕಾರಣ ಅವರ ವಿರುದ್ಧ ಎಸ್‌ಸಿ/ಎಸ್‌ಟಿ(ದೌರ್ಜನ್ಯ ತಡೆ) ಕಾಯ್ದೆ ಜಾರಿಗಳಿಸಲು ಆಗುವುದಿಲ್ಲ. ಅವರು ಗಲಭೆ ಮಾಡಿದ್ದಾರೆ ಎಂಬುದನ್ನು ಸಾಬೀತುಪಡಿಸುವ ಪುರಾವೆಗಳಿಲ್ಲ’ ಎಂದು ಪೀಠ ಅಭಿಪ್ರಾಯಪಟ್ಟಿತು.

2020 ನವೆಂಬರ್‌ನಲ್ಲಿ ಸಂತೋಷ್ ಸಲ್ಲಿಸಿದ್ದ ಜಾಮೀನು ಅರ್ಜಿ ತಿರಸ್ಕಾರಗೊಂಡಿತ್ತು. ಆ ಸಂದರ್ಭದಲ್ಲಿ ಸಂಪತ್ ರಾಜ್ ತಲೆಮರೆಸಿಕೊಂಡಿದ್ದ ಕಾರಣಕ್ಕೆ ಜಾಮೀನು ನೀಡಿರಲಿಲ್ಲ. ಶರಣಾದ ಸಂಪತ್ ರಾಜ್ ಮತ್ತು ಇತರ ಇಬ್ಬರು ಆರೋಪಿಗಳು ಜಾಮೀನು ಪಡೆದು ಬಿಡುಗಡೆಯಾಗಿದ್ದಾರೆ. 2020 ಆಗಸ್ಟ್ 25ರಂದು ಸಂತೋಷ್ ಬಂಧನವಾಗಿತ್ತು.

ಮಾದಕ ವಸ್ತು ಮಾರಾಟ: ಬಂಧನ

ವೀಸಾ ಮುಗಿದಿದ್ದರೂ ನಗರದಲ್ಲಿ ವಾಸವಾಗಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಮರ್ಷಿಯಲ್ ಸ್ಟ್ರೀಟ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತುಗಳ ಮಾರಾಟದಲ್ಲಿ ತೊಡಗಿದ್ದ ಒಬ್ಬ ನೈಜೀರಿಯಾ ಪ್ರಜೆ ಸೇರಿದಂತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಟಿ.ಸಿ.ಪಾಳ್ಯದಲ್ಲಿ ವಾಸವಿದ್ದ ನೈಜೀರಿಯಾ ಮೂಲದ ಒಕೊರೊ ಕ್ರಿಶ್ಚಿಯನ್ ಇಫೀನ್ಯಿ (36) ಹಾಗೂ ಸನ್‌ಶೈನ್ ಬಡಾವಣೆ ನಿವಾಸಿ ರೋಹಿತ್ ಕ್ರಿಸ್ಟೋಫರ್ (28) ಬಂಧಿತರು.

‘2018ರಲ್ಲಿ ಮೂರು ತಿಂಗಳ ಪ್ರವಾಸಿ ವೀಸಾ ಪಡೆದು ಭಾರತಕ್ಕೆ ಬಂದಿದ್ದ ಆರೋಪಿ ಒಕೊರೊ ಕ್ರಿಶ್ಚಿಯನ್, ವೀಸಾ ಮುಗಿದಿದ್ದರೂ ಅಕ್ರಮವಾಗಿ ಬೆಂಗಳೂರಿನಲ್ಲಿ ನೆಲೆಸಿದ್ದ. ಸುಲಭವಾಗಿ ಹಣ ಮಾಡಬೇಕೆಂಬ ಉದ್ದೇಶದಿಂದ ಕೊರಿಯರ್ ಮೂಲಕ ಎಂಡಿಎಂಎ ಮಾದಕ ವಸ್ತು ತರಿಸಿಕೊಂಡು, ನಗರದ ವಿವಿಧ ಭಾಗದ ಜನರಿಗೆ ಮಾರಾಟ ಮಾಡುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ರೋಹಿತ್ ಕ್ರಿಸ್ಟೋಫರ್‌ನ ಮುಖಾಂತರ ಕೆ.ಆರ್.ಪುರ, ರಾಮಮೂರ್ತಿನಗರ ಸೇರಿದಂತೆ ವಿವಿಧೆಡೆ ನೆಲೆಸಿರುವ ಆಫ್ರಿಕಾ ಮೂಲದ ವ್ಯಕ್ತಿಗಳು, ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮಾದಕ ವಸ್ತುಗಳನ್ನು ಪೂರೈಸುವ ದಂಧೆಯಲ್ಲಿ ತೊಡಗಿದ್ದ’.

‘ಆರೋಪಿಗಳಿಂದ ₹35.20 ಲಕ್ಷ ಬೆಲೆಬಾಳುವ 350 ಗ್ರಾಂ ತೂಕದ ಎಂಡಿಎಂಎ (ಮಾದಕ ವಸ್ತು), ಎರಡು ಮೊಬೈಲ್, 10 ಜಿಪ್‌ಲಾಕ್ ಕವರ್, ಒಂದು ಸ್ಕೂಟರ್ ಹಾಗೂ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

ಮನೆ ಮಾಲೀಕರ ವಿರುದ್ಧ ಕ್ರಮ: ‘ಆರೋಪಿ ಒಕೊರೊ ಕ್ರಿಶ್ಚಿಯನ್ ವಾಸವಿದ್ದ ಮನೆಯಲ್ಲಿ ಶೋಧ ನಡೆಸಿ, ನಕಲಿ ವೀಸಾ ಹಾಗೂ ಹಣ ವರ್ಗಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಯ ವೀಸಾ ದಾಖಲೆ ಪರಿಶೀಲಿಸದೆ, ವಾಸಕ್ಕೆ ಮನೆ ನೀಡಿದ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.



ಬಂಧಿತ ಆರೋಪಿಗಳಾದ ಒಕೊರೊ ಕ್ರಿಶ್ಚಿಯನ್ ಇಫೀನ್ಯಿ ಹಾಗೂ ರೋಹಿತ್ ಕ್ರಿಸ್ಟೋಫರ್

ಕದ್ದ ವಾಹನಗಳಲ್ಲಿ ಮೊಬೈಲ್ ಕಳವು, ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ಕದ್ದಿದ್ದ ದ್ವಿಚಕ್ರ ವಾಹನಗಳಲ್ಲಿ ತೆರಳಿ, ಸಾರ್ವಜನಿಕರಿಂದ ಮೊಬೈಲ್‌ಗಳನ್ನು ಕದಿಯುತ್ತಿದ್ದ ಮೂವರು ಆರೋಪಿಗಳನ್ನು ಕಾಟನ್‌ಪೇಟೆ ಪೊಲೀಸರು ಬಂಧಿಸಿದ್ದಾರೆ.

ಕಾಟನ್‌ಪೇಟೆ ನಿವಾಸಿಗಳಾದ ಸೈಯದ್ ಅಬ್ಬಾಸ್ (20), ದಾದಾಪೀರ್ (22) ಹಾಗೂ ಜಬ್ಬಿ ಪಾಷಾ (19) ಬಂಧಿತರು.

ಮಾ.5ರ ರಾತ್ರಿ ಕಾಟನ್‌ಪೇಟೆ ಠಾಣಾ ವ್ಯಾಪ್ತಿಯ ಮನ್ವರ್ತಿಪೇಟೆ ಬಳಿ ಶುದ್ಧ ಕುಡಿಯುವ ನೀರಿನ ಘಟಕದ ಬಳಿ ಇಬ್ಬರು ಬಂದಿದ್ದರು. ಇದೇ ವೇಳೆ ಏಕಾಏಕಿ ಬೈಕ್‌ನಲ್ಲಿ ಬಂದಿದ್ದ ಮೂವರು ಆರೋಪಿಗಳು, ಚಾಕು ತೋರಿಸಿ ಅವರ ಬಳಿ ಇದ್ದ ಮೊಬೈಲ್‌ಗಳು ಹಾಗೂ ನಗದು ಕದ್ದು ಪರಾರಿಯಾಗಿದ್ದರು. ಈ ಸಂಬಂಧ ಠಾಣೆಯಲ್ಲಿ ದೂರು ದಾಖಲಾಗಿತ್ತು.

‘ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಾಟನ್‌ಪೇಟೆ, ಬ್ಯಾಡರಹಳ್ಳಿ, ಮಹಾಲಕ್ಷ್ಮೀ ಬಡಾವಣೆ ಸೇರಿದಂತೆ ಹಲವೆಡೆ ದ್ವಿಚಕ್ರ ವಾಹನಗಳನ್ನು ಕದ್ದಿದ್ದರು. ಅದೇ ವಾಹನಗಳಲ್ಲಿ ತೆರಳಿ, ಶಾಂತಲಾ ವೃತ್ತ, ಮೆಜೆಸ್ಟಿಕ್, ರೈಲ್ವೆ ನಿಲ್ದಾಣಗಳ ಬಳಿ ಸಾರ್ವಜನಿಕರನ್ನು ಬೆದರಿಸಿ ಮೊಬೈಲ್ ಕದ್ದಿರುವ ವಿಚಾರ ತಿಳಿಸಿದರು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಆರೋಪಿಗಳಿಂದ 16 ಮೊಬೈಲ್‌ಗಳು ಹಾಗೂ ಮೂರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್ 397ರಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ಹೇಳಿದರು.



ಆರೋಪಿಗಳಿಂದ ಜಪ್ತಿ ಮಾಡಿರುವ ದ್ವಿಚಕ್ರ ವಾಹನ ಹಾಗೂ ಮೊಬೈಲ್‌ಗಳು

ಗ್ರಾ.ಪಂ. ಚುನಾವಣೆ ಬಹಿಷ್ಕಾರ

ಮಾಯಕೊಂಡ: ತಾಲ್ಲೂಕು ಕೇಂದ್ರಕ್ಕೆ ಒತ್ತಾಯಿಸಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ ಚುನಾವಣೆಯನ್ನು ಬಹಿಷ್ಕರಿಸಿದ್ದು, ನಾಮಪತ್ರ ಸಲ್ಲಿಸುವ ಕೊನೆಯ ದಿನವಾದ ಶುಕ್ರವಾರವೂ ಯಾರೊಬ್ಬರೂ ನಾಮಪತ್ರ ಸಲ್ಲಿಸಿಲ್ಲ.

ಯಾರೊಬ್ಬರೂ ಗ್ರಾಮ ಪಂಚಾಯಿತಿಯತ್ತ ಸುಳಿಯಲೂ ಇಲ್ಲ. 3 ಗಂಟೆ ಬಳಿಕ ಚುನಾವಣಾಧಿಕಾರಿ ರವಿಚಂದ್ರ ಅವರು, ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ ಎಂದು ಘೋಷಿಸಿದರು. ಪಂಚಾಯಿತಿಯತ್ತ ಬಂದ ಮುಖಂಡರು ಬಹಿಷ್ಕಾರ ಯಶಸ್ವಿಗೊಂಡಿರುವುದಕ್ಕೆ ಸಂತಸಪಟ್ಟರು.

ಮುಖಂಡ ಗುಡ್ಡಿ ಮಲ್ಲಿಕಾರ್ಜುನಪ್ಪ, ‘ಮಾಯಕೊಂಡ ಬಹು ಹಿಂದೆಯೇ ತಾಲ್ಲೂಕು ಕೇಂದ್ರವಾಗಬೇಕಿತ್ತು. ಜನಪ್ರತಿನಿಧಿಗಳ ತಾತ್ಸಾರ ಮತ್ತು ಹುನ್ನಾರಗಳಿಂದ ತಾಲ್ಲೂಕಾಗದೇ ಉಳಿದಿದೆ. ಗ್ರಾಮದ ಹಿತಕ್ಕಾಗಿ ಎಲ್ಲರೂ ತ್ಯಾಗ ಮಾಡಬೇಕು. ಕೇವಲ ಪಂಚಾಯಿತಿ ಚುನಾವಣೆ ಬಹಿಷ್ಕಾರಕ್ಕೆ ಮಾತ್ರವೇ ಹೋರಾಟ ಮೀಸಲಾಗಬಾರದು. ಪ್ರಬಲ ಹೋರಾಟ ನಡೆಸಬೇಕಿದೆ. ಎಲ್ಲರೂ ಒಗ್ಗಟ್ಟು ಕಾಪಾಡಿಕೊಂಡು ಮುನ್ನಡೆಯೋಣ’ ಎಂದರು.

ಸಚಿವರ ಗನ್‌ಮ್ಯಾನ್– ಚಾಲಕ ಮಧ್ಯೆ ಹೊಡೆದಾಟ

ಬೆಂಗಳೂರು: ಆರೋಗ್ಯ ಸಚಿವ ಸಚಿವ ಡಾ.ಕೆ. ಸುಧಾಕರ್ ಅವರ ಗನ್‌ಮ್ಯಾನ್ ಮತ್ತು ಚಾಲಕ ಹೊಡೆದಾಡಿಕೊಂಡ ಘಟನೆ ಶುಕ್ರವಾರ ಬೆಳಿಗ್ಗೆ ನಡೆದಿದೆ.

ಸದಾಶಿವನಗರದಲ್ಲಿರುವ ಸಚಿವರ ಮನೆ ಎದುರಿನ ನಡುರಸ್ತೆಯಲ್ಲಿ ಗನ್‌ಮ್ಯಾನ್ ತಿಮ್ಮಯ್ಯ ಮತ್ತು ಚಾಲಕ ಸೋಮಶೇಖರ್ ಉರುಳಾಡಿಕೊಂಡು, ಪರಸ್ಪರ ಕಿತ್ತಾಡಿಕೊಂಡಿದ್ದಾರೆ. ಗನ್‌ಮ್ಯಾನ್ ತಿಮ್ಮಯ್ಯ ಅವರು ಗುರುವಾರ ಅಂಗವಿಕಲನೊಬ್ಬನಿಗೆ ಹೊಡೆದಿದ್ದರು ಎಂಬ ಆರೋಪ ಕೇಳಿಬಂದಿತ್ತು. ಸಚಿವ ಸುಧಾಕರ್ ಅವರಿಗೆ ಈ ವಿಷಯವನ್ನು ಸೋಮಶೇಖರ್ ತಿಳಿಸಿದ್ದಾರೆ ಎಂದು ಆಕ್ರೋಶಗೊಂಡು ತಿಮ್ಮಯ್ಯ ಹಲ್ಲೆ ಮಾಡಿದ್ದಾರೆ ಎಂದು ತಿಳಿದುಬಂದಿದೆ.

‘ಚಾ ಮಾರುವ ಅಂಗವಿಕಲನೊಬ್ಬನ ಮೇಲೆ ತಿಮ್ಮಯ್ಯ ಗುರುವಾರ ಹಲ್ಲೆ ನಡೆಸಿದ್ದಾನೆ. ಹೀಗಾಗಿ, ನಾವು ಎಲ್ಲರೂ ಆತನ ಮೇಲೆ ಬೇಸರ ವ್ಯಕ್ತಪಡಿಸಿದ್ದೆವು. ಆದರೆ, ಈ ವಿಷಯವನ್ನು ಎಲ್ಲೂ ಬಹಿರಂಗಪಡಿಸಿಲ್ಲ. ಆದರೂ, ಸಚಿವರಿಗೆ ಈ ವಿಷಯ ತಿಳಿಸಿದ್ದೇನೆಂಬ ಅನುಮಾನ ಮತ್ತು ಭಯದಿಂದ ನನ್ನ ಮೇಲೆ ತಿಮ್ಮಯ್ಯ ಹಲ್ಲೆ ನಡೆಸಿದ್ದಾರೆ’ ಎಂದು ಸೋಮಶೇಖರ್ ಆರೋಪಿಸಿದ್ದಾರೆ.

ಆರ್.ಕೊಟ್ರೇಶ್ ನೇಮಕ

ನೆಲಮಂಗಲ: ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಯುವ ಘಟಕದ ಕಾರ್ಯದರ್ಶಿಯಾಗಿ ಸ್ಥಳೀಯ ನಿವಾಸಿ ಆರ್.ಕೊಟ್ರೇಶ್ ಅವರನ್ನು ನೇಮಕ ಮಾಡಿ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಆದೇಶ ಹೊರಡಿಸಿದ್ದಾರೆ.



ಕಾವಲುಗಾರನ ನೆರವಿನಿಂದ ಲ್ಯಾಪ್‌ಟಾಪ್ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವಲುಗಾರರಿಗೆ ಹಣದ ಆಸೆ ತೋರಿಸಿ, ಖಾಸಗಿ ಕಂಪನಿಯೊಂದರಲ್ಲಿ ಲ್ಯಾಪ್‌ಟಾಪ್ ಕದಿಯಲು ಒಪ್ಪಂದ ಮಾಡಿಕೊಂಡು 38 ಲ್ಯಾಪ್‌ಟಾಪ್‌ಗಳನ್ನು ತರಿಸಿಕೊಂಡಿದ್ದ ಆರೋಪಿಯನ್ನು ತಲಘಟ್ಟಪುರ ಪೊಲೀಸರು ಬಂಧಿಸಿದ್ದಾರೆ.

‘ಬಾಪೂಜಿನಗರದಲ್ಲಿ ವಾಸವಿರುವ ಖಾಸಗಿ ಕಂಪನಿ ಉದ್ಯೋಗಿ ಮುಬಾರಕ್ (26) ಬಂಧಿತ ಆರೋಪಿ. ಲ್ಯಾಪ್‌ಟಾಪ್ ಕದ್ದು ತಂದಿದ್ದ ಕಾವಲುಗಾರ ಹೃಷಿಕೇಶ್ ಸಾಹು (27) ಸದ್ಯ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

‘ಪ್ರಿಂಟರ್ ಮತ್ತು ಸ್ಕ್ಯಾನರ್ ರಿಪೇರಿಗಾಗಿ ಮುಬಾರಕ್ ಕಾವಲುಗಾರ ಕೆಲಸ ಮಾಡಿಕೊಂಡಿದ್ದ ಮತ್ತೊಂದು ಕಂಪನಿಗೆ ಬರುತ್ತಿದ್ದ. ಈ ವೇಳೆ ಹೃಷಿಕೇಶ್ ಸಾಹುನನ್ನು ಪರಿಚಯಿಸಿಕೊಂಡು, ತಮ್ಮ ಕಂಪನಿಯಿಂದ ಲ್ಯಾಪ್‌ಟಾಪ್ ಕಳವು ಮಾಡಿ ನೀಡುವಂತೆ ಹೇಳಿದ್ದ. ಹಣದ ಆಸೆಗಾಗಿ ಹೃಷಿಕೇಶ್ ಹಲವಾರು ಲ್ಯಾಪ್‌ಟಾಪ್‌ಗಳನ್ನು ಕದ್ದು ಮುಬಾರಕ್‌ಗೆ ನೀಡಿದ್ದ. ಕದ್ದ ಲ್ಯಾಪ್‌ಟಾಪ್ ಒಂದಕ್ಕೆ ಎರಡು ಅಥವಾ ಮೂರು ಸಾವಿರ ಹಣ ನೀಡಿ ಖರೀದಿಸುತ್ತಿದ್ದ’ ಎಂದು ಮಾಹಿತಿ ನೀಡಿದರು.

‘ಆರೋಪಿ ಮುಬಾರಕ್‌ನನ್ನು ದಸ್ತಗಿರಿ ಮಾಡಿ, ₹20 ಲಕ್ಷ ಬೆಲೆಬಾಳುವ 38 ಕದ್ದ ಲ್ಯಾಪ್‌ಟಾಪ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಚಿಕಿತ್ಸೆಯಲ್ಲಿರುವ ಈ ಪ್ರಕರಣದ ಪ್ರಮುಖ ಆರೋಪಿ ಹೃಷಿಕೇಶ್‌ನನ್ನು ವಿಚಾರಣೆ ನಡೆಸಲಾಗುವುದು’ ಎಂದೂ ಹೇಳಿದರು.


ಆರೋಪಿಯಿಂದ ವಶಕ್ಕೆ ಪಡೆದಿರುವ ಲ್ಯಾಪ್‌ಟಾಪ್‌ಗಳು

ದೊಡ್ಡಬಿದರಕಲ್ಲು: ಬಿಬಿಎಂಪಿ ಕಸ ಘಟಕಕ್ಕೆ ಬೆಂಕಿ

ರಾಜರಾಜೇಶ್ವರಿನಗರ : ದೊಡ್ಡಬಿದರಕಲ್ಲು ಬಿಬಿಎಂಪಿ ಕಸ ಘಟಕಕ್ಕೆ ಗುರುವಾರ ಆಕಸ್ಮಿಕವಾಗಿ ಬೆಂಕಿ ತಗುಲಿದೆ. ಕಸದ ರಾಶಿಯಿಂದ ಒಮ್ಮಿಂದೊಮ್ಮೆ ದಟ್ಟವಾದ ಹೊಗೆ ಬಂದು, ದುರ್ವಾಸನೆಯ ಗಾಳಿ ಬೀಸಿದೆ.

ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ಸ್ಥಳೀಯ ಮುಖಂಡ ಆರ್. ಮಂಜುನಾಥ್ ತಿಪ್ಪೇನಹಳ್ಳಿ, ‘ಅಗ್ನಿಶಾಮಕ ದಳದವರು ಬಂದು ಬೆಂಕಿ ನಂದಿಸಿದ್ದರಿಂದ ನಾಗರಿಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಮಳೆಬಂದಾಗ, ಗಾಳಿ ಬೀಸಿದಾಗ ಕೆಟ್ಟ ವಾಸನೆಯಿಂದ ಬದುಕಬೇಕಾಗಿದೆ. ಘಟಕದ ನಿರ್ವಹಣೆ ಸರಿಯಾಗಿ ಮಾಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.


ದೊಡ್ಡಬಿದರಕಲ್ಲು ಬಿಬಿಎಂಪಿ ಕಸ ಘಟಕಕ್ಕೆ ಆಕಸ್ಮಿಕವಾಗಿ ತಗುಲಿದ ಬೆಂಕಿ

ಚಿತ್ರಾವಳಿ



ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ ಪದ್ಮನಾಭನಗರ, ವಿಜಯನಗರ ಹಾಗೂ ಟಿ. ದಾಸರಹಳ್ಳಿಯ ಶಾಖೆಗಳಲ್ಲಿ ಸ್ಥಾಪಿಸಿರುವ ನೂತನ ಎಟಿಎಂ ಕೇಂದ್ರಗಳನ್ನು ಶುಕ್ರವಾರ ಉದ್ಘಾಟಿಸಲಾಯಿತು. ಪದ್ಮನಾಭನಗರದ ಎಟಿಎಂ ಅನ್ನು ಬ್ಯಾಂಕಿನ ಉಪಾಧ್ಯಕ್ಷ ಡಾ. ದೇವರಾಜ್ ಟಿ.ಎಂ., ಬ್ಯಾಂಕಿನ ವೃತ್ತಿಪರ ನಿರ್ದೇಶಕ ಯು.ಪಿ ಪುರಾಣಿಕ್ ಉದ್ಘಾಟಿಸಿದರು. ಬ್ಯಾಂಕಿನ ಅಧ್ಯಕ್ಷ ಆವಲಹಳ್ಳಿ ಚಂದ್ರಪ್ಪ ಆರ್. ಹಾಗೂ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರು ಹಾಜರಿದ್ದರು.


ಜಯನಗರದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಬಾಂಧವ ಸಂಸ್ಥೆ ವತಿಯಿಂದ ₹10 ಸಾವಿರ ನೋಟ್ ಬುಕ್‌ಗಳನ್ನು ಶಾಸಕಿ ಸೌಮ್ಯಾ ರೆಡ್ಡಿ ಹಾಗೂ ಸಂಸ್ಥೆಯ ಮುಖ್ಯಸ್ಥ ಎನ್. ನಾಗರಾಜ್ ವಿತರಿಸಿದರು.

ಹುತಾತ್ಮ ರೈತರಿಗೆ ಶ್ರದ್ಧಾಂಜಲಿ ಸಮರ್ಪಣಾ ಸಮಾವೇಶ – ರೈತ ನಾಯಕರ ಆತಂಕ

‘ಬಿಹಾರದ ಸ್ಥಿತಿ ಇಡೀ ದೇಶಕ್ಕೆ ಬರಲಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ಹೊಸ ಕೃಷಿ ಕಾನೂನುಗಳನ್ನು ಒಪ್ಪಿಕೊಂಡರೆ ಬಿಹಾರದ ಸ್ಥಿತಿ ಇಡೀ ದೇಶಕ್ಕೆ ಬರಲಿದೆ’ ಎಂದು ರಾಷ್ಟ್ರೀಯ ಕಿಸಾನ್ ಮಹಾ ಸಂಘದ ಪ್ರಧಾನ ಸಂಚಾಲಕ ಶಿವಕುಮಾರ್ ಕಕ್ಕಾಜಿ ಆತಂಕ ವ್ಯಕ್ತಪಡಿಸಿದರು.

ದಲಿತ, ಕಾರ್ಮಿಕ ಮತ್ತು ರೈತ ಸಂಘಟನೆಗಳ ಐಕ್ಯ ಹೋರಾಟ, ಕರ್ನಾಟಕ ರಾಜ್ಯ ರೈತ ಸಂಘ, ರಾಜ್ಯ ಕಬ್ಬು ಬೆಳೆಗಾರರ ಸಂಘ, ರಾಷ್ಟ್ರೀಯ ಕಿಸಾನ್ ಸಂಘಟನೆ, ಪ್ರಜಾ ಪರಿವರ್ತನಾ ವೇದಿಕೆಯಿಂದ ಆಯೋಜಿಸಿದ್ದ ಹುತಾತ್ಮ ರೈತರ ಶ್ರದ್ಧಾಂಜಲಿ ಸಮರ್ಪಣಾ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಬಿಹಾರದಲ್ಲಿ 2006ರಲ್ಲೇ ಜಾರಿಗೆ ತರಲಾಗಿದೆ. ತುಂಡು ಭೂಮಿ ಹೊಂದಿದ್ದ ರೈತರು ಈಗ ಭೂಮಿ ಇಲ್ಲದೆ ಕೂಲಿ ಕಾರ್ಮಿಕರಾಗಿ ದೇಶದೆಲ್ಲೆಡೆ ಉದ್ಯೋಗ ಹುಡುಕಿಕೊಂಡು ಅಲೆದಾಡುತ್ತಿದ್ದಾರೆ. ಮಧ್ಯಪ್ರದೇಶದಲ್ಲಿ ಹೊಸ ಕಾಯ್ದೆ ಜಾರಿಗೆ ಬಂದ ಬಳಿಕ ಅಲ್ಲಿದ್ದ 289 ಎಪಿಎಂಸಿಗಳಲ್ಲಿ 47 ಎಪಿಎಂಸಿಗಳು ಮುಚ್ಚಲ್ಪಟ್ಟಿವೆ. ಉಳಿದವುಗಳಲ್ಲಿ ಶೇ 50ರಷ್ಟು ಮುಚ್ಚುವ ಹಂತಕ್ಕೆ ಬಂದಿವೆ’ ಎಂದರು.

ಹೊಸ ಕಾಯ್ದೆಗಳ ಅನುಷ್ಠಾನಕ್ಕೆ ಅವಕಾಶ ನೀಡಿದರೆ ಇದೇ ಸ್ಥಿತಿ ಇಡೀ ದೇಶಕ್ಕೆ ಬರಲಿದೆ. ಮೂರು ಕೃಷಿ ಕಾಯ್ದೆ ವಿರೋಧಿಸಿ ಮತ್ತು ಕನಿಷ್ಠ ಬೆಂಬಲ ಬೆಲೆ ನೀತಿಗೆ ಕಾನೂನಿನ ಮಾನ್ಯತೆ ನೀಡಬೇಕು ಎಂದು ಒತ್ತಾಯಿಸಿ ದೇಶದಾದ್ಯಂತ ಹೋರಾಟ ಗಟ್ಟಿಗೊಳ್ಳಬೇಕಿದೆ. ಈ ಹೋರಾಟಕ್ಕೆ ದಕ್ಷಿಣದ ರಾಜ್ಯಗಳೂ ಬೆಂಬಲ ನೀಡಬೇಕು ಎಂದು ಕೋರಿದರು.

ರಾಷ್ಟ್ರೀಯ ಕಿಸಾನ್ ಮಜ್ದೂರ್ ಮಹಾ ಸಂಘದ ಯುವ ಘಟಕದ ಅಧ್ಯಕ್ಷ ಅಭಿಮನ್ಯು ಕೊಹ್ರಾ ಮಾತನಾಡಿ, ‘ಮುಕ್ತ ಮಾರುಕಟ್ಟೆಗೆ ತೆರೆದುಕೊಂಡ ಬಳಿಕ ಹಲವು ದೇಶಗಳಲ್ಲಿ ರೈತರ ಸ್ಥಿತಿ ಚಿಂತಾಜನಕವಾಗಿದೆ. ಸಾಕಷ್ಟು ಸಬ್ಸಿಡಿ ನೀಡಿದರೂ ಅಮೆರಿಕದಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗುತ್ತಲೇ ಇದೆ’ ಎಂದರು.

‘ಕನಿಷ್ಠ ಬೆಂಬಲ ಬೆಲೆ ಮತ್ತು ರೈತರಿಗೆ ಸಬ್ಸಿಡಿ ನೀಡುವ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂದು ವಿಶ್ವ ವಾಣಿಜ್ಯ ಸಂಸ್ಥೆಯು (ಡಬ್ಲ್ಯುಟಿಒ) ಭಾರತದ ಮೇಲೆ ಒತ್ತಡ ಹೇರುತ್ತಲೇ ಬಂದಿದೆ. ಭಾರತ ಆಹಾರ ನಿಗಮಕ್ಕೆ(ಎಫ್‌ಸಿಐ) ನೀಡುತ್ತಿದ್ದ ಸಬ್ಸಿಡಿ ಪ್ರಮಾಣವನ್ನು ಬಿಜೆಪಿ ಸರ್ಕಾರ ಕ್ರಮೇಣ ಕಡಿಮೆ ಮಾಡುತ್ತಾ ಬಂದಿದೆ. ಈಗ ನಷ್ಟದಲ್ಲಿದೆ ಎಂಬ ಕಾರಣ ನೀಡಿ ಖಾಸಗಿಯವರಿಗೆ ವಹಿಸಲು ಹೊರಟಿದೆ’ ಎಂದರು.

ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಮುಕೇಶ್‌ಚಂದ್ರ ಶರ್ಮಾ, ರಾಷ್ಟ್ರೀಯ ಕಿಸಾನ್ ಮೋರ್ಚಾದ ಸದಸ್ಯ ಜಂಗ್‌ಜಿತ್ ಸಿಂಗ್, ಪ್ರಜಾ ಪರಿವರ್ತನ ವೇದಿಕೆ ಅಧ್ಯಕ್ಷ ಬಿ. ಗೋಪಾಲ್, ಸಾಮೂಹಿಕ ನಾಯಕತ್ವ ರೈತ ಸಂಘದ ಚುಕ್ಕಿ ನಂಜುಂಡಸ್ವಾಮಿ, ಐಕ್ಯ ಹೋರಾಟದ ಸಂಯೋಜಕ ಪ್ರಕಾಶ್ ಕಮ್ಮರಡಿ, ಕರ್ನಾಟಕ ರಾಜ್ಯ ರೈತ ಸಂಘದ ವಿ.ಆರ್. ನಾರಾಯಣ ರೆಡ್ಡಿ ಮಾತನಾಡಿದರು.



ರಾಷ್ಟ್ರೀಯ ಕಿಸಾನ್ ಮೋರ್ಚಾದ ಸದಸ್ಯ ಜಂಗ್‌ಜಿತ್ ಸಿಂಗ್, ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಮುಕೇಶ್‌ಚಂದ್ರ ಶರ್ಮಾ, ಕುರುಬೂರು ಶಾಂತಕುಮಾರ್, ರಾಷ್ಟ್ರೀಯ ಕಿಸಾನ್ ಮಹಾ ಸಂಘದ ಪ್ರಧಾನ ಸಂಚಾಲಕ ಶಿವಕುಮಾರ್ ಕಕ್ಕಾಜಿ, ಬಿ. ಗೋಪಾಲ್, ಪ್ರಕಾಶ್ ಕಮ್ಮರಡಿ ಮೇಣದ ಬತ್ತಿಗಳನ್ನು ಹಿಡಿದು ಹುತಾತ್ಮ ರೈತರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದರು – ಪ್ರಜಾವಾಣಿ ಚಿತ್ರ

ಹುತಾತ್ಮ ರೈತರ ಕುಟುಂಬಕ್ಕೆ ನೆರವು

‘ದೆಹಲಿ ಗಡಿಗಳಲ್ಲಿ ಪ್ರತಿಭಟನೆ ನಡೆಯುತ್ತಿರುವ ಸಂದರ್ಭದಲ್ಲೇ 307 ರೈತರು ಹುತಾತ್ಮರಾಗಿದ್ದಾರೆ. ಅವರ ಕುಟುಂಬಗಳಿಗೆ ನೆರವಾಗುವುದು ನಮ್ಮೆಲ್ಲರ ಕರ್ತವ್ಯ’ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹೇಳಿದರು.

‘ಭಾರತದಲ್ಲಿ ಸುಮಾರ 80 ಕೋಟಿ ರೈತರಿದ್ದಾರೆ. ಪ್ರತಿಯೊಬ್ಬ ರೈತ ಕನಿಷ್ಠ ₹10 ನೀಡಿದರೆ ₹800 ಕೋಟಿ ಸಂಗ್ರಹವಾಗುತ್ತದೆ. ಈ ಹಣದಲ್ಲಿ ಹುತಾತ್ಮ ರೈತರ ಕುಟುಂಬಗಳಿಗೆ ಸಹಾಯ ಮಾಡಲು ಸಾಧ್ಯ’ ಎಂದು ಹೇಳಿದರು.

‘ಮೋದಿ ರೈತ ವಿರೋಧಿ ನಿಲುವು’

ಬೆಂಗಳೂರು: ‘ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ನಡೆಸುತ್ತಿರುವ ಪ್ರತಿಭಟನೆ ಐದನೇ ತಿಂಗಳಿಗೆ ಕಾಲಿಡುತ್ತಿದೆ. ಹೀಗಿದ್ದರೂ ಪ್ರಧಾನಿ ನರೇಂದ್ರ ಮೋದಿ ನಮ್ಮೊಂದಿಗೆ ಮಾತುಕತೆಗೆ ಬಂದಿಲ್ಲ. ಇದು ಅವರ ರೈತ ವಿರೋಧಿ ನಿಲುವಿಗೆ ಸಾಕ್ಷಿ. ಅವರಿಗೆ ತಕ್ಕ ಪಾಠ ಕಲಿಸಬೇಕು. ಇದಕ್ಕಾಗಿ ಪಶ್ಚಿಮ ಬಂಗಾಳ ಮತ್ತು ಕೇರಳ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸುವಂತೆ ಅಲ್ಲಿನ ರೈತರಿಗೆ ಕರೆ ನೀಡಿದ್ದೇವೆ’ ಎಂದು ರಾಷ್ಟ್ರೀಯ ಕಿಸಾನ್ ಮಹಾ ಸಂಘದ ಪ್ರಧಾನ ಸಂಚಾಲಕ ಶಿವಕುಮಾರ್ ಕಕ್ಕಾಜಿ ಹೇಳಿದರು.

ಕರ್ನಾಟಕ ರಾಜ್ಯ ರೈತ ಸಂಘ, ರಾಜ್ಯ ಕಬ್ಬು ಬೆಳೆಗಾರರ ಸಂಘ, ರಾಷ್ಟ್ರೀಯ ಕಿಸಾನ್ ಸಂಘಟನೆ ಶುಕ್ರವಾರ ಆಯೋಜಿಸಿದ್ದ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಕೇಂದ್ರದ ರೈತ ವಿರೋಧಿ ನಿಲುವನ್ನು ಖಂಡಿಸಿ ಇದೇ 26ರಂದು ಭಾರತ ಬಂದ್ ನಡೆಸಲಾಗುತ್ತಿದೆ. ಇದಕ್ಕೆ ಎಲ್ಲ ರಾಜ್ಯಗಳ ರೈತ, ಕಾರ್ಮಿಕ ಹಾಗೂ ಇತರ ಸಂಘಟನೆಗಳು ಸಹಕಾರ ನೀಡಬೇಕು’ ಎಂದರು.

‘ಪಶ್ಚಿಮ ಬಂಗಾಳ ಮತ್ತು ಕೇರಳ ಪ್ರವಾಸ ಕೈಗೊಂಡು ಅಲ್ಲಿನ ರೈತರಲ್ಲಿ ಜಾಗೃತಿ ಮೂಡಿಸಲಾಗಿದೆ. ಈಗಾಗಲೇ ಎಂಟು ರಾಜ್ಯಗಳಲ್ಲಿ ಕಿಸಾನ್ ಮಹಾ ಪಂಚಾಯಿತಿ ನಡೆಸಲಾಗಿದೆ. ಇತರ ರಾಜ್ಯಗಳಿಗೂ ಇದನ್ನು ವಿಸ್ತರಿಸಲಾಗುತ್ತದೆ. ಕಾಯ್ದೆಗಳನ್ನು ಹಿಂಪಡೆಯುವವರೆಗೂ ನಮ್ಮ ಹೋರಾಟ ಮುಂದುವರಿಯುತ್ತದೆ’ ಎಂದು ತಿಳಿಸಿದರು.

ಕುರುಬೂರು ಶಾಂತಕುಮಾರ್, ‘ಸಂಯುಕ್ತ ಕಿಸಾನ್ ಮೋರ್ಚಾ ಅಡಿಯಲ್ಲಿ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಿಸಾನ್ ಮಹಾ ಪಂಚಾಯಿತಿ ನಡೆಸಲು ತೀರ್ಮಾನಿಸಲಾಗಿದೆ’ ಎಂದರು.

‘ಪಶ್ಚಿಮ ಬಂಗಾಳದಲ್ಲಿ ಅನೇಕ ಮಹಾ ಪಂಚಾಯಿತಿಗಳನ್ನು ನಡೆಸಿದ್ದು ಇದಕ್ಕೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಮತ ಹಾಕದಿರಲು ಅಲ್ಲಿನ ರೈತರು ನಿರ್ಧರಿಸಿದ್ದಾರೆ’ ಎಂದು ರಾಷ್ಟ್ರೀಯ ಕಿಸಾನ್ ಮಜ್ದೂರ್ ಮಹಾ ಸಂಘದ ಯುವ ಘಟಕದ ಅಧ್ಯಕ್ಷ ಅಭಿಮನ್ಯು ಕೊಹರಾ ತಿಳಿಸಿದರು.

‘ರಾಜ್ಯದಲ್ಲಿ ದೆಹಲಿ ಮಾದರಿ ಹೋರಾಟಕ್ಕೆ ಚಿಂತನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ನವದೆಹಲಿಯ ಗಡಿಗಳಲ್ಲಿ ರೈತರು ನಡೆಸುತ್ತಿರುವ ಹೋರಾಟದ ಮಾದರಿಯಲ್ಲೇ ರಾಜ್ಯದಲ್ಲೂ ಪ್ರತಿಭಟನೆ ಹಮ್ಮಿಕೊಳ್ಳಲು ಚಿಂತಿಸಲಾಗಿದೆ’ ಎಂದು ಸಂಯುಕ್ತ ಹೋರಾಟ–ಕರ್ನಾಟಕದ ಸಂಯೋಜಕ ಜಿ.ಸಿ.ಬಯ್ಯಾರೆಡ್ಡಿ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ. ದೇಶದಲ್ಲಿ ರೈತರು ಮತ್ತು ಬಡವರು ಹಿಂದೆಂದಿಗಿಂತಲೂ ಹೆಚ್ಚು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೋವಿಡ್‌ನಿಂದಾಗಿ ಇಡೀ ದೇಶವೇ ತತ್ತರಿಸಿದ್ದ ಸಮಯದಲ್ಲಿ ಸರ್ಕಾರವು ಜನರ ಕಷ್ಟಗಳಿಗೆ ಸ್ಪಂದಿಸಲಿಲ್ಲ. ಬದಲಾಗಿ ಅವರ ಸಂಕಷ್ಟ ಹೆಚ್ಚಿಸುವಂತಹ ನೀತಿಗಳನ್ನು ಜಾರಿಗೊಳಿಸಿದೆ. ಸರ್ಕಾರದ ಈ ಧೋರಣೆಯನ್ನು ಖಂಡಿಸಿ ಇದೇ 22ರಂದು ವಿಧಾನಸೌಧ ಚಲೋ ಹೋರಾಟ ಹಮ್ಮಿಕೊಳ್ಳಲಾಗಿದೆ’ ಎಂದರು.

‘22ರ ಬೆಳಿಗ್ಗೆ ನಗರ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ದೆಹಲಿಯ ರೈತ ಹೋರಾಟದ ರೂವಾರಿಗಳಾದ ರಾಕೇಶ್ ಸಿಂಗ್ ಟಿಕಾಯತ್, ದರ್ಶನ್ ಪಾಲ್ ಸಿಂಗ್, ಯದುವೀರ್ ಸಿಂಗ್ ಭಾಗವಹಿಸಲಿದ್ದಾರೆ. ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಜರಿರಲಿದ್ದಾರೆ. 25 ಸಾವಿರ ಮಂದಿ ಸೇರುವ ನಿರೀಕ್ಷೆ ಇದೆ’ ಎಂದು ತಿಳಿಸಿದರು.

ಬಡಗಲಪುರ ನಾಗೇಂದ್ರ ‘ಕೇಂದ್ರವು ವಿದ್ಯುತ್ ಮಸೂದೆಯ ಮೂಲಕ ವಿದ್ಯುತ್ ವಲಯವನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸಲು ಹೊರಟಿದೆ. ಕೃಷಿ ಪಂಪ್‌ಸೆಟ್, ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಸಬ್ಸಿಡಿಗಳನ್ನು ತೆಗೆದುಹಾಕುವ ಹುನ್ನಾರವೂ ಇದರಲ್ಲಿ ಅಡಗಿದೆ. ಇದನ್ನು ರಾಜ್ಯ ಸರ್ಕಾರ ವಿರೋಧಿಸಬೇಕು’ ಎಂದರು.

‘ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಶಾಸನಬದ್ಧಗೊಳಿಸಬೇಕು. ಜೊತೆಗೆ ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಬೇಕು’ ಎಂದು ಒತ್ತಾಯಿಸಿದರು.

‘ದೆಹಲಿಯಲ್ಲಿ ರೈತರು ನಡೆಸುತ್ತಿರುವ ಹೋರಾಟದ ಕಾವು ಈಗ ದೇಶದೆಲ್ಲೆಡೆ ವ್ಯಾಪಿಸುತ್ತಿದೆ. ಇದೇ 22ರಂದು ನಿಗದಿಯಾಗಿರುವ ಹೋರಾಟದಲ್ಲಿ ಮಹಿಳೆಯರು, ಕಾರ್ಮಿಕರು, ಆದಿವಾಸಿ ಮತ್ತು ದಲಿತ ಸಮುದಾಯಗಳ ಜನರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಮಾವೇಶದ ನಂತರ ಮುಂದಿನ ಹೋರಾಟದ ರೂಪುರೇಷೆ ತಯಾರಿಸಲಿದ್ದೇವೆ’ ಎಂದು ನೂರ್ ಶ್ರೀಧರ್ ಹೇಳಿದರು.

ರೈತ ಮುಖಂಡ ಭೈರೇಗೌಡ, ಗೋಪಾಲ್ ಇದ್ದರು.

‘ಅಂಬೇಡ್ಕರ್ ಕ್ರೀಡಾಂಗಣಕ್ಕೆ ಹೈಟೆಕ್ ಸ್ಪರ್ಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೋವಿಂದರಾಜನಗರ ಕ್ಷೇತ್ರದ ರಾಜ್‌ಕುಮಾರ್ ವಾರ್ಡ್‌ನಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣಕ್ಕೆ ಹೈಟೆಕ್ ಸ್ಪರ್ಶ ನೀಡಲು ತೀರ್ಮಾನಿಸಲಾಗಿದೆ. ಸ್ಥಳೀಯರ ಬೇಡಿಕೆಗೆ ಅನುಗುಣವಾಗಿ ಕ್ರೀಡಾಂಗಣವನ್ನು ಉನ್ನತೀಕರಿಸಲಾಗುತ್ತಿದೆ’ ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದರು.

ಮುಖ್ಯಮಂತ್ರಿ ನವನಗರೋತ್ಥಾನ ಯೋಜನೆಯ ಅಡಿಯಲ್ಲಿ ಕ್ರೀಡಾಂಗಣದ ನವೀಕರಣ, ಬ್ಯಾಡ್ಮಿಂಟನ್ ಅಂಗಳ, ಜಾಗಿಂಗ್ ಟ್ರ್ಯಾಕ್, ಬ್ಯಾಸ್ಕೆಟ್‌ಬಾಲ್ ಅಂಗಳ ಮತ್ತು ಸ್ಕೇಟಿಂಗ್ ರಿಂಗ್‌ಗಳ ಉನ್ನತೀಕರಣ ಕಾಮಗಾರಿಗಳ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

‘ಸ್ಥಳೀಯ ಕ್ರೀಡಾಪಟುಗಳಿಗೆ ಸೂಕ್ತ ವೇದಿಕೆ ಕಲ್ಪಿಸುವುದು ನಮ್ಮ ಉದ್ದೇಶ. ಹೀಗಾಗಿ ₹18 ಕೋಟಿ ವೆಚ್ಚದಲ್ಲಿ ಮಾದರಿ ಕ್ರೀಡಾಂಗಣ ನಿರ್ಮಿಸಲು ಮುಂದಾಗಿದ್ದೇವೆ. ಆರೋಗ್ಯ ಸೇವೆಗೂ ಒತ್ತು ನೀಡಲಾಗಿದೆ. ಬಡವರಿಗೆ ಕೈಗೆಟಕುವ ದರದಲ್ಲಿ ವೈದ್ಯಕೀಯ ಚಿಕಿತ್ಸೆ ಸಿಗಬೇಕು ಎಂಬ ಉದ್ದೇಶದಿಂದ ಅಗ್ರಹಾರ ದಾಸರಹಳ್ಳಿ ವಾರ್ಡ್‌ನಲ್ಲಿ 200 ಹಾಸಿಗೆ ಸಾಮರ್ಥ್ಯದ ಹೈಟೆಕ್ ಆಸ್ಪತ್ರೆ ನಿರ್ಮಿಸಲಾಗುತ್ತಿದೆ. ಮಾರುತಿ ಮಂದಿರ ವಾರ್ಡ್‌ನಲ್ಲಿ ಡಯಾಲಿಸಿಸ್ ಕೇಂದ್ರ, ಗೋವಿಂದರಾಜನಗರ ವಾರ್ಡ್‌ನಲ್ಲಿ ರೆಫರಲ್ ಆಸ್ಪತ್ರೆ ಆರಂಭಿಸಲಾಗಿದೆ’ ಎಂದು ಹೇಳಿದರು.

‘ಕಡಿಮೆ ವೆಚ್ಚದಲ್ಲಿ ಗರ್ಭಿಣಿಯರ ಆರೋಗ್ಯ ತಪಾಸಣೆ, ಹೆರಿಗೆ, ಶಿಶುಗಳ ಆರೋಗ್ಯ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ’ ಎಂದರು.



ವಸತಿ ಸಚಿವ ವಿ.ಸೋಮಣ್ಣ ಅವರು ಕಾಮಗಾರಿಯ ನೀಲನಕ್ಷೆ ಪರಿಶೀಲಿಸಿದರು. ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ ಕೆ.ಉಮೇಶ್ ಶೆಟ್ಟಿ, ಗಂಗಭೈರಯ್ಯ, ಮೋಹನ್‌ಕುಮಾರ್ ಹಾಗೂ ಗೋವಿಂದರಾಜನಗರ ಬಿಜೆಪಿ ಮಂಡಲದ ಅಧ್ಯಕ್ಷ ವಿಶ್ವನಾಥಗೌಡ ಇದ್ದಾರೆ

ಇಂದು ಪ್ರಮುಖ ನಾಯಕರ ಸಭೆಯಲ್ಲಿ ಅಭ್ಯರ್ಥಿಗಳ ಆಯ್ಕೆಗೆ ಚರ್ಚೆ

‘ಷಡ್ಯಂತ್ರ ರೂಪಿಸುವುದು ಕಾಂಗ್ರೆಸ್ ಜಾಯಮಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಷಡ್ಯಂತ್ರ ಹೆಣೆಯುವುದು, ಸುಳ್ಳು ಹೇಳುವುದು ಮತ್ತು ಭ್ರಷ್ಟಾಚಾರ ಮಾಡುವುದು ಕಾಂಗ್ರೆಸ್ಸಿಗರ ಜಾಯಮಾನವೇ ಆಗಿದೆ’ ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಹೇಳಿದ್ದಾರೆ.

ನಗರದ ಕುಮಾರಕೃಪಾ ಅತಿಥಿ ಗೃಹದಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ನಿರಂತರ ಸೋಲುಗಳಿಂದ ಕಂಗೆಟ್ಟಿರುವ ಕಾಂಗ್ರೆಸ್ ಮುಖಂಡರು ಸಿ.ಡಿ. ವಿಚಾರದಲ್ಲಿ ಸುಳ್ಳು ಆರೋಪಗಳನ್ನು ಹೊರಿಸುತ್ತಿದ್ದಾರೆ ಎಂದು ಹೇಳಿದರು. ಮೂರು ಕ್ಷೇತ್ರಗಳ ಉಪಚುನಾವಣೆ ಸಂಬಂಧ ಶನಿವಾರ ಬಿಜೆಪಿ ಪ್ರಮುಖ ನಾಯಕರ ಸಭೆಯಲ್ಲಿ ಭಾಗವಹಿಸಲು ಅವರ ಶುಕ್ರವಾರ ರಾತ್ರಿ ನಗರಕ್ಕೆ ಬಂದರು.

‘ಸಿ.ಡಿ ಪ್ರಕರಣದಲ್ಲಿ ಆರೋಪ ಕೇಳಿ ಬಂದ ಕೂಡಲೇ ರಮೇಶ ಜಾರಕಿಹೊಳಿ ಅವರಿಂದ ರಾಜೀನಾಮೆ ಪಡೆಯಲಾಗಿದೆ. ಆರೋಪ ಬಂದಾಗ ರಾಜೀನಾಮೆ ಪಡೆಯುವ ಕ್ರಮ ನಮ್ಮಲ್ಲಿ ಮಾತ್ರ ಇದೆ. ಕಾಂಗ್ರೆಸ್‌ನಲ್ಲಿ ಈ ಕ್ರಮ ಇಲ್ಲ. ಸಿ.ಡಿ ಪ್ರಕರಣವನ್ನು ಕಾಂಗ್ರೆಸ್ ರಾಜಕೀಯವಾಗಿ ಬಳಸಿಕೊಳ್ಳುತ್ತಿದೆ’ ಎಂದು ಅವರು ದೂರಿದರು.

ರಮೇಶ ಜಾರಕಿಹೊಳಿ ಅವರು ಆರೋಪ ಬಂದ ತಕ್ಷಣವೇ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದಾರೆ ಎಂದರು.

ತಮ್ಮ ವಿಚಾರ ಟಿ.ವಿಗಳಲ್ಲಿ ಪ್ರಸಾರ ಮಾಡದಂತೆ ಆರು ಸಚಿವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ‘ಆರು ಸಚಿವರು ಕೋರ್ಟಿಗೆ ಹೋದರೆ ಕಾಂಗ್ರೆಸ್‌ಗೆ ಏನು ಸಮಸ್ಯೆ? ತಮ್ಮ ವಿರುದ್ಧ ತೇಜೋವಧೆ ಆಗುವ ಸಾಧ್ಯತೆ ಗಮನಿಸಿ ಸಚಿವರು ಕೋರ್ಟ್ ಮೊರೆ ಹೋಗಿದ್ದಾರೆ’ ಎಂದರು.

‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆಗಳನ್ನು ನಾನಾಗಲೀ, ನಮ್ಮ ಕಾರ್ಯಕರ್ತರಾಗಲಿ ಗಂಭೀರವಾಗಿ ಪರಿಗಣಿಸುವುದಿಲ್ಲ. ಯತ್ನಾಳ ಅವರು ಮಾತನಾಡುವುದನ್ನು ನಿಲ್ಲಿಸುವುದಿಲ್ಲ. ಅವರು ಮಾತನಾಡುತ್ತಲೇ ಇರುತ್ತಾರೆ’ ಎಂದು ಅರುಣ್ ಸಿಂಗ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಕರ್ನಾಟಕ ಭೇಟಿಯ ವೇಳೆ ಕಾಂಗ್ರೆಸ್ಸಿಗರು, ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಬದಲಿಸುವ ಕುರಿತು ಸುಳ್ಳು ಹೇಳಿದ್ದರು ಎಂದರು.

ರಾಜ್ಯದಲ್ಲಿ ನಡೆಯಲಿರುವ ಬೆಳಗಾವಿ ಲೋಕಸಭಾ ಕ್ಷೇತ್ರ ಮತ್ತು ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣಾ ಅಭ್ಯರ್ಥಿಗಳ ಕುರಿತು ನಾಳೆ (ಶನಿವಾರ) ಚರ್ಚೆ ಮಾಡಲಾಗುವುದು. ಚರ್ಚೆಯ ಬಳಿಕ ಅಭ್ಯರ್ಥಿಗಳ ಪಟ್ಟಿಯನ್ನು ಕೇಂದ್ರ ಬಿಜೆಪಿ ಚುನಾವಣಾ ಸಮಿತಿಗೆ ಕಳುಹಿಸಿಕೊಡಲಾಗುವುದು. ಕೇಂದ್ರ ಸಮಿತಿ ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸಲಿದೆ ಎಂದು ಅರುಣ್‌ಸಿಂಗ್ ಹೇಳಿದರು.



ಅರುಣ್ ಸಿಂಗ್ ಸುದ್ದಿಗಾರರ ಜತೆ ಮಾತನಾಡಿದರು. ವಿಧಾನಪರಿಷತ್ ಸದಸ್ಯ ತುಳಸಿ ಮುನಿರಾಜುಗೌಡ ಇದ್ದರು

ನಾಡಪ್ರಭು ಕೆಂಪೇಗೌಡ ಪುತ್ಥಳಿ ಅನಾವರಣ ಇಂದು

ಕೆ.ಆರ್.ಪುರ: ವಿಜಿನಾಪುರದ ಜೈ ಭುವನೇಶ್ವರಿ ಒಕ್ಕಲಿಗರ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ ಕಂಚಿನ ಪುತ್ಥಳಿ ಅನಾವರಣ ಕಾರ್ಯಕ್ರಮವನ್ನು ಇದೇ ಶನಿವಾರ (ಮಾ.20) ಹಮ್ಮಿಕೊಳ್ಳಲಾಗಿದೆ ಎಂದು ಪಾಲಿಕೆ ಮಾಜಿ ಸದಸ್ಯ ಬಂಡೆ ಎಸ್. ರಾಜ ತಿಳಿಸಿದರು.

‘ಕುವೆಂಪು ಆಟದ ಮೈದಾನದ ಬಳಿ ಜೈ ಭುವನೇಶ್ವರಿ ಒಕ್ಕಲಿಗರ ಸಂಘದ ವತಿಯಿಂದ ₹50 ಲಕ್ಷ ವೆಚ್ಚದಲ್ಲಿ ನೂತನವಾಗಿ ಕಂಚಿನ ಪುತ್ಥಳಿ ನಿರ್ಮಾಣ ಮಾಡಲಾಗಿದೆ. ಬಿಬಿಎಂಪಿಯಿಂದ ₹35 ಲಕ್ಷ ವೆಚ್ಚದಲ್ಲಿ ನವೀಕರಿಸಲಾಗಿರುವ ಉದ್ಯಾನದ ಉದ್ಘಾಟನಾ ಸಮಾರಂಭವೂ ಇದೇ ವೇಳೆ ನೆರವೇರಲಿದೆ’ ಎಂದರು.



ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀನಿರ್ಮಲನಂದನಾಥಸ್ವಾಮಿ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ, ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು. ವಿಜಿನಾಪುರ ಜೈ ಭುವನೇಶ್ವರಿ ಒಕ್ಕಲಿಗರ ಸಂಘದ ಅಧ್ಯಕ್ಷ ಎಸ್. ಪ್ರದೀಪ್ ಗೌಡ ಇದ್ದರು.

ಸಂಕ್ಷಿಪ್ತ ಸುದ್ದಿ

ಮೊಳೆ ಮುಕ್ತ ಮರ: 21ರಂದು ಜಾಥಾ

ಬೆಂಗಳೂರು: ‘ಮೊಳೆ ಮುಕ್ತ ಮರ’ ಅಭಿಯಾನದ ಅಂಗವಾಗಿ ನಗರದಲ್ಲಿ ಇದೇ 21ರಂದು ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ’ ಎಂದು ಬೆಂಗಳೂರು ಹುಡುಗರು ತಂಡದ ವಿನೋದ್ ಕರ್ತವ್ಯ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಸ್ತೆ ಬದಿಯ ಮರಗಳ ಮೇಲೆ ಮೊಳೆ ಹಾಗೂ ಪಿನ್‌ಗಳನ್ನು ಹೊಡೆದು ಮರಗಳನ್ನು ಘಾಸಿಗೊಳಿಸಲಾಗುತ್ತಿದೆ. ಈ ಬಗ್ಗೆ ಅರಿವು ಮೂಡಿಸುವುದು ಈ ಜಾಥಾದ ಉದ್ದೇಶ’ ಎಂದರು.

‘ಎಂ.ಜಿ.ರಸ್ತೆಯ ಬಾಲಭವನದಿಂದ ಆರಂಭವಾಗುವ ಜಾಥಾ, ಬೃಹತ್ ಬಿಬಿಎಂಪಿ ಆವರಣದಲ್ಲಿರುವ ಡಾ.ರಾಜ್‌ಕುಮಾರ್ ಗಾಜಿನ ಮನೆಯ ಬಳಿ ಕೊನೆಗೊಳ್ಳಲಿದೆ. ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಹಾಗೂ ರೈಲ್ವೇ ಎಡಿಜಿಪಿ ಭಾಸ್ಕರ್ ರಾವ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ’ ಎಂದು ಹೇಳಿದರು.

ವಿಮಾನ ಪ್ರಯಾಣ ಇನ್ನಷ್ಟು ದುಬಾರಿ

ನವದೆಹಲಿ: ವಿಮಾನ ಇಂಧನ ದರ (ಎಟಿಎಫ್) ಏರಿಕೆಯಿಂದ ವಿಮಾನ ಪ್ರಯಾಣ ದರದ ಕನಿಷ್ಠ ಮಿತಿಯನ್ನು ಶೇ 5ರಷ್ಟು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ. ಆದರೆ ಗರಿಷ್ಠ ಮಿತಿಯಲ್ಲಿ ಹೆಚ್ಚಳವಿಲ್ಲ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಹರ್ದೀಪ್ ಸಿಂಗ್‌ಪುರಿ ಶುಕ್ರವಾರ ತಿಳಿಸಿದ್ದಾರೆ.

ಎಟಿಎಫ್ ಏರಿಕೆಯ ಪರಿಣಾಮ ತಿಂಗಳ ಹಿಂದೆಯಷ್ಟೇ ಕೇಂದ್ರವು ದೇಶೀಯ ವಿಮಾನಗಳ ಪ್ರಯಾಣ ದರದ ಕನಿಷ್ಠ ಮತ್ತು ಗರಿಷ್ಠ ಮಿತಿಯಲ್ಲಿ ಶೇ 10 ಮತ್ತು ಶೇ 30ರಷ್ಟು ಹೆಚ್ಚಳ ಮಾಡಿತ್ತು. ತಿಂಗಳಲ್ಲಿ 3 ಸಂದರ್ಭಗಳಲ್ಲಿ ದೈನಂದಿನ ಪ್ರಯಾಣಿಕರ ದಟ್ಟಣೆ 3.5 ಲಕ್ಷ ದಾಟಿದಾಗ ಶೇ 100ರಷ್ಟು ವಿಮಾನಗಳ ಕಾರ್ಯಾಚರಣೆಗೆ ಅವಕಾಶ ಒದಗಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಐವಿಎಫ್‌ನಿಂದ ಮಗು ಪಡೆಯುವವರಿಗೆ ನಿಯಮ

ನವದೆಹಲಿ: ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿನ ಸಂಕೀರ್ಣತೆಯ ಕಾರಣಗಳಿಂದಾಗಿ, ಸಲಿಂಗ ಮತ್ತು ಲಿವ್–ಇನ್ (ಮದುವೆಯಾಗದೇ ಒಟ್ಟಿಗೆ ವಾಸಿಸುವುದು) ಸಂಬಂಧದಲ್ಲಿರುವ ದಂಪತಿಗಳಿಗೆ ಐವಿಎಫ್ ತಂತ್ರಜ್ಞಾನದ ಮೂಲಕ ಶಿಶುಗಳನ್ನು ಪಡೆಯಲು ಅನುಮತಿ ನೀಡಬಾರದು ಎಂದು ಸಂಸದೀಯ ಸಮಿತಿಯೊಂದು ಶುಕ್ರವಾರ ತಿಳಿಸಿದೆ.

ಕಾನೂನುಬದ್ಧವಾಗಿ ಮದುವೆಯಾಗದ ವ್ಯಕ್ತಿಗಳು ಒಟ್ಟಿಗೆ ವಾಸಿಸುತ್ತಿದ್ದರೂ, ಅವರು ಮಕ್ಕಳನ್ನು ಹೊಂದುವುದನ್ನು ಸಮಾಜವು ಒಪ್ಪಿಕೊಳ್ಳುವುದು ಸುಲಭವಲ್ಲ. ಲಿವ್–ಇನ್ ಸಂಬಂಧದಲ್ಲಿರುವ ಪೋಷಕರು ಅಥವಾ ಸಲಿಂಗಿಗಳು ಬೇರ್ಪಟ್ಟಾಗ ಉಂಟಾಗುವ ಸಮಸ್ಯೆಗಳನ್ನು ಪರಿಗಣಿಸಿರುವ ಸಮಿತಿಯು, ಇಂತಹವರಿಗೆ ಸಂತಾನೋತ್ಪತ್ತಿ ತಂತ್ರಜ್ಞಾನದ ಮೂಲಕ ಮಕ್ಕಳನ್ನು ಪಡೆಯುವ ಅವಕಾಶ ನೀಡಬಾರದು ಎಂದಿದೆ.

ಚಿತ್ರ ನಿರ್ಮಾಣ ನಿರ್ವಾಹಕರ ಸಂಘಕ್ಕೆ ಆಯ್ಕೆ

ಬೆಂಗಳೂರು: ಕರ್ನಾಟಕ ಚಲನಚಿತ್ರ ನಿರ್ಮಾಣ ನಿರ್ವಾಹಕರ ಸಂಘಕ್ಕೆ 2021–2023ನೇ ಸಾಲಿಗೆ ನೂತನ ಪದಾಧಿಕಾರಿಗಳ ಆಯ್ಕೆ ನಡೆದಿದೆ.

ವಿವರ: ಎಲ್.ಈಶ್ವರ ರಾವ್ ಪವಾರ್ (ಅಧ್ಯಕ್ಷ), ವಿ.ಉಮೇಶ್ ಕುಮಾರ್ (ಪ್ರಧಾನ ಕಾರ್ಯದರ್ಶಿ), ಕೆ.ಮಲ್ಲಿಕಾರ್ಜುನ್ (ಖಜಾಂಚಿ), ಗಗನ್ ಮೂರ್ತಿ, ಗಂಗಾಧರ್(ಗಂಗೂ) (ಉಪಾಧ್ಯಕ್ಷರು), ಎಂ.ಮಹೇಶ್ ಕೆ.ವಿ.ರಾಮಚಂದ್ರ (ಸಹ ಕಾರ್ಯದರ್ಶಿಗಳು).

‘ಮೆಹ್ತಾ ರಾಜೀನಾಮೆಗೆ ರಾಜಕೀಯ ಒತ್ತಡ ಕಾರಣ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರ ನೀತಿಗಳ ವಿಮರ್ಶಕರಾಗಿದ್ದ ಕಾರಣಕ್ಕೆ ಪ್ರಾಧ್ಯಾಪಕ, ರಾಜಕೀಯ ನಿರೂಪಕ ಪ್ರತಾಪ್ ಭಾನುಮೆಹ್ತಾ ಅವರ ರಾಜೀನಾಮೆ ಪಡೆಯಲಾಗಿದೆ ಎಂದು ಹರಿಯಾಣದ ಸೋನಿಪತ್‌ನ ಅಶೋಕ ವಿಶ್ವವಿದ್ಯಾಲಯದ ಬೋಧಕ ವೃಂದ ದೂರಿದೆ.

ಮೆಹ್ತಾ ಅವರನ್ನು ತೆಗೆಯಲು ಅಥವಾ ಅವರಿಂದ ರಾಜೀನಾಮೆ ಪಡೆಯಲು ಮತ್ತು ಸ್ವೀಕರಿಸಲು ವಿಶ್ವವಿದ್ಯಾಲಯ ಒತ್ತಡಕ್ಕೆ ಸಿಲುಕಿದಂತಿದೆ ಎಂದು ಅವರು ಆರೋಪಿಸಿದ್ದಾರೆ.


ವಿಶ್ವವಿದ್ಯಾಲದಯ ಕುಲಪತಿ ಮಲಬಿಕಾ ಸರ್ಕಾರ್ ಅವರು ಗುರುವಾರ ಸಂಜೆ ನಡೆಸಿದ ವರ್ಚುವಲ್ ಸಭೆಯಲ್ಲಿ, ‘ಮೆಹ್ತಾ ಅವರು ರಾಜೀನಾಮೆ ಹಿಂದಕ್ಕೆ ಪಡೆಯಲು ಸಿದ್ಧರಿಲ್ಲ’ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಪ್ರಾಧ್ಯಾಪಕರಾದ ಮೆಹ್ತಾ ಮತ್ತು ಅರವಿಂದ್ ಸುಬ್ರಹ್ಮಣಿಯಂ ರಾಜೀನಾಮೆ ನೀಡಿರುವುದಕ್ಕೆ ಬೇಸರ ವ್ಯಕ್ತಪಡಿಸಿರುವ ಕಾಂಗ್ರೆಸ್ ಹಿರಿಯ ಮುಖಂಡ ಪಿ.ಚಿದಂಬರಂ, ಮೋದಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಇಬ್ಬರು ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂದರೆ ಈ ದೇಶದಲ್ಲಿ ಶೈಕ್ಷಣಿಕ ಸ್ವಾತಂತ್ರ್ಯ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ದೇಶದಾದ್ಯಂತ ಏಕರೂಪವನ್ನು ಹೇರುವ ಪ್ರಯತ್ನ ನಡೆಯುತ್ತಿದ್ದು, ದೇಶದ ಜನರು ಇದನ್ನು ತೀವ್ರವಾಗಿ ವಿರೋಧಿಸಬೇಕು’ ಎಂದು ಹೇಳಿದ್ದಾರೆ.

‘ಬಿಜೆಪಿ ಚಿಂತನೆ’ ಅಥವಾ ‘ಮೋದಿ ಚಿಂತನೆ’ಯು ದೇಶವನ್ನು ಹಾಳು ಮಾಡುತ್ತಿದೆ. ಅಲ್ಲದೆ ಅದು ದೇಶವನ್ನು ನಿರಂಕುಶ ಆಡಳಿತದತ್ತ ಒಯ್ಯುತ್ತಿದೆ ಎಂದು ಅವರು ದೂರಿದ್ದಾರೆ.

ನಗರದಲ್ಲಿ ಇಂದು



ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 400ನೇ ಪಟ್ಟಾಭಿಷೇಕ ಮತ್ತು 426ನೇ ಜನ್ಮದಿನೋತ್ಸವ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ನೇತೃತ್ವ: ಆರ್.ಕೆ. ವಾದೀಂದ್ರ ಆಚಾರ್ಯ, ಜಿ.ಕೆ. ಆಚಾರ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ, 5ನೇ ಬಡಾವಣೆ, ಜಯನಗರ, ಬೆಳಿಗ್ಗೆ 9

ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 426ನೇ ಜನ್ಮದಿನೋತ್ಸವ: ಶ್ರೀ ರಾಘವೇಂದ್ರ ಅಷ್ಟಾಕ್ಷರ ಹೋಮ, ಆಯೋಜನೆ: ಉಡುಪಿ ಪಲಿಮಾರು ಮಠ ಮಲ್ಲೇಶ್ವರ, (ಆನ್‌ಲೈನ್ ಕಾರ್ಯಕ್ರಮ) ಬೆಳಿಗ್ಗೆ 9.30

ಜಲವರ್ಣ ಕಾರ್ಯಾಗಾರ ಮತ್ತು ಕಲಾ ಪ್ರದರ್ಶನ: ಉದ್ಘಾಟನೆ: ಪಿ.ಸಿ. ಸುಬ್ರಮಣ್ಯಂ, ಮುಖ್ಯ ಅತಿಥಿ: ಬಸವರಾಜ್ ಹೂಗಾರ, ಉಪಸ್ಥಿತಿ: ಕಾಂತರಾಜ್ ಎನ್., ಓ ವೆಂಕಟೇಶ್, ಆಯೋಜನೆ: ಬೆಂಗಳೂರು ಆರ್ಟ್ ಫೌಂಡೇಷನ್, ಸ್ಥಳ: ವರ್ಣ ಆರ್ಟ್ ಗ್ಯಾಲರಿ, 2ನೇ ಮಹಡಿ, ಕನ್ನಡ ಭವನ, ಬೆಳಿಗ್ಗೆ 10

ಕಲಾ ಪ್ರದರ್ಶನ: ಬೆಂಗಳೂರಿನ ಭವಿಷ್ಯ ವಿಷಯದ ಮೇಲೆ ವಿದ್ಯಾರ್ಥಿಗಳಿಂದ ಕಲಾಕೃತಿಗಳ ಪ್ರದರ್ಶನ, ಆಯೋಜನೆ: ಇನ್‌ಸ್ಟಿಟ್ಯೂಟ್ ಆಫ್ ಅರ್ಬನ್ ಡಿಸೈನರ್ಸ್ ಇಂಡಿಯಾ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10

ದೇಶವು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚೆ: ನ್ಯಾ.ವಿ. ಗೋಪಾಲ ಗೌಡ, ನ್ಯಾ.ಎಚ್.ಎನ್. ನಾಗಮೋಹನ್ ದಾಸ್, ಎ. ನಾರಾಯಣ, ಸುಗತ ಶ್ರೀನಿವಾಸರಾಜು, ಮೊಹಮ್ಮದ್ ತಹ ಮತೀನ್, ಆಯೋಜನೆ: ಫೋರಮ್ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಅಮಿಟಿ, ಸ್ಥಳ: ಕೆಎಎಸ್ ಆಫೀಸರ್ಸ್ ಅಸೋಸಿಯೇಷನ್ ಹಾಲ್, ಇನ್‌ಫ್ಯಾಂಟರಿ ರಸ್ತೆ, ಬೆಳಿಗ್ಗೆ 10



ಎಚ್.ಎನ್ ನಾಗಮೋಹನ್ ದಾಸ್

ಮಾಧ್ಯಮ ಮಂಥನ ಕಾರ್ಯಾಗಾರ: ಅಶ್ವತ್ಥನಾರಾಯಣ, ನಾರಾಯಣಸ್ವಾಮಿ, ಆಯೋಜನೆ: ಬಿಜೆಪಿ ಬೆಂಗಳೂರು ಗ್ರಾಮಾಂತರ ಮಾಧ್ಯಮ ವಿಭಾಗ, ಸ್ಥಳ: ಭಾವೂರಾವ್ ದೇಶಪಾಂಡೆ ಭವನ, ಮಲ್ಲೇಶ್ವರ, ಬೆಳಿಗ್ಗೆ 11

ಸೌರ ವಿದ್ಯುತ್ ಘಟಕಗಳ ಉದ್ಘಾಟನೆ: ಎಸ್. ಸುರೇಶ್ ಕುಮಾರ್, ಶೌಚಾಲಯ ಉದ್ಘಾಟನೆ: ನಳಿನಿ ಎಂ. ಮಂಜು, ಪ್ರೊಜೆಕ್ಟರ್ ಹಾಗೂ ಲ್ಯಾಪ್‌ಟಾಪ್ ಉದ್ಘಾಟನೆ: ಹಸನ್ ಮೊಹಿದ್ದಿನ್, ಅಧ್ಯಕ್ಷತೆ: ಡಾ.ಟಿ.ಆರ್. ಮೋಹನ್, ಆಯೋಜನೆ ಮತ್ತು ಸ್ಥಳ: ರಾಜೇಶ್ವರಿ ವಿದ್ಯಾಲಯ, ರಾಜರಾಜೇಶ್ವರಿನಗರ, ಮಧ್ಯಾಹ್ನ 11

15ನೇ ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ: ಸಮ್ಮೇಳನಾಧ್ಯಕ್ಷತೆ: ಡಾ.ಸಿ. ವೀರಣ್ಣ, ಮೆರವಣಿಗೆಗೆ ಚಾಲನೆ: ಆರ್. ಕೃಷ್ಣಪ್ಪ, ಉದ್ಘಾಟನೆ: ದೊಡ್ಡರಂಗೇಗೌಡ, ಅಧ್ಯಕ್ಷತೆ: ಬಿ.ಎಸ್. ಸುರೇಶ್, ಪ್ರಾಸ್ತಾವಿಕ ನುಡಿ: ಮಾಯಣ್ಣ, ಮುಖ್ಯ ಅತಿಥಿಗಳು: ಟಿ.ಎಸ್. ನಾಗಾಭರಣ, ಪ್ರೊ.ಎಚ್.ಡಿ. ನಾರಾಯಣಸ್ವಾಮಿ, ಕೃಷ್ಣ ಭೈರೇಗೌಡ, ಎಲ್. ಶ್ರೀನಿವಾಸ ಬಾಬು, ಡಾ.ಕೆ. ಮುರಳೀಧರ, ಎಂ. ಆನಂದ್ ಕುಮಾರ್, ಅಬ್ದುಲ್ ವಾಜೀದ್, ಬಿ.ಎಂ. ಮಂಜುನಾಥ್, ಎಂ. ಹನುಮಂತೇಗೌಡ, ಸತೀಶ್ ಕುಮಾರ್ ಹೊಸಮನಿ, ಮಹೇಂದ್ರ ಮುನೋಟ್ ಜೈನ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕನ್ವೆನ್ಷನ್ ಸೆಂಟರ್, ಯುಎಎಸ್ ಅಲುಮ್ನಿ ಅಸೋಸಿಯೇಷನ್, ಪಶುವೈದ್ಯಕೀಯ ಮಹಾವಿದ್ಯಾಲಯ ಆವರಣ, ಹೆಬ್ಬಾಳ, ಬೆಳಿಗ್ಗೆ 11

ಗೋಲ್ಡನ್ ಜ್ಯುಬಿಲಿ ಕಟ್ಟಡ ಉದ್ಘಾಟನೆ: ಡಾ. ತ್ರಿಲೋಚನ್ ಮಹಾಪಾತ್ರ, ಉಪಸ್ಥಿತಿ: ಡಾ.ಎಂ.ಆರ್. ದಿನೇಶ್, ಎಸ್.ಎನ್. ರವಿ, ಡಾ. ಆನಂದ್ ಕುಮಾರ್ ಸಿಂಗ್, ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್), ಹೆಸರುಘಟ್ಟ, ಬೆಳಿಗ್ಗೆ 11.15

ವಿಶ್ವ ತಲೆ ಗಾಯ ಜಾಗೃತಿ ದಿನ: ಮುಖ್ಯ ಅತಿಥಿಗಳು: ಕಮಲ್ ಪಂತ್, ಬಿ.ಆರ್. ರವಿಕಾಂತೇಗೌಡ, ಅಧ್ಯಕ್ಷತೆ: ಡಾ.ಜಿ. ಗುರುರಾಜ್, ಉಪಸ್ಥಿತಿ: ಡಾ.ಬಿ.ಎಸ್. ಶಂಕರನಾರಾಯಣ ರಾವ್, ಆಯೋಜನೆ: ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್), ಸ್ಥಳ: ನಿಮ್ಹಾನ್ಸ್ ಸಮಾವೇಶ ಕೇಂದ್ರ, ಮಧ್ಯಾಹ್ನ 2.30

ಯಕ್ಷಗಾನ ಪ್ರದರ್ಶನ: ‘ಕಂಟಕೀ ಕಸಾಸುರ’ ಪ್ರಹಸನ ಹಾಗೂ ‘ಕೃಷ್ಣ ಗಾರುಡಿ’ ಯಕ್ಷಗಾನ ಪ್ರದರ್ಶನ, ನಿರ್ದೇಶನ: ರಾಧಾಕೃಷ್ಣ ಉರಾಳ, ಹಿಮ್ಮೇಳ ಧ್ವನಿ ಮುದ್ರಿಕೆ ಸಹಕಾರ: ಅನಂತ ಪದ್ಮನಾಭ ಪಾಠಕ್, ಸುಬ್ರಾಯ ಹೆಬ್ಬಾರ್, ಶ್ರೀನಿವಾಸ ಪ್ರಭು, ಅತಿಥಿಗಳು: ಶ್ರೀನಿವಾಸ ಸಾಸ್ತಾನ, ಸಿ.ಎ. ಕಿಶೋರ್, ಸ್ನೇಹಾ ನೀಲಪ್ಪಗೌಡ, ಸಚ್ಚಿದಾನಂದಮೂರ್ತಿ, ಆಯೋಜನೆ: ಕಲಾ ಕದಂಬ ಆರ್ಟ್ ಸೆಂಟರ್, ಸ್ಥಳ: ಶ್ರೀ ಸಿದ್ಧಿಗಣಪತಿ ದೇವಾಲಯ, ಕೆಎಸ್‌ಆರ್‌ಟಿಸಿ ಬಡಾವಣೆ, ಚಿಕ್ಕಲಸಂದ್ರ, ಸಂಜೆ 5



‘ಕೃಷ್ಣ ಗಾರುಡಿ’ ಯಕ್ಷಗಾನದ ದೃಶ್ಯ

ಸಾರ್ವಜನಿಕ ಸಂಪರ್ಕ ಕಚೇರಿ ಉದ್ಘಾಟನೆ: ಅತಿಥಿಗಳು: ಎನ್.ಆರ್. ನಾರಾಯಣ ಮೂರ್ತಿ, ದೀಪಿಕಾ ದಾಸ್, ಕೃಷ್ಣ ಭೈರೇಗೌಡ, ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ ಕಾಲೇಜು, ಲಾಲ್‌ಬಾಗ್ ರಸ್ತೆ, ಮಧ್ಯಾಹ್ನ 3

2020ನೇ ಸಾಲಿನ ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ: ಡಾ.ಎಚ್.ಎಸ್. ಎಂ. ಪ್ರಕಾಶ್ ಅವರ ‘ದಿ ಫ್ರೀಡಮ್’ ಅನುವಾದಿತ ಇಂಗ್ಲಿಷ್ ಕಾದಂಬರಿ ಲೋಕಾರ್ಪಣೆ, ಪ್ರಾಸ್ತಾವಿಕ ನುಡಿ: ಜಯಪ್ರಕಾಶ್ ಮಾವಿನಕುಳಿ, ಪ್ರಶಸ್ತಿ ಪುರಸ್ಕೃತರು: ಪ್ರೊ.ಸಿ.ಎನ್. ರಾಮಚಂದ್ರನ್, ಸಭಾಧ್ಯಕ್ಷತೆ: ಡಾ.ಆರ್. ಲಕ್ಷ್ಮೀನಾರಾಯಣ, ಅಭಿನಂದನಾ ನುಡಿಗಳು: ಎಂ.ಎಸ್. ಆಶಾದೇವಿ, ಆಯೋಜನೆ: ಶಿವರಾಮ ಕಾರಂತ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೋನಿ, ಸಂಜೆ 4.30

ಹರಿನಾಮ ಸಂಕೀರ್ತನೆ: ಭವಾನಿ ಎಂ. ರಾವ್, ಪಿಟೀಲು: ಮೈಸೂರು ಸಂಜೀವ್ ಕುಮಾರ್, ಮೃದಂಗ: ಭುವನ್ ಶರ್ಮಾ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ಉಡುಪಿ ಪಲಿಮಾರು ಮಠ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 5.30

‘ಬಾರೋ ಮೋಹನ ಬಾರೋ’ ಧ್ವನಿಮುದ್ರಿಕೆ ಅನಾವರಣ: ಸಾನಿಧ್ಯ: ವಿಶ್ವಪ್ರಿಯತೀರ್ಥ ಸ್ವಾಮೀಜಿ, ಅಧ್ಯಕ್ಷತೆ: ದೊಡ್ಡರಂಗೇಗೌಡ, ಅತಿಥಿಗಳು: ಮೈಸೂರು ರಾಮಚಂದ್ರಾಚಾರ್ಯ, ಬಾಗೂರು ಮಾರ್ಕಾಂಡೇಯ, ಪ್ರೊ. ನಾರಾಯಣ ಘಟ್ಟ, ಕಾ.ವೆಂ. ಶ್ರೀನಿವಾಸಮೂರ್ತಿ, ಉಪಾಸನಾ ಮೋಹನ್, ವೇಣುಗೋಪಾಲ ರಾಜು, ಸಂಗೀತ್ ಥಾಮಸ್, ಆಯೋಜನೆ: ಇನ್‌ಸ್ಪೈಸ್ ಸ್ಟುಡಿಯೋಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ರಾಘವೇಂದ್ರ ಸ್ವಾಮಿಗಳ 426ನೇ ಜನ್ಮದಿನೋತ್ಸವ: ರಾಘವೇಂದ್ರ ಸ್ವಾಮಿಗಳ ಭಕ್ತಿಗೀತೆ ಗಾಯನ, ಆಯೋಜನೆ: ಸಾರ್ವಭೌಮನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಯಾಹವಿ, ನಂ.90, 1ನೇ ಅಡ್ಡ ರಸ್ತೆ, ಸಾರ್ವಭೌಮನಗರ, ಸಂಜೆ 7

ಗಡೇನಹಳ್ಳಿ: ಜಿಲ್ಲಾಧಿಕಾರಿಗಳಿಂದ ಇಂದು ಗ್ರಾಮವಾಸ್ತವ್ಯ

ಪ್ರಜಾವಾಣಿ ವಾರ್ತೆ

ಯಲಹಂಕ: ತಾಲ್ಲೂಕಿನ ಜಾಲ ಹೋಬಳಿಯ ಗಡೇನಹಳ್ಳಿ ಗ್ರಾಮದಲ್ಲಿ ಮಾರ್ಚ್ 20ರಂದು (ಶನಿವಾರ) ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ನೇತೃತ್ವದಲ್ಲಿ ಗ್ರಾಮವಾಸ್ತವ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ಕೆ.ನರಸಿಂಹಮೂರ್ತಿ ತಿಳಿಸಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದ್ದು, ಗ್ರಾಮದ ಕುಂದುಕೊರತೆಗಳ ಬಗ್ಗೆ ಪರಿಶೀಲಿಸಲು ಮತ್ತು ಸರ್ಕಾರದ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ತಿಳಿಸುವುದು ಕಾರ್ಯಕ್ರಮದ ಉದ್ದೇಶ. ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಶಾಸಕ ಕೃಷ್ಣಬೈರೇಗೌಡ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು, ಗ್ರಾಮಪಂಚಾಯಿತಿ ಅಧ್ಯಕ್ಷರು, ತಾಲ್ಲೂಕು ಮಟ್ಟದ ಇಲಾಖಾ ಮುಖ್ಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಗ್ರಾಮದ ಸಮಸ್ಯೆಗಳು, ಸಾರ್ವಜನಿಕರ ಕುಂದುಕೊರತೆಗಳನ್ನು ಸ್ಥಳದಲ್ಲಿಯೇ ಬಗೆಹರಿಸಲು ಕ್ರಮಕೈಗೊಳ್ಳಲಾಗುವುದು. ಸಾರ್ವಜನಿಕರು ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಬೆಂಗಳೂರು ರೇಸ್

‘ಗ್ಯಾಲ್ವರಿನೊ’ ಗೆಲ್ಲುವ ನಿರೀಕ್ಷೆ

ಶನಿವಾರ ಮುಕ್ತಾಯಗೊಳ್ಳಲಿರುವ ಬೆಂಗಳೂರು ಚಳಿಗಾಲದ ರೇಸ್‌ಗಳ ಪ್ರಧಾನ ಆಕರ್ಷಣೆ ಬ್ರಿಗೇಡಿಯರ್ ಗೆರಾರ್ಡ್ ಪ್ಲೇಟ್ ರೇಸ್‌ನಲ್ಲಿ ‘ಗ್ಯಾಲ್ವರಿನೊ’ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸರ್ ಫೀನಿಕ್ಸ್ 4, ಮ್ಯೂರ್‌ಫೀಲ್ಡ್ 10, ವಿಂಡ್‌ಸ್ಟಾರ್ಮ್ 9
2ನೇ ರೇಸ್: ಅಲ್ಟಿಮೇಟ್ ಪವರ್ 1, ಬಾರೋಗ್ 11, ರೇವನ್ ಸ್ಟಾರ್ 2
3ನೇ ರೇಸ್: ಫ್ಲೆಮಿಂಗ್ ಆರೆಂಜ್ 1, ಗೋಲ್ಡನ್ ಮೆಮರಿ 2, ಬ್ಲೇಜಿಂಗ್ ಗೋಲ್ಡ್ 2
4ನೇ ರೇಸ್: ಅಲ್ಟಿಮೇಟ್ ಸ್ಟ್ರೈಕರ್ 1, ಅಪೊಲೊ ಬೇ 5, ಕೆಮೆಲಿಯಾನ್ಸ್ ಇಮೇಜ್ 3
5ನೇ ರೇಸ್: ವಾಚ್ ಮೈಸ್ಟಾರ್ಸ್ 10, ಸ್ಕಾಫೆನ್‌ಬರ್ಗ್ 8, ಲ್ಯಾಂಡ್ ಆಫ್ ಲಿಬರ್ಟಿ 2
6ನೇ ರೇಸ್: ಮೌಂಟೇನ್ ಲಯನ್ 8, ಗ್ರೀನ್ ಚಾನೆಲ್ 4, ಸ್ಪೀಡ್‌ಸ್ಟರ್ 3
7ನೇ ರೇಸ್: ಗ್ಯಾಲ್ವರಿನೊ 4, ಅಲೆಕ್ಸಾಂಡ್ರೆ ಡುಮಾಸ್ 7, ಸೈಕಿಕ್ ವಾರಿಯರ್ 2
8ನೇ ರೇಸ್: ಸ್ಟಾರ್ ಅಂಡ್ ಗಾರ್ಟರ್ 1, ಸೆಲೆಸ್ಟಿಯಲ್ ಹೈವೇ 4, ಅರೆಕಾ ಏಂಜೆಲ್ 6
9ನೇ ರೇಸ್: ನಾಸ್ಟ್ರಡಮಸ್ 3, ಲೆಜೆಂಡ್ ಈಸ್ ಬ್ಯಾಕ್ 11, ಬಹುರೂಪ 5

ಉತ್ತಮ ಬೆಟ್: ಮೌಂಟೇನ್ ಲಯನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಪ್ರಜಾವಾಣಿಗೆ ಟಿಪ್‌ಸ್ಟರ್ ಟ್ರ್ಯಾಲಿ ಪ್ರಶಸ್ತಿ

ಬೆಂಗಳೂರು: ಪ್ರಜಾವಾಣಿ ಪತ್ರಿಕೆಯು 2019–20ನೇ ಸಾಲಿನ ಟಿಪ್‌ಸ್ಟರ್ ಟ್ರ್ಯಾಲಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ ಎಂದು ಬೆಂಗಳೂರು ಟರ್ಫ್ ಕ್ಲಬ್ (ಬಿ.ಟಿ.ಸಿ) ತಿಳಿಸಿದೆ.

ಈ ಅವಧಿಯಲ್ಲಿ ನಡೆದ ರೇಸ್‌ಗಳಲ್ಲಿ ಪ್ರಜಾವಾಣಿಯು ಪ್ರಕಟಿಸಿದ ಗೆಲುವಿನ ಆಯ್ಕೆಗಳು ಹೆಚ್ಚು ನಿಖರವಾಗಿದ್ದವು. ಆದ್ದರಿಂದ ದಿನಪತ್ರಿಕೆಗಳ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿತು. ಪ್ರಜಾವಾಣಿಗೆ 23ನೇ ಸಲ ಈ ಪ್ರಶಸ್ತಿ ಗಳಿಸಿದೆ. 2020-21ನೇ ಸಾಲಿನ ಚಳಿಗಾಲದ ರೇಸ್‌ಗಳು ಕೋವಿಡ್-19 ಕಾರಣದಿಂದ ನಡೆದಿಲ್ಲ.

ಕೊಡಗು: ಗಂಡು ಹುಲಿಯ ಕಳೇಬರ ಪತ್ತೆ

ಒಂದನೇ ಪುಟದಿಂದ...

ಹುಲಿಗೆ ಒಂದು ಗುಂಡು ತಗುಲಿದ್ದು ಕಾರ್ಯಾಚರಣೆ ಯಶಸ್ವಿಯಾಗಿದೆ ಎಂದು ಅರಣ್ಯಾಧಿಕಾರಿಗಳು ಅಂದು ಹೇಳಿಕೊಂಡಿದ್ದರು. ಆದರೆ, ಒಂದು ವಾರವಾದರೂ ಹುಲಿಯ ಸುಳಿವು ಸಿಕ್ಕಿರಲಿಲ್ಲ.

'ಇದೀಗ ಕಳೇಬರ ಸಿಕ್ಕಿದ್ದು, ಇದೇ ಹುಲಿಯು ದಾಳಿ ನಡೆಸಿ ಉಪಟಳ ನೀಡುತ್ತಿತ್ತು. ಅದನ್ನು 'ಯು–285' ಸಂಖ್ಯೆಯಿಂದ ಗುರುತಿಸಿ ಕಾರ್ಯಾಚರಣೆ ನಡೆಸುತ್ತಿದ್ದೆವು. ಈಗ ಸತ್ತಿರುವುದು ಅಂದಾಜು 10 ವರ್ಷದ ಗಂಡು ಹುಲಿ' ಎಂದು ಕಾರ್ಯಾಚರಣೆ ತಂಡದ ಡಿಸಿಎಫ್ ಒಬ್ಬರು ತಿಳಿಸಿದರು.

ಹೆಚ್ಚಿದ್ದ ಜನಾಕ್ರೋಶ: ಹುಲಿ ದಾಳಿಯಿಂದ ಮೂವರು ಮೃತಪಟ್ಟ ಮೇಲೆ, ಅಪಾಯಕಾರಿ ಹುಲಿ ಸೆರೆಗೆ ಆಗ್ರಹಿಸಿ ರೈತರು ಹಾಗೂ ಕಾರ್ಮಿಕರು ಬೆಳ್ಳೂರು ಎಂಬಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಸಿದ್ದರು. ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿದ್ದರು. ಪೊನ್ನಂಪೇಟೆ ತಾಲ್ಲೂಕು ಬಂದ್ ಮಾಡಲಾಗಿತ್ತು.

ರೈತರ ಆಕ್ರೋಶ ಹೆಚ್ಚಿದ್ದರಿಂದ, ಹುಲಿ ಸೆರೆ ಹಿಡಿಯಲು ಆಗದಿದ್ದರೆ ಕೊನೆಯ ಆಯ್ಕೆಯಾಗಿ ಗುಂಡಿಕ್ಕಲು ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಸೂಚನೆ ನೀಡಿದ್ದರು. ಕಾರ್ಯಾಚರಣೆಗೆ ಬೆಂಗಳೂರಿನ ಶಾರ್ಪ್‌ಶೂಟರ್ ಸುಶೀಲ್ ಕುಮಾರ್ ಅವರನ್ನು ನಿಯೋಜಿಸಲಾಗಿತ್ತು. ಒಮ್ಮೆ ಹುಲಿ ಎದುರಾಗಿದ್ದು, ಅಧಿಕಾರಿಯೊಬ್ಬರು, 'ಗುರುತಿಸಿರುವ ಹುಲಿ ಬಿಟ್ಟು, ಬೇರೆ ಹುಲಿಗೆ ಗುಂಡಿಕ್ಕಿದರೆ ನೀವೇ ಹೊಣೆ' ಎಂದು ಹೇಳಿದ್ದರಿಂದ, ಸುಶೀಲ್ ಕಾರ್ಯಾಚರಣೆ ಬಿಟ್ಟು ವಾಪಸ್ಸಾಗಿದ್ದರು. ಇದರಿಂದ ಈ ಭಾಗದಲ್ಲಿ ಆತಂಕ ಹೆಚ್ಚಾಗಿತ್ತು.

1,835 ಅತಿಥಿ ಉಪನ್ಯಾಸಕರ ನೇಮಕಕ್ಕೆ ಅಸ್ತು

ಬೆಂಗಳೂರು: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2020–21ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಕಾರಣಗಳಿಂದ ತೆರವಾದ ಒಟ್ಟು 2,832 ಉಪನ್ಯಾಸಕ ಹುದ್ದೆಗಳಿಗೆ ಎದುರಾಗಿ ಒಟ್ಟು 1,835 ಅತಿಥಿ ಉಪನ್ಯಾಸಕರನ್ನು ಫೆಬ್ರುವರಿಯಿಂದ ನೇಮಿಸಿಕೊಳ್ಳಲು ಪದವಿಪೂರ್ವ ಶಿಕ್ಷಣ ಇಲಾಖೆಗೆ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಅಂಕಗಳ ಆಟ– ನವೋದ್ಯಮಿಗೆ ಸಂಕಟ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: 30 + 15 + 20 + 10 + 10 ಎಷ್ಟಾಗುತ್ತದೆ? ಪ್ರಾಥಮಿಕ ಶಾಲೆವರೆಗೆ ಮಾತ್ರ ಕಲಿತವರೂ '85' ಎಂದು ಥಟ್ಟನೆ ಉತ್ತರ ನೀಡುತ್ತಾರೆ. ಆದರೆ, ನವೋದ್ಯಮಗಳನ್ನು ಮೌಲ್ಯಮಾಪನ ಮಾಡುವವರ ಪ್ರಕಾರ ಇವುಗಳ ಮೊತ್ತ '80'! ಕೂಡಿಸುವಾಗ ಮಾಡುವ ಇಂತಹ ತಪ್ಪುಗಳು ಕೆಲವು ನವೋದ್ಯಮಗಳಿಗೆ ವರವಾಗಿ ಪರಿಣಮಿಸಿದರೆ, ಇನ್ನು ಕೆಲವು ಕಂಪನಿಗಳ ಭವಿಷ್ಯವನ್ನೇ ಕತ್ತಲಿಗೆ ದೂಡಿವೆ.

ಕಣ್ತಪ್ಪಿನಿಂದ ಇಂತಹ ತಪ್ಪು ಸಹಜ. ಆದರೆ, ನವೋದ್ಯಮಗಳಿಗೆ ಆರ್ಥಿಕ ಉತ್ತೇಜನ ನೀಡಲು ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಏರ್ಪಡಿಸುವ ಐಡಿಯಾ2ಪಿಒಸಿ (ಎಲಿವೇಟ್) ಸ್ಪರ್ಧೆಯ ಫಲಿತಾಂಶಗಳಲ್ಲಿ ಕಣ್ಣಾಡಿಸಿದರೆ ಇಂತಹ ಹಲವಾರು 'ತಪ್ಪು'ಗಳು ಸಿಗುತ್ತವೆ.

'ನವೋದ್ಯಮದ ಭವಿಷ್ಯ ನಿರ್ಧರಿಸುವ ಸ್ಪರ್ಧೆಗೆ ಇಷ್ಟೊಂದು ದಡ್ಡರನ್ನು ತೀರ್ಪುಗಾರರನ್ನಾಗಿ ನೇಮಿಸಲಾಗಿದೆಯೇ. ಇದು ಪ್ರತಿಭಾವಂತರಿಗೆ ಮಾಡುವ ಅನ್ಯಾಯವಲ್ಲವೇ' ಎಂದು ಪ್ರಶ್ನಿಸುತ್ತಾರೆ ಮೈಸೂರಿನ ಪ್ರವೀಣ್ ಕುಮಾರ್ ಎಂ.ಕೆ.

'ಮೌಲ್ಯಮಾಪಕರು ಯಾರೂ ಕೂಡಿಸಲು ಬಾರದಷ್ಟು ದಡ್ಡರಲ್ಲ. ಅವರೆಲ್ಲರೂ ಎಬಿಎಐ, ಟಿಐಇ, ನಾಸ್ಕಾಂನಂತಹ ಉದ್ಯಮ ಸಂಘಗಳ ಮೂಲಕ ಶಿಫಾರಸುಗೊಂಡ ಪರಿಣತರು. ಅವರು ಪದೇ ಪದೇ ಇಂತಹ ತಪ್ಪು ಮಾಡುವುದು ನಿಜಕ್ಕೂ ಅಚ್ಚರಿ' ಎನ್ನುತ್ತಾರೆ ಅವರು.

'ಸರಳ ಲೆಕ್ಕವನ್ನೂ ಪದೇ ಪದೇ ತಪ್ಪಾಗಿ ಮಾಡುವುದಕ್ಕೂ ಕಾರಣವಿದೆ. ತಮಗೆ ಬೇಕಾದವರನ್ನು ಗೆಲ್ಲಿಸಲು ಅಥವಾ ಸೋಲಿಸಲು ಹೂಡುವ ಕುತಂತ್ರವಿದು' ಎಂದು ಆರೋಪಿಸುತ್ತಾರೆ.

ಕನ್ನಡ ಸಂಸ್ಕೃತಿ ನವೋದ್ಯಮಕ್ಕೆ ಸೊನ್ನೆ ಅಂಕ!

ಐಡಿಯಾ2ಪಿಒಸಿ (ಎಲಿವೇಟ್–19) ಸ್ಪರ್ಧೆಗಳಲ್ಲಿ ಕನ್ನಡ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ನವೋದ್ಯಮಗಳನ್ನು ಕಡೆಗಣಿಸಿರುವ ಬಗ್ಗೆ ಟೀಕೆಗಳು ವ್ಯಕ್ತವಾಗಿದ್ದವು. ಕನ್ನಡ ಮತ್ತು ಸಂಸ್ಕೃತಿಯ ನವೋದ್ಯಮಗಳಿಗೆ ಅತಿ ಕಡಿಮೆ ಅಂಕಗಳನ್ನು (0) ನೀಡಿರುವುದಕ್ಕೆ ದಾಖಲೆಗಳನ್ನು ಒದಗಿಸುತ್ತಾರೆ ಪ್ರವೀಣ್.

'ಕನ್ನಡ ಮತ್ತು ಸಂಸ್ಕೃತಿಯ ನವೋದ್ಯಮಗಳನ್ನು ಹೊರತುಪಡಿಸಿ ಬೇರೆ ಯಾವುದೇ ನವೋದ್ಯಮಕ್ಕೂ 'ಸೊನ್ನೆ' ಅಂಕ ನೀಡಿಲ್ಲ. ಇದಕ್ಕೆ ಅವಕಾಶವೂ ಇಲ್ಲ. ಯಾವುದಾದರೂ ಕಂಪನಿ ಸೊನ್ನೆ ಅಂಕ ಪಡೆವಷ್ಟು ಕಳಪೆ ಆಗಿದ್ದರೆ, ಅದು ಅಂತಿಮ ಸುತ್ತಿಗೆ ತಲುಪಲು ಸಾಧ್ಯವೇ ಇಲ್ಲ' ಎಂದರು.

ನವೋದ್ಯಮ 3

ಇದನ್ನು ಪುಷ್ಟೀಕರಿಸಲು ಅವರು ಪುರಾವೆಗಳನ್ನೂ ಮುಂದಿಡುತ್ತಾರೆ. 'ಒಂದು ನವೋದ್ಯಮಕ್ಕೆ ಒಬ್ಬ ಮೌಲ್ಯಮಾಪಕ 67, ಇನ್ನೊಬ್ಬರು 72 ಹಾಗೂ ಮತ್ತೊಬ್ಬರು 69 ಅಂಕ ನೀಡಿದ್ದರು. ಇದನ್ನು ಕೂಡಿದಾಗ 208 ಆಗುತ್ತದೆ. ಮೂರನೇ ಮೌಲ್ಯಮಾಪಕ 69 (22 + 5 + 26 + 8 + 8) ಅಂಕ ನೀಡಿದ್ದರೂ ಅದನ್ನು 79 ಎಂದು ತಪ್ಪಾಗಿ ನಮೂದಿಸಲಾಗುತ್ತದೆ. 5 ಅಂಕ ಇರುವ ಕಡೆ ಹಿಂದೆ 1 ಎಂದು ನಮೂದಿಸುವ ಮೂಲಕ ಈ ಮೊತ್ತ ಸರಿದೂಗುವಂತೆ ಮಾಡಲಾಗಿದೆ' ಎಂದರು.

'ಇನ್ನೊಂದು ಪ್ರಕರಣದಲ್ಲಿ ಮೌಲ್ಯಮಾಪಕರೊಬ್ಬರು ನವೋದ್ಯಮವೊಂದಕ್ಕೆ 15 + 10 + 20 + 7 + 6 ಅಂಕಗಳನ್ನು ಕೊಟ್ಟಿದ್ದಾರೆ. ಮೊತ್ತವನ್ನು 58ರ ಬದಲು 78 ಎಂದು ತಪ್ಪಾಗಿ ಬರೆದಿದ್ದಾರೆ. ಮೊತ್ತವನ್ನು ಸರಿಪಡಿಸುವ ಬದಲು ಅಂಕ 15 ಅನ್ನು 25 ಎಂದು ಹಾಗೂ 10 ಅನ್ನು 20 ಎಂದು ತಿದ್ದಲಾಗಿದೆ' ಎಂದರು.

'ಮೊತ್ತ ತಪ್ಪಾಗಿದ್ದರೆ ಸಹಿ ಪಡೆಯುತ್ತೇವೆ'

'ಅಂಕಗಳನ್ನು ಕೂಡಿಸುವಾಗ ಹಾಗೂ ಕಳೆಯುವಾಗ ತಪ್ಪುಗಳು ಸಹಜ. ಕೂಡಿಸುವಾಗ ತಪ್ಪುಗಳಾಗಿದ್ದರೆ ಮೌಲ್ಯಮಾಪಕರ ಸಹಿ ಪಡೆದು ಸರಿಪಡಿಸುತ್ತೇವೆ' ಎನ್ನುತ್ತಾರೆ 'ಸ್ಟಾರ್ಟ್‌ಅಪ್ ಕರ್ನಾಟಕ'ದ ಮುಖ್ಯಸ್ಥೆ ಚಂಪಾ ಇ.

ನಿಧನ ವಾರ್ತೆ

ಮಾಜಿ ಸಚಿವ ಎಚ್‌.ಟಿ.ಕೃಷ್ಣಪ್ಪ



ಮಂಡ್ಯ: ಮಾಜಿ ಸಚಿವ ಎಚ್‌.ಟಿ.ಕೃಷ್ಣಪ್ಪ (91) ಗುರುವಾರ ರಾತ್ರಿ ಬೆಂಗಳೂರಿನಲ್ಲಿ ತಮ್ಮ ಪುತ್ರನ ನಿವಾಸದಲ್ಲಿ ನಿಧನರಾದರು. ಸಜ್ಜನ ರಾಜಕಾರಣಿ ಎಂದೇ ಗುರುತಿಸಿಕೊಂಡಿದ್ದ ಕೃಷ್ಣಪ್ಪ, ಆರಂಭದಲ್ಲಿ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು.

ಅವರಿಗೆ ಪುತ್ರ ಸುದರ್ಶನ್ ಇದ್ದಾರೆ. ನಾಗಮಂಗಲ ಸಮೀಪದ ಅವರ ತೋಟದಲ್ಲಿ ಶುಕ್ರವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

1973ರಲ್ಲಿ ನಡೆದ ವಿಧಾನಸಭೆ ಉಪ ಚುನಾವಣೆಯಲ್ಲಿ ನಾಗಮಂಗಲ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. 1978ರ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್‌ನಿಂದ ಗೆದ್ದ ಅವರು, ದೇವರಾಜ ಅರಸು ಸರ್ಕಾರದಲ್ಲಿ ರೇಷ್ಮೆ ಸಚಿವರಾಗಿ ಕೆಲಸ ಮಾಡಿದ್ದರು.

1984ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದರಾದರೂ ಪ್ರಮಾಣ ವಚನ ಸ್ವೀಕರಿಸುವ ಮೊದಲೇ ರಾಮಕೃಷ್ಣ ಹೆಗಡೆ ಸರ್ಕಾರ ವಿಸರ್ಜನೆಗೊಂಡು ಸಾರ್ವತ್ರಿಕ ಚುನಾವಣೆ ಎದುರಾಯಿತು. 1985ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ, ಗೆದ್ದು ರಾಮಕೃಷ್ಣ ಹೆಗಡೆ ಅವರ ಸರ್ಕಾರದಲ್ಲಿ ಆರೋಗ್ಯ, ಅಬಕಾರಿ, ವೈದ್ಯಕೀಯ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

1994ರಲ್ಲಿ ಜನತಾ ಪಕ್ಷದಿಂದ ಲೋಕಸಭೆಗೆ, 1996ರಲ್ಲಿ ರಾಜ್ಯಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರು. ನಂತರ ರಾಜಕಾರಣದಿಂದ ದೂರಸರಿದರು. ವಕೀಲಿ ವೃತ್ತಿಯಿಂದ ಹೆಸರುವಾಸಿಯಾಗಿ ಅವರು ರಾಜಕಾರಣ ಪ್ರವೇಶಿಸಿದ್ದರು. ನಾಗಮಂಗಲ ತಾಲ್ಲೂಕಿಗೆ ಹೇಮಾವತಿ ನೀರು ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಮಾಜಿ ಶಾಸಕ ವಾಲ್ಮೀಕ್ ನಾಯಕ



ವಾಡಿ (ಕಲಬುರ್ಗಿ ಜಿಲ್ಲೆ): ಚಿತ್ತಾಪುರ ಕ್ಷೇತ್ರದ ಮಾಜಿ ಶಾಸಕ ವಾಲ್ಮೀಕ್ ನಾಯಕ (75) ಹೃದಯಾಘಾತದಿಂದ ಶುಕ್ರವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ನಾಲ್ವರು ಪುತ್ರಿಯರು ಇದ್ದಾರೆ.

ವಾಲ್ಮೀಕ್ ನಾಯಕ ಅವರು ಬೆಂಗಳೂರಿನಿಂದ ರೈಲಿನಲ್ಲಿ ಹಿಂದಿರುಗುತ್ತಿದ್ದ ವೇಳೆ ಎದೆನೋವು ಕಾಣಿಸಿಕೊಂಡ ಕಾರಣ ಕಲಬುರ್ಗಿಯ ಜಿಮ್ಸ್‌ಗೆ ಕರೆದೊಯ್ಯಲಾಗಿತ್ತು.

ಬಿಜೆಪಿಯಿಂದ ಶಹಾಬಾದ್ ಕ್ಷೇತ್ರದಿಂದ ಒಮ್ಮೆ, ಚಿತ್ತಾಪುರದಿಂದ ನಾಲ್ಕು ಬಾರಿ ಸ್ಪರ್ಧಿಸಿದ್ದರು. 2009ರಲ್ಲಿ ಚಿತ್ತಾಪುರ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ ಅವರನ್ನು ಸೋಲಿಸಿದ್ದರು. ಶನಿವಾರ (ಮಾರ್ಚ್ 20) ಮಧ್ಯಾಹ್ನ 1ಕ್ಕೆ ವಾಡಿಯಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಜೆಡಿಎಸ್ ಪಟ್ಟು: ಕಲಾಪಕ್ಕೆ ಪೆಟ್ಟು

ಬಿಜೆಪಿಯ ರವಿಕುಮಾರ್ ಮಂಡಿಸಿದ್ದ ಪ್ರಸ್ತಾವ: ಸದನ ಸಮಿತಿ ರಚನೆಗೆ ಬೇಡಿಕೆ • ಶುಕ್ರವಾರವೂ ಮುಂದುವರಿದ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಅನುಮತಿ ನೀಡುವಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಕುರಿತು ತನಿಖೆಗೆ ಸದನ ಸಮಿತಿ ರಚಿಸಬೇಕೆಂಬ ಬೇಡಿಕೆ ಮುಂದಿಟ್ಟು ಜೆಡಿಎಸ್ ಸದಸ್ಯರು ಶುಕ್ರವಾರವೂ ವಿಧಾನ ಪರಿಷತ್‌ನಲ್ಲಿ ಧರಣಿ ನಡೆಸಿದರು. ಇದರಿಂದಾಗಿ ಇಡೀ ದಿನ ಯಾವುದೇ ಕಲಾಪ ನಡೆಯಲಿಲ್ಲ.

ಬಿಜೆಪಿ ಸದಸ್ಯ ಎನ್. ರವಿಕುಮಾರ್ ಗುರುವಾರ ಮಂಡಿಸಿದ ಗಮನ ಸೆಳೆಯುವ ಸೂಚನೆಯ ಮೇಲೆ ಚರ್ಚೆಗೆ ಅವಕಾಶ ಪಡೆದ ಜೆಡಿಎಸ್ ಸದಸ್ಯರು, ಸದನ ಸಮಿತಿ ರಚನೆಗೆ ಒತ್ತಾಯಿಸಿ ಸಭಾಪತಿ ಪೀಠದ ಎದುರು ಧರಣಿ ಆರಂಭಿಸಿದ್ದರು. ಶುಕ್ರವಾರವೂ ಸದನದ ಕಲಾಪ ಆರಂಭವಾದಾಗ ಜೆಡಿಎಸ್ ಸದಸ್ಯರು ಧರಣಿಯಲ್ಲೇ ಇದ್ದರು.



ವಿಧಾನ ಪರಿಷತ್‌ನಲ್ಲಿ ಧರಣಿ ವೇಳೆ ವಾಗ್ವಾದ ನಡೆಸುತ್ತಿರುವ ಜೆಡಿಎಸ್‌ನ ಮರಿತಿಬ್ಬೇಗೌಡ ಮತ್ತು ಸಚಿವ ಡಾ.ಕೆ. ಸುಧಾಕರ್ – ಪ್ರಜಾವಾಣಿ ಚಿತ್ರ

ಸ್ವಸ್ಥಾನಕ್ಕೆ ಮರಳುವಂತೆ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಮಾಡಿದ ಮನವಿಗಳಿಗೆ ಜೆಡಿಎಸ್ ಸದಸ್ಯರು ಸ್ಪಂದಿಸಲಿಲ್ಲ. ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಮತ್ತು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಕೂಡ ಜೆಡಿಎಸ್ ಬೇಡಿಕೆಯನ್ನು ಬೆಂಬಲಿಸಿದರು. ಹತ್ತು ನಿಮಿಷ ಕಲಾಪ ಮುಂದೂಡಿದ ಸಭಾಪತಿ, ತಮ್ಮ ಕೊಠಡಿಯಲ್ಲಿ ಎಲ್ಲ ಪಕ್ಷಗಳ ನಾಯಕರೊಂದಿಗೆ ಸಂಧಾನ ಸಭೆ ನಡೆಸಿದರು.

ಬೇಡಿಕೆ ಒಪ್ಪದ ಸರ್ಕಾರ: ಮತ್ತೆ ಕಲಾಪ ಆರಂಭವಾದಾಗ ಸದನದಲ್ಲಿ ಹಾಜರಿದ್ದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, 'ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ನೀಡಿರುವುದರಲ್ಲಿ ಯಾವುದೇ ಅಕ್ರಮವೂ ನಡೆದಿಲ್ಲ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್, ಅಕಾಡೆಮಿಕ್ ಕೌನ್ಸಿಲ್‌ಗಳ ಶಿಫಾರಸಿನಂತೆ ನಿರ್ಧಾರ ಕೈಗೊಳ್ಳಲಾಗಿದೆ. ಹಿಂದೆ ಆಗಿರುವ ಲೋಪಗಳನ್ನು ಸರಿಪಡಿಸಲು ನಾನು ಪ್ರಯತ್ನಿಸುತ್ತಿದ್ದೇನೆ' ಎಂದರು.

'ಸದನಸಮಿತಿಯತನಿಖೆಅಗತ್ಯವಿಲ್ಲ. ಇಲಾಖೆಯ ಹಿರಿಯ ಅಧಿಕಾರಿಗಳು ಅಥವಾ ವಿಷಯ ತಜ್ಞರ ತ್ರಿಸದಸ್ಯ ಸಮಿತಿಯಿಂದ ತನಿಖೆ ನಡೆಸಲು ಸರ್ಕಾರ ಸಿದ್ಧವಾಗಿದೆ' ಎಂದು ಪ್ರಕಟಿಸಿದರು.

ಹಿಂದೆ ಹಲವು ಬಾರಿ ಸದನ ಸಮಿತಿ ರಚಿಸಿದ್ದನ್ನು ಉಲ್ಲೇಖಿಸಿದ ಜೆಡಿಎಸ್‌ನ ಮರಿತಿಬ್ಬೇಗೌಡ ಮತ್ತು ಕೆ.ಟಿ. ಶ್ರೀಕಂಠೇಗೌಡ, ಬೇಡಿಕೆಗೆ ಒಪ್ಪುವವರೆಗೂ ಧರಣಿ ನಿಲ್ಲಿಸುವುದಿಲ್ಲ ಎಂದರು.

ಮತ ವಿಭಜನೆಯ ಮೂಲಕ ತೀರ್ಮಾನಕ್ಕೆ ಬರುವಂತೆ ವಿರೋಧ ಪಕ್ಷದ ನಾಯಕರು ಸಲಹೆ ನೀಡಿದರು. ಜೆಡಿಎಸ್ ಮತ್ತು ಬಿಜೆಪಿ ಸದಸ್ಯರ ವಾಕ್ಸಮರದಿಂದ ಕೋಲಾಹಲದ ವಾತಾವರಣ ಸೃಷ್ಟಿಯಾಯಿತು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದ ಕಾರಣ ನೀಡಿದ ಸಭಾಪತಿ ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು.

ಭ್ರಷ್ಟಾಚಾರದ ಆರೋಪ– ಪ್ರತ್ಯಾರೋಪ

'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 62 ಸಂಸ್ಥೆಗಳಿಗೆ ಕಾಲೇಜು ಆರಂಭಕ್ಕೆ ಅನುಮತಿ ನೀಡುವಂತೆ ಶಿಫಾರಸು ಮಾಡಿತ್ತು. ವೈದ್ಯಕೀಯ ಶಿಕ್ಷಣ ಇಲಾಖೆ ಹಣ ಕೊಟ್ಟ 47 ಸಂಸ್ಥೆಗಳಿಗೆ ಮಾತ್ರ ಅನುಮತಿ ನೀಡಿದೆ. ಭಾರಿ ಭ್ರಷ್ಟಾಚಾರ ನಡೆದಿದೆ. ಈ ಕುರಿತು ಸದನ ಸಮಿತಿ ತನಿಖೆಗೆ ಹಿಂದೇಟು ಯಾಕೆ' ಎಂದು ಮರಿತಿಬ್ಬೇಗೌಡ ಆರೋಪಿಸಿದರು.

ಪ್ರತಿಕ್ರಿಯಿಸಿದ ಸಚಿವ ಸುಧಾಕರ್, 'ತನಿಖೆಯ ಹೆಸರಿನಲ್ಲಿ ಭ್ರಷ್ಟಾಚಾರ ನಡೆಸುವುದಕ್ಕಾಗಿಯೇ ಸದನ ಸಮಿತಿ ರಚಿಸುವಂತೆ ಬೇಡಿಕೆ ಇಟ್ಟಿದ್ದಾರೆ' ಎಂದು ಪ್ರತ್ಯಾರೋಪ ಮಾಡಿದರು.

ಮರಿತಿಬ್ಬೇಗೌಡರಿಗೆ ಗದರಿದ ಸಭಾಪತಿ



ಬಸವರಾಜ ಹೊರಟ್ಟಿ

ಮರಿತಿಬ್ಬೇಗೌಡ ಪದೇ ಪದೇ ಮಾತು ಮುಂದುವರಿಸಲು ಯತ್ನಿಸುತ್ತಿದ್ದರು. ತಾವು ಅನುಮತಿ ಕೊಡುವುದಿಲ್ಲ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದಾಗ, 'ಏಕೆ ಕೊಡುವುದಿಲ್ಲ' ಎಂದು ಪ್ರಶ್ನಿಸಿದರು.

'ಅದು ಪೀಠದ ಅಧಿಕಾರ. ಅದನ್ನು ಕೇಳುವ ಹಕ್ಕು ನಿಮಗಿಲ್ಲ' ಎಂದು ಸಭಾಪತಿ ಗದರಿದರು.

ಸಚಿವ ಸುಧಾಕರ್ ಉತ್ತರ ನೀಡುತ್ತಿದ್ದಾಗ ಕೋಪೋದ್ರಿಕ್ತರಾದ ಮರಿತಿಬ್ಬೇಗೌಡ ಏರು ದನಿಯಲ್ಲಿ ಕೂಗಾಡುತ್ತಲೇ ಇದ್ದರು. ಆಗ ಕಠಿಣ ಮಾತುಗಳಿಂದಲೇ ಗದರಿದ ಹೊರಟ್ಟಿ, ಸುಮ್ಮನಿರುವಂತೆ ತಾಕೀತು ಮಾಡಿದರು.

'ಕೌನ್ಸೆಲಿಂಗ್ ವೇಳಾಪಟ್ಟಿಗೆ ಬದ್ಧರಾಗಬೇಕು'

ಬೆಂಗಳೂರು: 'ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸುವ ವೇಳೆ ವಿಳಂಬವಾದರೆ ಕಾಮೆಡ್‌–ಕೆ ಕೋಟಾದಡಿಯ ಸೀಟುಗಳ ಭರ್ತಿಯಾಗದೆ ಉಳಿಯುವ ಆತಂಕವಿದೆ. ಈ ನಿಟ್ಟಿನಲ್ಲಿ ಕೌನ್ಸೆಲಿಂಗ್ ಪ್ರಕ್ರಿಯೆಯ ವೇಳಾಪಟ್ಟಿಗೆ ಬದ್ಧವಾಗಿರಬೇಕು ಎಂಬ ನಿಟ್ಟಿನಲ್ಲಿ ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಕಾಮೆಡ್‌–ಕೆ ಕಾರ್ಯಕಾರಿ ಕಾರ್ಯದರ್ಶಿ ಡಾ. ಕುಮಾರ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಕೆಇಎಗೂ ಒತ್ತಡ ಇರುತ್ತದೆ ಎಂಬುದು ಗೊತ್ತು. ಆದರೆ, ವಿಳಂಬವಾದಷ್ಟೂ ಪ್ರವೇಶ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುತ್ತದೆ' ಎಂದು ಹೇಳಿದರು.

ಸದನದಲ್ಲಿ ಸ್ವಾರಸ್ಯಕರ ಚರ್ಚೆ • 'ಬಟ್ಟೆ ಹಾಕೋ ಬಗ್ಗೆ ಮಾತನಾಡಿ, ಕಳಚೋ ಬಗ್ಗೆ ಬೇಡ'

90 ಜತೆ ಉಡುಪು ಖರೀದಿಸಿದ ಸಿದ್ದರಾಮಯ್ಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದರಾಮಯ್ಯ ಅವರು ಇತ್ತೀಚೆಗೆ 90 ಜತೆ ಉಡುಪು ಖರೀದಿಸಿದ ವಿಷಯವು ಬಣ್ಣ ಬಣ್ಣದ ಉಡುಪುಗಳನ್ನು ಧರಿಸುವ ಕುರಿತ ಸ್ವಾರಸ್ಯಕರ ಚರ್ಚೆಗೆ ನಾಂದಿ ಹಾಡಿದ ಪ್ರಸಂಗ ವಿಧಾನಸಭೆಯಲ್ಲಿ ಶುಕ್ರವಾರ ನಡೆಯಿತು.

ಬೆಲೆ ಏರಿಕೆ ವಿಷಯದ ಬಗ್ಗೆ ಸಿದ್ದರಾಮಯ್ಯ ಮಾತನಾಡುತ್ತಾ, 'ನಾನು ದಾರಿಯಲ್ಲಿ ಓಡಾಡುವಾಗ ಅಂಗಡಿಗಳ ಕಡೆ ನೋಡುತ್ತೇನೆ. ಯಾರೂ ಅಂಗಡಿಗಳಿಗೆ ಹೋಗುತ್ತಿಲ್ಲ. ಕೊಂಡುಕೊಳ್ಳುವ ಶಕ್ತಿಯೂ ಇಲ್ಲ. ರೇವಣ್ಣನಂತವರು ಮಾತ್ರ ಹೋಗುತ್ತಾರೆ' ಎಂದರು ಸಿದ್ದರಾಮಯ್ಯ. ಆಗ ಮಧ್ಯ ಪ್ರವೇಶಿಸಿದ ಸಚಿವ ವಿ.ಸೋಮಣ್ಣ ಅವರಿಗೆ, 'ನಿಂಗ್ಯಾಕೆ ಕೋಪ, ನಿನ್ನಂತಹವರೂ ಹೋಗ್ಬೋದು' ಎಂದು ಕೆಣಕಿದರು.



ಸಿದ್ದರಾಮಯ್ಯ

'ರೇವಣ್ಣನಿಗೆ ದೊಡ್ಡ ಬೇಡಿಕೆಗಳು ಇರಲ್ಲ. ರೇವಣ್ಣ ಯಾವ ಅಂಗಡಿಗೆ ಹೋಗಬಹುದು ನೀನೇ ಹೇಳಪ್ಪಾ ಬೊಮ್ಮಾಯಿ' ಎಂದರು ಸಿದ್ದರಾಮಯ್ಯ. ಆಗ ಸದಸ್ಯರೊಬ್ಬರು 'ಲಿಂಬೆ ಹಣ್ಣಿನ ಅಂಗಡಿ' ಎಂದು ಕುಟುಕಿದರು.

'ಆದ್ರೆ ನಾವೆಲ್ಲ ಅಂಗಡಿಗೆ ಹೋಗ್ತೇವೆ. ಯಾಕೆಂದ್ರೆ ನಮ್ಮ ಬಟ್ಟೆ ನಾವೇ ತಗೋತಿವಿ. ಮೊನ್ನೆ ಕೂಡ ಹೋಗಿದ್ದೆ. ಟಿ.ವಿಯಲ್ಲಿ ಬಂದ್ಬಿಡ್ತು' ಎಂದು ಸಿದ್ದರಾಮಯ್ಯ ಹೇಳಿದರು. 'ಜಾಸ್ತಿ ಬಟ್ಟೆ ತಗೊಂಡ್ರಿ, ಅದು ಯಾರ್‍ಯಾರಿಗೆ' ಎಂದು ಸಭಾಧ್ಯಕ್ಷ ಕಾಗೇರಿ ಅವರು ಕಾಲೆಳೆದರು.

'ಯಾರಿಗೂ ಇಲ್ಲ, ನಂಗೊಬ್ಬನಿಗೆ. ನಮ್ಮನೇಲಿ ಸಣ್ಣ ಮಕ್ಕಳಿಲ್ಲ. ದೊಡ್ಡ ಮಗ ಇದ್ದಾನೆ. ಅವನ ಬಟ್ಟೆ ಅವನೇ ತಗೋತಾನೆ. ನನ್ನ ಬಟ್ಟೆ ನಾನೇ ತಗೋತೇನೆ' ಎಂದು ಸಿದ್ದರಾಮಯ್ಯ ಹೇಳಿದರು.

ಆಗ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಬಸವರಾಜ ಬೊಮ್ಮಾಯಿ, '90 ಜತೆ ಬಟ್ಟೆಗಳನ್ನು ತಗೊಂಡಿದ್ದೀರಂತೆ. ಬಟ್ಟೆ ಸೈಜ್ ದೊಡ್ಡದ್ದು ಆದ್ರೆ ಹೆಚ್ಚು ಕಡಿಮೆ ಆಗುವುದಿಲ್ಲವೆ' ಎಂದು ಕಿಚಾಯಿಸಿದರು. 'ನಾನು ಧೋತಿಗಳನ್ನೇ ತಗೊಂಡಿದ್ದು, ಅವೇನು ಬದಲಾಗುವುದಿಲ್ಲ' ಎಂದರು.

ಆಗ, ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, 'ದಪ್ಪಾಗಿರೋದು, ತೆಳ್ಳಗಾಗಿರೋದು ಪ್ರಶ್ನೆ ಅಲ್ಲ. ಮುದುಕರಾಗಿದ್ದಾರೆ. ಚೆನ್ನಾಗಿ ಕಾಣಬೇಕು ಅಂತ ಕಲರ್ ಕಲರ್ ಬಟ್ಟೆ ತಗೋಳಕ್ಕೆ ಶುರು ಮಾಡಿದ್ದಾರೆ' ಎಂದು ಹಾಸ್ಯ ಮಾಡಿದರು. ಸದನದಲ್ಲಿ ನಗೆಯ ಅಲೆ ಹೊಮ್ಮಿತು.

'ಕಾರಜೋಳ ಯಾವಾಗಲೂ ಕಲರ್ ಕಲರ್ ಬಟ್ಟೆ ಹಾಕ್ಕೊಳ್ತಾರೆ. ನಾನೂ ಯಾಕೆ ಹಾಕೊಂಡು ಬರಬಾರ್ದು ಅಂತ ಕಲರ್ ಬಟ್ಟೆ ತಗೊಂಡೆ' ಎಂದು ಸಿದ್ದರಾಮಯ್ಯ ಹಾಸ್ಯದ ಬಾಣ ಬಿಟ್ಟರು. 'ಹಳೆ ಚಪ್ಪಲಿಗೆ ಜಾಸ್ತಿ ಪಾಲಿಶ್ ಹೊಡಿಬೇಕು ಅಂತಾ ಸಿ.ಎಂ.ಉದಾಸಿ ಹೇಳ್ತಾ ಇದ್ರು. ಹಂಗೆ ಬಟ್ಟೆಗಳಲ್ಲಿ ಚೆನ್ನಾಗಿ ಕಾಣಬೇಕು' ಎಂದು ಬೊಮ್ಮಾಯಿ ಹೇಳಿದರು.

ಈ ಮಧ್ಯೆ ಮಾತನಾಡಿದ ರಮೇಶ್‌ಕುಮಾರ್, 'ಬಟ್ಟೆ ಹಾಕೋ ಬಗ್ಗೆ ಇಡೀ ದಿನ ಮಾತನಾಡಿ. ಬಟ್ಟೆ ಕಳಚೋ ಬಗ್ಗೆ ಬೇಡ' ಎಂದಾಗ ಸದನ ನಗೆಗಡಲಲ್ಲಿ ತೇಲಿತು. 'ಬಟ್ಟೆ ಹಾಕ್ಕೊಳ್ಳೋದು ಮಾನ ಮುಚ್ಚಿಕೊಳ್ಳೊಕೆ. ಬಟ್ಟೆ ಕಳಚಿಕೊಳ್ಳುವಂತಹ ಹಲವು ನಿದರ್ಶನಗಳನ್ನು ನೋಡಿದ್ದೇವೆ. ಇದೆಲ್ಲ ಆಗಬಾರದು' ಎಂದು ಸಿದ್ದರಾಮಯ್ಯ ನುಡಿದರು.

ಭೂಪರಿವರ್ತನೆಗೆ ಏಕರೂಪದ ನಿಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ಸೆಂಟ್ಸ್‌ವರೆಗಿನ ಕೃಷಿ ವಲಯದ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಲು ರಾಜ್ಯವ್ಯಾಪಿ ಏಕರೂಪದ ನಿಯಮ ಜಾರಿ ಮಾಡಲಾಗುವುದು ಎಂದು ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಕೆ.ರಘುಪತಿ ಭಟ್ ಪ್ರಶ್ನೆಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಪರವಾಗಿ ಉತ್ತರ ನೀಡಿದ ಹೆಬ್ಬಾರ್, 10 ಸೆಂಟ್ಸ್ (4356 ಚದರಡಿ) ಭೂಪರಿವರ್ತನೆ ಸಂಬಂಧ ಮುಖ್ಯಮಂತ್ರಿ ಮತ್ತು ಅಧಿಕಾರಿಗಳ ಜತೆ ಚರ್ಚೆ ನಡೆಸಿ ನಗರಾಭಿವೃದ್ಧಿ ಸಚಿವರು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದರು.

ಉಡುಪಿ, ಮಂಗಳೂರು ಮತ್ತು ರಾಜ್ಯದ ಎಲ್ಲ ನಗರಾಭಿವೃದ್ಧಿಗಳ ವ್ಯಾಪ್ತಿಗೆ ಅನ್ವಯವಾಗುವಂತೆ ಏಕರೂಪದ ನಿಯಮಾವಳಿ ಜಾರಿ ಮಾಡಲು ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಅವರು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಸಭಾಧ್ಯಕ್ಷರು, ನಿಯಮಾವಳಿಯಲ್ಲಿ ತಾರತಮ್ಯ ಕಾಣುತ್ತಿದೆ. ಆದ್ದರಿಂದ ಕೇಂದ್ರೀಕೃತ ವ್ಯವಸ್ಥೆಯ ಬದಲಿಗೆ ವಿಕೇಂದ್ರೀಕೃತ ವ್ಯವಸ್ಥೆ ಜಾರಿ ತರಬೇಕು. 10 ಸೆಂಟ್ಸ್ ಭೂ ಪರಿವರ್ತನೆಗೆ ಬೆಂಗಳೂರಿಗೆ ಬರುವ ಸ್ಥಿತಿ ಇರಬಾರದು. ಮುಖ್ಯಮಂತ್ರಿಯವರ ಜತೆ ಚರ್ಚಿಸಿ ಏಕರೂಪದ ಕಾನೂನು ತರಬೇಕು. ಎಲ್ಲರಿಗೂ ನ್ಯಾಯ ಸಿಗಬೇಕು ಎಂದು ಹೇಳಿದರು.

ವಿಷಯ ಪ್ರಸ್ತಾಪಿಸಿದ ರಘುಪತಿ ಭಟ್, ಉಡುಪಿಯಲ್ಲಿ ಕೃಷಿ ವಲಯದ 10 ಸೆಂಟ್ಸ್ ಭೂಮಿ ಪರಿವರ್ತನೆ ಮಾಡಲು ಸಾಧ್ಯವಾಗದೇ 2 ಸಾವಿರಕ್ಕೂ ಹೆಚ್ಚು ಜನ ತೊಂದರೆಗೆ ಸಿಲುಕಿದ್ದಾರೆ. ಈ ಸಂಬಂಧ ನಗರಸಭೆ ನಿರ್ಣಯ ತೆಗೆದುಕೊಂಡಿದ್ದರೂ, ಎರಡು ವರ್ಷಗಳಿಂದ ಇತ್ಯರ್ಥವಾಗಿಲ್ಲ. ಮಧ್ಯವರ್ತಿಗಳನ್ನು ಹಿಡಿದರೆ ಮಾತ್ರ ಕೆಲಸವಾಗುತ್ತದೆ. ಇಲ್ಲವಾದರೆ, ಹತ್ತು ಸೆಂಟ್ಸ್ ಜಾಗದ ಪರಿವರ್ತನೆಗೆ ರಾಜಧಾನಿಗೆ ಬರುವ ಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಹೇಳಿದರು.

ಇದಕ್ಕೆ ಧ್ವನಿಗೂಡಿಸಿದ ಬಿಜೆಪಿಯ ಕೆ.ಜಿ.ಬೋಪಯ್ಯ, ಭೂಪರಿವರ್ತನೆಯಾಗದೇ ಬ್ಯಾಂಕುಗಳಲ್ಲಿ ಸಾಲವೂ ಸಿಗುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿಯ ಮತ್ತೊಬ್ಬ ಶಾಸಕ ಅಭಯಪಾಟೀಲ ಮಾತನಾಡಿ, 'ಇದರ ಹಿಂದೆ ದೊಡ್ಡ ರ್‍ಯಾಕೆಟ್ ಇದೆ. ನನ್ನ ಜಮೀನನ್ನೇ ಒಂದೂವರೆ ವರ್ಷದಿಂದ ಪರಿವರ್ತನೆ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಶಾಸಕರಾದ ನಮ್ಮ ಸ್ಥಿತಿಯೇ ಹೀಗಾದರೆ ಉಳಿದವರ ಕಥೆ ಏನು' ಎಂದು ಅವರು ಪ್ರಶ್ನಿಸಿದರು.

ಶಿವಮೊಗ್ಗ: ಇಂದು ರೈತರ ಮಹಾ ಪಂಚಾಯತ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಶಿವಮೊಗ್ಗದಲ್ಲಿ ಮಾರ್ಚ್ 20ರಂದು ಮಧ್ಯಾಹ್ನ 3ಕ್ಕೆ ರೈತರ ಮಹಾ ಪಂಚಾಯತ್ ಆರಂಭವಾಗಲಿದೆ. ಬಿಸಿಲಿನ ಬೇಗೆಯಲ್ಲಿ ಬರುವ ರೈತರಿಗೆ ದಾಹ ತಣಿಸಲು ನೀರು, ಮಜ್ಜಿಗೆ, ಕಲ್ಲಂಗಡಿ, ನೆರಳಿನ ವ್ಯವಸ್ಥೆ ಮಾಡಲಾಗಿದೆ. ಏಕಕಾಲಕ್ಕೆ 25 ಸಾವಿರ ಜನರು ಕುಳಿತುಕೊಳ್ಳಲು ಅವಕಾಶ ಒದಗಿಸಲಾಗಿದೆ.

'ಪ್ರತಿಯೊಬ್ಬರೂ ರೈತ ಹೋರಾಟದ ದೀಕ್ಷೆ ತೊಟ್ಟಿದ್ದೇವೆ' ಎಂದು ಘೋಷಿಸಿರುವ ಜಿಲ್ಲೆಯ ರೈತ ಮುಖಂಡರು, ತಾವು ಒಗ್ಗೂಡುವ ಜತೆಗೆ ಬಿಜೆಪಿಯೇತರ ರಾಜಕೀಯ ಪಕ್ಷಗಳು, ವಿವಿಧ ಸಂಘಟನೆಗಳ ಮುಖಂಡರನ್ನೂ ವೇದಿಕೆಗೆ ಸೆಳೆಯುವಲ್ಲಿ ಯಶ ಕಂಡಿದ್ದಾರೆ. ಅದಕ್ಕಾಗಿ ಸತತ ತಿಂಗಳಿನಿಂದ ಹಳ್ಳಿ ಹಳ್ಳಿ ತಿರುಗಿ ಜನರಲ್ಲಿ ಕ್ರಾಂತಿಯ ಬೀಜ ಬಿತ್ತಿದ್ದಾರೆ.

ರೈತ ನಾಯಕರ ದಂಡು: ಸಂಯುಕ್ತ ಕಿಸಾನ್ ಮೋರ್ಚಾದ ನಾಯಕರಾದ ದರ್ಶನ್ ಪಾಲ್, ರಾಕೇಶ್ ಟಿಕಾಯತ್, ಯದುವೀರ್ ಸಿಂಗ್, ರಾಜ್ಯ ಸಂಘದ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ ಮತ್ತಿತರರು ಭಾಗವಹಿಸುತ್ತಿದ್ದಾರೆ. ಬೆಂಗಳೂರಿನ ಮೌರ್ಯ ವೃತ್ತದಿಂದ ಬೆಳಿಗ್ಗೆ 7ಕ್ಕೆ ಹೊರಟು ತುಮಕೂರು, ತಿಪಟೂರು, ಅರಸೀಕೆರೆ, ಭದ್ರಾವತಿ ಮಾರ್ಗವಾಗಿ ಮಧ್ಯಾಹ್ನ 1.30ಕ್ಕೆ ಶಿವಮೊಗ್ಗ ತಲುಪಲಿದ್ದಾರೆ.



ರೈತರ ಮಹಾ ಪಂಚಾಯತ್ ವೇದಿಕೆ ಸಿದ್ಧತೆಗಳನ್ನು ಸಂಘಟಕರು ಪರಿಶೀಲಿಸಿದರು

ಮೆರವಣಿಗೆ ರದ್ದು: ಕೋವಿಡ್ ಮಾರ್ಗಸೂಚಿ, ಬಿಸಿಲಿನ ತಾಪದ ಕಾರಣ ಮೆರವಣಿಗೆ ರದ್ದು ಮಾಡಲಾಗಿದೆ. ಮಾಸ್ಕ್ ಕಡ್ಡಾಯಗೊಳಿಸಲಾಗಿದೆ ಎಂದು ಸಂಘಟಕರಾದ ಕೆ.ಟಿ.ಗಂಗಾಧರ್, ಎಚ್.ಆರ್.ಬಸವರಾಜಪ್ಪ, ಕೆ.ಪಿ. ಶ್ರೀಪಾಲ್, ಕೆ.ಎಲ್.ಅಶೋಕ್, ಎಂ.ಗುರುಮೂರ್ತಿ, ಎನ್.ರಮೇಶ್ ಮಾಹಿತಿ ನೀಡಿದರು.

₹10 ಲಕ್ಷ ವೆಚ್ಚದ ಮನೆಗಳಿಗೆ ಮರಳು ಉಚಿತ: ಸಚಿವ ಮುರುಗೇಶ ನಿರಾಣಿ

ಬೆಂಗಳೂರು: ರಾಜ್ಯದಲ್ಲಿ ₹10 ಲಕ್ಷದೊಳಗೆ ಮನೆ ಮತ್ತು ವಾಣಿಜ್ಯ ಕಟ್ಟಡ ಕಟ್ಟಿಕೊಳ್ಳುವವರಿಗೆ ಉಚಿತವಾಗಿ ಮರಳು ವಿತರಿಸುವ ಆಶಯದಡಿ 'ಹೊಸ ನೀತಿ' ಜಾರಿಗೆ ತರಲು ಉದ್ದೇಶಿಸಲಾಗಿದೆ ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಸಿ.ಎನ್. ಬಾಲಕೃಷ್ಣ ಪ್ರಶ್ನೆಗೆ ಉತ್ತರಿಸಿದ ಅವರು, ಇದರಿಂದ ಬಡವರಿಗೆ ಅನುಕೂಲವಾಗಲಿದೆ. ಇವರು ಮನೆ ನಿರ್ಮಿಸಿಕೊಳ್ಳಲು ಪ್ರತಿ ಟನ್‌ಗೆ ₹100 ರಿಂದ ₹200 ದರ ವಿಧಿಸಿ ಮರಳು ಪೂರೈಕೆ ಮಾಡಲಾಗುವುದು ಎಂದು ಹೇಳಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಳ್ಳ, ತೊರೆ ಮತ್ತಿತರ ಕಡೆ ಎತ್ತಿನ ಗಾಡಿ ಮೂಲಕ ಮರಳು ಸಾಗಿಸಲು ಅವಕಾಶ ನೀಡಲಾಗಿದೆ. ಪ್ರಸ್ತುತ ರಾಜ್ಯದ 193 ಮರಳು ನಿಕ್ಷೇಪ ಪ್ರದೇಶಗಳನ್ನು ಗುರುತಿಸಿ 87 ಬ್ಲಾಕ್‌ಗಳಿಗೆ ಅಧಿಸೂಚನೆ ಹೊರಡಿಸಲಾಗಿದೆ ಎಂದರು.

ಮರಳು ಸಮಸ್ಯೆ ಬಗ್ಗೆ ಸಿ.ಎನ್. ಬಾಲಕೃಷ್ಣ, ಜೆಡಿಎಸ್‌ನ ಕೆ. ಅನ್ನದಾನಿ ಗಮನ ಸೆಳೆದರು.

'ನ್ಯಾಯಾಂಗ ಭ್ರಷ್ಟಾಚಾರ': ಪ್ರಹಾರ

ಒಂದನೇ ಪುಟದಿಂದ...

'ಎಲ್ಲ ಕ್ಷೇತ್ರಗಳಂತೆ ನ್ಯಾಯಾಂಗವೂ ನೈತಿಕತೆ ಕಳೆದುಕೊಂಡಿದೆ. ನ್ಯಾಯಾಂಗ ನೌಕರರ ಗೃಹ ನಿರ್ಮಾಣ ಮಂಡಳಿಯ ಸದಸ್ಯರಲ್ಲದ ಮತ್ತು ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ನ 84 ನ್ಯಾಯಾಧೀಶರು ನಿವೇಶನ ಖರೀದಿಸಿದ್ದಾರೆ. ನಿಯಮಾವಳಿ ಪ್ರಕಾರ ನ್ಯಾಯಾಧೀಶರಿಗೆ ನಿವೇಶನ ಖರೀದಿಸುವ ಹಕ್ಕು ಇಲ್ಲ. ಹಾಗಿದ್ದರೆ ಇವರಿಗೇ ಬೇರೆ ಕಾನೂನು ಇದೆಯೇ' ಎಂದು ಖಾರವಾಗಿ ಪ್ರಶ್ನಿಸಿದರು.

'ಈ ಹಗರಣ ನಡೆದು ಇಷ್ಟು ಸಮಯವಾದರೂ ಇವರ (ನ್ಯಾಯಾಧೀಶರ) ವಿರುದ್ಧ ಏಕೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ? ನಾವು ಯಾರ ಬಳಿ ಹೋಗಿ ನ್ಯಾಯ ಕೋರಬೇಕು? ನ್ಯಾಯಾಂಗದಲ್ಲಿ ಪಾವಿತ್ರ್ಯ ಉಳಿದಿದೆಯೇ' ಎಂದೂ ರಾಮಸ್ವಾಮಿ ಕೇಳಿದರು.

ಕಾಂಗ್ರೆಸ್ ಸದಸ್ಯ ಎಚ್.ಕೆ.ಪಾಟೀಲ ಮಾತನಾಡಿ, 'ಸಂವಿಧಾನದಲ್ಲಿ ಜನಪ್ರತಿನಿಧಿ ಸಭೆಯೇ ಅಂತಿಮ ಸಭೆ. ಜನಪ್ರತಿನಿಧಿಗಳು ಎಲ್ಲಿಯವರೆಗೆ ಸಮರ್ಪಕವಾಗಿ ಕೆಲಸ ಮಾಡುತ್ತಾರೋ ಅಲ್ಲಿಯವರೆಗೆ ಸಂಶಯದಿಂದ ನೋಡಬಾರದು' ಎಂದರು.

'ನಾನೂ ಕಾನೂನು ಸಚಿವನಾಗಿದ್ದೆ. ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಬಾಕಿ ಉಳಿದ ಪ್ರಕರಣಗಳ ಸಂಖ್ಯೆಯನ್ನು ಒಬ್ಬ ದೊಡ್ಡ ವಕೀಲರ ಬಳಿ ಕೇಳಿದೆ. ಅದಕ್ಕೆ ಅವರು... ಅಯ್ಯೋ ಅದನ್ನೆಲ್ಲಾ ಕೇಳಿ ತಪ್ಪು ಮಾಡಬೇಡಿ. ಅದರಿಂದ ನ್ಯಾಯಾಂಗ ನಿಂದನೆ ಆಗುತ್ತದೆ ಎಂದು ಗಾಬರಿ ಬೀಳಿಸಿದರು' ಎಂದು ಪಾಟೀಲ ಹೇಳಿದರು.

'ನ್ಯಾಯಾಂಗವು ಕಾರ್ಯಾಂಗ ಮತ್ತು ಶಾಸಕಾಂಗದಲ್ಲಿ ಹಸ್ತಕ್ಷೇಪ ಮಾಡುವ ಪ್ರವೃತ್ತಿ 1970ರ ದಶಕದಲ್ಲಿ ಆರಂಭವಾಯಿತು. 72 ವರ್ಷಗಳ ಪ್ರಜಾತಂತ್ರದ ಪಯಣದಲ್ಲಿ ಇದನ್ನು ಪದೇ ಪದೇ ನೋಡುತ್ತಿದ್ದೇವೆ' ಎಂದು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

'ನಾವು ಶಾಸನ ರಚಿಸುವವರು. ಸಾಮಾನ್ಯವಾಗಿ ಕಾನೂನುಗಳು ಅಸ್ಪಷ್ಟವಾಗಿರುತ್ತವೆ. ಅವುಗಳನ್ನು ವಿಭಿನ್ನವಾಗಿಯೂ ವ್ಯಾಖ್ಯಾನಿಸಲಾಗುತ್ತದೆ. ನಾವು(ಶಾಸಕಾಂಗ) ಈ ಅಸ್ಪಷ್ಟತೆಯನ್ನು ಸರಿಪಡಿಸಿದಾಗ, ನ್ಯಾಯಾಂಗಕ್ಕೆ ಮೂಗು ತೂರಿಸಲು ಅವಕಾಶವೇ ಸಿಗುವುದಿಲ್ಲ' ಎಂದು ಅವರು ತಿಳಿಸಿದರು.

ಕಾಗೇರಿ ಮಾತನಾಡಿ, 'ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಜನರ ನಿರೀಕ್ಷೆಯ ಎತ್ತರಕ್ಕೆ ಏರದೇ ಇದ್ದರೆ, ಭವಿಷ್ಯದಲ್ಲಿ ಜನಜೀವನ ಸಂಕಷ್ಟಕ್ಕೆ ಸಿಲುಕುತ್ತದೆ' ಎನ್ನುವ ಮೂಲಕ ಚರ್ಚೆಗೆ ತೆರೆ ಎಳೆದರು.

ಪಾಂಡುರಂಗ ಗರಗ್ ಅಮಾನತಿಗೆ ಹಿಂದೇಟು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಸಹಕಾರ ಸಂಘಗಳ ಇಲಾಖೆಯ ಜಂಟಿ ರಿಜಿಸ್ಟ್ರಾರ್ ಪಾಂಡುರಂಗ ಡಿ. ಗರಗ್ ಅವರನ್ನು ಅಮಾನತು ಮಾಡುವಂತೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶಿಫಾರಸು ಮಾಡಿ 20 ದಿನ ಕಳೆದರೂ ಸಹಕಾರ ಇಲಾಖೆ ಆದೇಶ ಹೊರಡಿಸಿಲ್ಲ.

ಪಾಂಡುರಂಗ ಗರಗ್ ವಿರುದ್ಧ ಫೆಬ್ರುವರಿ 1ರಂದು ಎಫ್‌ಐಆರ್ ದಾಖಲಿಸಿದ್ದ ಎಸಿಬಿ, ಫೆ. 2ರಂದು ಮನೆ ಮೇಲೆ ದಾಳಿಮಾಡಿ ಶೋಧ ನಡೆಸಿತ್ತು. ₹ 4.20 ಕೋಟಿ ಮೊತ್ತದ ಅಕ್ರಮ ಆಸ್ತಿ ಆರೋಪಿತ ಅಧಿಕಾರಿ ಬಳಿ ಪತ್ತೆಯಾಗಿದೆ ಎಂದು ಎಸಿಬಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸೀಮಂತ್ ಕುಮಾರ್ ಸಿಂಗ್, ಫೆ.26ರಂದು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದರು.

'ಆರೋಪಿ ಅಧಿಕಾರಿಯು ಪ್ರಸ್ತುತ ಮಲ್ಲೇಶ್ವರದ ಪ್ರಾಂತ್ಯ ಸಹಕಾರ ಸೌಧದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರ ಹುದ್ದೆಯಲ್ಲಿದ್ದಾರೆ. ಪಾಂಡುರಂಗ ಗರಗ್ ಅಕ್ರಮ ಆಸ್ತಿ ಹೊಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಅದೇ ಹುದ್ದೆಯಲ್ಲಿ ಮುಂದುವರಿದರೆ ಪ್ರಭಾವ ಬಳಸಿ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ, ಸಾಕ್ಷ್ಯಾಧಾರ ನಾಶಮಾಡುವ ಅಥವಾ ತಿರುಚುವ ಸಾಧ್ಯತೆಗಳಿವೆ. ಆದ್ದರಿಂದ ಆರೋಪಿತ ಅಧಿಕಾರಿಯನ್ನು ಸೇವೆಯಿಂದ ಅಮಾನತು ಮಾಡಿ, ಲೀನ್ ಬದಲಾವಣೆ ಮಾಡಿ, ಇಲಾಖಾ ವಿಚಾರಣೆ ನಡೆಸಬೇಕು' ಎಂದು ಸಿಂಗ್ ಶಿಫಾರಸು ಮಾಡಿದ್ದರು.

ಎಫ್‌ಐಆರ್, ಶೋಧ ಕಾರ್ಯಾಚರಣೆಯ ಮಹಜರು ವರದಿ, ಎಸಿಬಿ ಬೆಂಗಳೂರು ನಗರ ಘಟಕದ ಎಸ್‌ಪಿ ಸಲ್ಲಿಸಿದ್ದ ತನಿಖಾ ವರದಿಗಳ ಪ್ರತಿಗಳನ್ನೂ ಪತ್ರದೊಂದಿಗೆ ಕಳುಹಿಸಲಾಗಿತ್ತು. ಕರ್ನಾಟಕ ನಾಗರಿಕ ಸೇವಾ ನಿಯಮ–1957ರ ಸೆಕ್ಷನ್ 10(1)(ಎಎ) ಮತ್ತು ಈ ಸಂಬಂಧ 2008ರ ಆಗಸ್ಟ್‌26ರಂದು ಸಿಬ್ಬಂದಿ ಮತ್ತು ಆಡಳಿತಸುಧಾರಣಾ ಇಲಾಖೆ ಹೊರಡಿಸಿದ್ದ ಅಧಿಸೂಚನೆಯನ್ನೂ ಪತ್ರದೊಂದಿಗೆ ಕಳುಹಿಸಿದ್ದರು.

'ಆರೋಪಿ ಅಧಿಕಾರಿಯ ಅಮಾನತು, ಲೀನ್ ಬದಲಾವಣೆ ಹಾಗೂ ಇಲಾಖೆ ವಿಚಾರಣೆ ಆರಂಭಿಸಿ ವರದಿ ನೀಡುವಂತೆ ಸಹಕಾರ ಇಲಾಖೆಯನ್ನು ಕೋರಲಾಗಿತ್ತು. ಆದರೆ, ಕ್ರಮ ಕೈಗೊಂಡಿರುವ ಕುರಿತು ಈವರೆಗೆ ಇಲಾಖೆಯಿಂದ ಪ್ರತಿಕ್ರಿಯೆ ಬಂದಿಲ್ಲ' ಎಂದು ಎಸಿಬಿ ಮೂಲಗಳು ತಿಳಿಸಿವೆ.

ಈ ಕುರಿತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರ ಪ್ರತಿಕ್ರಿಯೆಗೆ ಪ್ರಯತ್ನಿಸಲಾಯಿತು. ಊಟಿಯಲ್ಲಿ ತಮಿಳು ನಾಡು ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿರುವ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಆರೆಸ್ಸೆಸ್‌ನತ್ತ ಯುವ ಸಮೂಹ- ಸಹ ಸರಕಾರ್ಯವಾಹ ಡಾ. ಮನಮೋಹನ ವೈದ್ಯ

'3 ವರ್ಷಗಳಲ್ಲಿ ಎಲ್ಲ ಮಂಡಲಗಳಲ್ಲಿ ಶಾಖೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಮೂರು ವರ್ಷಗಳಲ್ಲಿ ಎಲ್ಲ ಮಂಡಲಗಳಲ್ಲಿ ಆರೆಸ್ಸೆಸ್ ಶಾಖೆ ಆರಂಭಿಸುವ ಯೋಜನೆಯಿದೆ' ಎಂದು ಆರೆಸ್ಸೆಸ್ ಸಹ ಸರಕಾರ್ಯವಾಹ ಡಾ. ಮನಮೋಹನ ವೈದ್ಯ ಹೇಳಿದರು.

ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ಎರಡು ದಿನ ನಡೆಯಲಿರುವ ಆರೆಸ್ಸೆಸ್‌ನ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭೆ (ಎಬಿಪಿಎಸ್) ಉದ್ಘಾಟನೆಯ ಬಳಿಕ ಮಾಧ್ಯಮಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಆರೆಸ್ಸೆಸ್ ಜೊತೆ ಸೇರಿ ಕೆಲಸ ಮಾಡುವ ಯುವ ಸಮೂಹದ ಸಂಖ್ಯೆ ಇತ್ತೀಚೆಗೆ ಹೆಚ್ಚುತ್ತಿದೆ. ಮುಂದಿನ ಮೂರು ವರ್ಷಗಳಲ್ಲಿ ಶಾಖೆಗಳ ಸಂಖ್ಯೆ, ಗುಣಮಟ್ಟ ಹೆಚ್ಚಿಸುವ ಮತ್ತು ಯುವಕರನ್ನು ಜೋಡಿಸುವ ಕುರಿತು ಎಬಿಪಿಎಸ್‌ನಲ್ಲಿ ಚರ್ಚೆ ನಡೆಯಲಿದೆ' ಎಂದರು.

ಎಬಿಪಿಎಸ್ ಆರಂಭ

ಎಬಿಪಿಎಸ್ ಅನ್ನು ಸರ ಸಂಘಚಾಲಕ್ ಮೋಹನ್ ಭಾಗವತ್ ಮತ್ತು ಸರಕಾರ್ಯವಾಹ ಸುರೇಶ್ (ಭೈಯಾಜೀ) ಜೋಶಿ ಉದ್ಘಾಟಿಸಿದರು. 450 ಪ್ರತಿನಿಧಿಗಳು ಭಾಗವಹಿಸಿದ್ದಾರೆ.

ಶಾಖೆಯ ವಿಸ್ತಾರ ಸೇರಿದಂತೆ ಚಟುವಟಿಕೆಯ ವರದಿ, ಮುಂದಿನ ಕಾರ್ಯಯೋಜನೆ ಮತ್ತು ರಾಷ್ಟ್ರೀಯ ಮಹತ್ವದ ಪ್ರಮುಖ ವಿಷಯದ ಕುರಿತು ಎಬಿಪಿಎಸ್‌ನಲ್ಲಿ ಚರ್ಚೆ ನಡೆಯುತ್ತಿದೆ. ಆರೆಸ್ಸೆಸ್‌ಗೆ ಹೊಸ ಸರಕಾರ್ಯವಾಹರ ನೇಮಕಕ್ಕೆ ಶನಿವಾರ ಚುನಾವಣೆ ನಡೆಯಲಿದೆ.

'ಲಾಕ್‌ಡೌನ್‌ನಿಂದಾಗಿ ಕಳೆದ ವರ್ಷ ಮಾರ್ಚ್‌ನಿಂದ ಜೂನ್‌ವರೆಗೆ ಶಾಖೆಗಳು ಸಂಪೂರ್ಣ ಬಂದ್ ಆಗಿದ್ದವು. ಜುಲೈನಿಂದ ಮತ್ತೆ ಆರಂಭಗೊಂಡಿವೆ. ಕಳೆದ ವರ್ಷ ಮಾರ್ಚ್‌ಗೆ ಹೋಲಿಸಿದರೆ ಶೇ 89ನಷ್ಟು ಶಾಖೆಗಳು ಪುನರಾರಂಭಗೊಂಡಿವೆ. ದೇಶದ 6,495 ತಾಲ್ಲೂಕುಗಳಲ್ಲಿ ಶೇ 85 ತಾಲ್ಲೂಕುಗಳಲ್ಲಿ ಶಾಖೆಗಳು ನಡೆಯುತ್ತಿವೆ. 58,500 ಮಂಡಲಗಳಲ್ಲಿ ಶೇ 60 ಮಂಡಲಗಳಲ್ಲಿ ಶಾಖೆ ಅಥವಾ ಸಂಘದ ವಿವಿಧ ರೀತಿಯ ಚಟುವಟಿಕೆಗಳಿವೆ. ದೇಶದಲ್ಲಿ ನಡೆಯುತ್ತಿರುವ ಶಾಖೆಗಳ ಪೈಕಿ, ಶೇ 89ರಲ್ಲಿ ಯುವಕರು ಮತ್ತು ಬಾಲಕರು ಭಾಗವಹಿಸುತ್ತಿದ್ದಾರೆ' ಎಂದು ವಿವರಿಸಿದರು.

'ಲಾಕ್‌ಡೌನ್ ದಿನದಿಂದಲೇ ಸಂಘದ ಕಾರ್ಯಕರ್ತರು ಸೇವಾಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. 92,656 ಸ್ಥಾನಗಳಲ್ಲಿ ಸುಮಾರು 5.07 ಲಕ್ಷ ಕಾರ್ಯಕರ್ತರು ಸಂತ್ರಸ್ತರ ನೆರವಿಗೆ ಧಾವಿಸಿದರು. 73 ಲಕ್ಷ ಪಡಿತರ ಕಿಟ್, 4.5 ಕೋಟಿ ಆಹಾರ ಪೊಟ್ಟಣ, 90 ಲಕ್ಷ ಮಾಸ್ಕ್ ವಿತರಿಸಿದರು. 60 ಸಾವಿರ ಯುನಿಟ್ ರಕ್ತದಾನ ನಡೆಯಿತು. ಸಂಘದ ಜತೆಗೆ ಮಠ ಮಂದಿರಗಳು, ಅನೇಕ ಸಂಘ ಸಂಸ್ಥೆಗಳು ಸೇವೆ ಮಾಡಿವೆ' ಎಂದರು.

ಎರಡು ನಿರ್ಣಯ: 'ಇಡೀ ಸಮಾಜ ಏಕತೆ, ಸೇವಾಭಾವದಿಂದ ಕೊರೊನಾ ಸಂದರ್ಭದಲ್ಲಿ ಮಾಡಿದ ಕೆಲಸದ ಬಗ್ಗೆ ಚರ್ಚೆ ನಡೆಸಿ, ಅಭಿನಂದಿಸಲು ಎಬಿಪಿಎಸ್ ನಿರ್ಣಯ ಕೈಗೊಳ್ಳಲಿದೆ. ಜೊತೆಗೆ, ದೇಶದಾದ್ಯಂತ ಶ್ರೀರಾಮ ಜನ್ಮಭೂಮಿ ನಿಧಿ ಸಮರ್ಪಣಾ ಅಭಿಯಾನದಲ್ಲಿ 20 ಲಕ್ಷ ಕಾರ್ಯಕರ್ತರು 5,45,737 ಗ್ರಾಮ– ನಗರಗಳನ್ನು ತಲುಪಿದ್ದಾರೆ. ಈ ಬಗ್ಗೆಯೂ ಚರ್ಚೆ ನಡೆದು ನಿರ್ಣಯ ಕೈಗೊಳ್ಳಲಿದೆ' ಎಂದು ವೈದ್ಯ ತಿಳಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ವೈದ್ಯ, 'ನಿಧಿ ಸಮರ್ಪಣಾ ಅಭಿಯಾನ ಸಂದರ್ಭದಲ್ಲಿ ದೇಣಿಗೆ ನೀಡಿಲ್ಲ ಎಂಬ ಕಾರಣಕ್ಕೆ ಅಂಥ ಮನೆಗಳನ್ನು ಮಾರ್ಕ್ ಮಾಡುವ ಸಂಸ್ಕೃತಿ ನಮ್ಮದಲ್ಲ. ದೇಣಿಗೆ ಕೊಟ್ಟವರೂ ನಮ್ಮವರೆ. ಕೊಡದವರೂ ನಮ್ಮವರೆ' ಎಂದರು.

ರಮೇಶ ಜಾರಕಿಹೊಳಿ ವಿಚಾರಣೆ

ಬೆಂಗಳೂರು: ಸಿ.ಡಿ.ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳ ಎದುರು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ವಿಚಾರಣೆಗೆ ಶುಕ್ರವಾರ ಹಾಜರಾದರು.

ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದಲ್ಲಿ ಮಾಹಿತಿ ಪಡೆಯುವ ಸಲುವಾಗಿ ವಿಚಾರಣೆಗೆ ಬರುವಂತೆ ಎಸ್‌ಐಟಿ ನೋಟಿಸ್ ನೀಡಿತ್ತು.

'ಆಡುಗೋಡಿಯಲ್ಲಿರುವ ಟೆಕ್ನಿಕಲ್ ಸೆಲ್‌ನಲ್ಲಿ ಎಸ್‌ಐಟಿ ಅಧಿಕಾರಿಗಳ ಎದುರು ರಮೇಶ ಜಾರಕಿಹೊಳಿ ಹಾಜರಾದರು. ಸತತ ನಾಲ್ಕು ಗಂಟೆಗಳವರೆಗೆ ಎಸ್‌ಐಟಿ ಅಧಿಕಾರಿಗಳು ವಿಚಾರಣೆ ನಡೆಸಿದರು' ಎಂದು ಮೂಲಗಳು ತಿಳಿಸಿವೆ.



- ಎರಡನೇ ಮಗು ಎನ್ನುವುದು ಒಂದು ಆಯ್ಕೆ ಆದರೆ ಪರವಾಗಿಲ್ಲ. ಆದರೆ ನಿಮ್ಮ ಭಾವನೆಗಳನ್ನು ಮಗುವಿನ ಮೇಲೆ ಹೇರುವುದಕ್ಕೆ ಹೋಗಬೇಡಿ. ಇದು ಮಕ್ಕಳಲ್ಲಿ ಸೆಕೆಂಡ್ ಚೈಲ್ಡ್ ಸಿಂಡ್ರೋಮ್‌ಗೆ ಕಾರಣವಾಗುತ್ತದೆ.
- ಮಗು ನಿಮಗೆ ಬೇಕು ಅನಿಸಿದಾಗ ಮಾಡಿಕೊಳ್ಳಿ. ಒತ್ತಾಯಕ್ಕೆ ಮಣಿದು ಮಗುವನ್ನು ಮಾಡಿಕೊಳ್ಳಬೇಡಿ.
- ಮೊದಲನೇ ಮಗು, ಎರಡನೇ ಮಗುವಿನ ನಡುವೆ ಅಂತರ ತುಸು ಕಡಿಮೆ ಇರಲಿ.
- ನಿಮ್ಮ ಆರೋಗ್ಯ, ಆರ್ಥಿಕ ಸ್ಥಿತಿ ಎಲ್ಲವೂ ಗಮನದಲ್ಲಿರಲಿ.

ಚೊಚ್ಚಲ ಸಂಭ್ರಮ ಮುಗಿಯಿತಲ್ವೆ..

ಎರಡನೆಯದು ಯಾವಾಗ?

ಪವಿತ್ರಾ ರಾಘವೇಂದ್ರ ಶೆಟ್ಟಿ

‘ಮಗು ಎಷ್ಟೊಂದು ಹಟಮಾರಿ. ಅವನಿಗೊಂದು ತಮ್ಮನೊ ಅಥವಾ ತಂಗಿಯೊ ಬಂದರೆ ಈ ಮೊಂಡಾಟವೆಲ್ಲ ಕಮ್ಮಿಯಾಗಿ ಬಿಡುತ್ತದೆ ನೋಡಿ’

ಸಮಾರಂಭವೊಂದರಲ್ಲಿ ನಾಲ್ಕು ವರ್ಷದ ಮಗನನ್ನು ಸಂಭಾಳಿಸಲು ಕಷ್ಟಪಡುತ್ತಿದ್ದಾಕೆಗೆ ಪಕ್ಕದಲ್ಲಿ ಕುಳಿತ ಮಧ್ಯ ವಯಸ್ಸಿನ ಮಹಿಳೆ ಹೇಳಿದಾಗ ‘ಈಗಿನ ಕಾಲದಲ್ಲಿ, ಗಂಡ–ಹೆಂಡತಿ ಇಬ್ಬರೇ ಇರುವ ಕುಟುಂಬದಲ್ಲಿ ಒಂದು ಮಗುವನ್ನು ಹೊತ್ತು, ಹೆತ್ತು, ಸಾಕಿ, ಭವಿಷ್ಯ ರೂಪಿಸುವ ಕಷ್ಟವೇ ಸಾಕಾಗಿರುವಾಗ ಇನ್ನೊಂದು ಮಗು ಮಾಡಿಕೊಳ್ಳಬೇಕೆಂಬ ಉಪದೇಶ..’ ಎಂದು ಗೊಣಗಿಕೊಂಡಳು ಖಾಸಗಿ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿರುವ ಪ್ರತೀಕ್ಷಾ.

> ಎಷ್ಟು ಮಕ್ಕಳನ್ನು ಮಾಡಿಕೊಳ್ಳಬೇಕು ಎಂಬ ಆಯ್ಕೆ ತಂದೆ– ತಾಯಿಗಿದ್ದರೂ ಕೂಡ ಕುಟುಂಬದವರು, ಸಂಬಂಧಿಕರು ‘ಇನ್ನೊಂದು ಮಗು ಮಾಡಿಕೊಳ್ಳಿ’ ಎಂದು ಸಲಹೆ ಕೊಡುವ ರೂಢಿ ಈಗಲೂ ಇದೆ. ಆದರೆ ತಮ್ಮ ಆರೋಗ್ಯ, ಆರ್ಥಿಕ ಸ್ಥಿತಿ ನೋಡಿಕೊಂಡು ಇನ್ನೊಂದು ಮಗು ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಿದೆ.

ಅಪರಿಚಿತರಿಂದಲೇ ಇಂತಹ ಸಲಹೆ ಬರುವಾಗ ಇನ್ನು ಕುಟುಂಬದವರಿಂದ, ಸಂಬಂಧಿಕರಿಂದ, ಪರಿಚಿತರಿಂದ ಪುಂಖಾನುಪುಂಖ ಸಲಹೆಗಳು ಬರುವುದು ಮಾಮೂಲು. ಮನೆಯಲ್ಲಿ ಒಂದು ಮಗು ಇದ್ದು ಅದು ತೀರಾ ಮೊಂಡಾಟಕ್ಕೆ ಬಿದ್ದು ಹೇಳಿದ್ದನ್ನು ಕೇಳದೇ, ತನಗೆ ಬೇಕನಿಸಿದ್ದನ್ನು ಈಗಲೇ ತಂದುಕೊಡು ಎಂದು ಹಟಮಾರಿಯಾಗಿ ವರ್ತಿಸಿದರೆ ಅಜ್ಜಿಯಂದಿರಂತೂ ‘ಇನ್ನೊಂದು ಮಗು ಮಾಡಿಕೊಂಡಿದ್ದರೆ ಈ ಕಷ್ಟ ಇರುತ್ತಿತ್ತಾ…? ಮನೆಗೆ ಇನ್ನೊಂದು ಮಗು ಬಂದ್ರೆ ದೊಡ್ಡ ಮಕ್ಕಳು ಹಟ ಮಾಡುವುದು ನಿಲ್ಲಿಸಿ ಸಭ್ಯರಾಗುತ್ತಾರೆ’ ಎಂದು ಅನುಭವಿ ಮಾತನ್ನು ಹೇಳುತ್ತಿರುತ್ತಾರೆ.

ಅದರಲ್ಲೂ ಮೊದಲನೇ ಮಗು ಗಂಡಾಗಿದ್ದರೆ ‘ಎರಡನೇ ಮಗು ಹೆಣ್ಣಾದರೆ ಚೆನ್ನಾ. ‘‘ಆರತಿಗೊಬ್ಬಳು, ಕೀರ್ತಿಗೊಬ್ಬ’’ ಅಲ್ಲವೇ?’ ಎನ್ನುವವರು ಸಾಕಷ್ಟು ಮಂದಿ. ಇನ್ನು ಮೊದಲನೆಯದು ಹೆಣ್ಣಾಗಿದ್ದರೆ ‘ಒಂದು ಗಂಡು ಮಗು ಇದ್ದರೆ ಮುಂದೆ ಆಸರೆಗಾಗುತ್ತಾನೆ’ ಎಂಬ ಹಾಗೇ ಮಾತನಾಡುತ್ತಿರುತ್ತಾರೆ. ಕೆಲವರು ಮೊದಲನೇ ಮಗು ಹೆಣ್ಣಾಗಿದ್ದರೆ ಮತ್ತೊಮ್ಮೆ ಗರ್ಭದಾರಣೆಗೆ ತುಸು ಭಯ ಪಡುವವರೂ ಇದ್ದಾರೆ. ಹೊರಗಡೆ ‘ಹೆಣ್ಣು– ಗಂಡು ಎರಡೂ ಸಮಾನ. ನನಗೇನೋ ಹೆಣ್ಣೇ ಇಷ್ಟ’ ಎಂದುಕೊಂಡರೂ ‘ಇನ್ನೊಂದು ಹೆಣ್ಣು ಮಗು ಹುಟ್ಟಿದರೆ ಏನು ಮಾಡುವುದು..?’ ಎಂದು ಒಳಗೊಳಗೇ ಹೆದರಿ ಒಂದೇ ಮಗು ಸಾಕಪ್ಪ ಎನ್ನುವವರೂ ಇದ್ದಾರೆ.

ಮಕ್ಕಳಿರಲವ್ವ ಮನೆ ತುಂಬ.. ಎಂಬ ಮಾತು ಮರೆತು ಹಲವು ದಶಕಗಳೇ ಕಳೆದಿವೆ. ಈಗ ಮನೆಯಲ್ಲಿ ಒಂದು ತಪ್ಪಿದರೆ ಎರಡು ಮಕ್ಕಳು ಇದ್ದರೆ ಅದೇ ಹೆಚ್ಚು. ಕೆಲವು ವರ್ಷಗಳಿಂದ ಒಂದೇ ಮಗು ಸಾಕು ಎಂದುಕೊಂಡವರು ಬಹಳಷ್ಟು ಮಂದಿ. ಈಗೀಗ ಮಗು ಇಲ್ಲದಿದ್ದರೂ ಪರವಾಗಿಲ್ಲ ಎಂಬ ನಿರ್ಧಾರ ತಳೆದ ದಂಪತಿಗಳಿಗೂ ಕೊರತೆಯಿಲ್ಲ. ಮಕ್ಕಳನ್ನು ಸಾಕುವುದಕ್ಕೆ ಆಸ್ತಿ ಎಷ್ಟಿದೆ…? ಎಂದು ಪ್ರಶ್ನಿಸುವವರೂ ಇದ್ದಾರೆ.

ಮೊದಲ ಸಂಭ್ರಮ

ಮೊದಲ ಬಾರಿ ಗರ್ಭ ಧರಿಸಿದಾಗ ಮಗುವಿನ ಆಗಮನಕ್ಕಾಗಿ ಮೆತ್ತಗಿನ ಹಾಸಿಗೆ, ಒಂದಷ್ಟು ಕಾಟನ್ ಸೀರೆ, ಅದಕ್ಕೆಂದೇ ಒಂದಷ್ಟು ಆಟದ ಸಾಮಾನು.. ಹೀಗೆ ಎಲ್ಲಾ ತಯಾರಿ ಮಾಡಿಕೊಳ್ಳುವವರಲ್ಲಿ ಅದೇ ಎರಡನೇ ಮಗುವಿನ ವಿಷಯಕ್ಕೆ ಬಂದಾಗ ಈ ತಯಾರಿಯಲ್ಲಿ ತುಸು ಬದಲಾವಣೆ ಕಂಡು ಬರುವುದು ಸಹಜ. ಮೊದಲನೇ ಮಗುವನ್ನು ಸಾಕಿ ಬೆಳೆಸಿದ ಒಂದು ಅನುಭವ ಕೂಡ ಜತೆಗೆ ಇರುವುದರಿಂದ ಆಮೇಲೆ ನೋಡಿಕೊಂಡರಾಯ್ತು ಎಂಬ ಭಾವವೊಂದು ಇರುತ್ತದೆ. ಹೀಗಾಗಿ ಮೊದಲನೇ ಮಗು ಮಾಡಿಕೊಳ್ಳುವಾಗ ವಹಿಸುವ ಆಸ್ಥೆ ಎರಡನೇ ಮಗು ಮಾಡಿಕೊಳ್ಳುವಾಗ ತುಸು ಕಡಿಮೆ ಎನ್ನಬಹುದು.

ಕುಟುಂಬ ಬೆಳೆಯಬೇಕು ಎಂಬ ಆಸೆಯಿಂದ ಅಥವಾ ಎರಡು ಮಕ್ಕಳು ಇದ್ದರೆ ವಯಸ್ಸಾದ ಕಾಲದಲ್ಲಿ ಒಬ್ಬರಲ್ಲದಿದ್ದರೆ ಇನ್ನೊಬ್ಬರಾದರೂ ನೋಡಿಕೊಳ್ಳುತ್ತಾರೆ ಎಂಬಿತ್ಯಾದಿ ನಿರೀಕ್ಷೆಗಳು ಕೆಲವರಲ್ಲಿ ಇರಬಹುದು. ಆದರೆ ವೃದ್ಧ ತಂದೆ–ತಾಯಿಯನ್ನು ವೃದ್ಧಾಶ್ರಮದಲ್ಲಿ ಬಿಡುವ ಮಕ್ಕಳನ್ನು ಕಂಡಾಗ ಒಂದಿದ್ದರೂ ಅಷ್ಟೆ, ಇಲ್ಲದಿದ್ದರೂ ಅಷ್ಟೆ.. ಎಂದುಕೊಂಡು ತಮ್ಮ ಆರ್ಥಿಕ ಸ್ಥಿತಿ, ಆರೋಗ್ಯದ ಬಗ್ಗೆ ಗಮನಹರಿಸುವ ಪೋಷಕರೇ ಹೆಚ್ಚು. ಇದು ಅನಿವಾರ್ಯ ಕೂಡ!

ಬದ್ಧತೆ ಮೊದಲು

ಮೊದಲನೇ ಮಗುವಿನ ಲಾಲನೆ– ಪಾಲನೆ, ನಿದ್ರೆ ಇಲ್ಲದ ರಾತ್ರಿ, ಹೆರಿಗೆ ನಂತರ ಹೆಚ್ಚಾದ ದೇಹ ತೂಕವನ್ನು ಕರಗಿಸಿಕೊಳ್ಳುವುದು, ಮಗು ಬಂದ ಮೇಲೆ ಹೆಚ್ಚಾದ ಖರ್ಚುಗಳು, ಇವೆಲ್ಲದರ ನಡುವೆ ಮತ್ತೆ ಕಚೇರಿ ಕೆಲಸಕ್ಕೆ ಹೋಗುವುದು.. ಹೀಗೆ ಉದ್ದನೆಯ ಪಟ್ಟಿ ಎದುರುಗಿರುತ್ತದೆ. ಈ ಕಾರಣದಿಂದ ಎರಡನೇ ಮಗುವನ್ನು ಮಾಡಿಕೊಳ್ಳುವುದು ತುಸು ತಡವಾಗಿರುತ್ತದೆ. ಒಂದು 5 ವರ್ಷ ಹೋಗಲಿ, ಈ ಮಗು ದೊಡ್ಡದಾಗಿರುತ್ತದೆ ಆಮೇಲೆ ನೋಡಿಕೊಂಡರಾಯ್ತು ಎಂಬ ಭಾವ. ಕೆಲವರಿಗೆ ಬೇರೆ ಇನ್ಯಾವುದೋ ಬದ್ಧತೆಗಳಿಂದ ಎರಡನೇ ಮಗುವಿನ ಬರುವಿಕೆಗೆ ಸ್ವಾಗತ ಕೋರುವುದು ತುಸು ತಡವೇ ಎನ್ನಬಹುದು!

‘ಒಂದು ಮಗು ಹೆತ್ತಿದ್ದೇವೆ. ಇನ್ನೊಂದು ಮಗು ಸದ್ಯಕಂತೂ ಬೇಡ. ಈಗಲೇ ನಿದ್ದೆ ಇಲ್ಲ. ಹೋಗಬೇಕೆಂದ ಕಡೆ ಹೋಗುವ ಹಾಗಿಲ್ಲ. ಹಟಮಾರಿ ಮಗುವಿನ ಜತೆಗೆ ಇನ್ನೊಂದು ಮಗುವನ್ನು ಹೆತ್ತು ಸಾಕುವುದು ಎಂದರೆ ತಮಾಷೆಯಾ…?’ ಎಂಬ ಮಾತು ಕೂಡ ಮೊದಲನೇ ಮಗುವಿನ ಲಾಲನೆ–ಪಾಲನೆಯಲ್ಲಿ ಸೋತು ಸುಣ್ಣವಾದ ತಾಯಂದಿರ ಬಾಯಲ್ಲಿ ಬರುತ್ತಿರುತ್ತದೆ.

ಇನ್ನು ತಾಯ್ತನದ ಹೊಸತನ, ಕಲಿಯುವುದಕ್ಕೆ ತುಂಬಾ ಇದೆ ಎಂಬ ಕುತೂಹಲ ಎರಡನೇ ಮಗುವಿನ ಸಂದರ್ಭದಲ್ಲಿ ಸ್ವಲ್ಪ ಕಡಿಮೆ ಆಗಿರುತ್ತದೆ. ಹಾಗೇ ಈಗಷ್ಟೇ ಡಯೆಟ್, ಯೋಗ ಎಂದೆಲ್ಲಾ ದಂಡಿಸಿಕೊಂಡ ದೇಹ ಕೂಡ ಸ್ವಲ್ಪ ಮಟ್ಟಿಗೆ ಫಿಟ್ ಆಗಿರುತ್ತದೆ. ಮಗು ಕೂಡ ನರ್ಸರಿ, ಎಲ್‌ಕೆಜಿ ಎಂದು ಹೆಗಲಿಗೆ ಬ್ಯಾಗ್ ಏರಿಸಿಕೊಂಡು ಹೋಗಿರುತ್ತದೆ. ಊಟ ತಿನ್ನಿಸುವುದು, ನಿದ್ರೆ ಮಾಡಿಸುವುದು ಒಂದಷ್ಟು ಕೆಲಸಗಳು ಕೂಡ ತುಸು ಕಡಿಮೆಯಾಗಿರುತ್ತವೆ. ಎರಡನೆಯ ಮಗುವೆಂದರೆ ಮತ್ತದೇ ಗರ್ಭಧಾರಣೆ, ಹೆರಿಗೆ, ಚಿಕ್ಕಮಗುವಿನ ಪಾಲನೆ, ನಿದ್ರೆಗೆಡುವುದು, ಉದ್ಯೋಗದ ಮಧ್ಯೆ ಮಗುವಿಗೆ ನೀಡಲು ಸಮಯದ ಅಭಾವ.. ಹೀಗೆ ಅದೇ ಚಕ್ರದೊಳಗೆ ಸುತ್ತಬೇಕು ಎಂದಾಗ ತುಸು ಅಂಜಿಕೆ ಇರುವುದು ಸಹಜವೆನ್ನಬಹುದೇನೋ!

❖

ಸಂಜೆಯ ಸ್ನ್ಯಾಕ್ಸ್ ಪಾವ್ ಭಾಜಿ, ವಡಾಪಾವ್

ನಳಪಾಕ

ಅಪೂರ್ವ ಡಿ. ಎಂ. ತರಿಕೆರೆ



ಪಾವ್ ಭಾಜಿ

ಬೇಕಾಗುವ ಸಾಮಗ್ರಿಗಳು: ಕ್ಯಾಪ್ಸಿಕಂ – ಮಧ್ಯಮ ಗಾತ್ರದ್ದು, ಹಸಿಮೆಣಸು – 1, ಬಟಾಣಿಕಾಳು – 4 ಚಮಚ (ನೆನೆಸಿ, ಬೇಯಿಸಿಕೊಂಡಿದ್ದು), ಆಲೂಗೆಡ್ಡೆ – 2 ಮಧ್ಯಮ ಗಾತ್ರದ್ದು (ಬೇಯಿಸಿ ಸ್ಮ್ಯಾಷ್ ಮಾಡಿದ್ದು), ಟೊಮೆಟೊ – 2 ಸಣ್ಣದಾಗಿ ಹೆಚ್ಚಿದ್ದು, ಕಸೂರಿಮೇಥಿ – 1/2 ಚಮಚ, ಉಪ್ಪು – ರುಚಿಗೆ, ಖಾರದಪುಡಿ – 1 ಚಮಚ, ಪಾವ್‌ಭಾಜಿ ಮಸಾಲ – 2 ಚಮಚ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – ಅರ್ಧ ಚಮಚ, ಬೆಣ್ಣೆ – 2 ಚಮಚ, ಎಣ್ಣೆ – 2 ಚಮಚ, ಈರುಳ್ಳಿ – ಮಧ್ಯಮ ಗಾತ್ರದ್ದು, ಕೊತ್ತಂಬರಿ ಸೊಪ್ಪು – ಸ್ವಲ್ಪ, ನೀರು.

ತಯಾರಿಸುವ ವಿಧಾನ: ಪಾತ್ರೆಯೊಂದಕ್ಕೆ ಹೆಚ್ಚಿಕೊಂಡ ಕ್ಯಾಪ್ಸಿಕಂ, ಹಸಿಮೆಣಸು ಹಾಕಿ ಒಂದೂವರೆ ನಿಮಿಷ ಬಾಡಿಸಿಕೊಂಡು ಬಟಾಣಿಕಾಳು ಸೇರಿಸಿ. ಅದಕ್ಕೆ ಸ್ಮ್ಯಾಶ್ ಮಾಡಿದ ಆಲೂಗೆಡ್ಡೆ, ಹೆಚ್ಚಿದ ಟೊಮೆಟೊ, ಸ್ವಲ್ಪ ಕಸೂರಿಮೇಥಿ, ಉಪ್ಪು ಸೇರಿಸಿ ಮಿಶ್ರಣ ಮಾಡಿಕೊಳ್ಳಬೇಕು. ಆ ಮಿಶ್ರಣಕ್ಕೆ ಖಾರದಪುಡಿ, ಪಾವ್‌ಭಾಜಿ ಮಸಾಲ, ಶುಂಠಿ–ಬೆಳ್ಳುಳ್ಳಿ ಪೇಸ್ಟ್, 2 ಚಮಚ ಬೆಣ್ಣೆ ಈ ಎಲ್ಲವನ್ನೂ ಹಾಕಿ ನೀರು ಸೇರಿಸದೇ ಸ್ಮ್ಯಾಷರ್‌ನಿಂದ ಸ್ಮ್ಯಾಷ್ ಮಾಡಿಕೊಳ್ಳಿ. ಕನಿಷ್ಠ 10 ನಿಮಿಷಗಳ ಕಾಲ ಎಲ್ಲವೂ ಚೆನ್ನಾಗಿ ಪೇಸ್ಟ್ ಆಗುವವರೆಗೂ ಸ್ಮ್ಯಾಷ್ ಮಾಡಿ ಬೇರೆ ಪಾತ್ರೆಯಲ್ಲಿ ತೆಗೆದಿಟ್ಟುಕೊಳ್ಳಬೇಕು. ಈಗ ತವಾ ಇರಿಸಿ ಬಿಸಿಯಾದ ಮೇಲೆ ಎಣ್ಣೆ ಹಾಗೂ ಬೆಣ್ಣೆ ಹಾಕಿ ಕರಗಿದ ಮೇಲೆ ಹೆಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪು, ಕಸೂರಿಮೇಥಿ, ಅರ್ಧ ಚಮಚ ಪಾವ್‌ಭಾಜಿ ಪುಡಿ, ಅರ್ಧ ಚಮಚ ಖಾರದಪುಡಿ, ಸ್ವಲ್ಪ ಉಪ್ಪು ಸೇರಿಸಿ ಈರುಳ್ಳಿ ಸ್ವಲ್ಪ ಮೆತ್ತಗಾಗುವವರೆಗೂ ಬೇಯಿಸಿಕೊಳ್ಳಬೇಕು. ಅದಕ್ಕೆ ಮೊದಲೇ ಮಾಡಿಟ್ಟುಕೊಂಡಿರುವ ಮಿಶ್ರಣ ಸೇರಿಸಿ. ಬೇಕಾದಷ್ಟು ನೀರು ಸೇರಿಸಿ ಮಿಶ್ರಣ ಮಾಡಿ, ಕುದಿಸಬೇಕು. ತವಾದ ಮೇಲೆ ಬೆಣ್ಣೆ ಹಾಕಿ ಕರಗಿದ ಮೇಲೆ ಸ್ವಲ್ಪ ಕೊತ್ತಂಬರಿ ಸೊಪ್ಪು, ಪಾವ್‌ಭಾಜಿ ಮಸಾಲ ಸೇರಿಸಿ ಅದರ ಮೇಲೆ ಕತ್ತರಿಸಿದ ಪಾವ್ ಇಟ್ಟು ಒಂದು ನಿಮಿಷ ರೋಸ್ಟ್ ಮಾಡಿಕೊಳ್ಳಬೇಕು. ಈಗ ಬಿಸಿಯಾದ ರುಚಿಯಾದ ಪಾವ್‌ಭಾಜಿ ಸವಿಯಲು ಸಿದ್ಧ.

ವಡಾಪಾವ್

ಬೇಕಾಗುವ ಸಾಮಗ್ರಿಗಳು: ಶುಂಠಿ – 2 ಇಂಚು, ಬೆಳ್ಳುಳ್ಳಿ – 10 ಎಸಳು, ಹಸಿಮೆಣಸು – 7, ಎಣ್ಣೆ – ಸ್ವಲ್ಪ, ಸಾಸಿವೆ, ಇಂಗು– ಚಿಟಿಕೆ, ಜೀರಿಗೆ – 1 ಚಮಚ, ಅರಿಸಿನ ಪುಡಿ – ಚಿಟಿಕೆ, ಆಲೂಗೆಡ್ಡೆ – ಬೇಯಿಸಿ ಸ್ಮ್ಯಾಷ್ ಮಾಡಿಕೊಂಡಿದ್ದು, ಉಪ್ಪು – ರುಚಿಗೆ ತಕ್ಕಷ್ಟು, ಕಡಲೆಹಿಟ್ಟು – 1 ಕಪ್, ಖಾರದಪುಡಿ – 1 ಚಮಚ, ನೀರು – ಅಗತ್ಯಕ್ಕೆ ತಕ್ಕಷ್ಟು, ಪುದಿನಸೊಪ್ಪು– 1 ಕಪ್, ಹುಣಸೆಹಣ್ಣು – ಸ್ವಲ್ಪ, ಪಾವ್ ಬನ್ – ಬೇಕಾದಷ್ಟು.

ತಯಾರಿಸುವ ವಿಧಾನ: ಮಿಕ್ಸಿ ಜಾರಿಗೆ ಒಂದು ಇಂಚು ಶುಂಠಿ, ಹಸಿಮೆಣಸು ಮೂರು ಹಾಗೂ 4 ರಿಂದ 5 ಎಸಳು ಬೆಳ್ಳುಳ್ಳಿ ಹಾಕಿ ತರಿಯಾಗಿ ರುಬ್ಬಿಕೊಳ್ಳಬೇಕು. ಪಾತ್ರೆಗೆ ಎಣ್ಣೆ ಹಾಕಿ ಬಿಸಿಯಾದ ಮೇಲೆ ಸಾಸಿವೆ, ಇಂಗು, ಜೀರಿಗೆ, ರುಬ್ಬಿಕೊಂಡ ಪೇಸ್ಟ್ ಹಾಕಿ 2 ನಿಮಿಷ ಮಧ್ಯಮ ಉರಿಯಲ್ಲಿ ಹುರಿದುಕೊಳ್ಳಬೇಕು. ಅದಕ್ಕೆ ಸ್ವಲ್ಪ ಅರಿಸಿನ ಪುಡಿ, ಬೇಯಿಸಿ ಸ್ಮ್ಯಾಷ್ ಮಾಡಿದ ಆಲೂಗೆಡ್ಡೆ, ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ 2 ನಿಮಿಷ ಮಿಶ್ರಣ ಮಾಡಿಕೊಳ್ಳಬೇಕು. ಅದನ್ನು ತಣ್ಣಗಾಗಲು ಬಿಡಿ. ಈಗ ಕಪ್‌ಗೆ ಕಡಲೆಹಿಟ್ಟು, ಉಪ್ಪು, ಖಾರದಪುಡಿ, ಸೋಡಾಪುಡಿ ಹಾಗೂ ಸ್ವಲ್ಪ ನೀರು ಹಾಕಿ ಬೋಂಡಹಿಟ್ಟಿನ ಹದಕ್ಕೆ ಕಲೆಸಿಕೊಳ್ಳಬೇಕು. ಈಗ ಆಲೂಗೆಡ್ಡೆ ಮಿಶ್ರಣವನ್ನು ಉಂಡೆ ಕಟ್ಟಿ ಆ ಉಂಡೆಯನ್ನು ಕಡಲೆಹಿಟ್ಟಿನಲ್ಲಿ ಅದ್ದಿ ಎಣ್ಣೆಯಲ್ಲಿ ಕರಿದುಕೊಳ್ಳಬೇಕು. ಮಿಕ್ಸಿ ಜಾರಿಗೆ 1 ಕಟ್ಟು ಪುದಿನ ಸೊಪ್ಪು, ಎರಡು ಹಸಿಮೆಣಸು, 5 ಎಸಳು ಬೆಳ್ಳುಳ್ಳಿ, 1 ಇಂಚು ಶುಂಠಿ, ಹುಣಸೆಹಣ್ಣು, ಉಪ್ಪು ಸೇರಿಸಿ ಚೆನ್ನಾಗಿ ರುಬ್ಬಿಕೊಳ್ಳಿ. ಈಗ ಬೆಣ್ಣೆಯಲ್ಲಿ ಪಾವ್ ಬಿಸಿ ಮಾಡಿಕೊಂಡು ಪಾವ್ ಒಳಗೆ ಪುದಿನ ಚಟ್ನಿ ಹಚ್ಚಿ ಕರಿದ ಆಲೂಗೆಡ್ಡೆ ಬೊಂಡ ಇರಿಸಿದರೆ ವಡಾಪಾವ್ ತಿನ್ನಲು ಸಿದ್ಧ.



ಪ್ರಜಾವಾಣಿ ನೋಡಿಯೊ

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಮೋಸ

ಬೇಕಾಗುವ ಸಾಮಗ್ರಿಗಳು: ಮೈದಾಹಿಟ್ಟು – 2 ಕಪ್, ಉಪ್ಪು – ರುಚಿಗೆ, ಅಜ್ವಾನ – ಕಾಲು ಚಮಚ, ಎಣ್ಣೆ – 1–2 ಲೀಟರ್, ನೀರು – ಅಗತ್ಯವಿದ್ದಷ್ಟು, ಹಸಿಮೆಣಸು – 4 ರಿಂದ 5, ಬೆಳ್ಳುಳ್ಳಿ – 4 ರಿಂದ 5, ಈರುಳ್ಳಿ – 1 ಸಣ್ಣದಾಗಿ ಹೆಚ್ಚಿದ್ದು, ಆಲೂಗೆಡ್ಡೆ – ಸ್ಮ್ಯಾಷ್ ಮಾಡಿದ್ದು 4 ರಿಂದ 5, ಅರಿಸಿನ ಪುಡಿ – ಚಿಟಿಕೆ, ಖಾರದಪುಡಿ – 1 ಚಮಚ, ಗರಂ ಮಸಾಲ – ಅರ್ಧ ಚಮಚ, ಆಮ್ಚೂರ್ ಪುಡಿ – ಮುಕ್ಕಾಲು ಚಮಚ, ಚಾಟ್ ಮಸಾಲ – ಮುಕ್ಕಾಲು ಚಮಚ, ನೆನೆಸಿ ಬೇಯಿಸಿದ ಬಟಾಣಿ – 4 ಚಮಚ, ಕೊತ್ತಂಬರಿ ಸೊಪ್ಪು– ಸ್ವಲ್ಪ.

ತಯಾರಿಸುವ ವಿಧಾನ: ದೊಡ್ಡ ಬೌಲ್‌ನಲ್ಲಿ ಎರಡು ಕಪ್ ಮೈದಾಹಿಟ್ಟು ಹಾಕಿ, ಅರ್ಧ ಚಮಚ ಉಪ್ಪು, ಕಾಲು ಚಮಚ ಅಜ್ವಾನ, 4 ಟೇಬಲ್ ಚಮಚ ಎಣ್ಣೆ ಹಾಗೂ ಸ್ವಲ್ಪ ನೀರು ಸೇರಿಸಿ ಹಿಟ್ಟನ್ನು ಗಟ್ಟಿಯಾಗಿ ಕಲೆಸಿಕೊಂಡು ಅರ್ಧ ಗಂಟೆ ಇಡಬೇಕು. ಪಾತ್ರೆಗೆ 2 ಚಮಚ ಎಣ್ಣೆ ಹಾಕಿ ಬಿಸಿಯಾದ ಮೇಲೆ ಹೆಚ್ಚಿದ ಹಸಿಮೆಣಸು, ಜಜ್ಜಿದ ಬೆಳ್ಳುಳ್ಳಿ, ಸಣ್ಣದಾಗಿ ಹೆಚ್ಚಿದ ಈರುಳ್ಳಿ, ಸ್ಮ್ಯಾಷ್ ಮಾಡಿಟ್ಟುಕೊಂಡ ಆಲೂಗೆಡ್ಡೆ, ಕಾಲು ಚಮಚ ಅರಿಸಿನ, ಖಾರದಪುಡಿ, – ಗರಂಮಸಾಲೆ, ಆಮ್ಚೂರ್ ಪುಡಿ, ಚಾಟ್ ಮಸಾಲ, ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಬೇಯಿಸಿದ ಬಟಾಣಿ ಕಾಳು ಸೇರಿಸಿ, ಕೊತ್ತಂಬರಿ ಸೊಪ್ಪು ಹಾಕಿ ಚೆನ್ನಾಗಿ ಮಿಶ್ರಣ ಮಾಡಿದರೆ ಸಮೋಸ ಮಸಾಲೆ ರೆಡಿ ಆಗುತ್ತದೆ. ನಂತರ ಮೊದಲೇ ನಾದಿಟ್ಟುಕೊಂಡ ಹಿಟ್ಟಿನಿಂದ ದೊಡ್ಡ ಉಂಡೆ ಮಾಡಿ ಪೂರಿ ಆಕಾರಕ್ಕೆ ಲಟ್ಟಿಸಿಕೊಳ್ಳಿ. ಒಂದು ಪೂರಿಯನ್ನು ಸಮ ಭಾಗ ಅರ್ಧ ಮಾಡಿಕೊಳ್ಳಿ, ಅದನ್ನು ಕೋನ್ ಆಕಾರಕ್ಕೆ ಮಡಿಸಿ ಮಸಾಲೆ ಸೇರಿಸಿ ಎಲ್ಲಿಯೂ ತೂತಾಗದಂತೆ ಮಡಿಸಿ ಎಣ್ಣೆಯಲ್ಲಿ ಕರಿಯಿರಿ. ಈಗ ರುಚಿಯಾದ ಸಮೋಸ ತಿನ್ನಲು ರೆಡಿ.



ಕಾಡುವ ಕಾಮವನ್ನು ನಿಭಾಯಿಸುವುದು ಹೇಗೆ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ಓದುವಾಗ ಕಾಮದ ಬಗ್ಗೆ ಯೋಚನೆ ಬಂದು ಏಕಾಗ್ರತೆ ಸಾಧ್ಯವಾಗುವುದಿಲ್ಲ. ಪರೀಕ್ಷೆಯ ಸಮಯದಲ್ಲಿ ಸುಂದರವಾದ ಹುಡುಗಿಯರನ್ನು ನೋಡಿದರೆ ಓದಲು ಮನಸ್ಸಾಗುವುದಿಲ್ಲ. ಪರಿಹಾರವೇನು?**

ಅಜಿತ್, ಊರಿನ ಹೆಸರಿಲ್ಲ.

ಕಾಮದ ಆಕರ್ಷಣೆ ವಯೋಸಹಜವಾದದ್ದು. ಆದರೆ ಕಾಮ ಯಾರನ್ನಾದರೂ ದಿನದ 24 ಗಂಟೆಯೂ ಸೆಳೆಯುವುದು ಸಾಧ್ಯವಿಲ್ಲ. ಓದುವ ವಿಷಯ ನಿಮಗೆ ಆಕರ್ಷಕ ಎನ್ನಿಸದಿದ್ದಾಗ ಕಾಮದ ಪ್ರಭಾವ ಹೆಚ್ಚಾಗುತ್ತದೆ. ನಿಮ್ಮ ಹಿಂಜರಿಕೆ, ಅಸ್ಪಷ್ಟತೆ, ಅನಿಶ್ಚಿತ ಸ್ಥಿತಿ, ಕೀಳರಿಮೆ ಮುಂತಾದವುಗಳು ಕೊಡುವ ನೋವನ್ನು, ಆತಂಕವನ್ನು ಕಾಮದ ಆಕರ್ಷಣೆಯಲ್ಲಿ ಮರೆಯಲು ಪ್ರಯತ್ನಿಸುತ್ತಿರಬಹುದೇ? ಕಾಮದ ಆಕರ್ಷಣೆಯನ್ನು ಒಪ್ಪಿಕೊಳ್ಳುತ್ತಲೇ, ಆನಂದಿಸುತ್ತಲೇ ಓದುವ ವಿಷಯಗಳನ್ನು ಆಸಕ್ತಿದಾಯಕವಾಗಿ ಮಾಡಿಕೊಳ್ಳುವುದು ಹೇಗೆ ಯೋಚಿಸಿ.

- **23ರ ಯುವಕ. ಅತಿಯಾದ ಹಸ್ತಮೈಥುನದಿಂದ ಎಡಭಾಗದ ವೆರಿಕೋಸೀಲ್ ಆಗಿದೆ. ಶಸ್ತ್ರಚಿಕಿತ್ಸೆಯಲ್ಲಿ ರಕ್ತನಾಳವನ್ನು ಕತ್ತರಿಸುತ್ತಾರೆ ಎಂದು ಕೇಳಿದ್ದೇನೆ. ಆಹಾರದ ನಿಯಂತ್ರಣದಿಂದ ಇದನ್ನು ಸರಿಪಡಿಸಬಹುದೇ? ನನಗೆ ಕಾಮದಲ್ಲಿ ಆಸಕ್ತಿಯಿದೆ. ವೆರಿಕೋಸೀಲ್‌ನಿಂದಾಗಿ ಬೇಸರವಾಗಿದೆ. ಪರಿಹಾರವೇನು?**

ಜಾಕ್, ಊರಿನ ಹೆಸರಿಲ್ಲ.

ವೆರಿಕೋಸೀಲ್‌ಗೆ ಸ್ಪಷ್ಟವಾದ ಕಾರಣಗಳೇನು ಎನ್ನುವುದು ವೈಜ್ಞಾನಿಕವಾಗಿ ತಿಳಿದಿಲ್ಲ. ಹಸ್ತಮೈಥುನದಿಂದ ಈ ತೊಂದರೆಯಾಗುತ್ತದೆ ಎನ್ನುವುದು ತಪ್ಪುಕಲ್ಪನೆ. 10-15 ಪ್ರತಿಶತ ಯುವಕರಲ್ಲಿ ಕಾಣಿಸಿಕೊಳ್ಳುವ ಇದು ನೀವು ತಿಳಿದುಕೊಂಡಷ್ಟು ಅಪಾಯಕಾರಿಯಲ್ಲ. ನೋವು ಹೆಚ್ಚಾಗಿದ್ದರೆ ವೈದ್ಯರನ್ನು ಸಂಪರ್ಕಿಸಿ. ಶಸ್ತ್ರಚಿಕಿತ್ಸೆಯಿಂದ ಲೈಂಗಿಕ ಜೀವನಕ್ಕೆ ತೊಂದರೆಯಿಲ್ಲ. ಕೆಲವೊಮ್ಮೆ ವೀರ್ಯಾಣುಗಳ ಸಂಖ್ಯೆಯು ಕಡಿಮೆಯಾಗುವುದರಿಂದ ಮಕ್ಕಳಾಗುವುದಕ್ಕೆ ಕಷ್ಟವಾಗಬಹುದು. ಇದಕ್ಕೆ ಸಾಕಷ್ಟು ಪರಿಹಾರಗಳಿವೆ. ಸೂಕ್ತ ಸಂದರ್ಭದಲ್ಲಿ ಅವುಗಳನ್ನು ಹುಡುಕಬಹುದು. ಸದ್ಯಕ್ಕೆ ಉದ್ಯೋಗ, ವೃತ್ತಿಗಳಿಂದ ಜೀವನವನ್ನು ರೂಪಿಸಿಕೊಳ್ಳುವುದರತ್ತ ಗಮನಹರಿಸಿ.

- **27ರ ಯುವಕ. ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿದ್ದೇನೆ. ಪ್ರೀತಿಸುತ್ತಿದ್ದ ಹುಡುಗಿ ಬೇರೆಯವರೊಂದಿಗೆ ಮದುವೆಯಾದಳು. ಅವಳೊಡನೆ ಒಮ್ಮೆ ದೈಹಿಕ ಸಂಪರ್ಕವಾಗಿತ್ತು. ಈಗ ಅವಳನ್ನು ನೆನಪಿಸಿಕೊಂಡು ಹಸ್ತಮೈಥುನ ಮಾಡಿಕೊಳ್ಳುತ್ತೇನೆ. ಇದು ತಪ್ಪು ಎಂದು ತಿಳಿದಿದ್ದರೂ ನಿಯಂತ್ರಿಸಲಾಗುತ್ತಿಲ್ಲ. ಇದರಿಂದ ಓದಿಗೆ ತೊಂದರೆಯಾಗುತ್ತಿದೆ. ಸಲಹೆ ನೀಡಿ.**

ಭಾಸ್ಕರ, ಊರಿನ ಹೆಸರಿಲ್ಲ.

ಹಸ್ತಮೈಥುನಕ್ಕೆ ಲೈಂಗಿಕ ಕಲ್ಪನೆಯೊಂದರ ಅಗತ್ಯವಿದೆಯಲ್ಲವೇ? ಸದ್ಯಕ್ಕೆ ನಿಮ್ಮ ಹಳೆಯ ನೆನಪನ್ನು ಅದಕ್ಕೆ ಬಳಸುತ್ತಿದ್ದೀರಿ. ಅವಳಿಗೆ ಮದುವೆಯಾಗಿರುವುದರಿಂದ ಕಲ್ಪನೆ ವಾಸ್ತವವಾಗುವುದು ಸಾಧ್ಯವಿಲ್ಲವೆಂಬ ನೋವಿನಿಂದ ಮತ್ತು ಮದುವೆಯಾದವಳನ್ನು ಕಲ್ಪಿಸಿಕೊಳ್ಳುವ ಪಾಪಪ್ರಜ್ಞೆಯಿಂದ ನರಳುತ್ತಿದ್ದೀರಿ. ನೆನಪನ್ನು ಬಲವಂತವಾಗಿ ಹೊರತಳ್ಳಲು ಹೋದಷ್ಟೂ ಪಾಪಪ್ರಜ್ಞೆ ಹೆಚ್ಚುತ್ತದೆ. ಕಲ್ಪನೆಯನ್ನು ಸಹಜವಾಗಿ ಒಪ್ಪಿಕೊಂಡು ಬಲವಂತವಾಗಿ ಹೊರತಳ್ಳುವ ಪ್ರಯತ್ನ ನಿಲ್ಲಿಸಿ. ವಾಸ್ತವಾಗಲು ಸಾಧ್ಯವಾಗದ ಕನಸುಗಳನ್ನು ಮನಸ್ಸು ನಿಧಾನವಾಗಿ ತಾನಾಗಿಯೇ ಹೊರತಳ್ಳುತ್ತದೆ. ಒತ್ತಡ ಹೇರಿದಷ್ಟೂ ಹಳೆಯದರ ಕಡೆಗೆ ಸೆಳೆಯಲ್ಪಡುವುದು ನಮ್ಮೆಲ್ಲರ ಸಹಜ ಗುಣ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in



ಬಾಲನೆರೆ ಸಮಸ್ಯೆಗೆ ಮನೆಯಲ್ಲೇ ಇದೆ ಪರಿಹಾರ

ಮನೆಮದ್ದು

ಮನಸ್ವಿ

ಹೆಣ್ಣುಮಕ್ಕಳು ತಮ್ಮ ಮುಖದ ಸೌಂದರ್ಯಕ್ಕೆ ಎಷ್ಟು ಪ್ರಾಮುಖ್ಯ ನೀಡುತ್ತಾರೋ ಕೂದಲಿನ ಅಂದಕ್ಕೂ ಅಷ್ಟೇ ಕಾಳಜಿ ವಹಿಸುವುದು ಸಹಜವೇ. ಆದರೆ ಇತ್ತೀಚೆಗೆ ಕಲುಷಿತ ನೀರು ಹಾಗೂ ವಾತಾವರಣದ ಕಾರಣದಿಂದ ಹಲವು ರೀತಿಯ ಕೂದಲಿನ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಬಾಲನೆರೆ ಅಥವಾ ಅಕಾಲಿಕವಾಗಿ ಕೂದಲು ಬಿಳಿಯಾಗುವ ಸಮಸ್ಯೆಯಂತೂ ಸಾಮಾನ್ಯ ಎಂಬಂತಾಗಿದೆ. ಇದು ಕೆಲವರಲ್ಲಿ ಅನುವಂಶೀಯವಾಗಿಯೂ ಇರಬಹುದು. ಆದರೆ ಬಾಲನೆರೆಗೆ ಪ್ರಮುಖ ಕಾರಣ ಅಸಮರ್ಪಕ ಡಯೆಟ್. ಫಾಸ್ಟ್‌ಫುಡ್, ಮೈದಾಹಿಟ್ಟಿನ ತಿನಿಸುಗಳು, ಹೆಚ್ಚು ಸಕ್ಕರೆ ಅಂಶ ಇರುವ ಪಾನೀಯ ಹಾಗೂ ತಿನಿಸುಗಳ ಅತಿಯಾದ ಸೇವನೆಯಿಂದಲೂ ಬಾಲನೆರೆ ಕಾಣಿಸಿಕೊಳ್ಳಬಹುದು.

ಬಾಲನೆರೆ ತಡೆಯಲು ಮನೆ ಮದ್ದು ಮಾಡಿಕೊಳ್ಳಬಹುದು. ಅವುಗಳನ್ನು ಸಮರ್ಪಕ ರೀತಿಯಲ್ಲಿ ಬಳಸಿದರೆ ಈ ಸಮಸ್ಯೆಗೆ ಪರಿಹಾರ ಸಿಗುವುದಲ್ಲದೇ ಕೂದಲಿನ ಅಂದವೂ ಹೆಚ್ಚುವುದು.

ನೆಲ್ಲಿಕಾಯಿ ಪುಡಿ: ಒಂದು ಕಬ್ಬಿಣದ ಪಾತ್ರೆಯಲ್ಲಿ ನೆಲ್ಲಿಕಾಯಿಪುಡಿಯನ್ನು ಬೂದಿಯಾಗುವಂತೆ ಹುರಿಯಿರಿ. ಅದಕ್ಕೆ ಅರ್ಧ ಲೀಟರ್ ತೆಂಗಿನೆಣ್ಣೆ ಸೇರಿಸಿ ಸಣ್ಣ ಉರಿಯಲ್ಲಿ ಚೆನ್ನಾಗಿ ಕುದಿಸಿ. ನಂತರ ತಣ್ಣಗಾಗಿಸಿ ಒಂದು ದಿನ ಹಾಗೇ ಇಡಿ. ಅದನ್ನು ಸೋಸಿ ಬಾಟಲಿಯಲ್ಲಿ ತುಂಬಿಟ್ಟುಕೊಂಡು ವಾರದಲ್ಲಿ ಎರಡು ಬಾರಿ ತಲೆಗೆ ಹಚ್ಚಿ ಮಸಾಜ್ ಮಾಡಿಕೊಳ್ಳಿ. ಇದರಿಂದ ಕೂದಲು ಬೇಗ ಬಿಳಿಯಾಗುವುದನ್ನು ತಪ್ಪಿಸಬಹುದು.

ಕರಿಬೇವು: ಒಂದು ಕಪ್ ಕರಿಬೇವಿನ ಎಲೆಯೊಂದಿಗೆ 2 ಚಮಚ ನೆಲ್ಲಿಕಾಯಿ ಪುಡಿ ಹಾಗೂ 2 ಚಮಚ ಬ್ರಾಹ್ಮಿ ಪುಡಿ ಸೇರಿಸಿ ಚೆನ್ನಾಗಿ ರುಬ್ಬಿಕೊಳ್ಳಿ. ಈ ಮಿಶ್ರಣವನ್ನು ಕೂದಲಿಗೆ ಹಚ್ಚಿ. ಇದು ಕೂದಲಿನ ಬುಡಕ್ಕೂ ಹಿಡಿಯುವಂತೆ ನೋಡಿಕೊಳ್ಳಿ. ಒಂದು ಗಂಟೆಯ ಕಾಲ ಹಾಗೇ ಬಿಟ್ಟು ತಲೆಸ್ನಾನ ಮಾಡಿ.

ತೆಂಗಿನೆಣ್ಣೆ: ತೆಂಗಿನೆಣ್ಣೆ ಹಾಗೂ ನಿಂಬೆರಸದ ಮಿಶ್ರಣವು ಕೂದಲನ್ನು ಕಪ್ಪಗಾಗಿಸುತ್ತದೆ. ಈ ಎರಡರ ಮಿಶ್ರಣವನ್ನು ಬಳಸುವುದರಿಂದ ಕಾಲ ಕಳೆದಂತೆ ಕೂದಲು ಕಪ್ಪಾಗಿ ಸದೃಢವಾಗುತ್ತದೆ.

ಬ್ಲ್ಯಾಕ್ ಟೀ: ಬಾಲನೆರೆ ತಡೆಯಲು ಬ್ಲ್ಯಾಕ್ ಟೀ ಒಂದು ಉತ್ತಮ ಔಷಧಿ. ಬ್ಲ್ಯಾಕ್ ಟೀ ಎಲೆಯನ್ನು ಬಿಸಿನೀರಿನಲ್ಲಿ ಎರಡು ಗಂಟೆಗಳ ಕಾಲ ನೆನೆಸಿ, ನುಣ್ಣಗೆ ರುಬ್ಬಿ ಪೇಸ್ಟ್ ತಯಾರಿಸಿಕೊಳ್ಳಿ. ಅದನ್ನು ನಿಂಬೆರಸದೊಂದಿಗೆ ಮಿಶ್ರಣ ಮಾಡಿ ಸಂಪೂರ್ಣ ಕೂದಲಿಗೆ ಹಚ್ಚಿ. 40 ನಿಮಿಷಗಳ ನಂತರ ಸ್ನಾನ ಮಾಡಿ.


ಎಳ್ಳೆಣ್ಣೆ: ಎಳ್ಳೆಣ್ಣೆಯಲ್ಲಿ ಆ್ಯಂಟಿ ಆಕ್ಸಿಡೆಂಟ್ ಹಾಗೂ ವಿಟಮಿನ್ ಅಂಶ ಅಧಿಕವಿದೆ. ಹಾಗಾಗಿ ನಿಯಮಿತವಾಗಿ ಇದನ್ನು ಬಳಸುವುದರಿಂದ ಬಾಲನೆರೆಯನ್ನು ತಪ್ಪಿಸಬಹುದು. ಎಳ್ಳೆಣ್ಣೆಯೊಂದಿಗೆ ಆಲಿವ್ ಎಣ್ಣೆ, ಸಾಸಿವೆ ಎಣ್ಣೆ ಹಾಗೂ ಬಾದಾಮಿ ಎಣ್ಣೆಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಕೂದಲಿಗೆ ಹಚ್ಚಿ ಚೆನ್ನಾಗಿ ಮಸಾಜ್ ಮಾಡಿ. ಉಗುರು ಬೆಚ್ಚಗಿನ ನೀರಿನಿಂದ ತಲೆಸ್ನಾನ ಮಾಡಿ. ಇದು ತಲೆಹೊಟ್ಟು ನಿವಾರಣೆಗೂ ಸಹಕಾರಿ.

ದಾಸವಾಳ: ದಾಸವಾಳದ ಸೊಪ್ಪು ಹಾಗೂ ಹೂಗಳನ್ನು ಒಂದು ರಾತ್ರಿ ನೀರಿನಲ್ಲಿ ನೆನೆಸಬೇಕು. ನಂತರ ಆ ನೀರಿನಿಂದ ಕೂದಲನ್ನು ತೊಳೆಯಬೇಕು. ದಾಸವಾಳದಲ್ಲಿರುವ ಪೋಷಕಾಂಶವು ಕೂದಲು ಬಿಳಿಯಾಗುವುದನ್ನು ತಪ್ಪಿಸುತ್ತದೆ. ಅಲ್ಲದೇ ಇದು ಕೂದಲು ನಯವಾಗಿಸುತ್ತದೆ.

ಬಾದಾಮಿ ಎಣ್ಣೆ: ಬಾದಾಮಿ ಎಣ್ಣೆ ಹಾಗೂ ನಿಂಬೆರಸವನ್ನು ಮಿಶ್ರಣ ಮಾಡಿ ಕೂದಲ ಬುಡಕ್ಕೆ ಹಚ್ಚಿ ಚೆನ್ನಾಗಿ ಮಸಾಜ್ ಮಾಡಿ. ಅರ್ಧ ಗಂಟೆ ಬಿಟ್ಟು ತಲೆಸ್ನಾನ ಮಾಡಿ. ಬಾದಾಮಿ ಎಣ್ಣೆಯಲ್ಲಿ ವಿಟಮಿನ್ ಇ ಅಂಶ ಅಧಿಕವಿದ್ದು ಕೂದಲಿಗೆ ಹಲವು ರೀತಿಯಲ್ಲಿ ಸಹಾಯ ಮಾಡುತ್ತದೆ.

ಸೀಗೆಕಾಯಿ: ಸೀಗೆಕಾಯಿ ಪುಡಿಗೆ ಮೊಸರು ಮಿಶ್ರಣ ಮಾಡಿ ಕೂದಲು ಹಾಗೂ ಕೂದಲಿನ ಬುಡಕ್ಕೆ ಹಚ್ಚಿ. ಅರ್ಧ ಗಂಟೆ ಬಿಟ್ಟು ತಲೆಸ್ನಾನ ಮಾಡಿ.

ಈರುಳ್ಳಿ ರಸ: ಈರುಳ್ಳಿ ರಸಕ್ಕೆ ನಿಂಬೆರಸ, ಆಲಿವ್ ಎಣ್ಣೆ ಸೇರಿಸಿ ಮಿಶ್ರಣ ಮಾಡಿ ಕೂದಲಿನ ಬುಡಕ್ಕೆ ಹಚ್ಚಿ ಚೆನ್ನಾಗಿ ಮಸಾಜ್ ಮಾಡಿ ಅರ್ಧ ಗಂಟೆ ಬಿಟ್ಟು ತಲೆಸ್ನಾನ ಮಾಡಿ. ❖



ಸುಭಾಷಿತ

ನಾನು ಬೇರೆ, ದೇಹ ಬೇರೆ ಎಂದು ತಿಳಿದುಕೊಂಡರೆ ರೋಗದ ಬಾಧೆಯು ಕಡಿಮೆಯಾಗುತ್ತದೆ.

–ಎಂ.ವಿ.ಸೀತಾರಾಮಯ್ಯ

ಆಭರಣ ಮಳಿಗೆ, ಹೋಟೆಲ್ ಉದ್ಯಮ ಉಸಾಬರಿ ಸರ್ಕಾರಕ್ಕೆ ಬೇಕೇ?

ರಾಜ್ಯ ಸರ್ಕಾರದ ಎರಡು ಇಲಾಖೆಗಳು ಇತ್ತೀಚೆಗೆ ಕೈಗೊಂಡ ಎರಡು ಪ್ರತ್ಯೇಕ ತೀರ್ಮಾನಗಳು ಉದ್ಯಮ ವಲಯದ ಗಮನವನ್ನು ಸೆಳೆದಿವೆ. ಉದ್ಯಮದ ಬೇರೆ ಬೇರೆ ವಲಯಗಳಲ್ಲಿ ಸರ್ಕಾರದ ಪಾತ್ರ ಏನಿರಬೇಕು, ಎಷ್ಟಿರಬೇಕು ಎಂಬ ಚರ್ಚೆಗೆ ಆಹಾರವಾಗಿವೆ. ವಿಶ್ವ ಪ್ರಸಿದ್ಧ ಪ್ರವಾಸಿ ತಾಣಗಳಾದ ಹಂಪಿ, ಬಾದಾಮಿ, ವಿಜಯಪುರ ಮತ್ತು ಬೇಲೂರಿನಲ್ಲಿ ಸರ್ಕಾರವು ಒಟ್ಟು ₹ 84 ಕೋಟಿ ಖರ್ಚು ಮಾಡಿ ತಾರಾ ಹೋಟೆಲ್‌ಗಳನ್ನು ನಿರ್ಮಿಸಲಿದೆ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಮಾಡಿದ ಘೋಷಣೆ ಹಾಗೂ ರಾಜ್ಯದ ಹಲವೆಡೆ ಸರ್ಕಾರವೇ ಚಿನ್ನದ ಆಭರಣ ಮಳಿಗೆಗಳನ್ನು ತೆರೆಯಲಿದೆ ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಅವರು ನೀಡಿರುವ ಹೇಳಿಕೆಯು ಚರ್ಚೆಯ ಕೇಂದ್ರದಲ್ಲಿ ಇವೆ. ಕೇಂದ್ರದಲ್ಲಿ ಇರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು 'ವಾಣಿಜ್ಯ ವಹಿವಾಟು ನಡೆಸುವುದು ಸರ್ಕಾರದ ಕೆಲಸ ಅಲ್ಲ' ಎಂಬ ತಾತ್ವಿಕ ನಿಲುವು ತಾಳಿದೆ. ಉದ್ಯಮದ ನಾಲ್ಕು ವಲಯಗಳನ್ನು ಗುರುತಿಸಿರುವ ಕೇಂದ್ರವು ಆ ನಾಲ್ಕು ವಲಯಗಳಲ್ಲಿ ಮಾತ್ರ ಸರ್ಕಾರಿ ಸ್ವಾಮ್ಯದ ಕಂಪನಿಗಳು ಕಾರ್ಯಾಚರಣೆ ನಡೆಸುವುದು, ಇನ್ನುಳಿದ ವಲಯ-ಗಳಲ್ಲಿನ ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡಬಹುದು ಎಂಬ ನಿರ್ಧಾರಕ್ಕೆ ಬಂದಿದೆ. ರಾಜ್ಯದ ಮಟ್ಟದಲ್ಲಿ ಯಾವ ವಲಯದಲ್ಲಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಅಸ್ತಿತ್ವ ಇರಬೇಕು, ಯಾವ ವಲಯವನ್ನು ಖಾಸಗಿಯವರಿಗೆ ಸಂಪೂರ್ಣವಾಗಿ ಮುಕ್ತವಾಗಿಸಬಹುದು ಎಂಬ ವಿಚಾರವಾಗಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ ಯಾವುದೇ ತಾತ್ವಿಕ ನಿಲುವು ಇರುವಂತೆ ಕಂಡುಬರುತ್ತಿಲ್ಲ. ಕೇಂದ್ರ ಸರ್ಕಾರ ತಾಳಿರುವ ನಿಲುವನ್ನೇ ರಾಜ್ಯವೂ ಅನುಕರಿಸಬೇಕು ಎಂದೇನೂ ಇಲ್ಲ. ಆದರೆ, ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ಸಂದರ್ಭದಲ್ಲಿ ಸರ್ಕಾರವು ಹೋಟೆಲ್ ಆರಂಭಿಸುವ, ಚಿನ್ನದ ಆಭರಣ ಮಳಿಗೆಗಳನ್ನು ನಡೆಸುವ ಕೆಲಸ ಮಾಡಬೇಕಿರುವ ಅನಿವಾರ್ಯ ಏನಿದೆ ಎಂಬ ಪ್ರಶ್ನೆಗೆ ಆಳುವವರ ಬಳಿ ಉತ್ತರ ಇದ್ದಂತಿಲ್ಲ.



ಈಗಿನ ಕಾಲಘಟ್ಟದಲ್ಲಿ ಸರ್ಕಾರದ ಆದ್ಯತೆಯು ಚಿನ್ನದ ಆಭರಣ ಮಳಿಗೆ ತೆರೆಯುವುದು ಅಥವಾ ಹೋಟೆಲ್ ಮುನ್ನಡೆಸುವುದು ಅಲ್ಲ

ಇಂದಿನ ಕಾಲಘಟ್ಟದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರದ ಆದ್ಯತೆಗಳು ಚಿನ್ನದ ಆಭರಣ ಅಂಗಡಿ ತೆರೆಯುವುದು ಅಥವಾ ಹೋಟೆಲ್ ಮುನ್ನಡೆಸುವುದು ಅಲ್ಲ. ಚಿನ್ನದ ವ್ಯಾಪಾರ, ಆತಿಥ್ಯ ಉದ್ಯಮ ಕ್ಷೇತ್ರಗಳಲ್ಲಿ ಖಾಸಗಿಯವರಿಂದ ಬಂಡವಾಳ ಹೂಡಿಕೆ ಆಗುವಂತೆ ಮಾಡುವುದು, ಅಲ್ಲಿ ಆರೋಗ್ಯಕರ ಸ್ಪರ್ಧೆಯ ವಾತಾವರಣ ಇರುವಂತೆ ಮಾಡಬೇಕಿರುವುದು ಸರ್ಕಾರದ ಕರ್ತವ್ಯ. ರಾಜ್ಯದ ಪ್ರವಾಸಿ ತಾಣಗಳಿಗೆ ಅತ್ಯುತ್ತಮ ಗುಣಮಟ್ಟದ ಸಾರಿಗೆ ಸಂಪರ್ಕ ಕಲ್ಪಿಸುವುದು ಸರ್ಕಾರದ ಆದ್ಯತೆಯ ಕೆಲಸ ಆಗಬೇಕು, ಪ್ರವಾಸಿ ತಾಣಗಳಲ್ಲಿ ಹೋಟೆಲ್ ನಡೆಸುವ ಕೆಲಸವನ್ನು ಖಾಸಗಿಯವರಿಗೆ ಬಿಟ್ಟುಕೊಡಬೇಕು. ಇದರಿಂದ ಖಾಸಗಿ ಬಂಡವಾಳ ಹರಿದುಬರುತ್ತದೆ, ಉದ್ಯೋಗ ಸೃಷ್ಟಿಯೂ ಆಗುತ್ತದೆ. ಸರ್ಕಾರವು ಆತಿಥ್ಯ ಉದ್ಯಮ ಬೆಳೆಯಲು ಅಗತ್ಯವಿರುವ ನೀತಿ–ನಿಯಮ ರೂಪಿಸುವ, ನಿಯಮ ಉಲ್ಲಂಘಿಸುವವರನ್ನು ಸರಿದಾರಿಗೆ ತರುವ ಕೆಲಸವನ್ನು ನೋಡಿಕೊಳ್ಳಬೇಕು. ಎಲ್ಲ ಉದ್ಯಮಿಗಳಿಗೆ ಸಮಾನ ಅವಕಾಶ ಕಲ್ಪಿಸಿ ಸರ್ಕಾರವು ನಿಯಂತ್ರಕನ ಸ್ಥಾನದಲ್ಲಿ ಕ್ರಿಯಾಶೀಲ ಆಗಿರಬೇಕೇ ವಿನಾ ತಾನೇ ಒಂದು ಉದ್ಯಮ ನಡೆಸುವ ಅಗತ್ಯವಂತೂ ಕಾಣುತ್ತಿಲ್ಲ. ಚಿನ್ನದ ಆಭರಣ ಮಳಿಗೆ ತೆರೆಯುವ ವಿಚಾರಕ್ಕೂ ಇದೇ ಮಾತು ಅನ್ವಯಿಸಬಹುದು. ಚಿನ್ನಾಭರಣಗಳನ್ನು ತಯಾರಿಸುವ ಹಾಗೂ ಮಾರಾಟ ಮಾಡುವ ಉದ್ಯಮಗಳು ರಾಜ್ಯದಲ್ಲಿಯೂ ರಾಷ್ಟ್ರ ಮಟ್ಟದಲ್ಲಿಯೂ ಹಲವು ಇವೆ. ಈ ಎಲ್ಲ ಉದ್ಯಮಗಳ ಜೊತೆ ಸರ್ಕಾರ ತಾನೂ ಒಂದು ಚಿನ್ನಾಭರಣದ ಅಂಗಡಿ ತೆರೆದು ಸ್ಪರ್ಧೆಗೆ ನಿಲ್ಲಬೇಕಾದ ಅಗತ್ಯ ಖಂಡಿತ ಇಲ್ಲ. ಈಗಾಗಲೇ ಇರುವ ಉದ್ಯಮಗಳು ಇನ್ನಷ್ಟು ಬೆಳೆಯಲು ಅಗತ್ಯ ವಾತಾವರಣ ಸೃಷ್ಟಿಸಿಕೊಟ್ಟರೆ ಉದ್ಯೋಗ ಸೃಷ್ಟಿಯನ್ನೂ ತೆರಿಗೆ ಮೂಲಕ ರಾಜ್ಯದ ಬೊಕ್ಕಸಕ್ಕೆ ವರಮಾನ ತಂದುಕೊಡುವ ಕೆಲಸವನ್ನೂ ಖಾಸಗಿ ಉದ್ಯಮಗಳೇ ಮಾಡುತ್ತವೆ. ರಾಜ್ಯ ಸರ್ಕಾರವು ಹೂಡಿಕೆ ಮಾಡಲೇಬೇಕಾದ ಕೆಲವು ಕ್ಷೇತ್ರಗಳು ಖಂಡಿತ ಇವೆ. ಆರೋಗ್ಯ, ಶಿಕ್ಷಣ, ಮೂಲಸೌಕರ್ಯ ಇವು ಅಂತಹ ಕೆಲವು ಕ್ಷೇತ್ರಗಳು. ಇಲ್ಲಿ ಹೂಡಿಕೆ ಮಾಡಬೇಕಿರುವುದು ಸರ್ಕಾರದಿಂದ ಆದ್ಯತೆಯ ಮೇರೆಗೆ ಆಗಬೇಕಿರುವ ಕೆಲಸ. ಸರ್ಕಾರವು ತಾನೇ ಉದ್ಯಮ ನಡೆಸಬೇಕಾದ ಅನಿವಾರ್ಯ ಈಗಿಲ್ಲ; ಆ ಕಾಲಘಟ್ಟ ಸಂದಿದೆ. ಉದ್ಯಮ ನಡೆಸುವ ಬದಲು ಜನರನ್ನು ಸಶಕ್ತರನ್ನಾಗಿಸುವ ಕೆಲಸಕ್ಕೆ ಸರ್ಕಾರ ಆದ್ಯತೆ ನೀಡಬೇಕು.

ದಿನದ ಟ್ವೀಟ್

ಅರಿಯಿರಿ ನಿದ್ರೆಯ ಮಹತ್ವ



ಮಾರ್ಚ್ 19, ವಿಶ್ವ ನಿದ್ರಾ ದಿನ. ಅಸಮರ್ಪಕ ನಿದ್ರೆಯಿಂದ ಕಾಡುತ್ತವೆ ಹಲವಾರು ಕಾಯಿಲೆಗಳು. ಮನುಷ್ಯನಿಗೆ ಆರೋಗ್ಯಕರ ಜೀವನಕ್ಕಾಗಿ ಆಹಾರ ಎಷ್ಟು ಮುಖ್ಯವೋ ಸುಖಕರವಾದ ನಿದ್ರೆಯೂ ಅಷ್ಟೇ ಮುಖ್ಯ. ನೆಮ್ಮದಿಯ ಜೀವನಕ್ಕೆ ಆರೋಗ್ಯಕರ ನಿದ್ರೆ ಮಾಡುವುದನ್ನು ರೂಢಿಸಿಕೊಳ್ಳಬೇಕು.
#WorldSleepDay

ಡಾ. ಜಿ.ಬಿ.ಕುಂಬಾರ್, ನಾಗರಿಕ

25 ವರ್ಷಗಳ ಹಿಂದೆ

ಬುಧವಾರ, 20-3-1996

• **ಎರಡು ಸುಗ್ರೀವಾಜ್ಞೆಗೆ ರಾಷ್ಟ್ರಪತಿ ತಡೆ**

ನವದೆಹಲಿ, ಮಾರ್ಚ್ 19 (ಪಿಟಿಐ, ಯುಎನ್‌ಐ)– ದಲಿತ ಕ್ರಿಶ್ಚಿಯನ್ನರಿಗೆ ಮೀಸಲಾತಿ ಹಾಗೂ ಮುಂಬರುವ ಲೋಕಸಭಾ ಚುನಾವಣೆಯ ಪ್ರಚಾರ ಅವಧಿಯನ್ನು ಮೊಟಕುಗೊಳಿಸುವ ಎರಡು ವಿವಾದಾತ್ಮಕ ಸುಗ್ರೀವಾಜ್ಞೆಗಳಿಗೆ ಸಹಿ ಹಾಕಲು ರಾಷ್ಟ್ರಪತಿ ಡಾ. ಶಂಕರ್ ದಯಾಳ್ ಶರ್ಮಾ ನಿರಾಕರಿಸಿದ್ದಾರೆ.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಿನ್ನೆ ರಾತ್ರಿಯಷ್ಟೇ ಈ ಎರಡು ಸುಗ್ರೀವಾಜ್ಞೆಗಳಿಗೆ ಸಹಿ ಹಾಕಲು ರಾಷ್ಟ್ರಪತಿ ಅವರಿಗೆ ಕಳುಹಿಸಲಾಗಿತ್ತು. ಕಾನೂನು ತಜ್ಞರೊಂದಿಗೆ ಈ ಸಂಬಂಧ ಚರ್ಚಿಸಿದ ನಂತರ, ಸುಗ್ರೀವಾಜ್ಞೆ ಜಾರಿಗೆ ಇದು ಸೂಕ್ತ ಸಮಯವಲ್ಲ ಎಂಬುದನ್ನು ಮನಗಂಡು ಡಾ. ಶರ್ಮಾ ಅವರು ಸುಗ್ರೀವಾಜ್ಞೆಗಳನ್ನು ತಡೆಹಿಡಿಯುವ ನಿರ್ಧಾರ ಕೈಗೊಂಡರು ಎನ್ನಲಾಗಿದೆ.

• **ಏ. 27ರಿಂದ ನಾಲ್ಕು ಹಂತಗಳಲ್ಲಿ ಲೋಕಸಭೆ ಚುನಾವಣೆ**

ನವದೆಹಲಿ, ಮಾರ್ಚ್ 19 (ಪಿಟಿಐ, ಯುಎನ್‌ಐ)– ಬಹಳ ದಿನಗಳಿಂದ ನಿರೀಕ್ಷಿಸಲಾಗಿದ್ದ ಸಾರ್ವತ್ರಿಕ ಚುನಾವಣೆ ದಿನಾಂಕಗಳನ್ನು ಚುನಾವಣೆ ಆಯೋಗ ಇಂದು ಸಂಜೆ ಪ್ರಕಟಿಸಿದೆ. ಏಪ್ರಿಲ್ 27, ಮೇ 2, 7 ಮತ್ತು 21 ಹೀಗೆ 4 ಹಂತಗಳಲ್ಲಿ ಚುನಾವಣೆ ನಡೆಯಲಿದೆ.

ತಮಿಳುನಾಡು, ಕೇರಳ, ಅಸ್ಸಾಂ, ಪಶ್ಚಿಮ ಬಂಗಾಳ, ಹರಿಯಾಣ ಮತ್ತು ಪುದುಚೇರಿಗಳಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಇದರ ಜತೆಗೆ ಕರ್ನಾಟಕದ ಚಿಕ್ಕಪೇಟೆ ಸೇರಿದಂತೆ ವಿವಿಧ ರಾಜ್ಯಗಳ 14 ವಿಧಾನಸಭಾ ಸ್ಥಾನಗಳಿಗೆ ಉಪಚುನಾವಣೆ ಕೂಡಾ ನಡೆಯಲಿದೆ. ಕರ್ನಾಟಕದ 18 ಲೋಕಸಭಾ ಕ್ಷೇತ್ರಗಳಿಗೆ ಏಪ್ರಿಲ್ 27ರಂದು ಹಾಗೂ ಉಳಿದ 10 ಕ್ಷೇತ್ರಗಳಲ್ಲಿ ಮೇ 2ರಂದು ಮತದಾನ ನಡೆಯಲಿದೆ.

50 ವರ್ಷಗಳ ಹಿಂದೆ

ಶನಿವಾರ, 20-3-1971

• **ಪಕ್ಷಾಂತರಿಗಳ ಬೆಂಬಲದಿಂದ ಸರ್ಕಾರ ರಚನೆಗೆ ಘೋರ್ಪಡೆ ವಿರೋಧ: ಚುನಾವಣೆಗೆ ಆಗ್ರಹ**

ಬೆಂಗಳೂರು, ಮಾರ್ಚ್ 19– ಈಚಿನವರೆಗೂ ಆಡಳಿತ ಕಾಂಗ್ರೆಸ್ಸಿನ ನೀತಿಗಳನ್ನು ವಿರೋಧಿಸುತ್ತಿದ್ದು, ಈಗ ರಾಜಕೀಯ ಲಾಭಕ್ಕಾಗಿ ಪಕ್ಷಾಂತರಗೊಂಡವರ ಸಹಾಯದಿಂದ ಮೈಸೂರಿನಲ್ಲಿ ಆಡಳಿತ ಕಾಂಗ್ರೆಸ್ ಸರ್ಕಾರ ರಚಿಸುವುದನ್ನು ಪಕ್ಷದ ಪ್ರಗತಿಶೀಲ ಪ್ರಮುಖರಲ್ಲಿ ಒಬ್ಬರಾದ ಶ್ರೀ ಎಂ.ವೈ.ಘೋರ್ಪಡೆ ಅವರು ತೀವ್ರವಾಗಿ ವಿರೋಧಿಸಿದ್ದಾರೆ.

ಕಾಂಗ್ರೆಸ್ ಹೈಕಮಾಂಡಿನ ಪ್ರತಿನಿಧಿ ಶ್ರೀ ಉಮಾಶಂಕರ್ ದೀಕ್ಷಿತ್ ಅವರ ಸಮಕ್ಷಮದಲ್ಲಿ ಪಕ್ಷದ ರಾಜ್ಯ ಶಾಸಕರು ಸಮಾವೇಶಗೊಂಡು, ಸರ್ಕಾರ ರಚನೆ ಮುಂತಾದ ಭಾವೀ ಕ್ರಮಗಳ ಬಗ್ಗೆ ಚರ್ಚೆ ನಡೆಸುತ್ತಿರುವ ಸಂದರ್ಭದಲ್ಲಿ, ಶ್ರೀ ಘೋರ್ಪಡೆ ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ಗಮನಾರ್ಹ.

• **ಪಕ್ಷದಲ್ಲಿ ನಿಷ್ಠೆ ವ್ಯಕ್ತಪಡಿಸಿದವರಿಗೆ ಮಾತ್ರ ಪ್ರವೇಶ**

ಬೆಂಗಳೂರು, ಮಾರ್ಚ್ 19– ಪಕ್ಷದ ಕಾರ್ಯಕ್ರಮದಲ್ಲಿ ನಿಷ್ಠೆ ವ್ಯಕ್ತಪಡಿಸದವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲವೆಂದು ಆಡಳಿತ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಎಚ್.ಸಿದ್ಧವೀರಪ್ಪ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಈಗ ಪಕ್ಷಕ್ಕೆ ಸೇರಿರುವವರೆಲ್ಲ ಸ್ವಂತ ಇಚ್ಛೆಯಿಂದ ಸೇರಿದ್ದಾರೆಂದೂ ಹೇಳಿದರು.

'ಷರತ್ತುಗಳೊಡನೆ ಹಾಗೂ ಪೂರ್ಣ ಮನಸ್ಸಿಲ್ಲದೆ ಬರುವವರನ್ನು ಸೇರಿಸಿಕೊಳ್ಳುವುದಿಲ್ಲ' ಎಂದು ವರದಿಗಾರರಿಗೆ ತಿಳಿಸಿದರು.

ನಗರ, ಪಟ್ಟಣಗಳು 'ಶಾಖ ದ್ವೀಪ'ಗಳಾಗದಿರಲು ಬೇಕು ಪರಿಸರಸ್ನೇಹಿ ಕ್ರಿಯಾಯೋಜನೆ

ತಳಮಳ ತರುವ ಬಿಸಿಲ ಝಳ



ವಿಶ್ಲೇಷಣೆ

ಡಾ. ಎಚ್.ಆರ್. ಕೃಷ್ಣಮೂರ್ತಿ

ದೇಶದ ವಿವಿಧ ಭಾಗಗಳಲ್ಲಿ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿನ ಬೇಸಿಗೆಯ ಬಿಸಿಲಿನ ಪರಿಸ್ಥಿತಿಯ ಬಗ್ಗೆ, ಭಾರತೀಯ ಹವಾಮಾನ ಇಲಾಖೆಯು ಈ ತಿಂಗಳ ಒಂದರಂದು ಮೊದಲ ಮುನ್ಸೂಚನೆಯನ್ನು ನೀಡಿದೆ. ಇದರಂತೆ, ಉತ್ತರ ಭಾರತದ ಬಹುತೇಕ ಭಾಗಗಳಲ್ಲಿ, ಅದರಲ್ಲೂ ವಿಶೇಷವಾಗಿ ದೆಹಲಿ, ಹರಿಯಾಣ ಮತ್ತು ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲಿ ಸುಡು ಬಿಸಿಲು ಕಂಡು ಬರಲಿದ್ದು, ಉಷ್ಣತೆ ವಾಡಿಕೆಗಿಂತ ಸ್ವಲ್ಪ ಹೆಚ್ಚಾಗಿ ಇರಲಿದೆ.

ಮಹಾರಾಷ್ಟ್ರ, ರಾಯಲಸೀಮ, ತಮಿಳುನಾಡು, ಕೇರಳ, ಕರ್ನಾಟಕದಲ್ಲಿ ಹಗಲಿನ ಉಷ್ಣತೆಯಲ್ಲಿ ಸ್ವಲ್ಪ ಇಳಿಕೆಯಾಗಲಿದೆ. ಆದರೆ ದೇಶದ 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜನಸಾಮಾನ್ಯರ ಬದುಕನ್ನು ನರಕಸದೃಶಗೊಳಿಸಿ, ಸಾವು ನೋವುಗಳಿಗೆ ಕಾರಣವಾಗುವ ಅತಿ ಪ್ರಖರ 'ಬಿಸಿಲ ಝಳ'ದ (ಹೀಟ್ ವೇವ್) ಬಗ್ಗೆ ಈ ಮುನ್ಸೂಚನೆ ಏನನ್ನೂ ಹೇಳುವುದಿಲ್ಲ. ಒಂದೆರಡು ತಿಂಗಳ ಮುಂಚೆಯೇ ಬಿಸಿಲ ಝಳದ ಬಗ್ಗೆ ಮುನ್ಸೂಚನೆ ನೀಡಬಲ್ಲ ವ್ಯವಸ್ಥೆ ನಮ್ಮಲ್ಲಿ ಇನ್ನೂ ಪ್ರಾಯೋಗಿಕ ಹಂತದಲ್ಲಿದೆ.

ವಿಶ್ವ ಪವನ ವಿಜ್ಞಾನ ಸಂಸ್ಥೆ ನೀಡುವ ಅರ್ಥ ವಿವರಣೆಯಂತೆ, ಯಾವುದೇ ಪ್ರದೇಶದಲ್ಲಿನ ಉಷ್ಣತೆ, ಅಲ್ಲಿನ ವಾಡಿಕೆಯ ಸರಾಸರಿ ಗರಿಷ್ಠ ಉಷ್ಣತೆಗಿಂತ 5 ಡಿಗ್ರಿ ಸೆಲ್ಸಿಯಸ್‌ಗಳಿಗಿಂತ ಹೆಚ್ಚಿದ್ದು, ಆ ಪರಿಸ್ಥಿತಿ 5 ದಿನಗಳಿಗೂ ಹೆಚ್ಚಿನ ಕಾಲ ಮುಂದುವರಿದರೆ ಅದನ್ನು ಬಿಸಿಲಿನ ಝಳವೆಂದು ಗುರುತಿಸಲಾಗುತ್ತದೆ. ನಮ್ಮ ದೇಶದಲ್ಲಿ ಹವಾಮಾನ ಇಲಾಖೆಯ ಸೂತ್ರದಂತೆ, ಉಷ್ಣತೆ 44 ಡಿಗ್ರಿ ಸೆಲ್ಸಿಯಸ್‌ಗಳಿಗಿಂತ ಒಂದಕ್ಕಿಂತ ಹೆಚ್ಚು ದಿನಗಳ ಕಾಲ ಇದ್ದರೆ ಆ ಪರಿಸ್ಥಿತಿ ಬಿಸಿಲ ಝಳವಾಗುತ್ತದೆ.

ವಾಯುಗುಣ ಬದಲಾವಣೆ ಮತ್ತು ಜಾಗತಿಕ ತಾಪಮಾನ ಹೆಚ್ಚಳದ ನೇರ ಪರಿಣಾಮಗಳಲ್ಲಿ ಬಿಸಿಲಿನ ಝಳವೂ ಒಂದು. ಉತ್ತರಪ್ರದೇಶದ ಬಹುಭಾಗ, ಪಶ್ಚಿಮ ಬಂಗಾಳ, ಜಾರ್ಖಂಡ್, ಒಡಿಶಾ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ರಾಜಸ್ಥಾನ, ಪಂಜಾಬ್, ಹರಿಯಾಣದಲ್ಲಿ ವರ್ಷದಿಂದ ವರ್ಷಕ್ಕೆ ಬಿಸಿಲಿನ ಝಳದ ಪ್ರಕರಣಗಳ ಸಂಖ್ಯೆ ಮತ್ತು ತೀಕ್ಷ್ಣತೆ ಹೆಚ್ಚುತ್ತಿದೆ. ದೆಹಲಿಯಲ್ಲಿನ ಉಷ್ಣತೆ ಸಹಿಸಲು ಅಸಾಧ್ಯವಾದ 48 ಡಿಗ್ರಿ ಸೆಲ್ಸಿಯಸ್‌ಗಳಿಗೆ ಏರಿದರೆ, ರಾಜಸ್ಥಾನದ ಚುರು ಪ್ರದೇಶದಲ್ಲಿ ಇಡೀ ದೇಶದಲ್ಲಿಯೇ ಅತಿ ಹೆಚ್ಚಿನ 50.8 ಡಿಗ್ರಿಯ ಮಟ್ಟಕ್ಕೆ ಈ ಹಿಂದೆ ಏರಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ದಾಖಲೆಗಳಂತೆ, 1992- 2016ರ ಅವಧಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಬಿಸಿಲ ಝಳದ ಪ್ರಕರಣಗಳಿಂದ 25,716 ಸಾವುಗಳು ಸಂಭವಿಸಿವೆ. ನೈಸರ್ಗಿಕ ಅವಘಡಗಳಿಂದ ಸಂಭವಿಸುವ ಸಾವುಗಳ ಸಂಖ್ಯೆಯಲ್ಲಿ ಬಿಸಿಲ ಝಳದಿಂದಾಗುವ ಸಾವುಗಳಿಗೆ ಮೂರನೆಯ ಸ್ಥಾನವಿದೆ.

ಭಾರತ ಸರ್ಕಾರದ ಪೃಥ್ವಿ ವಿಜ್ಞಾನ ಸಚಿವಾಲಯ (ಮಿನಿಸ್ಟ್ರಿ ಆಫ್ ಅರ್ತ್ ಸೈನ್ಸಸ್) ಸಿದ್ಧಪಡಿಸಿರುವ ವರದಿಯಂತೆ, 1901- 2018ರ ಅವಧಿಯಲ್ಲಿ ನಮ್ಮ ದೇಶದ ಸರಾಸರಿ ಉಷ್ಣತೆ 0.7 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ. 2018- 2100ರ ನಡುವೆ 4.4 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಏರಲಿದೆ. ಇದರಿಂದಾಗಿ ಬಿಸಿಲ ಝಳಗಳ ಸಂಖ್ಯೆ ಎರಡರಿಂದ ಮೂರು ಪಟ್ಟು ಹೆಚ್ಚಲಿದೆ. ಮೆಕೆನ್ಸಿ ಗ್ಲೋಬಲ್ ಸಂಸ್ಥೆ ಪ್ರಕಟಿಸಿರುವ ಅಧ್ಯಯನದ ಫಲಿತಾಂಶದಂತೆ 2050ರ ವೇಳೆಗೆ, ಭಾರತದ ಕೆಲವು ಭಾಗಗಳಲ್ಲಿ, ನೆರಳಿನಲ್ಲಿ ನಿಂತ ಆರೋಗ್ಯವಂತ ವ್ಯಕ್ತಿಯೂ ಐದು ಗಂಟೆಗಳಿಗಿಂತ ಹೆಚ್ಚುಕಾಲ ಬಿಸಿಲ ಝಳವನ್ನು ಸಹಿಸಲಾಗದ ಪರಿಸ್ಥಿತಿ ಉಂಟಾಗಲಿದೆ.

ಬಿಸಿಲ ಝಳದ ಅಪಾಯವನ್ನು ಎದುರಿಸಲು ವೈಜ್ಞಾನಿಕವಾದ ಕ್ರಿಯಾ ಯೋಜನೆ (ಹೀಟ್ ಆ್ಯಕ್ಷನ್ ಪ್ಲಾನ್) ಅವಶ್ಯಕ. ನಮ್ಮ ದೇಶದ ಮೊದಲ ಬಿಸಿಲ ಝಳ ಕ್ರಿಯಾ ಯೋಜನೆ ರೂಪುಗೊಂಡು, ಕಾರ್ಯಗತವಾಗಿರುವುದು ಅಹಮದಾಬಾದ್‌ನಲ್ಲಿ. 2010ರ ಬೇಸಿಗೆಯಲ್ಲಿ, ಉಷ್ಣತೆ 46.8 ಡಿಗ್ರಿ ಸೆಲ್ಸಿಯಸ್ ಮುಟ್ಟಿ, ಬಿಸಿಲ ಝಳ ತರುವ ಅತಿ ಬಳಲಿಕೆ, ಉಷ್ಣಾಘಾತ, ಸೆಡೆತ, ನಿರ್ಜಲೀಕರಣ, ಅಂಗಾಂಗ ವೈಫಲ್ಯ ಮುಂತಾದವುಗಳಿಂದ 1,344 ಜನ ಸಾವಿಗೀಡಾದರು. ಈ ಅವಘಡದ ನಂತರ ಎಚ್ಚೆತ್ತ ಅಹಮದಾಬಾದ್ ಮುನಿಸಿಪಲ್ ಕಾರ್ಪೊರೇಷನ್, ಗಾಂಧಿ ನಗರದ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್, ಅಮೆರಿಕದ ನ್ಯಾಚುರಲ್ ರಿಸೋರ್ಸಸ್ ಡಿಫೆನ್ಸ್ ಕೌನ್ಸಿಲ್ ಮತ್ತು ಕೆಲವು ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ ನಾಲ್ಕು ಅಂಶಗಳ ಕಾರ್ಯ ಯೋಜನೆಯನ್ನು ಅಭಿವೃದ್ಧಿಪಡಿಸಿತು.

ಬಿಸಿಲ ಝಳದ ಅಪಾಯಗಳ ಬಗ್ಗೆ ಮತ್ತು ಕೈಗೊಳ್ಳಬೇಕಾದ ಎಚ್ಚರಿಕೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು, ಬಿಸಿಲ ಝಳದ ಪ್ರಾರಂಭ, ಮುನ್ನಡೆಯುವ ರೀತಿ, ಅಂತ್ಯಗಳ ಬಗ್ಗೆ ಮಾಹಿತಿ ನೀಡಿ ವಿವಿಧ ಇಲಾಖೆಗಳ ನಡುವೆ ಕಾರ್ಯಾಚರಣೆಯಲ್ಲಿ ಸಮನ್ವಯ ತರುವುದು, ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ಪರಿಸ್ಥಿತಿ ನಿರ್ವಹಿಸುವ ತರಬೇತಿ ನೀಡುವುದು, ಆಸ್ಪತ್ರೆಗಳನ್ನು ಸಜ್ಜುಗೊಳಿಸುವುದು ಮತ್ತು ಕಡೆಯದಾಗಿ ಬಿಸಿಲ ಝಳದ ಅವಧಿಯಲ್ಲಿ ಕುಡಿಯುವ ನೀರು, ಆಶ್ರಯ ತಾಣಗಳು, ತುರ್ತು ನೆರವನ್ನು ವ್ಯವಸ್ಥೆಗೊಳಿಸುವುದು ಈ ಕಾರ್ಯಾಚರಣೆಯ ಮುಖ್ಯ ಅಂಶಗಳಾಗಿದ್ದವು.

ಈ ವ್ಯವಸ್ಥೆ ಜಾರಿಗೆ ಬಂದಿದ್ದು 2013ರಲ್ಲಿ. 2015ರಲ್ಲಿ ಅಹಮದಾಬಾದ್ ಮತ್ತೊಮ್ಮೆ ತೀವ್ರವಾದ ಬಿಸಿಲ ಝಳದ ಹಿಡಿತಕ್ಕೆ ಸಿಲುಕಿದಾಗ ಸತ್ತವರ ಸಂಖ್ಯೆ 20. ಇದಾದ ನಂತರ ಈ ಕ್ರಿಯಾ ಯೋಜನೆಯನ್ನು ಉನ್ನತೀಕರಿಸಲಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ಭಾರತೀಯ ಹವಾಮಾನ ಇಲಾಖೆಯು ಜೊತೆಸೇರಿ 23 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬಿಸಿಲ ಝಳ ಕ್ರಿಯಾ ಯೋಜನೆಯನ್ನು ಕಾರ್ಯಗತಗೊಳಿಸಿದ್ದರೂ ಈ ವ್ಯವಸ್ಥೆಯ ವಿಶ್ವಸನೀಯತೆ ಮತ್ತು ದಕ್ಷತೆಗೆ ಸಂಬಂಧಿಸಿದಂತೆ ನಡೆದಿರುವ ಮೌಲ್ಯಮಾಪನವು ವಿವಿಧ ಇಲಾಖೆಗಳ ನಡುವೆ ಸಂವಹನ ಮತ್ತು ಸಮನ್ವಯದ ಕೊರತೆಗಳನ್ನು ಎತ್ತಿ ತೋರಿದೆ.



ಬಿಸಿಲ ಝಳದ ಬಗ್ಗೆ ಸಾಕಷ್ಟು ಮುಂಚೆ ಮುನ್ಸೂಚನೆ ದೊರೆತರೆ ಪರಿಸ್ಥಿತಿಯನ್ನು ನಿಭಾಯಿಸಿ, ಸಾವಿನ ಪ್ರಮಾಣವನ್ನು ಇಳಿಸಬಹುದು. ಪುಣೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮಿಟಿಯೊರಾಲಜಿಯು ಭಾರತೀಯ ಹವಾಮಾನ ಇಲಾಖೆ, ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ ಮತ್ತು ನ್ಯೂಯಾರ್ಕ್ ವಿಶ್ವವಿದ್ಯಾಲಯದ ಜೊತೆಗೆ ಸೇರಿ, ಪೃಥ್ವಿ ವಿಜ್ಞಾನ ಸಚಿವಾಲಯದ ಧನಸಹಾಯದಿಂದ ಎರಡು ವಾರಗಳಷ್ಟು ಮುಂಚೆ ಮುನ್ಸೂಚನೆಯನ್ನು ನೀಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ, ಬಳಸಿ, ಪರೀಕ್ಷಿಸುತ್ತಿದೆ.

ದೇಶದ ವಾಯವ್ಯ ಭಾಗದ ರಾಜಸ್ಥಾನ, ಪಂಜಾಬ್, ಹರಿಯಾಣದಲ್ಲಿ ಈ ಮುನ್ಸೂಚನೆ ಶೇ 70ರಷ್ಟು ನಿಖರವಾಗಿದ್ದರೆ, ಆಂಧ್ರ, ತೆಲಂಗಾಣ, ಒಡಿಶಾ ರಾಜ್ಯಗಳಲ್ಲಿ ನಿಖರತೆಯ ಪ್ರಮಾಣ ಶೇ 50ರಷ್ಟು. ಈ ಮುನ್ಸೂಚನೆ ಮುಖ್ಯವಾಗಿ ಅವಲಂಬಿತವಾಗಿರುವುದು 1981-2017ರ ನಡುವಿನ ದೇಶದ ವಿವಿಧ ಭಾಗಗಳಲ್ಲಿನ ಗರಿಷ್ಠ ಉಷ್ಣತೆಯ ದತ್ತಾಂಶದ ಮೇಲೆ. ಉಷ್ಣತೆಯ ಜೊತೆಗೆ ಅತಿ ಮುಖ್ಯವಾಗಿ ಆರ್ದ್ರತೆಯನ್ನೂ ಸೇರಿಸಿ ವಿಶ್ವಸನೀಯವಾದ ಮುನ್ಸೂಚನೆಯನ್ನು ನೀಡುವ ದಿಕ್ಕಿನಲ್ಲಿ ಮೇಲಿನ ಎಲ್ಲ ಸಂಸ್ಥೆಗಳು ನಿರತವಾಗಿವೆ.

ಬಿಸಿಲಿನ ಝಳಕ್ಕೆ ಸಂಬಂಧಿಸಿದ ಎಲ್ಲ ಅಧ್ಯಯನಗಳೂ ಮುಂಬರುವ ವರ್ಷಗಳಲ್ಲಿ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಲಿದೆಯೆಂಬ ಎಚ್ಚರಿಕೆ ನೀಡಿವೆ. ಹೀಗಿದ್ದರೂ 2005ರ ರಾಷ್ಟ್ರೀಯ ವಿಪತ್ತು ನಿರ್ವಹಣಾ ಶಾಸನದಡಿಯಲ್ಲಿ, ಬಿಸಿಲ ಝಳವನ್ನು ನೈಸರ್ಗಿಕ ವಿಪತ್ತೆಂದು ಕೇಂದ್ರ ಸರ್ಕಾರ ಇದುವರೆವಿಗೂ ಪರಿಗಣಿಸಿಲ್ಲ. ಇದಾಗದ ಹೊರತು ಬಿಸಿಲ ಝಳವನ್ನು ಎದುರಿಸಿ, ಪರಿಣಾಮಗಳನ್ನು ನಿಯಂತ್ರಿಸಲು, ಮೀಸಲಿಟ್ಟ ನಿಧಿಯಿಂದ ಧನಸಹಾಯ ದೊರೆಯುವುದಿಲ್ಲ. ಇದು ಈ ಕೂಡಲೇ ಆಗಬೇಕಾದ ಕೆಲಸ.

ಇದಕ್ಕಿಂತ ಮುಖ್ಯವಾಗಿ ವಾಯುಗುಣ ಬದಲಾದಂತೆ ನಮ್ಮ ನಗರ, ಪಟ್ಟಣಗಳ ವಿನ್ಯಾಸವೂ ಬದಲಾಗಬೇಕು. ನೀರು, ನೆಲ, ಶಕ್ತಿಯ ಬಳಕೆ, ಸಂಚಾರ ವ್ಯವಸ್ಥೆ, ಕಟ್ಟಡಗಳ ವಿನ್ಯಾಸ ಮುಂತಾದವು ಪರಿಸರಸ್ನೇಹಿ ಆಗಬೇಕು. ಅಹಮದಾಬಾದ್, ಹೈದರಾಬಾದ್‌ನಲ್ಲಿ ಇದೀಗ ಪ್ರಾರಂಭವಾಗಿರುವ 'ಕೂಲ್ ರೂಫ್' ಯೋಜನೆಯಿಂದ ಕಟ್ಟಡಗಳ ಒಳಗೆ ಉಷ್ಣತೆ 3 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಕಡಿಮೆಯಾಗಿದೆ. ಇಂತಹ ನವೀನ ಪರಿಕಲ್ಪನೆಗಳ ಜೊತೆಗೆ ನಗರ, ಪಟ್ಟಣಗಳು 'ಶಾಖ ದ್ವೀಪ'ಗಳಾಗುವುದನ್ನು ತಪ್ಪಿಸುವ ಮರಗಿಡಗಳ ಹಸಿರು ಹೊದಿಕೆಗಳು, ಉದ್ಯಾನಗಳು, ನೈಸರ್ಗಿಕ ನೀರಿನಾಗರಗಳನ್ನು ನಗರ ಪರಿಸರದ ಅನ್ಯೋನ್ಯ ಭಾಗವನ್ನಾಗಿಸುವ ಹೊಸ ವಿನ್ಯಾಸಗಳು ಜಾರಿಗೆ ಬರಬೇಕಾಗಿದೆ.

ಸಂಗತ

ಕಾಡಹಾದಿ... ಮೊಗೆದಷ್ಟೂ ವಿಸ್ತಾರ

ಕಾಡೊಳಗಿನ ಪ್ರತೀ ಇಣುಕೂ ಹಿತಕರ, ಸುಂದರ, ಅಲ್ಲಿ ಏನೆಲ್ಲಾ ಕೌತುಕ!

• ಸತೀಶ್ ಜಿ.ಕೆ. ತೀರ್ಥಹಳ್ಳಿ


ಇದು ಮನುಷ್ಯಕೇಂದ್ರಿತ ಕಾಲ. ತನ್ನ ಬುಡವನ್ನಷ್ಟೇ ಧ್ಯಾನಿಸುತ್ತಾ ಕೂರುವ ಆತ ಬಯಕೆಗಳ ಬೆನ್ನುಹತ್ತಿ ಬಸವಳಿಯುತ್ತಿದ್ದಂತೆ, ಬದುಕಿನ ಭರವಸೆಗಳೂ ಬತ್ತುತ್ತಿವೆ. 'ಪ್ರಾಣಿಗಳೇ ಗುಣದಲಿ ಮೇಲು' ಎಂಬುದನ್ನರಿತ ಮನುಷ್ಯನಿಗೆ ತಾನೊಬ್ಬ ಬುದ್ಧಿಶಾಲಿ ಪಶುವಾಗಿಯೂ ಪಶುತ್ವವನ್ನು ಮೀರಬಲ್ಲ ವ್ಯಕ್ತಿತ್ವ ಹೊಂದಲು ಬೇಕಿರುವುದು ತನ್ನ ಸಹಜೀವಗಳೊಂದಿಗಿನ ಸಹಬಾಳ್ವೆ ಎಂಬುದಂತೂ ಸತ್ಯ. ತನ್ನೆಲ್ಲಾ ಕಾತರ ನಿರೀಕ್ಷೆಗಳನ್ನು ನಿಭಾಯಿಸಲಾಗದೇ ಹೊಯ್ದಾಡುವ ಮನುಷ್ಯನಿಗೆ ಸಲಹೆ-ಸಾಂತ್ವನದ ಒರತೆಯಾಗಿ, ಜೀವನಪ್ರೀತಿಯ ಗಣಿಯಾಗಿ ಕಾಣುವುದು, ಕಾಡುವುದು ವನ್ಯಜೀವಿಗಳು. ಹಾಗೆ ನೋಡಿದರೆ, ಕಾಡೊಳಗಿನ ಪ್ರತೀ ಇಣುಕೂ ಹಿತಕರ, ಸುಂದರ.

ಸ್ವಯಂಘೋಷಿತ ಶ್ರೇಷ್ಠಜೀವಿ ಮನುಷ್ಯನಿಗಿಂತ ಉಳಿದೆಲ್ಲಾ ಜೀವಿಗಳು ಭಿನ್ನ. ಅವಕ್ಕೆ ಯಾರನ್ನೂ ಮೆಚ್ಚಿಸಬೇಕಾದ, ಒಪ್ಪಿಸಬೇಕಾದ ದರ್ದು ಇಲ್ಲ. ಹಸಿವು, ನಿದ್ರೆ, ನೀರಡಿಕೆಗಳೆಲ್ಲ ಸ್ವಯಂಚಾಲಿತ. ತಮ್ಮಿಷ್ಟಕ್ಕೆ-ತಮ್ಮಷ್ಟಕ್ಕೆ ತಾವು ಬದುಕುತ್ತವೆ. ಆತ್ಮರಕ್ಷಣೆ, ಮರಿಸಾಕಣೆ- ಪೋಷಣೆಯ ವಿನಾ ಅತಿಯಾಗಿ ಏನನ್ನೂ ಬಯಸದ ನಿರುಪದ್ರವಿ ಜೀವಿಗಳವು. ತಮ್ಮ ಉಳಿವಿಗಾಗಿ ಮಾತ್ರವೇ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತವೆ. ಪರಸ್ಪರ ಪೂರಕವಾಗಿ ಬದುಕುತ್ತವೆ.

ನಮಗೆಲ್ಲಾ 'ಪ್ರಕೃತಿಯೇ ಶ್ರೇಷ್ಠ ಗುರು' ಎಂಬಂತೆ, ಶ್ರಮಸಂಸ್ಕೃತಿಯ ಯಶೋಗಾಥೆ ಹೇಳುವ ಇರುವೆ, ಮಣ್ಣುಸೇವೆಯ ಎರೆಹುಳು, ನೂಲು ನೇಯಲು ಜೀವ ತೇಯುವ ರೇಷ್ಮೆಹುಳು, ಕೂಡುಕುಟುಂಬದ ಹಿರಿಮೆ ಸಾರುವ ಜೇನ್ನೊಣಗಳು, ಸೋಲಪ್ಪದೇ ಸೆಣಸುವ ಜೇಡ, ಗುರಿತಪ್ಪದ ಚಿರತೆ, ದ್ವೇಷ ಬಿಡದ ಹಾವು-ಮುಂಗುಸಿ, ಹೊಂಚುಹಾಕುತ್ತಲೇ ಕೂರುವ ಗುಳ್ಳೆನರಿ, ಹಸಿದರೂ ಹುಲ್ಲು ತಿನ್ನದ ಹುಲಿರಾಯ, ರಾಜಗಾಂಭೀರ್ಯದಲ್ಲಿ ಹೆಜ್ಜೆಹಾಕುವ ಆನೆ... ಏನೆಲ್ಲಾ ಕೌತುಕ, ವನ್ಯಜೀವಿಯಾನ, ಕಾಡ ಹಾದಿ ಬಗೆದಷ್ಟೂ ಆಳ, ಮೊಗೆದಷ್ಟೂ ವಿಸ್ತಾರ.

ನೆಲದ ಕಂಪನವನ್ನು ಯಃಕಶ್ಚಿತ್ ಪ್ರಾಣಿಗಳು ಗ್ರಹಿಸಿ ಅನಾಹುತ ತಪ್ಪಿಸಿದ ಉದಾಹರಣೆಗಳಿವೆ. ಸಮುದ್ರವಾಸಿಯಾಗಿದ್ದೂ ಮೊಟ್ಟೆಯಿಡುವ ಕಾಲಕ್ಕೆ, ಜನ್ಮವೆತ್ತಿದ ಅಮೆಜಾನ್ ನದಿತೀರಕ್ಕೆ ವಲಸೆ ಬರುವ ಸಾಲ್ಮೋನಾ ಮೀನುಗಳಿಗೂ ತವರು ತೊರೆದು ಸಾವಿರಾರು ಮೈಲು ಸಾಗುವ ಹಕ್ಕಿಗಳಿಗೂ ಸ್ವಸ್ಥಾನಕ್ಕೆ ಮರಳುವಾಗಿನ ಹೆಜ್ಜೆ ಮೂಡದ ಹಾದಿಯ ಯಾತ್ರೆಯು ಸೋಜಿಗವೇ! ಭೂಕಾಂತವನ್ನು ಆಧರಿಸಿದ ಜೈವಿಕ ಗಡಿಯಾರದ ಪ್ರಕ್ರಿಯೆಯದು. ಬಾವಲಿಯು ನಮ್ಮ ಮಿತಿಗೆ ನಿಲುಕದ ಧ್ವನಿತರಂಗಗಳ ಪ್ರತಿಧ್ವನಿಯಿಂದ ದಾರಿಯನ್ನು ಕಂಡುಕೊಳ್ಳುವುದು ಕೂಡ ವಿಶಿಷ್ಟವೇ.

ಕಾಲಾಂತರದಿಂದಲೂ ಪ್ರಕೃತಿಯು ಮನುಷ್ಯನ ಕುತೂಹಲಕ್ಕೆ ನೀರೆರೆಯುತ್ತಲೇ ಬಂದಿದೆ. ಹಾರುವ ಯಂತ್ರಗಳಿಗೆ ಹಕ್ಕಿಪಕ್ಷಿಗಳು, ಜಲಾಂತರ್ಗಾಮಿಗಳಿಗೆ ಮೀನುಗಳು, ಮಣ್ಣುತಳ್ಳುವ ಯಂತ್ರಗಳಿಗೆಲ್ಲಾ ಆನೆಯ ಪರಾಕ್ರಮಗಳು ಸ್ಫೂರ್ತಿಯಾಗಿದ್ದು ಸುಳ್ಳಲ್ಲ. ಕಾಡಹಣ್ಣನ್ನು ತಿಂದು ಹತ್ತಾರು ಮೈಲಿವರೆಗೆ ಬೀಜ ಪಸರಿಸುವ ಮುಂಗಟ್ಟೆ ಹಕ್ಕಿಗಳ ಪರಿಸರ ಸೇವೆ ದೊಡ್ಡದೇ. ವೈರಿಗಳಿಗೆ ಬೆಚ್ಚಿಬೀಳುವಷ್ಟು ವಿದ್ಯುತ್‌ಆಘಾತ ನೀಡುವುದು ರೇ ಫಿಷ್‌ಗೆ ಸಾಧ್ಯವಿದೆ. ನೆಲದ ಉಷ್ಣಾಂಶವನ್ನೂ ವಾತಾವರಣದ ತೇವಾಂಶವನ್ನೂ ಗ್ರಹಿಸಿ ಹೊರಡುವ ಕಟ್ಟಿರುವೆ ಸಾಲು ಮಳೆಯ ಮುನ್ಸೂಚನೆಯನ್ನು ಕಾಲಾಂತರದಿಂದ ರೈತರಿಗೆ ನೀಡುತ್ತಲೇ ಬಂದಿದೆ. ಹುತ್ತಕಟ್ಟುವ ಗೆದ್ದಲಿಗೇ ನೆಲತಳದ ನೀರಸೆಲೆಯ ಜ್ಞಾನವು ಹೆಚ್ಚು ಸಿದ್ಧಿಸಿದೆ. ಹುಲ್ಲುಕಡ್ಡಿಗಳಿಂದ ಕಟ್ಟುವ ಗೀಜಗನ ಗೂಡು ಕಲಾಕಾರನಿಗೊಂದು ಪಾಠ. ಮೇಣದ ಮಿತವ್ಯಯ ಸಾಧಿಸಿ ರಚಿಸುವ ಷಟ್ಬುಜಾಕೃತಿಯ ಕೋಣೆಗಳ ಜೇನುಗೂಡು ಸಿವಿಲ್ ಎಂಜಿನಿಯರ್‌ಗೊಂದು ಸವಾಲು ಎಸೆಯುತ್ತದೆ. ರೇಷ್ಮೆಗೂಡಿನೊಳಗಿನ ಉಷ್ಣಾಂಶ ಮತ್ತು ವಾಯು ನಿಯಂತ್ರಿತ ಅಪೂರ್ವ ವ್ಯವಸ್ಥೆಯಿಂದಾಗಿ ಜಡನಿಂಫ್‌ಗೆ ಚಿಟ್ಟೆಯಾಗಿ ಹಾರುವುದು ಸಾಧ್ಯವಾಗುತ್ತದೆ. ಈ ಅಂಶವೀಗ ಕಾನ್ಪುರದ ಉನ್ನತ ತಂತ್ರಜ್ಞಾನ ಸಂಸ್ಥೆಯ ಪರಿಸರವಿಜ್ಞಾನಿಗಳನ್ನು ಹೊಸ ಸಾಧ್ಯತೆಗಳ ಹುಡುಕಾಟಕ್ಕೆ ತುದಿಗಾಲ ಮೇಲೆ ಕೂರಿಸಿದೆ.



ಕೊಳೆಯುವಿಕೆಗೆ ಕಾರಣವಾಗುವ ಸೂಕ್ಷ್ಮಾಣುಗಳಿಂದಲೇ ಜೀವಪದರದಲ್ಲಿ ಪೋಷಕಾಂಶದ ಚಕ್ರೀಯ ಚಲನೆ ಸಾಧ್ಯವಾಗುವುದು. ಕೊಳೆಯುವಿಕೆಯು ಹೊಸ ಜೀವಪದರದ ಮೊಳೆಯುವಿಕೆಯ ಸಂಕೇತವೂ ಹೌದು.

ಆಹಾರ ಸರಪಳಿಯಲ್ಲಿ ಹಸಿರನ್ನು ತಿನ್ನುವ ಸಸ್ಯಾಹಾರಿಗಳು, ಸಸ್ಯಾಹಾರಿಗಳನ್ನು ತಿನ್ನುವ ಮಾಂಸಾಹಾರಿಗಳು ಪ್ರಕೃತಿ ನಿಯಮವನ್ನು ಪಾಲಿಸುತ್ತವಷ್ಟೇ. ಮಾಂಸಾಹಾರಿಗಳಿಲ್ಲದಿದ್ದಲ್ಲಿ ಸಸ್ಯಾಹಾರಿಗಳ ಸಂಖ್ಯೆ ಮಿತಿಮೀರಿ, ಸಸ್ಯಪ್ರಭೇದದ ಸಂಖ್ಯೆ-ಸಾಂದ್ರತೆಯು ಕ್ಷೀಣಿಸುತ್ತದೆ. ಒಂದನ್ನು ಕ್ರೂರಿ ಮತ್ತೊಂದನ್ನು ಸಾಧುಪ್ರಾಣಿ ಎಂಬಂತೆ ಕಲ್ಪಿಸುವುದು ಮನುಷ್ಯನ ಮನೋಮಿತಿಯಷ್ಟೇ.

ಮನುಷ್ಯ ಪ್ರಕೃತಿಯ ಕೂಸು. ಆತನಿಗೀಗ ಪರಿಸರಕ್ಕೆ ಹತ್ತಿರವಾಗಿ, ನೆಲದ ಬಾಂಧವ್ಯವನ್ನು ವೃದ್ಧಿಸಿಕೊಳ್ಳುವುದು ಮುಖ್ಯವಾಗಬೇಕು. ಎಲ್ಲ ಪ್ರದೇಶಗಳನ್ನೂ ಒಂದೇ ಅಳತೆಗೋಲಲ್ಲಿ ಪರಿಗಣಿಸದೆ ಆಯಾ ಪ್ರದೇಶಗಳು ಬೇಡುವ ಮತ್ತು ಕಾರ್ಯಸಾಧುವುಳ್ಳ ಸುಸ್ಥಿರ ಅಭಿವೃದ್ಧಿ ಯೋಜನೆಗಳಿಗೆ ಆದ್ಯತೆ ನೀಡಬೇಕಾದ್ದು ನಿಜಕ್ಕೂ ಅಗತ್ಯ. ಸಾಧ್ಯವಾದಷ್ಟೂ ಮನುಷ್ಯಕೇಂದ್ರಿತ ಯೋಜನೆಗಳನ್ನು ಜೀವಕೇಂದ್ರಿತ ಯೋಜನೆಗಳನ್ನಾಗಿ ಮಾರ್ಪಡಿಸಿಕೊಂಡರೆ ಮನುಷ್ಯನಿಗಷ್ಟೇ ಅಲ್ಲದೆ ಬಾಳ್ವೆಯ ಭೂಮಿಗದು ಕ್ಷೇಮ. ವನ್ಯಜೀವಿಗಳ ಮೌಲ್ಯವನ್ನರಿತು ಒಳಗೊಳ್ಳುವಿಕೆಯಲ್ಲಿ ಬೆಳೆಯುತ್ತಾ ಸಾಗುವುದು ಅವನ ಹೊಣೆಗಾರಿಕೆ. ಆತ ತನ್ನ ನಡಿಗೆಯನ್ನು ಸಹಜೀವಿಗಳೊಂದಿಗೆ ಪ್ರೀತಿ, ಗೌರವ, ಕಾಳಜಿಯೆಡೆಗೆ ವಿಸ್ತರಿಸಿಕೊಳ್ಳುವಂತಾಗಲಿ. ಅಂದಹಾಗೆ ನಾಳೆ (ಮಾರ್ಚ್ 21) ಅಂತರರಾಷ್ಟ್ರೀಯ ಅರಣ್ಯ ದಿನ.

ಚುರುಮುರಿ



ಸಿಹಿ ಸುದ್ದಿ

• ಕೆ.ವಿ.ರಾಜಲಕ್ಷ್ಮಿ

ಅಡುಗೆಮನೆಯಿಂದ ಹೊರಬರುತ್ತಿದ್ದ ತುಪ್ಪದ ಪರಿಮಳ... ಕಣ್ಣು ಪೇಪರಿನಲ್ಲಿ ಅಡ್ಡಾಡುತ್ತಿದ್ದರೂ ನಾಸಿಕ ಶಾರ್ಪ್ ಆಗಿತ್ತು. 'ಸಿಹಿ ತಿಂಡಿಯ ತಯಾರಿ ನಡೆದಿದೆ ಅನ್ನುತ್ತೆ? ಏನು ವಿಶೇಷವೋ?' ಎಂದು ಕೇಳಬೇಕಾದವರಿಗೆ ಕೇಳುವಂತೆ ಕೊಂಚ ದನಿಯೇರಿಸಿದೆ.

'ಪೇಪರ್ನಲ್ಲೇ ಮುಳುಗಿರ್ತೀಯಾ... ಅಷ್ಟೂ ಗೊತ್ತಾಗಲಿಲ್ವೇನಪ್ಪಾ?' ಪುಟ್ಟಿ ಕಿಸಕ್ಕನೆ ನಕ್ಕಳು.

'45 ವರ್ಷ ಮೇಲ್ಪಟ್ಟವರಿಗೆ ಲಸಿಕೆ? ಸೀನಿಯರ್ ಸಿಟಿಜನ್ ಅಂತ ಹೇಳ್ಕೊಳ್ಳೋಕ್ಕೆ ಹಿಂಜರಿಯೋವ್ರು ಈ ಅವಕಾಶ ಉಪಯೋಗಿಸಿಕೊಳ್ಳಬಹುದು. ಉದಾಹರಣೆಗೆ, ನಿಮ್ಮ ಸಮಾಜದ ಸರೋಜ' ನನ್ನವಳ ಕಾಲೆಳೆದೆ.

'ಖಾಲಿ ಕುಳಿತಿರೋ ನಿಮಗೆ ಈ ತುಟ್ಟಿ ಕಾಲದಲ್ಲೂ ಟೈಮ್ ಟೈಮ್‌ಗೆ ಮಾಡಿ ಹಾಕ್ತೀವಿ ನೋಡಿ?' ಗುರಾಯಿಸಿದಳು.

'ಕೆಲಸ ಮಾಡೋಕ್ಕೆ ನಾವು ರೆಡಿ. ಆದರೆ ಅರವತ್ತಾಯ್ತು ಅಂತ ಅಟ್ಟಿದ್ರಲ್ಲ?' ಹಲ್ಕಿರಿದೆ. ಸಮಯಕ್ಕೆ ಸರಿಯಾಗಿ ಕಂಠಿ ಜಾಯಿನ್ ಆದ.

'ಇಕೋ, ತುಪ್ಪದ ಮೈಸೂರು ಪಾಕು' ಜಿಡ್ಡು ಒಸರುತ್ತಿದ್ದ ಪೇಪರ್ ಬಾಕ್ಸ್ ಕೊಟ್ಟು 'ಹಳೆ ಕಾರು ಗುಜರಿಗೆ ಹಾಕಿ, ಹೊಸದನ್ನು ಕೊಳ್ಳಿ ಸಬ್ಸಿಡಿ ಇದೆ ಅಂತ ಬಾಸ್‌ಗೆ ಸಜೆಶನ್ ಕೊಟ್ಟೆ. ಅವರ ಅತ್ತೆಗೆ ಲಸಿಕೆ ಹಾಕಿಸೋಕ್ಕೆ ನಾನೇ ಖುದ್ದು ನಿಂತೆ. ಬಾಸ್, ಜೊತೆಗೆ ಮೇಡಮ್ಮೂ ಖುಷ್. ಸಂಬಳದಲ್ಲಿ ಮಾಮೂಲಿ ಇನ್‌ಕ್ರಿಮೆಂಟ್ ಜೊತೆಗೆ ಐದು ಪರ್ಸೆಂಟ್ ಎಕ್ಸ್‌ಟ್ರಾ ಹೈಕು, ಅದಕ್ಕೆ ಈ ಸಿಹಿ' ಬೀಗಿದ.

'ನಮ್ಮ ಮನೇಲಿ ಇವತ್ತು ಸಜ್ಜಿಗೆ' ನಾನೆಂದೆ.

'ಅಲ್ವೇ ಮತ್ತೆ? ಸರ್ಕಾರೀ ಚಿನ್ನದ ಮಳಿಗೆ ಅಂದರೆ ನಮಗೂ ವಿಶ್ವಾಸ. ಇನ್ನೊಂದು ಆಕರ್ಷಣೆ ಎಂದರೆ ಉಡುಗೊರೆಯಾಗಿ ಕೊಡಲು ಗಂಡಭೇರುಂಡ ನಾಣ್ಯಗಳು' ಅತ್ತೆಯ ರಿಯಾಕ್ಷನ್.

'ಆ ಉಡುಗೊರೆ ಕೊಡೋ ಸಮಾರಂಭದಲ್ಲಿ ಒಂದು ಜಾಗ ಗಿಟ್ಟಿಸಿದರಾಯ್ತು' ಕುಳಿತಲ್ಲಿಯೇ ಕನಸು ಕಂಡ ಕಂಠಿ.

ಹುರಿದ ದ್ರಾಕ್ಷಿ, ಗೋಡಂಬಿಗಳ ಅಲಂಕಾರದೊಂದಿಗೆ ಹದವಾದ ಸಜ್ಜಿಗೆ ಕಂಠಿಯ ಪಾಲಾಗಿತ್ತು, ನನಗಿಂತ ಮೊದಲೇ.

ವಾಚಕರ ವಾಣಿ

ಆಹಾರ ಪೋಲು ತಡೆ ಎಲ್ಲರ ಹೊಣೆ

2019ರಲ್ಲಿ ವಿಶ್ವದಲ್ಲಿ ಸುಮಾರು 93.1 ಕೋಟಿ ಟನ್‌ಗಳಷ್ಟು ಆಹಾರ ಪೋಲಾಗಿದೆ ಎಂಬ ಸುದ್ದಿ (ಪ್ರ.ವಾ., ಮಾರ್ಚ್ 5) ಓದಿ, ನಾಗರಿಕ ಸಮಾಜ ಎತ್ತ ಸಾಗುತ್ತಿದೆ ಎಂದು ಕಳವಳವಾಯಿತು. ಆಹಾರವನ್ನು ಹಸಿವಿಗಾಗಿ ಸೇವಿಸುವುದರ ವಿನಾ ಬೇರೆ ಯಾವುದೇ ರೂಪದಲ್ಲಿ ವ್ಯರ್ಥವಾಗದಂತೆ ಜಾಗ್ರತೆ ವಹಿಸುವುದು ಪ್ರತೀ ನಾಗರಿಕನ ಕರ್ತವ್ಯ. ಆದರೆ ಮನೆಗಳಲ್ಲಿ, ಸಭೆ ಸಮಾರಂಭಗಳಲ್ಲಿ ಆಹಾರವನ್ನು ವ್ಯರ್ಥ ಮಾಡುವುದು ಮಾತ್ರ ಎಗ್ಗಿಲ್ಲದೇ ಸಾಗಿದೆ. ಟಿ.ವಿಯ ರಿಯಾಲಿಟಿ ಷೋವೊಂದರಲ್ಲಿ ಇತ್ತೀಚೆಗೆ ಮೊಟ್ಟೆಗಳನ್ನು ಎಸೆದು ಪೋಲು ಮಾಡುತ್ತಿದ್ದುದನ್ನು ಕಂಡಾಗ, ಆಹಾರದ ಕುರಿತು ಕಾಳಜಿಯಿರುವವರ ಕರುಳು ಚುರುಕ್ ಅಂದಿರದೇ ಇರಲಾರದು.

ಆಹಾರದ ಕುರಿತು ಅರಿವು ಮೂಡಿಸಬೇಕಾಗಿರುವ ಮಾಧ್ಯಮಗಳು ಆಹಾರ ಪೋಲು ಮಾಡುವ ಚಟುವಟಿಕೆಗಳನ್ನು ಮನರಂಜನೆಗಾಗಿ ತೋರಿಸುವುದು ಎಷ್ಟು ಸರಿ? ಜನರ ಜೀವ ಉಳಿಸುವುದಕ್ಕಾಗಿ ಇರುವ ಆಹಾರವನ್ನು ವ್ಯರ್ಥ ಮಾಡಬಾರದೆಂಬ ಅರಿವು ಎಲ್ಲರಲ್ಲೂ ಮೂಡಬೇಕು.

ಸಮುದ್ರವಳ್ಳಿ ವಾಸು, ಹಾಸನ

ನಾಡಗೀತೆ ಮೊಟಕು ಪ್ರಸ್ತಾವ: ಆತುರ ಸಲ್ಲದು

ನಾಡಗೀತೆಯನ್ನು ಮೊಟಕುಗೊಳಿಸಿ ಎರಡೂವರೆ ನಿಮಿಷಕ್ಕೆ ಇಳಿಸುವ ಪ್ರಸ್ತಾವ ಇನ್ನೊಮ್ಮೆ ಮೇಲ್ಮೆಗೆ ಬಂದಿದೆ ಮತ್ತು ಇದನ್ನು ಆದ್ಯತೆಯ ಮೇಲೆ ಮಾಡುವ ಆತುರ ಕಾಣುತ್ತಿದೆ. ಮೂರು ನಿಮಿಷ ನಿಂತು ನಾಡಗೀತೆ ಹಾಡಲು ಕೆಲವರಿಗೆ ಅನನುಕೂಲವಾಗುತ್ತದೆ ಎನ್ನುವ ಸಮಜಾಯಿಷಿ ನೀಡಲಾಗುತ್ತಿದೆ. ಸರ್ಕಾರ ನೀಡುತ್ತಿರುವ ಈ ಕಾರಣವನ್ನು ಕೇಳಿ, ಮೂರು ನಿಮಿಷಕಾಲ ನಿಂತು ನಾಡಗೀತೆ ಹಾಡಲಾಗದವರು ಕನ್ನಡ ನಾಡು- ನುಡಿಯನ್ನು ಹೇಗೆ ಉಳಿಸಬಹುದು ಮತ್ತು ಬೆಳೆಸಬಹುದು ಎಂದು ಪ್ರಜ್ಞಾವಂತ ಕನ್ನಡಿಗರು ಪ್ರಶ್ನಿಸುತ್ತಿದ್ದಾರೆ. ನಾಡಗೀತೆಯನ್ನು ದಿನಾಲೂ ಹಾಡುವುದಿಲ್ಲ. ವರ್ಷದಲ್ಲಿ ಒಂದೆರಡು ಬಾರಿ ಈ ಅವಕಾಶ ಬರುತ್ತದೆ. ಮೂರು ನಿಮಿಷದ ಹಾಡು ಭಾರವಾಗುತ್ತಿರುವುದು ತೀರಾ ಆಶ್ಚರ್ಯ.

ಅಕಸ್ಮಾತ್ ನಾಡಗೀತೆಯನ್ನು ಮೊಟಕುಗೊಳಿಸುವುದಿದ್ದರೆ, ಯಾವುದೇ ಭಾಗಕ್ಕೆ ಕತ್ತರಿ ಹಾಕಿದರೂ ಅದು ಇನ್ನೊಂದು ವಿವಾದವನ್ನು ಸೃಷ್ಟಿಸುವುದರಲ್ಲಿ ಸಂದೇಹವಿಲ್ಲ. ಇದು ಒಂದು ರೀತಿಯಲ್ಲಿ ಮಲಗಿದ ಹುಲಿಯ ಬಾಲವನ್ನು ಅಲುಗಾಡಿಸಿದಂತೆ ಎನ್ನಬಹುದು.

ರಮಾನಂದ ಶರ್ಮಾ, ಬೆಂಗಳೂರು

ಮಧ್ಯರಾತ್ರಿ ಮದುವೆಗೆ ಬೇಕಿದೆ ಬ್ರೇಕ್

ಮದುವೆ ಮಾಡುವುದೆಂದರೆ ಅಳೆದೂತೂಗಿ ಮುಹೂರ್ತ ನಿರ್ಧರಿಸಲಾಗುತ್ತದೆ. ಹೆಚ್ಚಿನ ಮದುವೆಗಳು ಹಗಲಿನಲ್ಲಿ ನಡೆಯುತ್ತವೆ. ಆದರೆ ಉತ್ತರ ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ಮಧ್ಯರಾತ್ರಿ ಅಥವಾ ಬೆಳಗಿನ ಜಾವ ಕತ್ತಲಲ್ಲಿ ವಧುವಿನ ಕೊರಳಿಗೆ ತಾಳಿ ಕಟ್ಟಿ ಸಾಗಹಾಕುವ ಕೆಲಸ ನಡೆಯುತ್ತಿದೆ. ಕಾರಣ ಇಷ್ಟೆ, ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಈ ಭಾಗದಲ್ಲಿ ಬಹಳಷ್ಟು ಜಾತ್ರೆಗಳಲ್ಲಿ ಸಾಮೂಹಿಕ ಮದುವೆಗಳನ್ನು ನಡೆಸಲಾಗುತ್ತದೆ. ಅಪ್ರಾಪ್ತ ವಯಸ್ಕರ ಮದುವೆ ತಡೆಗಟ್ಟುವ ದಿಸೆಯಲ್ಲಿ ನಿರ್ಬಂಧಗಳಿವೆ. ಸರ್ಕಾರ ಚಾಪೆ ಕೆಳಗೆ ನುಸುಳಿದರೆ ರಂಗೋಲಿ ಕೆಳಗೆ ನುಸುಳುವ ಕೆಲ ಪಾಲಕರು, ಬೆಳಗಾಗುವುದರೊಳಗೆ ಅಪ್ರಾಪ್ತ ವಯಸ್ಕ ಮಕ್ಕಳ 'ಮದುವೆ ಶಾಸ್ತ್ರ' ಮುಗಿಸುತ್ತಿರುವ ಪ್ರಕರಣಗಳಿಗೂ ಕೊರತೆ ಇಲ್ಲ.

ಹಣ ಪಡೆದು ತಾಳಿ, ವಧುವರರ ಬಟ್ಟೆಗಳನ್ನು ಮನೆಗೆ ಕಳಿಸಿಕೊಡುವ ಜಾತ್ರಾ ಸಮಿತಿಗಳ ಪರೋಕ್ಷ ಸಮ್ಮತಿ ಇರುವುದನ್ನೂ ಇಲ್ಲಿ ತಳ್ಳಿಹಾಕುವಂತಿಲ್ಲ. ಗುರು ಹಿರಿಯರ ಸಾನ್ನಿಧ್ಯ, ಬಂಧು ಬಾಂಧವರ ಸಮ್ಮುಖದಲ್ಲಿ ಅವರ ಆಶೀರ್ವಾದದೊಂದಿಗೆ ದಾಂಪತ್ಯ ಬದುಕಿಗೆ ಕಾಲಿಡಬೇಕಾದ ಮಕ್ಕಳ ಕತ್ತಿಗೆ ಕತ್ತಲಲ್ಲಿ ತಾಳಿ ಕಟ್ಟಿ, ಅವರ ವೈಯಕ್ತಿಕ ಬದುಕನ್ನು ಕತ್ತಲೆಗೆ ದೂಡಲಾಗುತ್ತಿದೆ. ಇಂತಹ ಕೃತ್ಯಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲು ಅಧಿಕಾರಿಗಳು ಮುಂದಾಗಬೇಕಿದೆ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಅನ್ಯೋನ್ಯ ಬಾಳ್ವೆಗೆ ದಾರಿಯಾಗಲಿ

'ಸಹಬಾಳ್ವೆಗೆ ಯಾವುದು ಮಾನದಂಡ?' ಎಂದು ಜ್ಯೋತಿ ಭಾಸ್ಕರ್ ಅವರು ಪ್ರಶ್ನಿಸುತ್ತ, ಅಂತರ್ಜಾತಿ ವಿವಾಹ ತಡೆಗೆ ಪೇಜಾವರ ಮಠಾಧೀಶರು ಪ್ರತಿಪಾದಿಸಿರುವ ಮಾತೃ ಮಂಡಳಿ ಸಲಹೆಯನ್ನು ಆಕ್ಷೇಪಿಸಿದ್ದಾರೆ (ಪ್ರ.ವಾ., ಮಾರ್ಚ್ 19). ವಿವಾಹವು ಜಾತಿ, ಧರ್ಮಗಳಿಗೆ ಸಂಬಂಧಿಸಿದ್ದಲ್ಲ ಮತ್ತು ವೈವಾಹಿಕ ಬದುಕಿನ ಗುಣಲಕ್ಷಣಗಳು ಜಾತಿ, ಧರ್ಮ ಇತ್ಯಾದಿಗಳ ಮೇಲೆ ಅವಲಂಬಿತವಲ್ಲ ಎನ್ನುವ ಅವರ ಮಾತು ಒಪ್ಪುವಂಥದ್ದು. ಮದುವೆಯ ವಿಷಯದಲ್ಲಿ ಈಗಿನ ತರುಣ ಪೀಳಿಗೆಗೂ ಇಪ್ಪತ್ತೈದು- ಮೂವತ್ತು ವರ್ಷಗಳ ಹಿಂದಿನ ಇದೇ ವಯೋಮಾನದ ತರುಣ ಪೀಳಿಗೆಗೂ ಮದುವೆಯ ಪರಿಕಲ್ಪನೆ, ಆಸೆ, ನಿರೀಕ್ಷೆ, ಆಯ್ಕೆಯ ಸ್ವಾತಂತ್ರ್ಯದ ವಿಷಯಗಳಲ್ಲಿ ಅಂತರವಿದೆ ಎನ್ನುವುದನ್ನು ಗಮನಿಸಿದರೂ ಈಗಲೂ ಮದುವೆಗಳಲ್ಲಿ ಬಹಳ ಹೆಚ್ಚಿನವು ಜಾತಿ, ಧರ್ಮ, ಕುಲ, ಜಾತಕ, ಹಿರಿಯರ ಅಪೇಕ್ಷೆ ಇವನ್ನು ಲಕ್ಷಿಸಿಯೇ ನಡೆಯುತ್ತಿವೆ ಎನ್ನುವುದನ್ನು ಮರೆಯುವಂತಿಲ್ಲ! ಆದ್ದರಿಂದ, 'ತಮ್ಮತಮ್ಮೊಳಗೆ' ನಡೆದ ಮದುವೆಗಳಲ್ಲಿ ಸಕಾರಣವಾಗಿಯೋ ಅಲ್ಲದೆಯೋ ಮುರಿದುಬಿದ್ದವು ಎಷ್ಟು ಎಂಬ ಪ್ರಶ್ನೆ ಮೂಡುವಂತೆಯೇ, ಪ್ರೀತಿ, ಪ್ರೇಮ, ಆಯ್ಕೆಯ ಸ್ವಾತಂತ್ರ್ಯ ಎಂದುಕೊಂಡು ತಂದೆತಾಯಿ ಅಥವಾ ಬಂಧುವರ್ಗವನ್ನು ಕೇಳದೆಯೇ ಅಥವಾ ಕೇಳಿಯೂ ಅಲಕ್ಷಿಸಿ ಮದುವೆಯಾದ ನೂರಕ್ಕೆ ನೂರರಷ್ಟು ಜೋಡಿಗಳು ಸಹಬಾಳ್ವೆಯಿಂದಲೇ ಬದುಕು ಸಾಗಿಸುತ್ತಿವೆ ಎನ್ನುವುದೂ ಸತ್ಯವಿರಲಾರದು.

ಅಷ್ಟಕ್ಕೂ, ಹಿರಿಯರು ಮುಂದೆ ನಿಂತು ಮದುವೆ ನಿಶ್ಚಯಿಸುವುದು ತಮ್ಮ ಮಕ್ಕಳ ವೈವಾಹಿಕ ಜೀವನ ಚೆನ್ನಾಗಿರಬೇಕು ಎಂಬ ಹಾರೈಕೆಯಿಂದಲೇ ಅಲ್ಲವೇ? ಈಗಂತೂ ಗಂಡು ಹೆಣ್ಣಿನ ಒಪ್ಪಿಗೆಯೇ ಅತಿ ಮುಖ್ಯವಾದುದು ಎನ್ನುವುದೇ ಹಿರಿಯರ ವಿಚಾರ ಕೂಡ. ಒಟ್ಟಾರೆ ಹೇಳಬಹುದಾದ ಮಾತೆಂದರೆ, ಗಂಡು ಮತ್ತು ಹೆಣ್ಣು ಗಂಡ-ಹೆಂಡಿರಾಗಿ ಅನ್ಯೋನ್ಯವಾಗಿ ಬಾಳ್ವೆ ಮಾಡುವುದೇ ಮುಖ್ಯ. ಒಟ್ಟಿನಲ್ಲಿ ಗಂಡು- ಹೆಣ್ಣು ತಾವೇ ತೆಗೆದುಕೊಳ್ಳುವ ನಿರ್ಧಾರ ಎರಡೂ ಕಡೆಯ ಹಿರಿಯರಿಗೆ, ಬಂಧುಬಾಂಧವರಿಗೆ ಅಸಮ್ಮತವೆನಿಸಿದರೂ ಅವರನ್ನು ಕಡೆಗಣಿಸದೆ, ಪ್ರೀತಿ ಗೌರವಗಳಿಂದಲೇ ನೋಡಿ ನಡೆದುಕೊಂಡರೆ ಆಗ ಅಂಥ ಮದುವೆ ಸಾರ್ಥಕವೆನಿಸುತ್ತದೆ.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರೈತರ ಬೆವರಿಗೆ ಸಂಘದ ಬಲ

ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸುವುದು, ವಿವಿಧ ಇಲಾಖೆಗಳಿಂದ ರೈತರಿಗೆ ಸಿಗಬೇಕಾದ ಸೌಲಭ್ಯಗಳನ್ನು ಅಡೆತಡೆ ಇಲ್ಲದೆ, ನೇರವಾಗಿ ಮತ್ತು ಸಕಾಲದಲ್ಲಿ ತಲುಪಿಸುವ ಉದ್ದೇಶದಿಂದ ರೈತರನ್ನೇ ಒಳಗೊಂಡ ಸಂಘಗಳನ್ನು ರಚಿಸುವ ಯೋಜನೆ ಹಲವು ವರ್ಷಗಳಿಂದ ಜಾರಿಯಲ್ಲಿದೆ. ಕೆಲವು ಜಿಲ್ಲೆಗಳಲ್ಲಿ ರೈತರು ಸಂಘಟನೆಗಳನ್ನು ಕಟ್ಟಿಕೊಂಡು ತಾವು ಬಲಗೊಳ್ಳುವುದರ ಜತೆಗೆ ಸಂಘವನ್ನೂ ಬಲಪಡಿಸಿದ್ದಾರೆ. ಇನ್ನೂ ಕೆಲವೆಡೆ ಸಂಘಗಳ ರಚನೆ, ವ್ಯವಹಾರಗಳು ಕುಂಟುತ್ತಾ ಸಾಗಿವೆ. ಈ ಕುರಿತು ಒಂದು ನೋಟ...



ಹಾಸನದ ಚನ್ನಾಂಬಿಕಾ ತೋಟಗಾರಿಕಾ ರೈತ ಉತ್ಪಾದಕ ಸಂಸ್ಥೆಯಲ್ಲಿ ರಸಗೊಬ್ಬರ ಅನ್‌ಲೋಡ್ ಮಾಡುತ್ತಿರುವುದು.

ಕೀರೆ ಮಡಿ ಮಹಿಳಾ ಕೂಟ

ಸೊಪ್ಪು ಹಾಗೂ ತರಕಾರಿಯನ್ನು ಸಾವಯವ ಮಾದರಿಯಲ್ಲಿ ಬೆಳೆಯುವ ಉದ್ದೇಶದಿಂದ, ಮಂಡ್ಯ ಸಾವಯವ ಕೃಷಿ ಸಹಕಾರ ಸಂಘವು 'ಕೀರೆ ಮಡಿ ಮಹಿಳಾ ಕೂಟ' ರಚಿಸಿದ್ದು, ಮಹಿಳೆಯರ ಕೈತೋಟ ನಿರ್ವಹಿಸುವ ಪ್ರವೃತ್ತಿಗೆ ಪ್ರೋತ್ಸಾಹ ನೀಡುತ್ತಿದೆ.

ಮಂಡ್ಯ, ಮದ್ದೂರು, ಪಾಂಡವಪುರ ತಾಲ್ಲೂಕಿನ ಹಳ್ಳಿಗಳಲ್ಲಿ 180 ಮಹಿಳಾ ಸಂಘಗಳಿವೆ. ಮನೆ ಹಿಂದಿನ ಕೈತೋಟ, ತಮ್ಮ ಜಮೀನಿನಲ್ಲಿ ಮನೆಗೊಬ್ಬರ ಬಳಸಿ ಸೊಪ್ಪು, ತರಕಾರಿ ಬೆಳೆಯುತ್ತಿದ್ದಾರೆ. ಹೀಗೆ ಬೆಳೆದ ಸೊಪ್ಪುತರಕಾರಿಯನ್ನು ನಗರದಲ್ಲಿ ನಡೆಯುವ ಸಾವಯವ ಸಂತೆಯಲ್ಲಿ ಮಾರಾಟ ಮಾಡುತ್ತಾರೆ. 'ಸಾವಯವ ರೈತರ ಕೂಟ'ವನ್ನೂ ರಚಿಸಲಾಗಿದ್ದು, ವಿವಿಧ ಹಳ್ಳಿಗಳಲ್ಲಿ 160 ಸಂಘಗಳಿವೆ. ಸಾವಯವ ರೀತಿಯಲ್ಲಿ ಕೃಷಿ ಮಾಡಲು ವಿವಿಧ ತರಬೇತಿ, ಕಾರ್ಯಾಗಾರಗಳನ್ನೂ ಆಯೋಜಿಸಲಾಗುತ್ತಿದೆ.

ಲಾಭದತ್ತ ರೈತ ಸಂಸ್ಥೆಗಳು: ಹಾಸನ ಜಿಲ್ಲೆಯಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ, ನಬಾರ್ಡ್, ಗ್ರೀನ್ ಇನೋವೇಷನ್ ಸೆಂಟರ್ ಅಧೀನದಲ್ಲಿ 9 ರೈತ ಉತ್ಪಾದಕ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ವಿವಿಧ ಇಲಾಖೆಗಳಿಂದ ದೊರೆಯುವ ಸಬ್ಸಿಡಿ ಸೌಲಭ್ಯ ಬಳಸಿಕೊಂಡು ಲಾಭದತ್ತ ಸಾಗಿವೆ.

ಹಾಸನ ತಾಲ್ಲೂಕಿನ ಶಾಂತಿಗ್ರಾಮದ ಚನ್ನಾಂಬಿಕಾ ತೋಟಗಾರಿಕಾ ರೈತ ಉತ್ಪಾದಕ ಕಂಪನಿಯು ಸಾವಿರ



ಹಂಪಾಪುರ ತೋಟಗಾರಿಕೆ ರೈತ ಉತ್ಪಾದಕರ ಕಂಪನಿ

ಸದಸ್ಯರನ್ನು ಹೊಂದಿದ್ದು, ಗೊಬ್ಬರ, ಔಷಧ, ಬಿತ್ತನೆ ಬೀಜ ಮಾರಾಟ ಮಾಡುತ್ತಿದೆ. 'ಮೂರು ವರ್ಷದ ಹಿಂದೆ ಆರಂಭಿಸಿದ ಸಂಸ್ಥೆಯು ಲಾಭದಲ್ಲಿ ನಡೆಯುತ್ತಿದೆ. ಈವರೆಗೆ ಖರ್ಚು ಕಳೆದು ₹25 ಲಕ್ಷ ಆದಾಯ ಬಂದಿದೆ' ಎಂದು ಸಂಸ್ಥೆ ಸಿಇಒ ಕುಮಾರ್ ತಿಳಿಸಿದರು.

ಗ್ರೀನ್ ಇನ್ನೋವೇಷನ್ ಸೆಂಟರ್ ನಡೆಸುತ್ತಿರುವ 'ಪ್ರಕೃತಿ' ರೈತ ಉತ್ಪಾದಕರ ಸಂಸ್ಥೆ ಮತ್ತು 'ಹೊಯ್ಸಳ' ರೈತ ಉತ್ಪಾದಕರ ಸಂಸ್ಥೆಯಲ್ಲಿ ರೈತರಿಗೆ ಬೇಕಾದ ಬಿತ್ತನೆ ಬೀಜ, ರಸಗೊಬ್ಬರ, ಆಲೂಗಡ್ಡೆ ಬಿತ್ತನೆ ಬಗ್ಗೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.

'ಕೃಷಿ ಸಲಕರಣೆ ಹಾಗೂಬೆಳೆಗಳ ಮಾರಾಟದ ಜತೆಗೆ ಕೀಟಬಾಧೆ, ಬಿತ್ತನೆ ಬೀಜ ಕುರಿತು ಮಾಹಿತಿನೀಡಲಾಗುತ್ತಿದೆ. ರೈತರನ್ನು ಪಂಜಾಬ್‌ಗೆ ಕರೆದೊಯ್ದು, ದೃಢೀಕೃತ ಆಲೂಗಡ್ಡೆ ಬಿತ್ತನೆಬೀಜ, ಆಲೂ ಬೇಸಾಯ ಕುರಿತು ಮಾಹಿತಿ ನೀಡಲಾಗಿದೆ' ಎಂದು ಸಂಸ್ಥೆ ಯೋಜನಾ ಸಂಚಾಲಕ ಸುಹಾಸ್ ವಿವರಿಸಿದರು.

ಮಾಹಿತಿ ಮತ್ತು ತರಬೇತಿ: ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ 10 ರೈತ ಉತ್ಪಾದಕ ಕಂಪನಿಗಳು ಕಾರ್ಯಾರಂಭಿಸಿದ್ದು, ಆಯಾ ಭಾಗದ ಕೃಷಿಕರಿಗೆ ವರವಾಗಿವೆ. ತೋಟಗಾರಿಕೆ ಬೆಳೆಗಾರರಿಗೆ ಅವಶ್ಯವಿರುವ ಬೀಜ, ಗೊಬ್ಬರ ಮತ್ತಿತರ ಪರಿಕರಗಳನ್ನು, ಕಡಿಮೆ ದರಕ್ಕೆ ಸಕಾಲಕ್ಕೆ ಮಾರಾಟ ಮಾಡುತ್ತಿದ್ದು, ಬೆಳೆಗಾರರಿಗೆ ಸಹಕಾರಿಯಾಗಿವೆ.

ತೋಟಗಾರಿಕೆ ಇಲಾಖೆಯಲ್ಲಿನ ವಿವಿಧ ಯೋಜನೆ ಬಗ್ಗೆ ಬೆಳೆಗಾರರಿಗೆ ಮಾಹಿತಿ ನೀಡುವುದರ ಜೊತೆಗೆ ತರಬೇತಿಯನ್ನೂ ನೀಡುತ್ತಿವೆ.

'ಒಂದೊಂದು ಸಂಘದಲ್ಲೂ ತಲಾ 1 ಸಾವಿರ ಸದಸ್ಯರಿದ್ದಾರೆ. ಇಲಾಖೆ, ಸರ್ಕಾರದ ಸಹಾಯಧನದೊಂದಿಗೆ ಸದಸ್ಯರಿಂದಲೂ ಷೇರು ಬಂಡವಾಳ ಸಂಗ್ರಹಿಸಲಾಗಿದೆ. ಪ್ರಸ್ತುತ ಪ್ರಾಥಮಿಕ ಚಟುವಟಿಕೆಗಳನ್ನಷ್ಟೇ ನಡೆಸುತ್ತಿವೆ. ಇನ್ಮುಂದೆ ತನ್ನ ಸದಸ್ಯರ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿಸುವ ಕೆಲಸವನ್ನು ಮಾಡಲಿವೆ' ಎಂದು ಸಂಘದ ಪದಾಧಿಕಾರಿಯೊಬ್ಬರು ಹೇಳಿದರು.

ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು ಏಳು ರೈತ ಉತ್ಪಾದಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ರೈತರೇ ಸೇರಿ ಸ್ಥಾಪಿಸಿರುವ ಈ ಕಂಪನಿಗಳು ತಕ್ಕಮಟ್ಟಿಗೆ ನಷ್ಟವಿಲ್ಲದೇ ನಡೆಯುತ್ತಿವೆ.

ಜೇನು ಸೊಸೈಟಿ

ಕೊಡಗು ಜಿಲ್ಲೆಯ ಸೋಮವಾರಪೇಟೆ ಹಾಗೂ ಮಡಿಕೇರಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಜೇನು ಕೃಷಿಯನ್ನು ರೈತರು ಉಪ ಕಸುಬಾಗಿ ಅವಲಂಬಿಸಿದ್ದು, ಅಲ್ಪ ಆದಾಯ ಗಳಿಸುತ್ತಿದ್ದಾರೆ.

ಜಿಲ್ಲೆಯ ನಾನಾ ಕಡೆ 'ಕೊಡಗಿನ ಜೇನು' ಬ್ರ್ಯಾಂಡ್‌ನ ಜೇನು ಲಭಿಸುತ್ತದೆ. ಜಿಲ್ಲೆಯಲ್ಲಿ ಜೇನು ಉತ್ಪಾದನೆ ಹೆಚ್ಚಳಕ್ಕೆ ಜೇನು ಕೃಷಿಕರ ಸೊಸೈಟಿಗಳ ಕೊಡುಗೆ ಅಪಾರ. ಇವು ರೈತರಿಗೆ ಸೇತುವೆಯಾಗಿ ಕೆಲಸ ಮಾಡುತ್ತಿವೆ. ರೈತರಿಂದ ಜೇನು ಖರೀದಿಸಿ, ತಮ್ಮದೇ ಬ್ರ್ಯಾಂಡ್‌ನಡಿ ಮಾರುಕಟ್ಟೆಗೆ ಪರಿಚಯಿಸುತ್ತಿವೆ ಎಂದು ಶಾಂತಳ್ಳಿಯ ಪ್ರಗತಿಪರ ಕೃಷಿಕ ಪ್ರವೀಣ್ ಹೇಳುತ್ತಾರೆ.



ರೈತ ಸಂತೆಗೆ ಜನಪ್ರೀತಿ

ಕೊಪ್ಪಳದ 'ಮಣ್ಣಿನೊಂದಿಗೆ ಮಾತುಕತೆ' ತಂಡ ನಡೆಸುತ್ತಿರುವ ವಾರದ ರೈತ ಸಂತೆಯು ಜನಪ್ರೀತಿ ಗಳಿಸಿಕೊಂಡಿದೆ. ಜಿಲ್ಲೆಯ 20 ಪ್ರಗತಿಪರ ಮತ್ತು ಸಾವಯವ ರೈತರು ಇಲ್ಲಿ ಮಳಿಗೆಗಳನ್ನು ತೆರೆದು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ.

ಈ ಮಳಿಗೆಗಳಲ್ಲಿ ತರಕಾರಿ, ಹಣ್ಣು, ಸಿರಿಧಾನ್ಯ, 10 ಸ್ವದೇಶಿ ತಳಿಯ ವಿವಿಧ ರುಚಿ, ಬಣ್ಣದ ಅಕ್ಕಿ, ಮೌಲ್ಯವರ್ಧಿತ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. 20 ಮಳಿಗೆಗಳಲ್ಲಿ 30ಕ್ಕೂ ಹೆಚ್ಚು ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ಸಂತೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಗ್ರಾಹಕರು ನೇರವಾಗಿ ರೈತರ ಹೊಲಗಳಿಗೆ ತೆರಳಿ ಸಹ ಖರೀದಿ ಮಾಡುತ್ತಿದ್ದಾರೆ.

ಸಂತೆಯ ಯಶಸ್ಸನ್ನು ಕಂಡು ಗಂಗಾವತಿ ಶಾಸಕ ಪರಣ್ಣ ಮುನವಳ್ಳಿ ರೈತರನ್ನು ಭೇಟಿ ಮಾಡಿ ಗಂಗಾವತಿಯಲ್ಲಿ ಸಂತೆ ನಡೆಸುವಂತೆ ಮನವಿ ಮಾಡಿದ್ದಾರೆ. ಅದಕ್ಕೆ ಬೇಕಾದ ಸ್ಥಳ, ಎಲ್ಲ ಮೂಲಸೌಕರ್ಯ ಕಲ್ಪಿಸಿಕೊಡುವುದಾಗಿ ಭರವಸೆ ನೀಡಿದ್ದಾರೆ.

ರಾಯಚೂರು ಜಿಲ್ಲೆಯ ಸಿಂಧನೂರು ನಗರದಲ್ಲಿ ಸ್ವಾಸ್ಥ್ಯ ರೈತರ ಉತ್ಪಾದಕ ಕಂಪನಿ ನಿಯಮಿತವು 2019ರಲ್ಲಿ ಸ್ಥಾಪನೆಯಾಗಿದೆ. ನಬಾರ್ಡ್ ಸಹಕಾರದೊಂದಿಗೆ ಐದು ರೈತರು ಆರಂಭಿಸಿದ್ದ ಕಂಪನಿಯಲ್ಲಿ ಸದ್ಯಕ್ಕೆ 1,100 ಸದಸ್ಯರಿದ್ದಾರೆ.

ರಾಯಚೂರು ಸೇರಿದಂತೆ ಭತ್ತ ಬೆಳೆಯುವ ವಿವಿಧ ಜಿಲ್ಲೆಗಳಲ್ಲಿ ಬಿಗ್ ಬಾಸ್ಕೆಟ್, ಬಿಗ್ ಬಜಾರ್, ರಿಲಯನ್ಸ್ ಕಂಪನಿಗಳು ರೈತ ಉತ್ಪಾದಕ ಕಂಪನಿಗಳಿಂದ ಭತ್ತ ಖರೀದಿಸುತ್ತಿವೆ. ಸಿಂಧನೂರಿನಲ್ಲಿ ರಿಲಯನ್ಸ್ ಭತ್ತ ಖರೀದಿಸಿದ್ದು ಮಾತ್ರ ಸುದ್ದಿಯಾಗಿತ್ತು.

'ಸ್ವಾಸ್ಥ್ಯ ರೈತರ ಉತ್ಪಾದಕ ಕಂಪನಿಯಿಂದ ಗುಜರಾತ್‌ನ ರಾಯಲ್ ಕಂಪನಿಯು ಭತ್ತ ಖರೀದಿಗೆ ಈಚೆಗೆ ಒಲವು ತೋರಿಸಿದೆ. ಅಕ್ಕಿ ರಫ್ತು ಮಾಡುವ ಕಂಪನಿ ಅದಾಗಿದೆ' ಎಂದು ಕಂಪನಿ ವ್ಯವಸ್ಥಾಪಕ ಮಲ್ಲಿಕಾರ್ಜುನ ವಲ್ಕಂದಿನ್ನಿ ತಿಳಿಸಿದರು. ರಿಲಯನ್ಸ್ ಕಂಪನಿಗೆ 10 ಸಾವಿರ ಕ್ವಿಂಟಲ್ ಭತ್ತ ಪೂರೈಸುವುದಕ್ಕೆ ಕಂಪನಿ ಒಪ್ಪಂದ ಮಾಡಿಕೊಂಡಿದೆ.

ಎಂಟಿಆರ್‌ಗೆ ಬ್ಯಾಡಗಿ ಮೆಣಸಿನಕಾಯಿ: ಧಾರವಾಡದಲ್ಲಿ ತೋಟಗಾರಿಕೆ ಇಲಾಖೆ ಅಡಿಯಲ್ಲಿ ಮೂರು ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಇದರಲ್ಲಿ ಹುಬ್ಬಳ್ಳಿಯ ಸಂಘವು ಬ್ಯಾಡಗಿ ಮೆಣಸಿನಕಾಯಿ ಖರೀದಿಸಿ ಅದನ್ನು ಎಂಟಿಆರ್ ಸಂಸ್ಥೆಗೆ ಮಾರಾಟ ಮಾಡುತ್ತಿವೆ. ಉಳಿದವು ರಿಯಾಯಿತಿ ದರದಲ್ಲಿ ಬೀಜ, ಗೊಬ್ಬರ ಮಾರಾಟ ಮಾಡುತ್ತಿವೆ.

ರೈತರಿಗೆ ವರ: ಶಿರಸಿ ತಾಲ್ಲೂಕು ಅಂಗಡಿಯ ಮಧುಕೇಶ್ವರ ತೋಟಗಾರಿಕಾ ರೈತ ಉತ್ಪಾದಕ ಸಂಸ್ಥೆ, ತಾರಗೋಡಿನ ಮಧುಮಿತ್ರ ಜೇನುಕೃಷಿ ಉತ್ಪಾದಕರ ಸಂಸ್ಥೆ, ದೊಡ್ನಳ್ಳಿಯ ಶಂಭುಲಿಂಗೇಶ್ವರ ರೈತ ಉತ್ಪಾದಕ ಸಂಸ್ಥೆ ಮತ್ತು ಮಾಳಂಜಿಯ ಭತ್ತ ಬೆಳೆಗಾರರ ಸಂಸ್ಥೆಗಳು ರೈತರಿಗೆ ನೆರವಾಗುತ್ತಿವೆ.

10 ಸಂಘಗಳ ಸ್ಥಾಪನೆಗೆ ಪ್ರಸ್ತಾವ: ವಿಜಯಪುರ ಜಿಲ್ಲೆಯಲ್ಲಿ ತೋಟಗಾರಿಕಾ ವಿಭಾಗದಲ್ಲಿ ನಾಲ್ಕು ರೈತ ಉತ್ಪಾದಕ ಸಂಘಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರಮುಖವಾಗಿ ದ್ರಾಕ್ಷಿ, ದಾಳಿಂಬೆ, ಈರುಳ್ಳಿ ಮತ್ತು ಕಲ್ಲಂಗಡಿ ಹಣ್ಣುಗಳನ್ನು ಕೇಂದ್ರೀಕರಿಸಿಕೊಂಡು ಕಾರ್ಯನಿರ್ವಹಿಸುತ್ತಿವೆ. ಬೇರೆ ಬೇರೆ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು, ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುತ್ತಿವೆ.

ಕೋಟ್ಯಂತರ ವಹಿವಾಟು: 'ಗದಗ ಜಿಲ್ಲೆಯಲ್ಲಿ 11 ರೈತ ಉತ್ಪಾದಕ ಸಂಘಗಳು ಸಕ್ರಿಯವಾಗಿದ್ದು, ಅದರಲ್ಲಿ ಎರಡು ಕಂಪನಿಗಳು ಪ್ರತಿವರ್ಷ ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸುತ್ತಿವೆ' ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ರುದ್ರೇಶಪ್ಪ ತಿಳಿಸಿದ್ದಾರೆ.

ಗದುಗಿನಲ್ಲಿರುವ ಶ್ರಮಜೀವಿ ರೈತ ಉತ್ಪಾದಕರ ಕಂಪನಿ (ಎಫ್‌ಪಿಸಿ) ನಿಯಮಿತವು ತುಂಬಾ ಕ್ರಿಯಾಶೀಲವಾಗಿದೆ.

'ಗದಗ ಸುತ್ತಮುತ್ತಲಿನ 10 ಹಳ್ಳಿಯಿಂದ ಒಟ್ಟು 1,150 ರೈತರು ಶ್ರಮಜೀವಿ ರೈತ ಉತ್ಪಾದಕರ ಕಂಪನಿಗೆ ಸದಸ್ಯರಾಗಿದ್ದಾರೆ' ಎನ್ನುತ್ತಾರೆ ಕಂಪನಿಯ ಸಲಹೆಗಾರ ಗೋವಿಂದಯ್ಯ ಬಿ.

ಗಲಗಲಿಯಲ್ಲಿ ರವಾ ಮಿಲ್: ಈ ಮೊದಲು ಕೃಷ್ಣಾ ತೀರದಲ್ಲಿ ಬೆಳೆದ ಜವೆಗೋಧಿ ದೂರದ ಗುಜರಾತ್‌ನ ಅಹಮದಾಬಾದ್‌ಗೆ ಹೋಗಿ ಅಲ್ಲಿ ರವೆಯಾಗಿ ಮಾರ್ಪಟ್ಟು ಪ್ಯಾಕ್ ಆಗಿ ಮತ್ತೆ ಬಾಗಲಕೋಟೆ ಜಿಲ್ಲೆಯ ಮಾರುಕಟ್ಟೆಗೆ ಬರುತ್ತಿತ್ತು.

ಅದನ್ನು ಮನಗಂಡ ಬೀಳಗಿ ತಾಲ್ಲೂಕಿನ ಗಲಗಲಿಯ ನೇಗಿಲ ಮಿಡಿತ ರೈತ ಉತ್ಪಾದಕ ಸಂಘದ ಗೆಳೆಯರು ತಮ್ಮ ಸಂಘದಿಂದ ₹13 ಲಕ್ಷ ಬಂಡವಾಳ ಹೂಡಿಕೆ ಮಾಡಿ ಗಲಗಲಿ ಬಳಿ ರವಾ ಮಿಲ್ ಆರಂಭಿಸಿದ್ದಾರೆ. ಅದಕ್ಕೆ ₹35 ಲಕ್ಷ ವೆಚ್ಚದಲ್ಲಿ ಕಚ್ಚಾ ವಸ್ತು ಸಂಗ್ರಹಿಸಲು ಮುಂದಾಗಿದ್ದಾರೆ. ಶೀಘ್ರ ಮಿಲ್ ಕಾರ್ಯಾರಂಭಗೊಳ್ಳಲಿದೆ.

ಮಾವು ಕಂಪನಿಯಲ್ಲಿ ಸಾವಿರ ಸದಸ್ಯರು

ರಾಮನಗರ ಜಿಲ್ಲೆಯಲ್ಲಿ ಸದ್ಯ ಹತ್ತಕ್ಕೂ ಹೆಚ್ಚು ರೈತ ಉತ್ಪಾದನೆ ಕಂಪನಿಗಳು ಚಟುವಟಿಕೆ ನಡೆಸುತ್ತಿವೆ. ಕೆಲವೆಡೆ ಕೃಷಿ ಉಪ ಉತ್ಪನ್ನ ತಯಾರಿಕೆ ಮತ್ತು ಮಾರಾಟವೂ ನಡೆದಿದೆ. ಮಾವು ಮತ್ತು ತೆಂಗು ಬೆಳೆಗಾರರನ್ನು ಒಗ್ಗೂಡಿಸಿ 'ರಾಮನಗರ ಜಿಲ್ಲಾ ಮಾವು ಮತ್ತು ತೆಂಗು ಬೆಳೆ ಉತ್ಪಾದಕರ ಕಂಪನಿ' ರಚನೆ ಆಗಿದ್ದು, ಒಂದು ಸಾವಿರ ಸದಸ್ಯರನ್ನು ಹೊಂದಿದೆ.

ರೋಸ್ ಆನಿಯನ್‌ಗೆ ಮೀಸಲು: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತೋಟಗಾರಿಕಾ ಇಲಾಖೆಯಿಂದ ಮೂರು ರೈತ ಉತ್ಪಾದಕ ಸಂಘಗಳನ್ನು ರಚಿಸಲಾಗಿದೆ. ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅವೆಲ್ಲವೂ ರೋಸ್ ಆನಿಯನ್ ಮಾರಾಟಕ್ಕೆ ಸೀಮಿತಗೊಂಡಿವೆ.

ಪ್ರಜಾವಾಣಿ ಬ್ಯೂರೊ ವರದಿ

ಪರಿಶುದ್ಧ ಎಣ್ಣೆಗೆ 'ಕಲ್ಪತರು' ಹೋರಾಟ

ಹೊಸದುರ್ಗ ತಾಲ್ಲೂಕಿನ ಶ್ರೀರಾಂಪುರ ಹೋಬಳಿಯ ತೆಂಗು ಬೆಳೆಗಾರರು ತೆಂಗು ಅಭಿವೃದ್ಧಿ ಮಂಡಳಿಯ ನೆರವಿನಿಂದ ಎಂಟು ವರ್ಷಗಳ ಹಿಂದೆ 'ಕಲ್ಪತರು ಕೋಕೋನಟ್ ಪ್ರೊಡ್ಯೂಸರ್ಸ್ ಕಂಪನಿ' ಆರಂಭಿಸಿದ್ದರು. ಈ ಸಂಸ್ಥೆ ಲಾಭದತ್ತ ಹೊರಳಲು ಇನ್ನೂ ಶ್ರಮಿಸುತ್ತಿದೆ. ಸರ್ಕಾರದ ಭರವಸೆ ಕಾಗದದಲ್ಲೇ ಉಳಿದ ಪರಿಣಾಮ ಕಂಪನಿ ನಡೆಸಲು ನಿರ್ದೇಶಕರು ಹೆಣಗಾಡುತ್ತಿದ್ದಾರೆ.

ಸಾವಿರ ಬೆಳೆಗಾರರು ಕಂಪನಿಯಲ್ಲಿದ್ದಾರೆ. ಶುದ್ಧ ತೆಂಗಿನ ಎಣ್ಣೆ ತಯಾರಿಸಿ ಮಾರುಕಟ್ಟೆಗೆ ಪರಿಚಯಿಸಲಾಗಿದೆ. ಮಾರುಕಟ್ಟೆಯಲ್ಲಿ ಎದುರಾದ ತೊಡಕುಗಳನ್ನು ನಿವಾರಿಸಲು ಸರ್ಕಾರ ಆಸಕ್ತಿ ತೋರದಿರುವುದು ಸಮಸ್ಯೆಯಾಗಿದೆ.

ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಕೆಲವೇ ಸೌಲಭ್ಯಗಳು ಕಂಪನಿಗೆ ಸಿಗುತ್ತಿವೆ. ಸಬ್ಸಿಡಿ ದರದಲ್ಲಿ ಷೇರುದಾರರಿಗೆ ಗೊಬ್ಬರ ಒದಗಿಸಲಾಗುತ್ತಿದೆ. ನಿರ್ದೇಶಕರು ಹಾಗೂ ಷೇರುದಾರರ ಕಾಳಜಿಯಿಂದ ಅಸ್ತಿತ್ವ ಉಳಿಸಿಕೊಂಡಿದೆ. ಕೊಬ್ಬರಿ ಎಣ್ಣೆ ಮಾರುಕಟ್ಟೆಯನ್ನು ಬೆಂಗಳೂರಿಗೆ ವಿಸ್ತರಿಸಲು ಪ್ರಯತ್ನಿಸುತ್ತಿದೆ.

ಶುದ್ಧ ಕೊಬ್ಬರಿ ಎಣ್ಣೆಯನ್ನು ಅಡುಗೆಗೆ ಬಳಸುವಂತೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಬೆಳೆಗಾರರು ಕೊಬ್ಬರಿ ಎಣ್ಣೆಯನ್ನು ಅಡುಗೆಗೆ ಬಳಸುತ್ತಿದ್ದಾರೆ. ಮಾಸಿಕ ಸುಮಾರು 400 ಲೀಟರ್ ಕೊಬ್ಬರಿ ಎಣ್ಣೆಯನ್ನು ಮಾರಾಟ ಮಾಡುತ್ತಿದೆ.

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ಮನೋಬಲಕ್ಕೆ ಧರ್ಮವೇ ಮದ್ದು

ನಾವು ಅಂದುಕೊಂಡಷ್ಟು ಜಗತ್ತು ಸುರಕ್ಷಿತ ತಾಣವಲ್ಲ. ಇಲ್ಲಿ ಹುಟ್ಟಿದ ಪ್ರತಿ ಜೀವಿಯೂ ಬದುಕಿಗಾಗಿ ನಿತ್ಯ ಹೋರಾಟ ಮಾಡಲೇಬೇಕು. ಇದಕ್ಕಾಗಿ ಶತ್ರುವನ್ನು ಪ್ರತಿರೋಧಿಸುವ ಶಕ್ತಿಯನ್ನು ಪಡೆದುಕೊಳ್ಳಲೇಬೇಕು. ಸ್ವಲ್ಪ ಎಚ್ಚರ ತಪ್ಪಿದರೂ ಗಂಡಾಂತರ ಎರಗುತ್ತದೆ. ಇಂಥ ಆಪತ್ತಿನ ಜಗತ್ತಿನಿಂದ ಸುರಕ್ಷಿತ-ವಾಗಿರಲೆಂದೇ ಬುದ್ಧಿವಂತ ಮಾನವ ಕಾಡು ಕಡಿದು, ನಾಡು ಸೃಷ್ಟಿಸಿದ್ದಾನೆ. ದೇಹಕ್ಕೆ ಅನ್ನ, ಮನಸ್ಸಿಗೆ ನೆಮ್ಮದಿ ಸಿಗಲು ನಾಡಿನೊಳಗೆ ಆಹಾರ-ಮನೋ-ರಂಜನೆ ಉತ್ಪಾದಿಸುತ್ತಿದ್ದಾನೆ. ಇಂಥ ಮಿತಿಯಲ್ಲಿದ್ದಿದ್ದರೆ ಮನುಷ್ಯ ಜಗತ್ತಿನಲ್ಲೇ ಅತ್ಯಂತ ಸುಖಿಯಾಗಿರುತ್ತಿದ್ದ. ಆದರೆ ಅವನ ಮನಸ್ಸಿನೊಳಗೆ ಹುಟ್ಟಿದ ದ್ವೇಷಾ-ಸೂಯೆಗಳು-ಮೃಗಳ್ಳತನಗಳು ಆಜನ್ಮ ದುಃಖಿಯಾಗಿರುವಂತೆ ಮಾಡಿವೆ.

ಮೃಗಳ್ಳತನದಿಂದ ದೇಹ ರೋಗಪೀಡಿತವಾಗುವಂತೆ, ದ್ವೇಷಾಸೂಯೆಗ-ಳಿಂದ ಮನಸ್ಸು ರೋಗಗ್ರಸ್ತವಾಗುತ್ತದೆ. ದೇಹದ ರೋಗಾಣುಗಳು ಕ್ರಿಮಿಗಳ ರೂಪದಲ್ಲಿದ್ದರೆ, ಮನಸ್ಸಿನ ರೋಗಾಣುಗಳು ಸ್ವಾರ್ಥದ ರೂಪದಲ್ಲಿರುತ್ತವೆ. ದೇಹಕ್ಕೆ ಬಾಧಿಸುವ ಕ್ರಿಮಿಗಳು ಹೇಗೆ ಕಣ್ಣಿಗೆ ಕಾಣುವುದಿಲ್ಲವೋ, ಹಾಗೇ ಮನಸ್ಸಿನ ರೋಗದ ಕ್ರಿಮಿಗಳು ಸಹ ಬರಿಗಣ್ಣಿಗೆ ಕಾಣುವುದಿಲ್ಲ. ದೈಹಿಕ ಕ್ರಿಮಿಗಳನ್ನು ಸೂಕ್ಷ್ಮದರ್ಶಕದಿಂದ ನೋಡಿದಂತೆ, ಮಾನಸಿಕ ಬಾಧೆಯ ಕ್ರಿಮಿಗಳನ್ನು ನೋಡಲು ಅತ್ಯಂತ ಸೂಕ್ಷ್ಮವಾದ 'ಬುದ್ಧಿದರ್ಶಕ' ಬೇಕು. ಅದಿಲ್ಲ-ದಿದ್ದರೆ ಮಾನವನ ಮಾನಸಿಕ ರೋಗಾಣುವನ್ನು ಕಂಡುಹಿಡಿಯಲು ಸಾಧ್ಯವಿಲ್ಲ.

ಮನುಷ್ಯನ ಸರ್ವನಾಶಕ್ಕೆ ಮಾನಸಿಕ ರೋಗಕ್ಕಿಂತ ದೊಡ್ಡರೋಗ ಮತ್ತೊಂದಿಲ್ಲ. ಏಕೆಂದರೆ, ದೈಹಿಕ ರೋಗಕ್ಕಿಂತ ಮಾನಸಿಕ ರೋಗ ಅತ್ಯಂತ ಅಪಾಯ. ಅದನ್ನು ಸ್ವಲ್ಪ ಸಡಿಲಬಿಟ್ಟರೂ ಮನುಷ್ಯರಿಂದ ಮನುಷ್ಯರಿಗೆ ಬಹಳ ಬೇಗ ಹರಡಿ ಇಡೀ ಮನುಕುಲವನ್ನೇ ಆಪೋಷಣ ತೆಗೆದುಕೊಂಡುಬಿಡು-ತ್ತದೆ. ಗಾಳಿಗಿಂತ ವದಂತಿಗೆ ವೇಗ ಹೆಚ್ಚಿರುವುದರಿಂದ, ದೈಹಿಕರೋಗಕ್ಕಿಂತ ಮಾನಸಿಕ ರೋಗಗಳು ಮಾನವರನ್ನು ಹೆಚ್ಚು ಬಲಿ ಪಡೆಯುತ್ತವೆ. ದೇಹದಿಂದ ದೇಹಕ್ಕೆ ಹರಡುವ ಸಾಂಕ್ರಾಮಿಕ ಕ್ರಿಮಿಗಳು ಕಾಲದಿಂದ ಕಾಲಕ್ಕೆ ರೂಪಾಂತರ ಹೊಂದುವಂತೆ, ಮಾನಸಿಕ ಸಾಂಕ್ರಾಮಿಕ ಕ್ರಿಮಿಗಳು ಸಹ ಕಾಲದಿಂದ ಕಾಲಕ್ಕೆ ರೂಪಾಂತರವಾಗುತ್ತಲೇ ಇವೆ.

ದೈಹಿಕ ರೋಗಾಣುಗಳು ಅಡುಗೆಮನೆಯಿಂದ ಹುಟ್ಟುವಂತೆ, ಮಾನಸಿಕ ರೋಗಾಣುಗಳು ಸಹ ಮನೆ ಅಂಗಳದಿಂದಲೇ ಹುಟ್ಟುತ್ತವೆ. ಅವು ಅಣ್ಣ--ತಮ್ಮಂದಿರ ಕದನದಿಂದ ಗಡಿಯಾಚೆಯ ಯುದ್ಧದವರೆಗೂ ವ್ಯಾಪಿಸುತ್ತವೆ. ಕೊರೊನಾ ವೈರಸ್‌ನಂತೆ ಕೋಮುವಾದ ಸಹ ನಾನಾ ರೂಪ ತಾಳಿ ದೇಹ ದೇಹವಿರಲಿ ದೇಶದೇಶವನ್ನೆ ಹಾಳುಗೆಡವುತ್ತವೆ. ಮನುಷ್ಯ ಎಂಥ ಅಲ್ಪಮತಿ ಎಂದರೆ, ಕೋಮುವ್ಯಾಧಿ ಕ್ರಿಮಿಗಳಿಗಿಂತ ಕೊರೊನಾ ರೋಗಾಣು ಭಯಾನಕ ಅಂದುಕೊಂಡಿದ್ದಾನೆ. ಮನುಷ್ಯ ಹುಟ್ಟಿದಾಗಿನಿಂದ ತನ್ನ ಮನೋರೋಗದ ಅಪಾಯ ಅರಿಯದೆ ತಪ್ಪು ಮಾಡಿದ್ದಾನೆ.

ದೈಹಿಕರೋಗ ಹುಟ್ಟುವುದಕ್ಕಿಂತ ಮೊದಲೇ ಮಾನಸಿಕರೋಗ ಹುಟ್ಟಿದ್ದರೂ, ಅದರ ನಿರ್ಮೂಲನೆಗೆ ಮನುಷ್ಯ ಆದ್ಯತೆ ಕೊಟ್ಟಿಲ್ಲ. ಆದರೆ ಇದರ ಅಪಾಯ ಅರಿತ ಧರ್ಮಗುರುಗಳು ಮಾನಸಿಕ ಚಿಕಿತ್ಸಕರಾಗಿ ಮನುಷ್ಯನಿಗೆ ವಿವೇಕದ ಪರಿಧಿಯಲ್ಲಿ ಬದುಕುವಂತೆ ಧಾರ್ಮಿಕ ಚೌಕಟ್ಟು ಹಾಕಿಕೊಟ್ಟರು. ದುರದೃಷ್ಟಕ್ಕೆ ಧರ್ಮಗುರುಗಳೇ ರೂಪಿಸಿದ 'ಧರ್ಮ' ಎಂಬ ಮದ್ದು ಅಡ್ಡ ಪರಿಣಾಮ ಬೀರಿ, ಮಾನವರಲ್ಲಿ ಮತ್ತಷ್ಟು ಕೋಮುವಾದ ಉಲ್ಬಣಗೊಳ್ಳು-ವಂತೆ ಮಾಡುತ್ತಿದೆ.

ಮನುಷ್ಯನ ಮಾನಸಿಕ ಆರೋಗ್ಯಕ್ಕೆ ಪೂರಕವಾಗಲೆಂದು ಕಂಡುಹಿಡಿದ ಧರ್ಮ ಎಂಬ ಮದ್ದು ಚೆನ್ನಾಗೇ ಇದೆ. ಆದರೆ ಅದನ್ನು ಬಳಸುವ ಮಾನವರ ಮನಸ್ಸು ಪರಿಶುದ್ಧವಾಗಿರಬೇಕು. ಇಲ್ಲದಿದ್ದರೆ ಶ್ರೀಕೃಷ್ಣನ ಧರ್ಮಸೂತ್ರ ಅರಿಯದ ಯಾದವರು ತಮ್ಮೊಳಗೆ ಕಿತ್ತಾಡಿ ನಾಶವಾದಂತೆ, ಸ್ವಾರ್ಥಿಗಳು ಕೋಮುಜಾಡ್ಯವನ್ನು ಅಂಟಿಸಿಕೊಂಡು ನಾಶವಾಗುತ್ತಾರೆ. ಆತ್ಮಶುದ್ಧಿ ಇಲ್ಲದೆ ಮನೋಬಲ ಸಿದ್ಧಿಸುವುದಿಲ್ಲ. ಇದಕ್ಕಾಗಿ ವೇದಶಾಸ್ತ್ರ ಕಲಿಯುವ ಮುನ್ನ ಪುರಾ-ಣಪುಣ್ಯಕಥೆಗಳನ್ನು ಕೇಳಿ ಮನಸ್ಸನ್ನು ಶುದ್ಧೀಕರಿಸಬೇಕು. ಇಂಥ ಪರಿಶುದ್ಧ ಮನಸ್ಸಿನಿಂದ 'ಧರ್ಮಸಾಕ್ಷಾತ್ಕಾರ'ವಾದರೆ ಅಡ್ಡಪರಿಣಾಮವಿಲ್ಲದೆ 'ಸಚ್ಚಿದಾ-ನಂದ'ಭಾವ ಎಲ್ಲೆಡೆ ಸ್ಫುರಿಸುತ್ತದೆ.

ಝುಟೊಬಿ ಅಧ್ಯಯನ ವರದಿ: ದಕ್ಷಿಣ ಆಫ್ರಿಕಾಕ್ಕೆ ಮೊದಲ ಸ್ಥಾನ

ಅಪಾಯಕಾರಿ ರಸ್ತೆಗಳಿರುವ ರಾಷ್ಟ್ರ: ಭಾರತಕ್ಕೆ 4ನೇ ಸ್ಥಾನ



ಜೋಹಾನ್ಸ್‌ಬರ್ಗ್(ಪಿಟಿಐ): ವಿಶ್ವದಲ್ಲೇ ಅತ್ಯಂತ ಹೆಚ್ಚು ಅಪಾಯಕಾರಿ ರಸ್ತೆಗಳನ್ನು ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾ ಅಗ್ರ ಶ್ರೇಯಾಂಕದಲ್ಲಿದ್ದರೆ, ಭಾರತ ನಾಲ್ಕನೇ ಸ್ಥಾನದಲ್ಲಿದೆ ಎಂದು ಅಂತರರಾಷ್ಟ್ರೀಯ ಚಾಲನಾ ಶಿಕ್ಷಣ ಕಂಪನಿ ಝುಟೊಬಿ ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ.

ಅಧ್ಯಯನ ನಡೆಸಿದ 56 ದೇಶಗಳ ಪಟ್ಟಿಯಲ್ಲಿ ಥಾಯ್ಲೆಂಡ್ ಎರಡನೇ ಸ್ಥಾನದಲ್ಲಿದೆ ಮತ್ತು ಅಮೆರಿಕ ಮೂರನೇ ಸ್ಥಾನ ಪಡೆದುಕೊಂಡಿದೆ.

ವಿಶ್ವದಲ್ಲೇ ಸುರಕ್ಷಿತ ರಸ್ತೆಗಳನ್ನು ಹೊಂದಿರುವ ರಾಷ್ಟ್ರದಲ್ಲಿ ನಾರ್ವೆ ಮೊದಲ ಸ್ಥಾನದಲ್ಲಿದ್ದರೆ, ಸ್ವೀಡನ್ ಮೂರನೇ ಸ್ಥಾನದಲ್ಲಿದೆ. ಸುರಕ್ಷಿತ ರಸ್ತೆಗಳನ್ನು ಹೊಂದಿರುವ ರಾಷ್ಟ್ರದಲ್ಲಿ ಜಪಾನ್ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ ಎಂದು ಅಧ್ಯಯನ ತಿಳಿಸಿದೆ.

'ನಾವು ಪ್ರತಿ ದೇಶವನ್ನು ಐದು ಅಂಶಗಳ ಆಧಾರದ ಮೇಲೆ ವಿಶ್ಲೇಷಿಸಿದ್ದೇವೆ. ಈ ಎಲ್ಲಾ ಐದು ಅಂಶಗಳಿಗೆ ನೀಡುವ ಅಂಕಗಳ ಸರಾಸರಿ ಮೊತ್ತವನ್ನು ತೆಗೆದುಕೊಂಡಿದ್ದೇವೆ' ಎಂದು ಝುಟೋಬಿ ತಿಳಿಸಿದೆ.

ಒಂದು ಲಕ್ಷ ಜನರು ಪ್ರಯಾಣಿಸುವ ರಸ್ತೆಯಲ್ಲಿ ಮರಣ ಪ್ರಮಾಣ ಎಷ್ಟಿದೆ, ಕಾರಿನಲ್ಲಿ ಮುಂದೆ ಕುಳಿತು ಪ್ರಯಾಣಿಸುವ ಎಷ್ಟು ಮಂದಿ ಸೀಟ್ ಬೆಲ್ಟ್ ಧರಿಸಿದ್ದರು, ಮದ್ಯಸೇವಿಸಿ ವಾಹನ ಚಾಲನೆ ಮಾಡಿ ಅಪಘಾತಕ್ಕೀಡಾಗಿ ಸಾವನ್ನಪ್ಪಿದವರ ಸಂಖ್ಯೆ– ಇಂಥ ಅಂಶಗಳನ್ನು ಅಧ್ಯಯನ ಒಳಗೊಂಡಿತ್ತು.

ಸಂತೋಷ ಸೂಚ್ಯಂಕ: ಫಿನ್ಲೆಂಡ್‌ಗೆ ಅಗ್ರಸ್ಥಾನ

ಹೆಲ್ಸಿಂಕಿ (ಫಿನ್ಲೆಂಡ್): ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ವಿಶ್ವ ಸಂತೋಷದ ವರದಿಯಲ್ಲಿ ಫಿನ್ಲೆಂಡ್ ಸತತವಾಗಿ ನಾಲ್ಕನೇ ವರ್ಷವೂ ಮೊದಲನೇ ಸ್ಥಾನದಲ್ಲಿದೆ.

ಕೋವಿಡ್–19 ಸಾಂಕ್ರಾಮಿಕದ ನಡುವೆಯೂ ಫಿನ್ಲೆಂಡ್ ಈ ಗರಿಮೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಆದಾಯ, ಭ್ರಷ್ಟಾಚಾರದ ಮಟ್ಟ, ವೈಯಕ್ತಿಕ ಸ್ವಾತಂತ್ರ್ಯ, ಆರೋಗ್ಯಕರ ಜೀವನ, ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಸಾಮಾಜಿಕ ಬೆಂಬಲ ಮುಂತಾದ ಅಂಶಗಳನ್ನು ಪರಿಗಣಿಸಿ ಈ ಸೂಚ್ಯಂಕ ಪಟ್ಟಿ ಸಿದ್ಧಪಡಿಸಲಾಗಿದೆ.

ಪರಸ್ಪರ ನಂಬಿಕೆಯ ಕ್ರಮಾಂಕದಲ್ಲಿ ಫಿನ್ಲೆಂಡ್ ಉನ್ನತ ಸ್ಥಾನದಲ್ಲಿದ್ದು, ಇದು ಕೋವಿಡ್ ಸಂದರ್ಭದಲ್ಲಿ ಜೀವ ಮತ್ತು ಜೀವನೋಪಾಯಗಳನ್ನು ರಕ್ಷಿಸಲು ನೆರವಾಗಿದೆ ಎಂದು ವರದಿ ತಿಳಿಸಿದೆ.

ಅಗ್ರ ಸ್ಥಾನಗಳಲ್ಲಿ ಯುರೋಪಿಯನ್ ರಾಷ್ಟ್ರಗಳು ಮತ್ತೊಮ್ಮೆ ಪ್ರಾಬಲ್ಯ ಗಳಿಸಿವೆ. ಡೆನ್ಮಾರ್ಕ್ ಎರಡನೇ ಸ್ಥಾನದಲ್ಲಿದ್ದರೆ, ಸ್ವಿಟ್ಜರ್ಲೆಂಡ್, ಐಲ್ಯಾಂಡ್ ಮತ್ತು ನೆದರ್ಲೆಂಡ್ ನಂತರದ ಸ್ಥಾನದಲ್ಲಿವೆ.

ಕಳೆದ ಬಾರಿ ಎಂಟನೇ ಸ್ಥಾನದಲ್ಲಿದ್ದ ನ್ಯೂಜಿಲೆಂಡ್ ಈ ಬಾರಿ ಒಂಬತ್ತನೇ ಸ್ಥಾನಕ್ಕೆ ಕುಸಿದಿದೆ. ಜರ್ಮನಿ 13, ಫ್ರಾನ್ಸ್ 21ನೇ ಸ್ಥಾನದಲ್ಲಿದೆ. ಇಂಗ್ಲೆಂಡ್ 13ರಿಂದ 17ನೇ ಸ್ಥಾನಕ್ಕೆ ಕುಸಿದಿದ್ದರೆ, ಅಮೆರಿಕ 19ನೇ ಸ್ಥಾನಕ್ಕೆ ಇಳಿದಿದೆ. ಅಫ್ಘಾನಿಸ್ತಾನವನ್ನು ವಿಶ್ವದ ಅತೃಪ್ತಿಕರ ರಾಷ್ಟ್ರವೆಂದು ಪರಿಗಣಿಸಲಾಗಿದೆ.

'ಕೋವಿಡ್ ಜನರ ಜೀವನದ ಮೇಲೆ ಪರಿಣಾಮ ಬೀರಿರುವುದು ನಿಜ. ಆದರೆ, ಇದು ಸಹಭಾಳ್ವೆ ಮತ್ತು ಒಗ್ಗಟ್ಟನ್ನು ಕಲಿಸಿದೆ. ಸಂಪತ್ತಿನ ಸಂಗ್ರಹದ ಬದಲು ಯೋಗಕ್ಷೇಮವನ್ನು ಗುರಿಯಾಗಿಸಿಕೊಳ್ಳಬೇಕು ಎಂಬ ತುರ್ತು ಅಗತ್ಯವನ್ನು ಕೋವಿಡ್‌ನಿಂದ ಅರಿಯಬೇಕಿದೆ' ಎಂದು ವರದಿ ತಿಳಿಸಿದೆ.



ಗುಂಡಣ್ಣ



ದಿನ ಭವಿಷ್ಯ

ಶನಿವಾರ 20 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಸಪ್ತಮಿ ಗಂ. 50-54 (ರಾ. 2-52) ಶನಿವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 16-55 (ಹ. 1-16) ಪ್ರೀತಿ ನಾಮ ಯೋಗ ಗಂ. 6-13 ಗರಜ ಕರಣ ಗಂ. 18-41 ವಿಷ ಗಂ. 32-11 ಅಮೃತ ಗಂ. 7-32: ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-29 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 5, 8

ಮೇಷ: ಕೃಷಿ ಕಾಮಗಾರಿಗಳ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಹಣಕಾಸು ಸಂಸ್ಥೆಗಳ ಮೊರೆ ಹೋಗಬೇಕಾದೀತು. ದೂರದ ಪ್ರಯಾಣ ಮಾಡಬೇಕಾದೀತು. ಸ್ವಂತ ವಾಹನ ಖರೀದಿಯಿಂದ ನೆಮ್ಮದಿ ಕಾಣುವಿರಿ.

ವೃಷಭ: ಹಂತಹಂತವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಬಂಧುಗಳ ಆಗಮನದಿಂದ ಸಂತೋಷದ ವಾತಾವರಣ. ಸಂಬಂಧಿಕರೊಂದಿಗೆ ಸುದೀರ್ಘ ಆಪ್ತಸಮಾಲೋಚನೆಯಿಂದಾಗಿ ಬಾಂಧವ್ಯದಲ್ಲಿ ವೃದ್ಧಿ.

ಮಿಥುನ: ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಹರಿಸಬೇಕಾದೀತು. ನೆರೆಯವರೊಂದಿಗೆ ಸ್ನೇಹ ಸಂಬಂಧಗಳು ವೃದ್ಧಿಯಾಗಲಿವೆ. ಮನೆ ಬದಲಾವಣೆ ವಿಚಾರ ಚರ್ಚೆಗೆ ಬರಲಿದೆ. ಅತಿಯಾದ ಆಯಾಸದಿಂದ ಬಳಲುವಿರಿ.

ಕರ್ಕಾಟಕ: ಮನೆಯವರ ಅಸಮ್ಮತಿಯ ನಡುವೆಯೂ ದೂರ ಪ್ರಯಾಣ ಮಾಡಬೇಕಾದೀತು. ಪತ್ನಿವರ್ಗದವರಿಂದ ಸಹಾಯ ದೊರಕಲಿದೆ. ಸಂಬಂಧಿಗಳ ಮಧ್ಯಸ್ಥಿಕೆಯಿಂದಾಗಿ ಸಮಸ್ಯೆ ನಿವಾರಣೆಯಾಗಲಿದೆ.

ಸಿಂಹ: ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಸ್ಯ. ಗುರುದೇವತಾ ದರ್ಶನ ಮಾಡುವ ಸಾಧ್ಯತೆ ಕಂಡುಬರುವುದು.

ಕನ್ಯಾ: ತಂದೆ ತಾಯಿಗಳಿಗೆ ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಸಾಧ್ಯತೆ. ಸತ್ಪುರುಷರ ಸಂದರ್ಶನ ಮಾಡುವ ಸಂಭವ. ಅಧ್ಯಯನದಲ್ಲಿಯ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಮಾರ್ಗವಾಗಲಿದೆ.

ತುಲಾ: ಜಮೀನಿನ ಕೆಲಸ-ಕಾರ್ಯಗಳು ಭರದಿಂದ ಸಾಗುವುದರ ಜೊತೆಗೆ ಕಾಮಗಾರಿಗಳು ಹೆಚ್ಚಳಗೊಳ್ಳುವವು. ಹಣಕಾಸು ಸಂಸ್ಥೆಗಳಿಂದ ಸಹಾಯ ಪಡೆಯುವ ಅವಶ್ಯಕತೆ ನೀಗಲಿದೆ.

ವೃಶ್ಚಿಕ: ತರಕಾರಿ ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಅಧಿಕ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿ ನೀಡುವ ಸಾಧ್ಯತೆ. ಧಾನ್ಯ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಹಿನ್ನಡೆ.

ಧನು: ಪ್ರಾಪ್ತ ವಯಸ್ಕರು ವೈವಾಹಿಕ ಜೀವನಕ್ಕೆ ಕಾಲಿಡುವ ಪ್ರಯತ್ನಗಳು ಫಲ ನೀಡಲಿವೆ. ಗಣ್ಯರೊಂದಿಗೆ ಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ. ನಿಮ್ಮ ಸಹಾಯ ಸಲಹೆ ಕೋರಿ ಬರುವವರಿಗೆ ಸಹಾಯ ನೀಡಿ.

ಮಕರ: ಚಿನ್ನಾಭರಣಗಳ ವ್ಯವಹಾರ ಪ್ರಾರಂಭಿಸಲು ಉತ್ತಮ ದಿನ. ಲೆಕ್ಕಪತ್ರ ಪರಿಶೀಲನೆಯಲ್ಲಿ ಹೆಚ್ಚಿನ ಕಾಲ ಕಳೆಯಬೇಕಾದೀತು. ಉತ್ತಮ ಆದಾಯ. ಪುಸ್ತಕ ಖರೀದಿಗಾಗಿ ವೆಚ್ಚವನ್ನು ಭರಿಸಬೇಕಾದೀತು.

ಕುಂಭ: ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಕೆಲಸಗಳು ಪೂರ್ಣಗೊಂಡು ನೆಮ್ಮದಿಯನ್ನು ಉಂಟುಮಾಡಲಿದೆ. ಮಕ್ಕಳ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯಪೂರ್ವಕ ಪ್ರಸ್ತಾಪಗಳು ಬರಲಿದೆ. ಸಾಲದಿಂದ ಮುಕ್ತಿ.


ಮೀನ: ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ. ಲೋಕೋಪಯೋಗಿ ಇಲಾಖೆ, ತಾಂತ್ರಿಕ ಇಲಾಖೆಯ ಕಂಪ್ಯೂಟರ್ ವಿಭಾಗದವರಿಗೆ ಅನುಕೂಲ. ರಾಜಕೀಯದಲ್ಲಿ ಮಾನಸಿಕ ದ್ವಂದ್ವ ಏರ್ಪಡಲಿದೆ.

ನಿಮ್ಮ ಜನ್ಮದಿನ 20-ಮಾರ್ಚ್ ಈ ದಿನ ಅತ್ಯಂತ ಶುಭಕರ. ಅತ್ಯಂತ ಪ್ರಿಯವಾದ ಹುದ್ದೆಯನ್ನೇ ಅಲಂಕರಿಸುವ ಸಾಧ್ಯತೆ. ಆರೋಗ್ಯ ಸ್ಥಿತಿಯಲ್ಲಿ ಉತ್ತಮವಾಗಿರುವುದು. ಮಕ್ಕಳ ಸಲುವಾಗಿ ವಿದೇಶ ಪ್ರಯಾಣವನ್ನು ಮಾಡಬೇಕಾದೀತು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ದೇವರ ಮೊರೆ ಹೋಗುವುದರ ಜೊತೆಗೆ ಹೆಚ್ಚಿನ ವೆಚ್ಚವನ್ನು ಭರಿಸಬೇಕಾದೀತು.

ಪದಬಂಧ 4542 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜರಿಯದೇ ವಹಿಸಿಕೊಂಡ ಹೊಣೆಗಾರಿಕೆ (4)
3.ಜಲದಲ್ಲಿರುವ ತೊಡಕು! (3)
4.ವೇದೋಕ್ತ ವಿಧಿಗಳನ್ನು ಮಾಡಿಸುವವ (4)
6.ಒಲುಮೆಯಿಂದ ಮಾಡಿದ ಒತ್ತಾಯ! (3)
8.ಕಾರನ್ನೇರಿದ ಉದ್ದೇಶ ಇಲ್ಲಿದೆ (3)
9.ಬೆಂದಕ್ಕಿ ಕಾಳು (3)
10.ಬದಲಾಗ ತಕ್ಕ ಮನೋವೃತ್ತಿ (3)
12.ಸರ ಧರಿಸಿ ಮಾಡಿದ ವ್ಯಾಯಾಮ (4)
14.ಕರಿಯ ಮರಿ ಬಿದ್ದಿರುವ ಗುಂಡಿ (3)
15.ಬಲು ಸೂಕ್ಷ್ಮ ಎಳೆಯಿದು (4)

ಮೇಲಿಂದ ಕೆಳಕ್ಕೆ
1.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
2.ಪುರಿಯೊಳಗಡಗಿರುವ ಶತ್ರು (2)
3.ಹರಾಜು ನಡೆಯುವ ಜಾಗದಲ್ಲಿ ಹಡಗು ಬಂದಿದೆಯಲ್ಲಾ? (3)
5.ಹೆದರಿಕೆ ಅಥವಾ ಮನೋವ್ಯಥೆ (3)
7.ಮಡಿಕೆಗಳಿರುವ ಮಸ್ತಿಷ್ಕ (3)
8.ಕಾಲದಲ್ಲಿ ಇನಿಯ ಸಿಗುತ್ತಾನೆಯೇ? (3)
9.ಸಡಿಲವಾದುದನ್ನು ಹೀಗೆನ್ನಿ (3)
11.ತಿರುಗಿದರೂ ಇದು ದುರಸ್ತಿ! (3)
13.ಉಲ್ಟಾ ಪಲ್ಟಾ ಕಾಣುತ್ತಿರುವ ಮೂಗಿನ ಆಭರಣ (2)
14.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)



4541ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕರ್ಣಧಾರ 2.ಮಹಿಷ 4.ವ್ಯಾಯಾಮ 6.ಉಯಿಲು 7.ವಿರಹತಾಪ 10.ಸಾರಣಿ 11.ಧಿಮಾಕು 13.ನಗರ 14.ಖಡ್ಗಧಾರೆ
ಮೇಲಿಂದ ಕೆಳಕ್ಕೆ: 1.ಕರ್ತವ್ಯಾ 2.ಮಡಿಲು 3.ಷರಬತ್ತು 5.ಮನವಿ 6.ಉದಾಹರಣೆ 8.ಪರಿಧಿ 9.ಪ್ರಹಸನ 10.ಸಾಧಾರ 12.ಕುದುರೆ

ಸುಡೊಕು 4928

					7		8	3
8			1					7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4927 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಪ್ರಯೋಗಾಲಯಗಳ ಪೂರ್ಣ ಸಾಮರ್ಥ್ಯ ಬಳಕೆಗೆ ಮುಂದಾದ ಆರೋಗ್ಯ ಇಲಾಖೆ

ಕೋವಿಡ್: ಅಗ್ಗದ ಪರೀಕ್ಷೆಗೆ ವಿದಾಯ!

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಪ್ರತಿನಿತ್ಯ ಸರಾಸರಿ ಒಂದು ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸುವ ಗುರಿ ಹಾಕಿಕೊಂಡಿರುವ ಆರೋಗ್ಯ ಇಲಾಖೆ, ಅಗ್ಗದ ಮತ್ತು ಕೆಲವೇ ನಿಮಿಷಗಳಲ್ಲಿ ಫಲಿತಾಂಶ ನೀಡುವ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗಳನ್ನು ಕೈಬಿಡಲು ಮುಂದಾಗಿದೆ.

ಅದರ ಬದಲಾಗಿ, ಪ್ರಯೋಗಾಲಯಗಳ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ಆರ್‌ಟಿ-ಪಿಸಿಆರ್ ಪರೀಕ್ಷೆಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಲು ಯೋಜನೆ ರೂಪಿಸಿದೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಎರಡನೇ ಅಲೆಯ ಬಗ್ಗೆ ಎಚ್ಚರಿಕೆ ನೀಡಿ, ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡುವಂತೆ ಶಿಫಾರಸು ಮಾಡಿದೆ. ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ), ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಸೇರಿದಂತೆ ಕೋವಿಡ್ ಕಾಯಿಲೆಯ ಲಕ್ಷಣ ಇರುವವರು ಹಾಗೂ ಸೋಂಕಿತರ ಸಂಪರ್ಕಿತರಿಗೆ ಪರೀಕ್ಷೆ ನಡೆಸುವಂತೆ ತಜ್ಞರು ಸೂಚಿಸಿದ್ದಾರೆ. ಈ ಹಿಂದೆ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳವಾದ ಬಳಿಕ ರೈಲು ನಿಲ್ದಾಣ ಸೇರಿದಂತೆ ಜನದಟ್ಟಣೆ ಇರುವ ಪ್ರದೇಶಗಳಲ್ಲಿ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗಳನ್ನು ನಡೆಸಲಾಗಿತ್ತು. ಒಂದು ದಿನದ ಅವಧಿಯಲ್ಲಿ ನಡೆಸಲಾದ ಒಟ್ಟು ಪರೀಕ್ಷೆಗಳಲ್ಲಿ ಶೇ 30ರಷ್ಟು ಪರೀಕ್ಷೆಗಳಿಗೆ ಇದೇ ವಿಧಾನ ಅನುಸರಿಲಾಗುತ್ತಿತ್ತು.

ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಹೋಲಿಸಿದಲ್ಲಿ ಇದರ ಶುಲ್ಕ ಅರ್ಧದಷ್ಟು ಕಡಿಮೆಯಿದೆ. ಖಾಸಗಿ ಪ್ರಯೋಗಾಲಯಕ್ಕೆ ತೆರಳಿ ಮಾಡಿಸಿಕೊಳ್ಳುವ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ₹ 800 ಶುಲ್ಕ ವಿಧಿಸಲಾಗುತ್ತಿದೆ. ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗೆ ₹ 400 ನಿಗದಿಪಡಿಸಲಾಗಿದೆ. ಆದರೆ, ಪರೀಕ್ಷೆಯ ಫಲಿತಾಂಶದ ಬಗ್ಗೆ ತಜ್ಞರೇ ಆಕ್ಷೇಪ ವ್ಯಕ್ತಪಡಿಸಿ, ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಆದ್ಯತೆ ನೀಡುವಂತೆ ಸೂಚಿಸಿದ್ದಾರೆ. ಹೀಗಾಗಿ, ಇಲಾಖೆಯು ಈಗ ಆ್ಯಂಟಿಜೆನ್ ಪರೀಕ್ಷೆಯನ್ನು ಪೂರ್ಣ ಪ್ರಮಾಣದಲ್ಲಿ ಕೈಬಿಟ್ಟು, ಆರ್‌ಟಿ-ಪಿಸಿಆರ್ ಪರೀಕ್ಷೆಗಳಿಗೆ ಆದ್ಯತೆ ನೀಡಲು ಮುಂದಾಗಿದೆ. ಆರೋಗ್ಯ ಕೇಂದ್ರಗಳು ಹಾಗೂ ಸಾರ್ವಜನಿಕ ಪ್ರದೇಶಗಳಲ್ಲಿ ವ್ಯಕ್ತಿಗಳ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತದೆ.

‘ಪ್ರಾರಂಭಿಕ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯೋಗಾಲಯಗಳು ಇರಲಿಲ್ಲ. ಹಾಗಾಗಿ, ಆ್ಯಂಟಿಜೆನ್ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಕೆಲವು ಪ್ರಕರಣಗಳಲ್ಲಿ ಆ್ಯಂಟಿಜೆನ್ ಪರೀಕ್ಷೆಯಲ್ಲಿ ‘ನೆಗೆಟಿವ್’ ಎಂಬ ಫಲಿತಾಂಶ ಬಂದರೂ ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ತಜ್ಞರು ಕೂಡ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಆದ್ಯತೆ ನೀಡಲು ಶಿಫಾರಸು ಮಾಡಿದ್ದಾರೆ. ಹಾಗಾಗಿ, ಎಲ್ಲರಿಗೂ ಆರ್‌ಟಿ-ಪಿಸಿಆರ್ ನಡೆಸಲು ಮುಂದಾಗಿದ್ದೇವೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಕೋವಿಡ್ ಪರೀಕ್ಷೆಗಳ ವಿವರ

41.17 ಲಕ್ಷ — ರಾಜ್ಯದಲ್ಲಿ ನಡೆಸಲಾದ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಗಳು

1.60 ಕೋಟಿ — ಆರ್‌ಟಿ-ಪಿಸಿಆರ್ ಹಾಗೂ ವಿವಿಧ ಮಾದರಿ ಪರೀಕ್ಷೆಗಳು

2.01 ಕೋಟಿ — ವಿವಿಧ ಮಾದರಿಯಲ್ಲಿ ನಡೆಸಲಾದ ಒಟ್ಟು ಪರೀಕ್ಷೆಗಳು

ಗುರಿಗಿಂತ ಅಧಿಕ ಸಾಮರ್ಥ್ಯ

ಕೋವಿಡ್ ಪರೀಕ್ಷೆಯಲ್ಲಿ ಬೆಳಗಾವಿ, ರಾಯಚೂರು, ಹಾವೇರಿ, ಕೊಪ್ಪಳ, ಚಿತ್ರದುರ್ಗ, ಬೀದರ್ ಸೇರಿದಂತೆ ಉತ್ತರ ಕರ್ನಾಟಕ ಭಾಗದ ಕೆಲ ಜಿಲ್ಲೆಗಳು ಹಿಂದುಳಿದಿದ್ದು, ಅಲ್ಲಿ ಕಡಿಮೆ ಸಂಖ್ಯೆಯಲ್ಲಿ ಪರೀಕ್ಷೆಗಳು ನಡೆಯುತ್ತಿವೆ. ಕಳೆದ ಕೆಲ ದಿನಗಳಿಂದ ಅಧಿಕ ಪ್ರಕರಣಗಳು ವರದಿಯಾಗುತ್ತಿರುವ ಬೆಂಗಳೂರು, ದಕ್ಷಿಣ ಕನ್ನಡ, ಮೈಸೂರು, ಚಾಮರಾಜನಗರ, ಉಡುಪಿ, ಕೊಡಗು, ಬೆಳಗಾವಿ ಹಾಗೂ ತುಮಕೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆ ನಡೆಸಲು ಇಲಾಖೆ ಆರೋಗ್ಯ ಸಿಬ್ಬಂದಿಗೆ ಸೂಚಿಸಿದೆ.

ರಾಜ್ಯದಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನಿಂದ (ಐಸಿಎಂಆರ್) 183 ಪ್ರಯೋಗಾಲಯಗಳು ಮಾನ್ಯತೆ ಪಡೆದಿವೆ. ಇದರಲ್ಲಿ 63 ಸರ್ಕಾರಿ ಪ್ರಯೋಗಾಲಯಗಳಾಗಿವೆ. ಖಾಸಗಿ ಹಾಗೂ ಸರ್ಕಾರಿ ಪ್ರಯೋಗಾಲಯಗಳಿಂದ ದಿನವೊಂದಕ್ಕೆ 1.50 ಲಕ್ಷಕ್ಕೂ ಅಧಿಕ ಮಾದರಿಗಳನ್ನು ಪರೀಕ್ಷಿಸಬಹುದಾಗಿದೆ.

ಸೋಂಕಿತರ ಸಂಖ್ಯೆ ಏರಿಕೆಯಾಗುತ್ತಿರುವುದರಿಂದ ಪರೀಕ್ಷೆ ಸಂಖ್ಯೆ ಹೆಚ್ಚಿಸಲಾಗುತ್ತಿದೆ. ಸಂಶಯಿತರು ಸೇರಿ ಎಲ್ಲರಿಗೂ ಆರ್‌ಟಿ-ಪಿಸಿಆರ್ ವಿಧಾನದಲ್ಲಿ ಪರೀಕ್ಷೆ ನಡೆಸಲಾಗುತ್ತದೆ

ಡಾ.ಕೆ.ವಿ. ತ್ರಿಲೋಕ್ ಚಂದ್ರ, ಆರೋಗ್ಯ ಇಲಾಖೆ ಆಯುಕ್ತ

ಸುದ್ದಿ 2 ನಿಮಿಷ

ಯೋಜನಾ ರಹಿತ ಲಾಕ್‌ಡೌನ್; ಸಂಕಷ್ಟ ಎದುರಿಸುತ್ತಿರುವ ಕುಟುಂಬಗಳು

ನವದೆಹಲಿ: ದೂರದೃಷ್ಟಿ ಇಲ್ಲದೇ, ಯೋಜನಾ ರಹಿತವಾಗಿ ಕಳೆದ ವರ್ಷ ಸರ್ಕಾರ ದೇಶವ್ಯಾಪಿ ಮಾಡಿದ ಲಾಕ್‌ಡೌನ್‌ನಿಂದಾಗಿ ಇನ್ನೂ ಲಕ್ಷಾಂತರ ಕುಟುಂಬಗಳು ಸಂಕಷ್ಟ ಅನುಭವಿಸುತ್ತಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ಕೊರೊನಾ ಸೋಂಕು ಹರಡುವುದನ್ನು ತಡೆಯಲು ಸರ್ಕಾರ ಕಳೆದ ವರ್ಷ ಮಾರ್ಚ್ 24 ರಂದು ರಾಷ್ಟ್ರವ್ಯಾಪಿ ಲಾಕ್‌ಡೌನ್ ಘೋಷಣೆ ಮಾಡಿತು. ಸರ್ಕಾರದ ಯೋಜಿತವಲ್ಲದ ಈ ಕ್ರಮದಿಂದಾಗಿ ಬಡವರು ಮತ್ತು ವಲಸೆ ಕಾರ್ಮಿಕರು ತೀವ್ರ ತೊಂದರೆ ಅನುಭವಿಸಿದರು’ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಕೋವಿಡ್ 19 ಕಾರಣದಿಂದಾಗಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಪೈಕಿ ಭಾರತದಲ್ಲಿ ಮಕ್ಕಳ ಮತ್ತು ತಾಯಂದಿರ ಮರಣ ಪ್ರಮಾಣದಲ್ಲಿ ಏರಿಕೆಯಾಗಿರುವ ಸಾಧ್ಯತೆ ಇದೆ ಎಂದು ಹೇಳಿರುವ ಯುನಿಸೆಫ್‌ನ ಮಾಧ್ಯಮ ವರದಿಯ ತುಣುಕನ್ನು ರಾಹುಲ್ ಗಾಂಧಿ ತಮ್ಮ ಟ್ವೀಟ್‌ನೊಂದಿಗೆ ಸೇರಿಸಿದ್ದಾರೆ.



65 ವರ್ಷ ಮೇಲ್ಪಟ್ಟವರಲ್ಲಿ ಮರುಸೋಂಕು ಸಾಧ್ಯತೆ ಅಧಿಕ

ಲಂಡನ್ (ಪಿಟಿಐ): ಕೋವಿಡ್–19ರಿಂದ ಬಳಲಿ ಗುಣಮುಖರಾದವರ ಪೈಕಿ 65 ವರ್ಷ ಮೇಲ್ಪಟ್ಟವರು ಪುನಃ ಸೋಂಕಿಗೆ ಒಳಗಾಗುವ ಸಾಧ್ಯತೆ ಹೆಚ್ಚು ಎಂದು ಡೆನ್ಮಾರ್ಕ್ ವಿಜ್ಞಾನಿಗಳು ನಡೆಸಿರುವ ಅಧ್ಯಯನ ಹೇಳುತ್ತದೆ.

ಡೆನ್ಮಾರ್ಕ್‌ನ ಸ್ಟ್ಯಾಟೆನ್ಸ್ ಸೀರಂ ಇನ್‌ಸ್ಟಿಟ್ಯೂಟ್‌ನ ವಿಜ್ಞಾನಿಗಳು ಕೈಗೊಂಡಿರುವ ಅಧ್ಯಯನದ ವರದಿ ‘ಲಾನ್ಸೆಟ್’ ನಿಯತಕಾಲಿಕದಲ್ಲಿ ಪ್ರಕಟವಾಗಿದೆ. ಕಳೆದ ವರ್ಷ 40 ಲಕ್ಷಕ್ಕೂ ಹೆಚ್ಚು ಜನರನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. 65 ವರ್ಷಕ್ಕಿಂತ ಕೆಳಗಿನವರಲ್ಲಿ ಮತ್ತೊಮ್ಮೆ ಸೋಂಕು ತಗಲುವುದರ ವಿರುದ್ಧ ಶೇ 80ರಷ್ಟು ರಕ್ಷಣೆ ಕಂಡುಬಂದಿದ್ದು, ಅದೇ 65 ವರ್ಷ ಮೇಲ್ಪಟ್ಟ ವಯೋಮಾನದವರಲ್ಲಿ ಶೇ 47ರಷ್ಟು ರಕ್ಷಣೆ ಇತ್ತು. ಹೀಗಾಗಿ 65 ವರ್ಷ ಮೇಲ್ಪಟ್ಟವರು ಮತ್ತೊಮ್ಮೆ ಸೋಂಕಿಗೆ ಒಳಗಾಗುವ ಸಾಧ್ಯತೆ ಹೆಚ್ಚು ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಅಧ್ಯಯನದ ಭಾಗವಾಗಿದ್ದವರ ವಯಸ್ಸು, ಲಿಂಗ ಹಾಗೂ ಎಷ್ಟು ದಿನಗಳ ವರೆಗೆ ಸೋಂಕು ಇತ್ತು ಎಂಬ ಅಂಶಗಳನ್ನು ಬಳಸಿ ವಿಶ್ಲೇಷಣೆ ಮಾಡಲಾಗಿದೆ. ಈ ವಿಶ್ಲೇಷಣೆಯ ಆಧಾರದಲ್ಲಿ ಮರು ಸೋಂಕಿನ ಸಾಧ್ಯತೆ ಎಷ್ಟು ಎಂಬುದನ್ನು ವಿಜ್ಞಾನಿಗಳು ಅಂದಾಜಿಸಿದ್ದಾರೆ.

ಮುಖ್ಯಮಂತ್ರಿಗೆ ಟ್ವಿಟರ್‌ನಲ್ಲಿ ಸಿದ್ದರಾಮಯ್ಯ ಪ್ರಶ್ನೆ

ಎರಡನೆ ಅಲೆಯ ಸಂದರ್ಭದಲ್ಲಾದರೂ ಕೊರೊನಾವನ್ನು ಭ್ರಷ್ಟಾಚಾರಕ್ಕೆ ದುರ್ಬಳಕೆ ಮಾಡಿಕೊಳ್ಳದೆ ಜನರ ಜೀವ ಉಳಿಸಿ– ಸಿದ್ದರಾಮಯ್ಯ

‘ಭ್ರಷ್ಟಾಚಾರದ ವೈರಸ್‌ಗೆ ಲಸಿಕೆ ಎಲ್ಲಿದೆ?’

ಬೆಂಗಳೂರು: ‘ಕೊರೊನಾ ವೈರಸ್‌ಗೆ ಲಸಿಕೆ ಬಂದಿದೆ. ನಿಮ್ಮ ಸರ್ಕಾರಕ್ಕೆ ತಗುಲಿರುವ ಭ್ರಷ್ಟಾಚಾರದ ವೈರಸ್‌ಗೆ ಎಲ್ಲಿಂದ ಲಸಿಕೆ ತರುವುದು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

ಶುಕ್ರವಾರ ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ‘ಕೊರೊನಾ ನಿಯಂತ್ರಣಕ್ಕೆ ಸರ್ಕಾರ ಖರ್ಚು ಮಾಡಿದ್ದರೆ ಈಗ ಏಕೆ ಸೋಂಕು ಉಲ್ಬಣಗೊಳ್ಳುತ್ತಿತ್ತು. ಕೊರೊನಾ ನಿಯಂತ್ರಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ನಮ್ಮ ಆರೋಪಕ್ಕೆ ಸಾಕ್ಷಿ ನೀಡುವಂತಿದೆ ಮತ್ತೆ ಕೇಕೆ ಹಾಕುತ್ತಿರುವ ಕೊರೊನಾ ವೈರಸ್’ ಎಂದಿದ್ದಾರೆ.



‘ಕೊರೊನಾ ನಿಯಂತ್ರಣಕ್ಕೆ ₹ 5,372 ಕೋಟಿ ಖರ್ಚು ಮಾಡಲಾಗಿದೆ ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ. ಆದರೆ, ಖರ್ಚಿನ ವಿವರ ಮಾತ್ರ ನೀಡಿಲ್ಲ. ಈಗಲಾದರೂ ಯಾವ ಉದ್ದೇಶಗಳಿಗೆ ಆ ಹಣ ವೆಚ್ಚ ಮಾಡಲಾಗಿದೆ ಎಂಬ ವಿವರವನ್ನು ಜನರ ಮುಂದಿಡಿ’ ಎಂದು ಆಗ್ರಹಿಸಿದ್ದಾರೆ.

ಬಿಜೆಪಿ ಪ್ರತ್ಯುತ್ತರ: ಟ್ವಿಟರ್‌ನಲ್ಲೇ ಪ್ರತಿಕ್ರಿಯೆ ನೀಡಿರುವ ಬಿಜೆಪಿ ರಾಜ್ಯ ಘಟಕ, ‘ಮೋದಿ ಸರ್ಕಾರ ಲಸಿಕೆ ಕಂಡುಹಿಡಿದು 70ಕ್ಕೂ ಹೆಚ್ಚು ದೇಶಗಳಿಗೆ ಒದಗಿಸಿದೆ. ಆದರೆ, ಕಾಂಗ್ರೆಸ್ ನಾಯಕರ ಕೊಳಕು ಮನಸ್ಥಿತಿಗೆ ಲಸಿಕೆ ಶೋಧಿಸಲು ಸಾಧ್ಯವಿಲ್ಲ. ಆರು ದಶಕದಿಂದ ದೇಶದಲ್ಲಿ ಕಾಂಗ್ರೆಸ್ ನಡೆಸಿದ ಲೂಟಿಯ ಲೆಕ್ಕ ಕೇಳುವ ಧೈರ್ಯ ತೋರುವಿರಾ? ಲೆಕ್ಕ ಕೇಳುವುದಕ್ಕೆ ಗಾಂಧಿ ಕುಟುಂಬದ ಭಯವೆ’ ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದೆ.

‘₹ 1 ಲಕ್ಷ ಕೋಟಿಗೂ ಹೆಚ್ಚು ಸಾಲ ಮಾಡಿ ರಾಜ್ಯವನ್ನು ಸಾಲದ ಶೂಲದ ಮೇಲೇರಿಸಿದ್ದು ನೀವೇ ಅಲ್ಲವೆ? ಟಾರ್ಚ್ ಬೆಳಕಿನಲ್ಲಿ ಬಜೆಟ್ ಮಂಡಿಸಿದ್ದ ವಲಸೆ ನಾಯಕ 2021ರಲ್ಲಿ ಲೆಕ್ಕ ಕೇಳುತ್ತಿರುವುದು ಹಾಸ್ಯಾಸ್ಪದ’ ಎಂದು ಟೀಕಿಸಿದೆ.

ಒಂದೇ ದಿನ 1,587 ಪ್ರಕರಣ: ನಾಲ್ಕು ತಿಂಗಳಿನಲ್ಲಿ ಗರಿಷ್ಠ

4 ದಿನಗಳಲ್ಲಿ 5,487 ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಸತತ ನಾಲ್ಕನೇ ದಿನ ಕೂಡ ಹೊಸ ಪ್ರಕರಣಗಳ ಸಂಖ್ಯೆ ಸಾವಿರದ ಗಡಿ ದಾಟಿದೆ. ಶುಕ್ರವಾರ 1,587 ಪ್ರಕರಣಗಳು ದೃಢಪಟ್ಟಿವೆ. ಸುಮಾರು ನಾಲ್ಕು ತಿಂಗಳಿನಿಂದೀಚೆಗೆ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಕಳೆದ ನ.25ರಂದು ರಾಜ್ಯದಲ್ಲಿ 1,630 ಪ್ರಕರಣಗಳು ವರದಿಯಾಗಿದ್ದವು. ಬಳಿಕ ಸೋಂಕಿತರ ಸಂಖ್ಯೆ ಇಳಿಮುಖ ಮಾಡಿತ್ತು. ಈಗ ಕೇವಲ ನಾಲ್ಕು ದಿನಗಳಲ್ಲಿ 5,487 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಈ ತಿಂಗಳು 19 ದಿನಗಳಲ್ಲಿ 15,564 ಮಂದಿ ಕೊರೊನಾ ಸೋಂಕಿತರಾಗಿದ್ದಾರೆ. ಹೊಸ ಪ್ರಕರಣಗಳು ಏರುಗತಿ ಪಡೆದ ಕಾರಣ ಸಕ್ರಿಯ ಪ್ರಕರಣಗಳು ಮತ್ತಷ್ಟು ಹೆಚ್ಚಳವಾಗಿದ್ದು, 12,067 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 131 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ.

ಕೋವಿಡ್ ಕಾಯಿಲೆಯಿಂದ ಸಾವಿಗೀಡಾದವರ ಸಂಖ್ಯೆ ಕೂಡ ಏರಿಕೆ ಕಂಡಿದ್ದು, ಸೋಂಕಿತರಲ್ಲಿ ಬೆಂಗಳೂರಿನಲ್ಲಿ 6 ಮಂದಿ, ಮೈಸೂರಿನಲ್ಲಿ ಇಬ್ಬರು ಹಾಗೂ ಬೀದರ್, ಧಾರವಾಡದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,425ಕ್ಕೆ ತಲುಪಿದೆ.

ಕೋವಿಡ್ ಪೀಡಿತರಲ್ಲಿ ಮತ್ತೆ 869 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 9.42 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 91,884 ಮಂದಿಗೆ ಪರೀಕ್ಷೆ ಮಾಡಲಾಗಿದೆ. ಈವರೆಗೆ ನಡೆಸಲಾದ ಪರೀಕ್ಷೆಗಳ ಸಂಖ್ಯೆ 2.01 ಕೋಟಿ ಗಡಿ ದಾಟಿದೆ.

ಬೆಂಗಳೂರಿನಲ್ಲಿ 4 ತಿಂಗಳ ಗರಿಷ್ಠ: ಬಾಗಲಕೋಟೆ ಬಿಟ್ಟು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಹೊಸದಾಗಿ 1,037 ಪ್ರಕರಣಗಳು ವರದಿಯಾಗಿದ್ದು, ನಾಲ್ಕು ತಿಂಗಳ ಬಳಿಕ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ಕಳೆದ ನ.22ರಂದು 1,039 ಮಂದಿಗೆ ಸೋಂಕು ದೃಢಪಟ್ಟಿತ್ತು. ಈವರೆಗೆ ಸೋಂಕಿತರಾದವರ ಸಂಖ್ಯೆ 4.15 ಲಕ್ಷ ದಾಟಿದೆ.

ಮೈಸೂರಿನಲ್ಲಿ ಮತ್ತೆ 49 ಪ್ರಕರಣಗಳು ದೃಢಪಟ್ಟಿವೆ. ಅಲ್ಲಿ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 54,682ಕ್ಕೆ ತಲುಪಿದೆ. ಕಲಬುರ್ಗಿಯಲ್ಲಿ 61, ತುಮಕೂರಿನಲ್ಲಿ 50, ದಕ್ಷಿಣ ಕನ್ನಡದಲ್ಲಿ 47, ಬೀದರ್‌ನಲ್ಲಿ 40, ಬೆಳಗಾವಿಯಲ್ಲಿ 37, ಹಾಸನದಲ್ಲಿ 35 ಪ್ರಕರಣಗಳು ವರದಿಯಾಗಿವೆ.

1.19 ಲಕ್ಷ ಮಂದಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 3,448 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 1.19 ಲಕ್ಷ ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ.

3,488 ಕಡೆ ಕೋವಿಡ್ ಲಸಿಕೆ ವಿತರಣೆಗೆ ಯೋಜನೆ ರೂಪಿಸಲಾಗಿತ್ತು. 40 ಕೇಂದ್ರಗಳಲ್ಲಿ ಕಾರಣಾಂತರಗಳಿಂದ ಲಸಿಕೆ ವಿತರಣೆ ನಡೆದಿಲ್ಲ. ಲಸಿಕೆ ಪಡೆದವರಲ್ಲಿ 88,780 ಲಕ್ಷ ಮಂದಿ ಹಿರಿಯ ನಾಗರಿಕರಾಗಿದ್ದಾರೆ. ಈವರೆಗೆ 21.30 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.08 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.08 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ.

60 ವರ್ಷ ಮೇಲ್ಪಟ್ಟವರಲ್ಲಿ 8.70 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 2.11 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಕೋವಿಡ್ ಮುಂಚೂಣಿ ಯೋಧರಲ್ಲಿ 1.89 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಅವರಲ್ಲಿ 41,360 ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಮೃಗಾಲಯದಲ್ಲಿ ಸಿಂಹ ದಾಳಿ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ (ಪಿಟಿಐ): ಇಲ್ಲಿನ ಅಲಿಪೋರ್ ಮೃಗಾಲಯದಲ್ಲಿ ವ್ಯಕ್ತಿಯೊಬ್ಬರು ಸಿಂಹದ ದಾಳಿಯಿಂದ ತೀವ್ರವಾಗಿ ಗಾಯಗೊಂಡ ಘಟನೆ ಶುಕ್ರವಾರ ನಡೆದಿದೆ. ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಆತ ಪ್ರಾಣಿಗಳ ವಾಸ ಸ್ಥಳವನ್ನು ಪ್ರವೇಶಿಸಿದಾಗ ಈ ಘಟನೆ ನಡೆದಿದೆ.

ಗಾಯಾಳುವನ್ನು ಎಸ್‌ಎಸ್‌ಕೆಎಂ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪರಿಸ್ಥಿತಿ ಗಂಭೀರವಾಗಿದೆ. ಬೆಳಿಗ್ಗೆ 11.30ರ ವೇಳೆಗೆ ಘಟನೆ ನಡೆದಿದ್ದು, ವ್ಯಕ್ತಿಯು ಎರಡು ತಂತಿ ಬೇಲಿಗಳನ್ನು ದಾಟಿ ಹೋಗಿದ್ದಾನೆ. ಆ ಸಂದರ್ಭದಲ್ಲಿ ಸಿಂಹವು ಪಂಜರದಿಂದ ಹೊರಗಿದ್ದು, ದಾಳಿ ನಡೆಸಿದೆ.

ಎರಡು ಭಾರತೀಯ ಲಸಿಕೆಗಳ ಬಗ್ಗೆ ಯಾವುದೇ ತಪ್ಪು ಕಲ್ಪನೆ ಬೇಡ: ಲೋಕಸಭೆಯಲ್ಲಿ ಸಚಿವರ ಉತ್ತರ

ಲಸಿಕಾ ಕಾರ್ಯಕ್ರಮ: ಮುಂದಿನ ದಿನಗಳಲ್ಲಿ ವಿಸ್ತರಣೆ

ನವದೆಹಲಿ (ಪಿಟಿಐ): ಮುಂದಿನ ದಿನಗಳಲ್ಲಿ ಕೋವಿಡ್‌–19ರ ಲಸಿಕಾ ಕಾರ್ಯಕ್ರಮವನ್ನು ವಿಸ್ತರಿಸಲಾಗುವುದು ಎಂದು ಹೇಳಿರುವ ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ದೇಶದಲ್ಲಿ ನೀಡಲಾಗುತ್ತಿರುವ ಎರಡು ಭಾರತೀಯ ಲಸಿಕೆಗಳ ಬಗ್ಗೆ ಯಾವುದೇ ತಪ್ಪು ಕಲ್ಪನೆ ಬೇಡ ಎಂದಿದ್ದಾರೆ.

ಲೋಕಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಇಲ್ಲಿಯವರೆಗೆ 3.5 ರಿಂದ 4 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ. ಲಸಿಕೆಗಳ ಅಡ್ಡಪರಿಣಾಮಗಳು ಶೇ 0.000432 ರಷ್ಟು ದಾಖಲಾಗಿವೆ ಎಂದು ಮಾಹಿತಿ ನೀಡಿದರು.

ಲಸಿಕಾ ಕಾರ್ಯಕ್ರಮವು ತಜ್ಞರ ಅಭಿಪ್ರಾಯ ಆಧರಿಸಿ ನಡೆಯುತ್ತಿದ್ದು, ಆರಂಭಿಕ ಹಂತದಲ್ಲಿ ಆರೋಗ್ಯ ಸಿಬ್ಬಂದಿ ಸೇರಿದಂತೆ ಎಲ್ಲ ಆದ್ಯತಾ ಗುಂಪುಗಳಿಗೆ ಲಸಿಕೆ ನೀಡಲಾಗುತ್ತಿದೆ. ಜತೆಗೆ ಹಿರಿಯ ನಾಗರಿಕರು ಮತ್ತು 45ರಿಂದ 59ರ ವಯೋಮಾನದವರಿಗೂ ಲಸಿಕೆ ನೀಡಲಾಗುತ್ತಿದೆ. ಇದು ಮುಂದಿನ ದಿನಗಳಲ್ಲಿ ವಿಸ್ತರಣೆಯಾಗಲಿದೆ ಎಂದು ಉತ್ತರಿಸಿದರು.

ಭಾರತೀಯ ತಜ್ಞರ ಅಭಿಪ್ರಾಯಗಳ ಜತೆಗೆ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಯನ್ನೂ ಸರ್ಕಾರ ಪಾಲಿಸುತ್ತಿದೆ ಎಂದು ತಿಳಿಸಿದರು.

ಕೋವಿಡ್ ಲಸಿಕೆಯನ್ನು ಸರ್ಕಾರ ಸಾರ್ವತ್ರಿಕವಾಗಿ ನೀಡುವ ಗುರಿ ಹೊಂದಿದೆಯೇ ಎಂದು ಎನ್‌ಸಿಪಿ ಸಂಸದರಾದ ಸುಪ್ರಿಯಾ ಸುಲೆ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ದೇಶದ ಪ್ರತಿಯೊಬ್ಬ ವ್ಯಕ್ತಿಗೂ ಲಸಿಕೆ ನೀಡುವುದು, ವೈಜ್ಞಾನಿಕವಾಗಿ ಅಗತ್ಯವಿಲ್ಲ ಎಂದರು.



ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರು ಶುಕ್ರವಾರ ಸಂಸತ್ತಿನಲ್ಲಿ ಮಾತನಾಡಿದರು

ಮಕ್ಕಳ ಮೇಲೆ ಕಡಿಮೆ ಪರಿಣಾಮ: ಕೊರೊನಾ ಸೋಂಕು 0–14 ವಯಸ್ಸಿನ ಮಕ್ಕಳ ಮೇಲೆ ಬೀರುವ ಪರಿಣಾಮ ಕಡಿಮೆ ಎಂಬುದು ವಿಶ್ಲೇಷಣೆಗಳಿಂದ ಗೊತ್ತಾಗಿದೆ ಎಂದು ಸಚಿವ ಹರ್ಷವರ್ಧನ್ ಲೋಕಸಭೆಯಲ್ಲಿ ತಿಳಿಸಿದರು.

ಮಕ್ಕಳಲ್ಲಿ ಸೋಂಕು ಸೌಮ್ಯವಾಗಿರುತ್ತದೆ ಮತ್ತು ಹೆಚ್ಚಿನವು ಲಕ್ಷಣ ರಹಿತವಾಗಿರುತ್ತವೆ. ಹಾಗಾಗಿ ಮಕ್ಕಳ ಮೇಲೆ ಕೋವಿಡ್‌–19ರ ದುಷ್ಪರಿಣಾಮಗಳನ್ನು ಕಡಿಮೆ ಮಾಡಲು ಸದ್ಯ ಯಾವುದೇ ನಿರ್ದಿಷ್ಟ ಕ್ರಿಯಾ ಯೋಜನೆ ರೂಪಿಸಿಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ್ದಾರೆ.

ಮಕ್ಕಳಲ್ಲಿ ಕೋವಿಡ್‌–19ರ ಸೋಂಕಿನ ದೀರ್ಘಕಾಲೀನ ಪರಿಣಾಮದ ಕುರಿತು ‘ಏಮ್ಸ್’ನ ಮಕ್ಕಳ ವೈದ್ಯರ ವಿಭಾಗ ದಾಖಲಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ರೂಪಾಂತರಿತ ವೈರಾಣುವಿಗೂ ಲಸಿಕ ಪರಿಣಾಮಕಾರಿ: ರೂಪಾಂತರಿತ ವೈರಾಣುಗಳ ವಿರುದ್ಧ ಕೋವ್ಯಾಕ್ಸಿನ್ ಲಸಿಕೆ ಪರಿಣಾಮಕಾರಿ. ಹಾಗಾಗಿ ಇದರ ಸಂಯೋಜನೆಯನ್ನು ಬದಲಾಯಿಸುವ ಅಗತ್ಯ ಎದುರಾಗಿಲ್ಲ ಎಂದು ಸರ್ಕಾರ ಶುಕ್ರವಾರ ಲೋಕಸಭೆಗೆ ತಿಳಿಸಿದೆ.

ಕೇಂದ್ರ ಆರೋಗ್ಯ ಖಾತೆಯ ರಾಜ್ಯ ಸಚಿವ ಅಶ್ವಿನಿ ಚೌಬೆ ಅವರು, ಭಾರತದಲ್ಲಿ ಪ್ರಸ್ತುತ ಕೋವಿಡ್‌–19ರ ನಾಲ್ಕು ರೂಪಾಂತರಿತ ವೈರಾಣುಗಳು ಪತ್ತೆಯಾಗಿವೆ. ಅವುಗಳಲ್ಲಿ ಎರಡು ಬ್ರಿಟನ್ ರೂಪಾಂತರಿತವಾಗಿದ್ದರೆ, ದಕ್ಷಿಣ ಆಫ್ರಿಕಾ ಮತ್ತು ಬ್ರೆಜಿಲಿನ್ ತಲಾ ಒಂದು ರೂಪಾಂತರಿತ ವೈರಾಣುಗಳಾಗಿವೆ ಎಂದು ತಿಳಿಸಿದರು.

ಬ್ರಿಟನ್ ಮತ್ತು ಬ್ರೆಜಿಲ್ ರೂಪಾಂತರಿತ ವೈರಾಣುಗಳ ವಿರುದ್ಧವೂ ಕೋವ್ಯಾಕ್ಸಿನ್ ಪರಿಣಾಮಕಾರಿಯಾಗಿದೆ. ದಕ್ಷಿಣ ಆಫ್ರಿಕಾದ ರೂಪಾಂತರಿಕ ವೈರಾಣುವಿನ ವಿರುದ್ಧ ಕೋವ್ಯಾಕ್ಸಿನ್ ಪರಿಣಾಮಕಾರಿತ್ವದ ಕುರಿತು ವಿಶ್ಲೇಷಣೆ ನಡೆಯುತ್ತಿದೆ ಎಂದು ಅವರು ಹೇಳಿದರು.

ಬ್ರಿಟನ್‌ನ ರೂಪಾಂತರಿತ ವೈರಾಣು ವಿರುದ್ಧ ಆಕ್ಸ್‌ಫರ್ಡ್– ಆಸ್ಟ್ರಾಜೆನೆಕಾದ ಕೋವಿಶೀಲ್ಡ್ ಲಸಿಕೆ ಶೇ 74.6ರಷ್ಟು ಪರಿಣಾಮಕಾರಿ. ಅಂತೆಯೇ ಬ್ರೆಜಿಲ್‌ನ ರೂಪಾಂತರಿತ ವೈರಾಣುವಿನ ಮೇಲೂ ಇದು ಪರಿಣಾಮಕಾರಿಯಾಗಿದೆ. ಆದರೆ ದಕ್ಷಿಣ ಆಫ್ರಿಕಾ ರೂಪಾಂತರಿತ ವೈರಾಣು ವಿರುದ್ಧ ಇದು ಕೇವಲ ಶೇ 10ರಷ್ಟು ಪರಿಣಾಮಕಾರಿ ಆಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಒಂದೇ ದಿನ 40 ಸಾವಿರದ ಸನಿಹಕ್ಕೆ ಕೋವಿಡ್ ಪ್ರಕರಣ ದಾಖಲು

ನವದೆಹಲಿ (ಪಿಟಿಐ): ಭಾರತದಲ್ಲಿ ಶುಕ್ರವಾರ ಒಂದೇ ದಿನ 39,726 ಕೋವಿಡ್–19 ಪ್ರಕರಣಗಳು ವರದಿಯಾಗಿದ್ದು, ಈ ವರ್ಷ ಇದುವರೆಗೆ ಒಂದೇ ದಿನದಲ್ಲಿ ದಾಖಲಾದ ಅತಿಹೆಚ್ಚು ಏರಿಕೆಯಾಗಿದೆ. ದೇಶದಲ್ಲಿ ಇದುವರೆಗೆ ಒಟ್ಟು 1,15,14,331 ಕೋವಿಡ್ ಪ್ರಕರಣಗಳು ವರದಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ.

2020ರ ನ. 29ರಂದು 24 ಗಂಟೆಗಳ ಅವಧಿಯಲ್ಲಿ 41,810 ಸೋಂಕಿನ ಪ್ರಕರಣಗಳು ವರದಿಯಾಗಿದ್ದವು. ಸೋಂಕುಗಳ ದೈನಂದಿನ ಏರಿಕೆ ಪ್ರಮಾಣದಲ್ಲಿ 110 ದಿನಗಳಲ್ಲಿ ಶುಕ್ರವಾರ ಅತಿಹೆಚ್ಚು ಪ್ರಕರಣಗಳು ವರದಿಯಾಗಿವೆ. ಅಂತೆಯೇ ಶುಕ್ರವಾರ 154 ಮಂದಿ ಸಾವಿಗೀಡಾಗಿದ್ದು, ಸಾವಿನ ಸಂಖ್ಯೆ ಒಟ್ಟಾರೆ 1,59,370ಕ್ಕೆ ಏರಿದೆ ಎಂದೂ ಸಚಿವಾಲಯದ ಅಂಕಿಅಂಶಗಳು ತಿಳಿಸಿವೆ.

ಸತತ 9ನೇ ದಿನವೂ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಒಟ್ಟಾರೆ ಸಕ್ರಿಯ ಪ್ರಕರಣಗಳ ಸಂಖ್ಯೆ 2,71,282ಕ್ಕೆ ತಲುಪಿದೆ. ಚೇತರಿಕೆಯ ಪ್ರಮಾಣ ಶೇ 96.26ಕ್ಕೆ ಕುಸಿದಿದೆ. ರೋಗದಿಂದ ಚೇತರಿಸಿಕೊಂಡವರ ಸಂಖ್ಯೆ 1,10,83,679ಕ್ಕೆ ಏರಿದರೆ, ಸಾವಿನ ಪ್ರಮಾಣವು ಶೇಕಡಾ 1.38ಕ್ಕೆ ಏರಿದೆ.

ಮಾರ್ಚ್ 18ರವರೆಗೆ ಒಟ್ಟಾರೆ 23,13,70,546 ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಗುರುವಾರ 10,57,383 ಮಾದರಿಗಳನ್ನು ಪರೀಕ್ಷಿಸಲಾಗಿದೆ.

ಮಹಾರಾಷ್ಟ್ರ: ಹಲವು ನಿರ್ಬಂಧ

ಮುಂಬೈ (ಪಿಟಿಐ): ಮಹಾರಾಷ್ಟ್ರ ಸರ್ಕಾರವು ರಂಗಮಂದಿರ ಮತ್ತು ಸಭಾಂಗಣಗಳ ಮೇಲೆ ನಿರ್ಬಂಧ ವಿಧಿಸಿ ಆದೇಶಿಸಿದೆ. ಅದರಂತೆ ಮಾರ್ಚ್ 31ರವರೆಗೆ ಸಾಮರ್ಥ್ಯದ ಶೇ 50ರಷ್ಟು ಆಸನಗಳ ಭರ್ತಿಗೆ ಮಾತ್ರ ಅವಕಾಶ ಕಲ್ಪಿಸಿದೆ.

ಅಂತೆಯೇ, ಆರೋಗ್ಯ ಮತ್ತು ಇತರೆ ಅಗತ್ಯ ಸೇವೆಗಳಿಗೆ ಸಂಬಂಧಿಸಿದ ಖಾಸಗಿ ಕಚೇರಿಗಳನ್ನು ಹೊರತುಪಡಿಸಿ, ಉಳಿದ ಕಚೇರಿಗಳು ಸಾಮರ್ಥ್ಯದ ಶೇ 50ರಷ್ಟು ಸಿಬ್ಬಂದಿಯಿಂದ ಕಾರ್ಯ ನಿರ್ವಹಿಸುವಂತೆ ಸರ್ಕಾರ ಅಧಿಸೂಚನೆ ಹೊರಡಿಸಿದೆ. ರಾಜ್ಯದಲ್ಲಿ ಗುರುವಾರ ಒಂದೇ ದಿನ 25,833 ಕೋವಿಡ್–19 ಪ್ರಕರಣ ದೃಢವಾದ ಬಳಿಕ ಸರ್ಕಾರ ಈ ಆದೇಶ ಹೊರಡಿಸಿದೆ.

ಲಾಕ್‌ಡೌನ್ ಆಯ್ಕೆಯಿದೆ: ಠಾಕ್ರೆ

ಮಹಾರಾಷ್ಟ್ರದಲ್ಲಿ ಮತ್ತೆ ಕೋವಿಡ್–19ರ ಪ್ರಕರಣಗಳು ಏರುತ್ತಿರುವ ಹಿನ್ನೆಲೆಯಲ್ಲಿ ಶುಕ್ರವಾರ ಮಾತನಾಡಿರುವ ಅಲ್ಲಿನ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ‘ಲಾಕ್‌ಡೌನ್ ಆಯ್ಕೆ ನಮ್ಮ ಮುಂದಿದೆ. ಆದರೆ ಜನರು ಕೋವಿಡ್–19ರ ಮಾರ್ಗಸೂಚಿಗಳನ್ನು ಪಾಲಿಸುತ್ತಾರೆ ಎಂಬ ವಿಶ್ವಾಸ ಇದೆ’ ಎಂದು ಹೇಳಿದ್ದಾರೆ.

ನಂದೂರ್‌ಬಾರ್‌ನಲ್ಲಿ ಸುದ್ದಿಗಾರರ ಜತೆ ಮಮಾತನಾಡಿದ ಅವರು, ಜನರು ಭಯಪಡದೆ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಪಂಜಾಬ್: ಶಾಲಾ–ಕಾಲೇಜು ಬಂದ್

ನವದೆಹಲಿ: ಕೋವಿಡ್–19 ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಮಾರ್ಚ್ 31ರವರೆಗೆ ಶಾಲಾ–ಕಾಲೇಜು ಬಂದ್ ಮಾಡುವಂತೆ ಸೂಚಿಸಿ ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ಶುಕ್ರವಾರ ಆದೇಶಿಸಿದ್ದಾರೆ.

ಸಿನಿಮಾ ಮಂದಿರ, ಮಾಲ್‌ಗಳಲ್ಲಿ ನಿಗದಿತ ಸಾಮರ್ಥ್ಯದ ಅರ್ಧದಷ್ಟು ಜನರ ಪ್ರವೇಶಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಶುಕ್ರವಾರ ಕೋವಿಡ್ ಕಾರ್ಯಪಡೆಯ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ವೈದ್ಯಕೀಯ ಮತ್ತು ನರ್ಸಿಂಗ್ ಕಾಲೇಜುಗಳನ್ನು ಹೊರತುಪಡಿಸಿ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಮಾರ್ಚ್ 20ರಿಂದ 31ರವರೆಗೆ ಮುಚ್ಚಲಾಗುವುದು. ಕೋವಿಡ್ ಪ್ರಸರಣ ಸರಪಳಿಯನ್ನು ಮುರಿಯಲು ಜನರು ತಮ್ಮ ಮನೆಗಳಲ್ಲಿ ಮುಂದಿನ ಎರಡು ವಾರಗಳ ಕಾಲ ಯಾವುದೇ ಕಾರ್ಯಕ್ರಮಗಳನ್ನು ನಡೆಸಬಾರದು’ ಎಂದು ಮನವಿ ಮಾಡಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು	12.25 ಕೋಟಿ ಒಟ್ಟು ಪ್ರಕರಣ ▲	1.154 ಕೋಟಿ ಒಟ್ಟು ಪ್ರಕರಣ ▲	9,66,689 ಒಟ್ಟು ಸೋಂಕಿತರು ▲
ಸಕ್ರಿಯ ಪ್ರಕರಣ	2.10 ಕೋಟಿ ▲	2.62 ಲಕ್ಷ ▼	12,067 ▲
ಗುಣಮುಖ	9.87 ಕೋಟಿ ▲	1.11 ಕೋಟಿ ▲	9,42,178 ▲
ಸಾವು	27.06 ಲಕ್ಷ ▲	1.59 ಲಕ್ಷ	12,425 ▲
ದಿನದ ವರದಿ: ಹೊಸ ಪ್ರಕರಣ	5.36 ಲಕ್ಷ ▲	39,687 ▲	1,587 ▲
ದಿನದ ವರದಿ: ಗುಣಮುಖ	4.51 ಲಕ್ಷ ▲	20,356 ▲	869 ▲
ದಿನದ ವರದಿ: ಸಾವು	9,749 ▼	156 ▼	10 ▲

131 ಐಸಿಯುನಲ್ಲಿ ಇರುವವರು

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 87,169 ಬ್ರೆಜಿಲ್ ▼; 62,629 ಅಮೆರಿಕ ▼; 34,998 ಫ್ರಾನ್ಸ್ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 72.82 ಅಮೆರಿಕ ▼; 37.78 ಫ್ರಾನ್ಸ್ ▼; 11.60 ಬ್ರೆಜಿಲ್ ▲

ಎಲ್ಲಿ ಹೆಚ್ಚು ಸಾವು: ▲ 53,208 ಮಹಾರಾಷ್ಟ್ರ; ▲ 12,582 ತಮಿಳುನಾಡು; 10,949 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ▼ 22.22 ಮಹಾರಾಷ್ಟ್ರ; 11.00 ಕೇರಳ ▲; 8.92 ಆಂಧ್ರಪ್ರದೇಶ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ನಿಗ್ರಹಕ್ಕೆ ನೋಡಲ್ ಅಧಿಕಾರಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಹರಡದಂತೆ ತಡೆಯಲು ಕಣ್ಗಾವಲು, ಮೇಲುಸ್ತುವಾರಿ, ನಿರ್ವಹಣೆ, ಸಮನ್ವಯ ಹಾಗೂ ಸೋಂಕಿತರನ್ನು ಆಸ್ಪತ್ರೆಗೆ ದಾಖಲು ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತಷ್ಟು ಕ್ರಮಗಳನ್ನು ಕೈಗೊಂಡಿದೆ. ಇದಕ್ಕಾಗಿ ಆರು ನೋಡಲ್ ಅಧಿಕಾರಿಗಳನ್ನು ಶುಕ್ರವಾರ ನೇಮಕ ಮಾಡಲಾಗಿದೆ.

‘ಆಪ್ತಮಿತ್ರ’ ಸಹಾಯವಾಣಿಯನ್ನು ಮತ್ತಷ್ಟು ಮೇಲ್ದರ್ಜೆಗೇರಿಸಲು ಹಾಗೂ ಹೊಸ ತಂತ್ರಾಂಶಗಳನ್ನು ಅಳವಡಿಸಲು ನಗರಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಹೆಚ್ಚುವರಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ ಮತ್ತು ಅರಣ್ಯ ಇಲಾಖೆಯ ಮಾಹಿತಿ ತಂತ್ರಜ್ಞಾನ ವಿಭಾಗದ ಹೆಚ್ಚುವರಿ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಬಿಸ್ವಜಿತ್ ಮಿಶ್ರ ಅವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ನ್ಯಾಸ್‌ಕಾಮ್ ಮತ್ತು ಇನ್ಫೋಸಿಸ್‌ನಿಂದ ಅಗತ್ಯ ತಂತ್ರಾಂಶಗಳನ್ನು ಪಡೆದು ಬಳಸಿಕೊಳ್ಳುವ ಕೆಲಸವನ್ನು ಈ ಮೂವರಿಗೂ ವಹಿಸಲಾಗಿದೆ. ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದಕ್ಕಾಗಿ ರಾಜ್ಯ ಸರ್ಕಾರದ ಯಾವುದೇ ಅಧಿಕಾರಿಯನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ಈ ತಂಡಕ್ಕೆ ನೀಡಲಾಗಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೋವಿಡ್ ನಿಯಂತ್ರಣ ವಿಚಾರದಲ್ಲಿ ಸಮನ್ವಯಕ್ಕಾಗಿ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸಿ. ಶಿಖಾ ಹಾಗೂ ಕೋವಿಡ್ ಕಣ್ಗಾವಲು, ಮೇಲುಸ್ತುವಾರಿ ಮತ್ತು ನಿರ್ವಹಣೆಯ ರಾಜ್ಯ ನೋಡಲ್ ಅಧಿಕಾರಿಯನ್ನಾಗಿ ಉದ್ಯೋಗ ಮತ್ತು ತರಬೇತಿ ಇಲಾಖೆಯ ಆಯುಕ್ತ ಡಾ.ಕೆ. ಹರೀಶ್ ಕುಮಾರ್ ಅವರನ್ನು ನೇಮಿಸಲಾಗಿದೆ. ಸೋಂಕಿತರನ್ನು ತುರ್ತು ಚಿಕಿತ್ಸೆಗೆ ಕಳುಹಿಸುವ ವ್ಯವಸ್ಥೆಗೆ ನೋಡಲ್ ಅಧಿಕಾರಿಯಾಗಿದ್ದ ಐಎಎಸ್ ಅಧಿಕಾರಿ ರಮ್ಯಾ ಎಸ್. ಅವರ ಬದಲಿಗೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎಂ.ಬಿ. ರಾಜೇಶ್ ಗೌಡ ಅವರನ್ನು ನೇಮಕ ಮಾಡಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಆದೇಶ ಹೊರಡಿಸಿದೆ.

ಅನಿವಾರ್ಯ ಆದರೆ ಬಿಗಿ ಕ್ರಮ: ಕೋವಿಡ್ ನಿಯಂತ್ರಣ ಕುರಿತು ಮಾಧ್ಯಮ ಪ್ರತಿನಿಧಿಗಳ ಜತೆ ಶುಕ್ರವಾರ ಮಾತನಾಡಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ‘ಇತ್ತೀಚಿನ ದಿನಗಳಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತದೆ. ನಿತ್ಯ ವರದಿಯಾಗುವ ಪ್ರಕರಣಗಳ ಸಂಖ್ಯೆ 1,500 ಮೀರಿದರೆ ಮತ್ತಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ’ ಎಂದರು.

ಎಂಐಟಿ ಕ್ಯಾಂಪಸ್‌ನಲ್ಲಿ ಸೋಂಕು ಹೆಚ್ಚಳ: ಭೀತಿಗೊಳಗಾದ ವಿದ್ಯಾರ್ಥಿಗಳು

ಮನೆಗೆ ಹೋಗಲು ಬಿಡಿ: ವಿದ್ಯಾರ್ಥಿಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಹೆಚ್ಚಿನ ವಿದ್ಯಾರ್ಥಿಗಳಲ್ಲಿ ಕೋವಿಡ್–19 ದೃಢಪಟ್ಟ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಕಾಲೇಜು ಪರಿಸರವನ್ನು ಕಂಟೈನ್‌ಮೆಂಟ್ ವಲಯವಾಗಿ ಘೋಷಿಸಿದೆ. ಸೋಂಕಿನ ಭೀತಿಗೆ ಸಿಲುಕಿರುವ ನೂರಾರು ವಿದ್ಯಾರ್ಥಿಗಳು ಮುಖ್ಯದ್ವಾರದ ಬಳಿ ಜಮಾಯಿಸಿ, ಮನೆಗೆ ತೆರಳುವಂತೆ ಅವಕಾಶ ನೀಡಬೇಕು ಎಂದು ಆಡಳಿತ ಮಂಡಳಿಯನ್ನು ಒತ್ತಾಯಿಸಿದರು.

ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಕಾರುಗಳಲ್ಲಿ ಬಂದಿದ್ದ ಕೆಲ ಪೋಷಕರು, ಮಕ್ಕಳನ್ನು ಕಳುಹಿಸುವಂತೆ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿ ಜತೆ ವಾಗ್ವಾದ ನಡೆದು ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಸ್ಥಳಕ್ಕೆ ಧಾವಿಸಿದ ಪೊಲೀಸರು ಕಂಟೈನ್‌ಮೆಂಟ್ ಪ್ರದೇಶವಾಗಿರುವುದರಿಂದ ವಿದ್ಯಾರ್ಥಿಗಳು ಕ್ಯಾಂಪಸ್ ಬಿಟ್ಟು ಹೊರಬರುವಂತಿಲ್ಲ. ಕೋವಿಡ್ ನೆಗೆಟಿವ್ ವರದಿ ಬಂದ ವಿದ್ಯಾರ್ಥಿಗಳನ್ನು ಮನೆಗೆ ತೆರಳಲು ಅವಕಾಶ ನೀಡಲಾಗುವುದು ಎಂದು ಮನವರಿಕೆ ಮಾಡಿಕೊಟ್ಟರು.



ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎದುರು ಪೋಷಕರೊಂದಿಗೆ ಮನೆಗೆ ತೆರಳುತ್ತಿರುವ ವಿದ್ಯಾರ್ಥಿಗಳು.

ಹೊರ ರಾಜ್ಯ ಹಾಗೂ ವಿದೇಶಗಳಿಗೆ ತೆರಳಲು ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಅಗತ್ಯವಿರುವುದರಿಂದ ಕೋವಿಡ್ ಪ್ರಮಾಣಪತ್ರದೊಂದಿಗೆ ತೆರಳಿದರೆ ಒಳಿತು ಎಂದು ಕಾಲೇಜು ಆಡಳಿತ ಮಂಡಳಿಯು ಮನವೊಲಿಸಿದ ಬಳಿಕ ವಿದ್ಯಾರ್ಥಿಗಳು ಕ್ಯಾಂಪಸ್‌ಗೆ ತೆರಳಿದರು.

ಎಂಐಟಿಯಲ್ಲಿ 5,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ನಡೆಯುತ್ತಿದ್ದು, ನೆಗೆಟಿವ್ ವರದಿ ಬಂದವರಿಗೆ ಮನೆಗೆ ಕಳುಹಿಸಲಾಗುತ್ತಿದೆ. ಈ ಮಧ್ಯೆ ಮಾಹೆ ವಿವಿ ವ್ಯಾಪ್ತಿಗೊಳಪಟ್ಟ 12 ವಿಭಾಗಗಳ ಸಿಬ್ಬಂದಿಗೆ ಮನೆಯಿಂದಲೇ ಕಾರ್ಯನಿರ್ವಹಿಸುವಂತೆ ಮಾಹೆ ರಿಜಿಸ್ಟ್ರಾರ್ ಡಾ.ನಾರಾಯಣ ಸಭಾಹಿತ್ ತಿಳಿಸಿದ್ದಾರೆ.

ವಾಟ್ಸ್‌ಆ್ಯಪ್ ಹೊಸ ಗೋಪ್ಯತಾ ನೀತಿಗೆ ತಡೆ ನೀಡಿ: ಕೇಂದ್ರ

ಒಂದನೇ ಪುಟದಿಂದ

ಕೇಂದ್ರದ ಪರ ಅಫಿಡವಿಟ್ ಸಲ್ಲಿಸಿದ ವಕೀಲರಾದ ಕೀರ್ತಿಮನ್ ಸಿಂಗ್ ಅವರು, ‘ವಾಟ್ಸ್‌ಆ್ಯಪ್ ಕಂಪನಿಯು ತನ್ನ ವ್ಯವಹಾರದ ಅವಧಿಯಲ್ಲಿ ಸಂಗ್ರಹಿಸಿದ ಡೇಟಾದ ಸುರಕ್ಷತೆಗೆ ಸಂಬಂಧಿಸಿದಂತೆ ಹಲವಾರು ಕಟ್ಟುಪಾಡುಗಳನ್ನೂ ವಿಧಿಸುತ್ತದೆ. ಆದರೆ, ಹೊಸ ನೀತಿಯು 2011ರ ನಿಯಮಗಳನ್ನು ಉಲ್ಲಂಘಿಸುತ್ತದೆ. ದತ್ತಾಂಶ ಸಂರಕ್ಷಣೆ ಮತ್ತು ಗೋಪ್ಯತೆ ಕುರಿತು ಆಡಳಿತದ ಜವಾಬ್ದಾರಿಯನ್ನು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರದ ಮೇಲೆ ವಹಿಸಿದೆ. 2019ರಲ್ಲಿ ಲೋಕಸಭೆಯಲ್ಲಿ ವೈಯಕ್ತಿಕ ದತ್ತಾಂಶ (ಡೇಟಾ) ಸಂರಕ್ಷಣಾ ಮಸೂದೆಯನ್ನು ಮಂಡಿಸಿದೆ. ಈ ಮಸೂದೆ ಜಾರಿಯಾದ ನಂತರ ದತ್ತಾಂಶ ಸಂರಕ್ಷಣೆಯ ಬಗ್ಗೆ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ, ವಾಟ್ಸ್‌ಆ್ಯಪ್‌ನ ನಿಯಮಗಳು ಸುರಕ್ಷತೆ ಮತ್ತು ದತ್ತಾಂಶ ಸಂರಕ್ಷಣೆಯ ಸೂಕ್ತ ಮಾನದಂಡಗಳೊಂದಿಗೆ ಹೊಂದಾಣಿಕೆ ಆಗುವುದಿಲ್ಲ. ಅಲ್ಲದೇ, ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ಮತ್ತು ಅದರ ನಿಯಮಗಳ ಅಂಗೀಕಾರ ಇನ್ನೂ ಬಾಕಿ ಉಳಿದಿದೆ’ ಎಂದೂ ತಿಳಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿಗಳಾದ ಡಿ.ಎನ್. ಪಟೇಲ್ ಮತ್ತು ನ್ಯಾಯಮೂರ್ತಿ ಜಸ್ಮೀತ್ ಸಿಂಗ್ ಅವರು ಪ್ರಕರಣದ ಮುಂದಿನ ವಿಚಾರಣೆಯನ್ನು ಏಪ್ರಿಲ್ 20ಕ್ಕೆ ನಿಗದಿಪಡಿಸಿದರು.

ಹೊಸ ಗೋಪ್ಯತಾ ನೀತಿಯನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್ ಫೆ. 3ರಂದು ಕೇಂದ್ರ ಸರ್ಕಾರ ಮತ್ತು ವಾಟ್ಸ್ ಆ್ಯಪ್‌ಗೆ ಉತ್ತರಿಸುವಂತೆ ಸೂಚಿಸಿ ನೋಟಿಸ್ ನೀಡಿತ್ತು.

ವಲಸಿಗರಿಂದ ಬಿಜೆಪಿಯಲ್ಲಿ ಅತೃಪ್ತಿ

ಪಕ್ಷಾಂತರಿಗಳಿಗೆ ಮಮತಾ ತರಾಟೆ: ಮತಯಂತ್ರಗಳ ಮೇಲೆ ನಿಗಾ ಇರಿಸಲು ಜನರಿಗೆ ಸೂಚನೆ

ಎಗ್ರಾ (ಪಶ್ಚಿಮ ಬಂಗಾಳ) (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಮುಖಂಡರ ಪಕ್ಷಾಂತರವು ಕುತೂಹಲಕರವಾಗಿದೆ. ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಯ ಹಲವು ಮುಖಂಡರು ಬಿಜೆಪಿಗೆ ಹೋಗಿದ್ದಾರೆ.

ಪಕ್ಷ ಬಿಟ್ಟು ಹೋದವರೆಲ್ಲರೂ ವಂಚಕರು, ಅವರು ಹೋಗಿದ್ದೇ ಒಳ್ಳೆಯದಾಗಿದೆ ಎಂದು ಮಮತಾ ಹೇಳಿದ್ದಾರೆ. ಆದರೆ, ಇವರೆಲ್ಲರೂ ಹೋಗಿ ಸೇರಿರುವ ಬಿಜೆಪಿಯಲ್ಲಿ, ಅಲ್ಲಿ ಮೊದಲೇ ಇದ್ದವರಿಗೆ ಭಾರಿ ಅಸಮಾಧಾನ ಉಂಟಾಗಿದೆ ಎಂದು ಅವರು ವಿಶ್ಲೇಷಿಸಿದ್ದಾರೆ.

ಮಮತಾ ಅವರು ಪಕ್ಷಾಂತರವನ್ನೇ ಚುನಾವಣಾ ವಿಷಯ ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ. 'ಮೀರ್ ಜಾಫರ್‌ಗಳು ಬಿಜೆಪಿಯ ಅಭ್ಯರ್ಥಿಗಳಾಗಿದ್ದಾರೆ. ಪಕ್ಷದಲ್ಲಿ ಮೊದಲೇ ಇದ್ದವರಿಗೆ ಇದರಿಂದ ಹತಾಶೆಯಾಗಿದೆ' ಎಂದು ಪುರ್ಬ ಮೇದಿನಿಪುರದ ಎಗ್ರಾದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಾ ಮಮತಾ ಹೇಳಿದ್ದಾರೆ. ಟಿಎಂಸಿ ಬಿಟ್ಟು ಹೋದ ಸುವೇಂದು


ಟಾಲಿಗುಂಗೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಬುಲ್ ಸುಪ್ರಿಯೊ ಅವರು ಗುರುವಾರ ಚುನಾವಣಾ ಪ್ರಚಾರ ನಡೆಸಿದರು ಪಿಟಿಐ ಚಿತ್ರ

ಅಧಿಕಾರಿ, ರಾಜೀವ್ ಬ್ಯಾನರ್ಜಿ, ಮುಕುಲ್ ರಾಯ್ ಮುಂತಾದವರನ್ನು ಪರೋಕ್ಷವಾಗಿ ಅವರು ಉಲ್ಲೇಖಿಸಿದ್ದಾರೆ.

'ಬಂಗಾಳದ ಹೆಮ್ಮೆ' ಎಂಬುದು ಮಮತಾ ಅವರು ನೆಚ್ಚಿಕೊಂಡಿರುವ ಇನ್ನೊಂದು ವಿಚಾರ. ಬಿಜೆಪಿ 'ಹೊರಗಿನವರ ಪಕ್ಷ' ಎಂದು ಅವರು ಪದೇ ಪದೇ ಹೇಳುತ್ತಿದ್ದಾರೆ. ಆ ಪಕ್ಷದ ಎಲ್ಲ ಉನ್ನತ ನಾಯಕರೂ ರಾಜ್ಯದ ಹೊರಗಿನವರು ಎಂಬುದು ಅವರ ಪ್ರತಿಪಾದನೆ.

ಪಕ್ಷಾಂತರ ಮಾಡಿದವರಿಗೆ ಈ ಹಿಂದೆ ಹಲವು ಜವಾಬ್ದಾರಿಗಳನ್ನು ವಹಿಸಲಾಗಿತ್ತು. 'ಪ್ರತಿ ಯೋಜನೆಯ ಮೇಲೆಯೂ ನಾನು ನಿಗಾ ಇರಿಸಿದ್ದರಿಂದ ಪ್ರಯೋಜನ ಎಲ್ಲರಿಗೂ ತಲುಪುತ್ತಿತ್ತು' ಎಂದು ಅವರು ಹೇಳಿದ್ದಾರೆ.

ಮತದಾನದ ಬಳಿಕ, ಮತಯಂತ್ರಗಳನ್ನು ಇರಿಸಿರುವ ಕೇಂದ್ರಗಳ ಮೇಲೆ ಜನರು ನಿಗಾ ಇರಿಸಬೇಕು. ಅಲ್ಲಿಂದ ಹೋಗುವಂತೆ ಕೇಂದ್ರದ ಭದ್ರತಾ ಪಡೆಗಳು ಅಥವಾ ರಾಜ್ಯ ಪೊಲೀಸರು ಹೇಳಿದರೂ ಹೋಗಬಾರದು ಎಂದು ಮಮತಾ ಜನರಿಗೆ ತಿಳಿಸಿದರು.

ಬಿಜೆಪಿ ಆಳ್ವಿಕೆ ಇರುವ ರಾಜ್ಯಗಳಲ್ಲಿ ಮಹಿಳೆಯರು ಸುರಕ್ಷಿತರಲ್ಲ ಎಂದು ಅವರು ಆರೋಪಿಸಿದ್ದಾರೆ. 'ಉತ್ತರ ಪ್ರದೇಶದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗುತ್ತದೆ. ಅತ್ಯಾಚಾರ ಸಂತ್ರಸ್ತೆಯ ತಂದೆಯನ್ನು ಕೊಲೆ ಮಾಡಲಾಗುತ್ತದೆ' ಎಂದು ಅವರು ಹೇಳಿದ್ದಾರೆ.

'ಬಡವನೊಬ್ಬ ₹500 ಕದ್ದರೆ ಅವನ ಮುಖಕ್ಕೆ ಬಾರಿಸುತ್ತೇವೆ. ಬಿಜೆಪಿ ಲಕ್ಷಾಂತರ ರೂಪಾಯಿ ಕದ್ದಿದೆ. ಸಾರ್ವಜನಿಕ ವಲಯದ ಉದ್ಯಮಗಳನ್ನು ಮಾರುವ ಮೂಲಕ ಲಕ್ಷಾಂತರ ರೂಪಾಯಿ ಕೊಳ್ಳೆ ಹೊಡೆಯಲಾಗಿದೆ. ಬಿಜೆಪಿ ನಾಯಕರ ಈ ಕಳ್ಳತನ ಹೊರಗೆ ಬರುವುದೇ ಇಲ್ಲ' ಎಂದು ಮಮತಾ ಆಪಾದಿಸಿದ್ದಾರೆ.

ಕೇಂದ್ರ ಸರ್ಕಾರವನ್ನು ಉರುಳಿಸುವ ವಿಚಾರವನ್ನು ಅವರು ಪುನರುಚ್ಚರಿಸಿದ್ದಾರೆ. 'ದೆಹಲಿಯಲ್ಲಿರುವ ಬಿಜೆಪಿ ಸರ್ಕಾರವನ್ನು ಕೆಳಗಿಳಿಸಲು ಪಶ್ಚಿಮ ಬಂಗಾಳದ ಗೆಲುವು ಪೀಠಿಕೆ. ನಾನು ಮತ್ತೆ ಕೇಂದ್ರ ಸ್ಥಾನಕ್ಕೆ ಬರುವುದನ್ನು ನೀವು ಬಯಸುವುದಿದ್ದರೆ ಟಿಎಂಸಿಯ ಪ್ರತಿಯೊಬ್ಬ ಅಭ್ಯರ್ಥಿಯನ್ನು ಆಯ್ಕೆ ಮಾಡಿ' ಎಂದು ಅವರು ಮನವಿ ಮಾಡಿದ್ದಾರೆ.

ಭಾಷಣದ ಮುಕ್ತಾಯದಲ್ಲಿ ಚಂಡಿ ಶ್ಲೋಕವನ್ನು ಅವರು ಮತ್ತೆ ಪಠಿಸಿದರು. ಮುಸ್ಲಿಮರು, ಕ್ರೈಸ್ತರು ಮತ್ತು ವಿವಿಧ ಬುಡಕಟ್ಟು ಜನರಿಗೂ ಅವರು ಶುಭಾಶಯ ಹೇಳಿದರು.

ಬೆಳಗಾವಿ ಲೋಕಸಭಾ ಚುನಾವಣೆ

ವೀರಶೈವ-ಲಿಂಗಾಯತರದ್ದೇ ಪ್ರಾಬಲ್ಯ

• ಎಂ.ಮಹೇಶ

ಮುಖ್ಯಾಂಶಗಳು
- ಜಾತಿ ಆಧಾರದ ಮೇಲೆ ಚುನಾವಣೆ
- ಮನವೊಲಿಕೆಗೆ ಪಕ್ಷಗಳ ಕಸರತ್ತು
- ಆಕಾಂಕ್ಷಿಗಳಲ್ಲೂ ಲಿಂಗಾಯತರೇ ಹೆಚ್ಚು

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ 18.07 ಲಕ್ಷ ಮತದಾರರಿದ್ದಾರೆ. ಈ ಪೈಕಿ ವೀರಶೈವ–ಲಿಂಗಾಯತ ಮತದಾರರ ಸಂಖ್ಯೆಯೇ ಹೆಚ್ಚು. ನಂತರದ ಸ್ಥಾನದಲ್ಲಿ ಮರಾಠ, ಮುಸ್ಲಿಂ, ಕುರುಬ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ದೇವಾಂಗ, ಉಪ್ಪಾರ, ಹಣಬರ, ರೆಡ್ಡಿ ಮೊದಲಾದ ಸಮಾಜದವರಿದ್ದಾರೆ.

ಈ ಲೆಕ್ಕಾಚಾರದ ಆಧಾರದ ಮೇಲೆಯೇ ರಾಜಕೀಯ ಪಕ್ಷಗಳು ರಾಜಕಾರಣ ಮಾಡುತ್ತಾ ಬಂದಿವೆ. ವೀರಶೈವ–ಲಿಂಗಾಯತ ಸಮಾಜದವರ ಓಲೈಕೆಯಲ್ಲಿ ಯಾವ ಪಕ್ಷವೂ ಹಿಂದೆ ಬಿದ್ದಿಲ್ಲದಿರುವುದು ಹಿಂದಿನ ಚುನಾವಣೆಗಳಲ್ಲಿ ಸಾಬೀತಾಗಿದೆ.

ಬೆಳಗಾವಿ ಲೋಕಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಹಿನ್ನೋಟವನ್ನು ಗಮನಿಸಿದರೆ ವೀರಶೈವ– ಲಿಂಗಾಯತ ಸಮಾಜದವರೇ ಅತಿ ಹೆಚ್ಚು ಬಾರಿ ಗೆದ್ದಿರುವುದು ಕಂಡುಬಂದಿದೆ.

ಈ ಲೋಕಸಭಾ ಕ್ಷೇತ್ರದಲ್ಲಿ 1957ರಿಂದ ಒಂದು ಉಪ ಚುನಾವಣೆ ಸೇರಿ 17 ಚುನಾವಣೆಗಳು ನಡೆದಿವೆ. ಅವುಗಳಲ್ಲಿ ಬ್ರಾಹ್ಮಣರು 2 ಬಾರಿ, ಮುಸ್ಲಿಂ ಹಾಗೂ ಕುರುಬರು ತಲಾ ಒಂದು ಬಾರಿ ಗೆದ್ದಿದ್ದಾರೆ.

ಟಿಕೆಟ್ ಕೊಟ್ಟು ಮಣೆ: ಸಾಮಾನ್ಯ ಕ್ಷೇತ್ರವಾಗಿರುವ ಬೆಳಗಾವಿಯು ವೀರಶೈವ–ಲಿಂಗಾಯತರ ಪ್ರಾಬಲ್ಯವಿರುವ ಕ್ಷೇತ್ರ ಎನಿಸಿಕೊಂಡಿರುವುದನ್ನು ಅಂಕಿ–ಅಂಶಗಳು ಹೇಳುತ್ತಿವೆ. ಎಲ್ಲ ರಾಜಕೀಯ ಪಕ್ಷಗಳು ಕೂಡ ಲಿಂಗಾಯತರಿಗೇ ಮಣೆ ಹಾಕಿವೆ.

8 ಚುನಾವಣೆಗಳ ನಂತರ

1999ರಲ್ಲಿ ಕುರುಬ ಸಮಾಜದ ಅಮರಸಿಂಹ ಪಾಟೀಲ ಬಿಜೆಪಿಯ ಬಾಬಾಗೌಡ ಪಾಟೀಲ ವಿರುದ್ಧ ಗೆದ್ದಿದ್ದರು. ಹೀಗಾಗಿ, 1971ರ ನಂತರ ಅಂದರೆ ಸತತ 8 ಚುನಾವಣೆಗಳ ಬಳಿಕ ಇಲ್ಲಿ ಲಿಂಗಾಯತೇತರ ಅಭ್ಯರ್ಥಿಯೊಬ್ಬರು ಗೆದ್ದಿದ್ದು ಇತಿಹಾಸ. ಸತತ 4 ಚುನಾವಣೆಗಳಲ್ಲಿ (2004, 2009, 2014 ಹಾಗೂ 2019) ಬಿಜೆಪಿಯ ಸುರೇಶ ಅಂಗಡಿ ಗೆಲುವು ಸಾಧಿಸಿದ್ದರು. ಅವರ ಅಕಾಲಿಕ ನಿಧನದಿಂದ ಉಪಚುನಾವಣೆ ಎದುರಾಗಿದೆ. ಆಕಾಂಕ್ಷಿಗಳ ಪಟ್ಟಿಯಲ್ಲೂ ವೀರಶೈವ–ಲಿಂಗಾಯತರ ಹೆಸರುಗಳೇ ಮುಂದಿವೆ.

ಇದರಿಂದಾಗಿ ಲಿಂಗಾಯತೇತರರಿಗೆ ಹೆಚ್ಚಿನ ಅವಕಾಶಗಳು ಸಿಕ್ಕಿಲ್ಲ ಅಥವಾ ಮತದಾರರು ಕೂಡ ಒಂದು ವರ್ಗದ ಜೊತೆಗಿದ್ದೇವೆ ಎಂಬ ಸಂದೇಶವನ್ನು ಹಿಂದಿನಿಂದಲೂ ನೀಡುತ್ತಲೇ ಬಂದಿದ್ದಾರೆ. ಈ ಕಾರಣದಿಂದಾಗಿಯೇ ಪ್ರಬಲ ಸಮಾಜದ ಅಭ್ಯರ್ಥಿಗಳಿಗೇ ಪಕ್ಷಗಳು ಟಿಕೆಟ್ ನೀಡುತ್ತಿವೆ.

ಆರಂಭದಿಂದಲೂ ಈ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆಯಾಗಿತ್ತು. ಬಳಿಕ ಬಿಜೆಪಿ ಹಿಡಿತ ಸಾಧಿಸಿದೆ. 2019ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಲಿಂಗಾಯತ ಸಮಾಜದ ಅಭ್ಯರ್ಥಿಯನ್ನೇ (ಡಾ.ವಿ.ಎಸ್. ಸಾಧುನವರ) ಕಣಕ್ಕಿಳಿಸಲಾಗಿತ್ತು. ಜಿದ್ದಾಜಿದ್ದಿಯು ಪ್ರಮುಖ ಸಮಾಜದ ಅಭ್ಯರ್ಥಿಗಳ ನಡುವೆಯೇ ನಡೆದಿತ್ತು.

ಅಲ್ಪಸಂಖ್ಯಾತರಿಗೆ ಒಮ್ಮೆ: 1957 ಹಾಗೂ 1962ರಲ್ಲಿ ಬ್ರಾಹ್ಮಣರಾದ ಬಿ.ಎನ್. ದಾತಾರ್ ಆಯ್ಕೆ ಆಗಿದ್ದರು. ಅವರ ನಿಧನದಿಂದಾಗಿ 1963ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಲಿಂಗಾಯತ ಸಮಾಜದ ಎಚ್.ವಿ. ಕೌಜಲಗಿ ಬ್ರಾಹ್ಮಣ ಸಮುದಾಯದ ಜಗನ್ನಾಥರಾವ್ ಜೋಶಿ ಅವರನ್ನು ಸೋಲಿಸಿ ಸಂಸತ್ ಪ್ರವೇಶಿಸಿದ್ದರು. 1967ರ ಚುನಾವಣೆಯಲ್ಲಿ ಎನ್.ಎಂ. ನಬೀಸಾಬ ಗೆದ್ದಿದ್ದರು. ಗೆದ್ದ ಏಕೈಕ ಅಲ್ಪಸಂಖ್ಯಾತ ಎಂಬ ಕೀರ್ತಿ ಅವರದು.

1971 ಹಾಗೂ 1977ರಲ್ಲಿ ಸತತ 2 ಬಾರಿ ಎ.ಕೆ. ಕೊಟ್ರಶೆಟ್ಟಿ ಆಯ್ಕೆಯಾಗಿದ್ದರು. ಸತತ 4 ಬಾರಿ (1980, 1984, 1989, 1991) ಗೆದ್ದು ಕ್ಷೇತ್ರದಲ್ಲಿ ಅತಿ ಹೆಚ್ಚಿನ ಗೆಲುವು ಸಾಧಿಸಿದ ದಾಖಲೆ ಕಾಂಗ್ರೆಸ್‌ನ ಎಸ್.ಬಿ. ಸಿದ್ನಾಳ ಅವರದು. ಅವರ ಸಮೀಪದ ಪ್ರತಿಸ್ಪರ್ಧಿ ಆಗಿದ್ದವರೂ ವೀರಶೈವ–ಲಿಂಗಾಯತ ಸಮಾಜದವರೇ. 1996ರಲ್ಲಿ ಜನತಾದಳದಿಂದ ಶಿವಾನಂದ ಕೌಜಲಗಿ, ಬಿಜೆಪಿ ಬಾಬಾಗೌಡ ಪಾಟೀಲರ ವಿರುದ್ಧ ಗೆದ್ದಿದ್ದರು. 1998ರಲ್ಲಿ ಸಿದ್ನಾಳರ ವಿರುದ್ಧ ಬಿಜೆಪಿಯಿಂದ ಸ್ಪರ್ಧಿಸಿದ್ದ ಬಾಬಾಗೌಡ ಪಾಟೀಲ ಗೆಲುವು ಸಾಧಿಸಿದ್ದರು.

ಪಶ್ಚಿಮ ಬಂಗಾಳ: ಶೇ 25 ಅಭ್ಯರ್ಥಿಗಳಿಗೆ ಅಪರಾಧ ಹಿನ್ನೆಲೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಇದೇ 27ರಂದು ಮೊದಲ ಹಂತದಲ್ಲಿ ಮತದಾನ ನಡೆಯಲಿರುವಕ್ಷೇತ್ರಗಳಲ್ಲಿಸ್ಪರ್ಧಿಸಿರುವ191ಅಭ್ಯರ್ಥಿಗಳ ಪೈಕಿ 48 ಮಂದಿಯ ವಿರುದ್ಧ ಅಪರಾಧ ಪ್ರಕರಣಗಳಿವೆ. ಇದು ಒಟ್ಟು ಅಭ್ಯರ್ಥಿಗಳಲ್ಲಿ ಶೇ 25ಕ್ಕೂ ಸ್ವಲ್ಪ ಹೆಚ್ಚು ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ಹೇಳಿದೆ.

ಈ 48 ಅಭ್ಯರ್ಥಿಗಳ ಪೈಕಿ 42 ಅಭ್ಯರ್ಥಿಗಳ ವಿರುದ್ಧ ಗಂಭೀರವಾದ ಅಪರಾಧ ಆರೋಪಗಳೇ ದಾಖಲಾಗಿವೆ.

12 ಅಭ್ಯರ್ಥಿಗಳ ವಿರುದ್ಧ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳಿವೆ. ಇವರಲ್ಲಿ ಒಬ್ಬರ ಮೇಲೆ ಅತ್ಯಾಚಾರ ಆರೋಪ ಇದೆ. ಎಂಟು ಅಭ್ಯರ್ಥಿಗಳ ಮೇಲೆ ಕೊಲೆ ಆರೋಪವಿದ್ದರೆ 19 ಮಂದಿಯ ಮೇಲೆ ಕೊಲೆ ಯತ್ನದ ಆರೋಪಗಳಿವೆ. ಸಿಪಿಎಂನ 9, ಬಿಜೆಪಿಯ 11, ಟಿಎಂಸಿಯ 8, ಕಾಂಗ್ರೆಸ್‌ನ 1, ಬಿಎಸ್‌ಪಿಯ 1 ಮತ್ತು ಎಸ್‌ಯುಸಿಐನ 2 ಅಭ್ಯರ್ಥಿಗಳು ಅಪರಾಧ ಪ್ರಕರಣಗಳಲ್ಲಿ ಆರೋಪಿಗಳಾಗಿದ್ದಾರೆ.

ಮಂಜೇಶ್ವರ ಗೆಲ್ಲಲು ಬಿಜೆಪಿ ಹರಸಾಹಸ

ಪ್ರಜಾವಾಣಿ ವಾರ್ತೆ

ಮಂಜೇಶ್ವರ: ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ ಬಿಜೆಪಿಯು ಈ ಬಾರಿ ಬೇರೆ ಯಾವುದೇ ಪಕ್ಷಕ್ಕಿಂತ ಹೆಚ್ಚಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿದೆ. ಕೇರಳದಲ್ಲಿ ಬಿಜೆಪಿಗೆ ಗೆಲುವಿನ ನಿರೀಕ್ಷೆ ಇರುವಕ್ಷೇತ್ರಗಳಲ್ಲಿ ಇದೂ ಒಂದಾಗಿದೆ. ಆದರೆ ಅಲ್ಪಸಂಖ್ಯಾತರ ಮತಗಳೆಲ್ಲವೂ ಧ್ರುವೀಕರಣಗೊಳ್ಳುವ ಸಾಧ್ಯತೆಯು ಬಿಜೆಪಿಯ ಚಿಂತೆಗೆ ಕಾರಣವಾಗಿದೆ.

ಕರ್ನಾಟಕದ ಗಡಿಯ ಸಮೀಪದಲ್ಲೇ ಇರುವ ಈ ಕ್ಷೇತ್ರದಲ್ಲಿ ಕನ್ನಡಿಗರ ಸಂಖ್ಯೆ ದೊಡ್ಡದಾಗಿದೆ. ಆ ಕಾರಣಕ್ಕೆ ಎಲ್ಲಾ ಪಕ್ಷಗಳೂ ಪ್ರಚಾರದ ಸಂದರ್ಭದಲ್ಲಿ ಕನ್ನಡ ಭಾಷೆಯನ್ನು ಬಳಸುತ್ತವೆ. ಆದರೆ, ಅದು ಮತಯಾಚನೆಗೆ ಸೀಮಿತವಾಗಿದೆಯೇ ವಿನಾ ಭಾಷಾ ಅಲ್ಪಸಂಖ್ಯಾತರ ಸಮಸ್ಯೆಗಳ ಬಗ್ಗೆ ಯಾರೂ ಮಾತನಾಡುತ್ತಿಲ್ಲ.

ಬಿಜೆಪಿ ಇಲ್ಲಿ ಆಯೋಜಿಸುತ್ತಿರುವ ಪ್ರಚಾರ ಕಾರ್ಯಕ್ರಮ ಹಾಗೂ ರ‍್ಯಾಲಿಗಳಲ್ಲಿ ಮಹಿಳೆಯರೂ ಸೇರಿದಂತೆ ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರು ಪಾಲ್ಗೊಳ್ಳುತ್ತಿದ್ದಾರೆ. 2016ರಲ್ಲಿ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಕೆ.


ಸುರೇಂದ್ರನ್

ಸುರೇಂದ್ರನ್ ಅವರು ಕೇವಲ 89 ಮತಗಳಿಂದ ಸೋತಿದ್ದರು. ಈ ಬಾರಿ ಗೆಲುವಿನ ನಿರೀಕ್ಷೆಯೊಂದಿಗೆ ಪುನಃ ಕಣಕ್ಕಿಳಿದಿದ್ದಾರೆ.

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಆಗಲಿ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಸರ್ಕಾರವಾಗಲಿ ಮಂಜೇಶ್ವರ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ ಎಂದು ಬಿಜೆಪಿ ಆರೋಪಿಸುತ್ತಿದೆ. ಜತೆಗೆ ಶಬರಿಮಲೆಗೆ ಮಹಿಳೆಯರ ಪ್ರವೇಶ ವಿಚಾರವನ್ನೂ ಮುನ್ನೆಲೆಯಲ್ಲಿಟ್ಟುಕೊಂಡು ಮತ ಯಾಚನೆ ಮಾಡುತ್ತಿದೆ.

ಇನ್ನೊಂದೆಡೆ ಸಿಪಿಎಂ ಅಭ್ಯರ್ಥಿ ವಿ.ವಿ. ರಮೇಶನ್ ಅವರು ಉಚಿತ ಪಡಿತರ ವಿತರಣೆ ಮುಂತಾದ ಎಲ್‌ಡಿಎಫ್ ಸರ್ಕಾರದ ಯೋಜನೆಗಳನ್ನು ಮುಂದಿಟ್ಟುಕೊಂಡು ಮತ ಯಾಚಿಸುತ್ತಿದ್ದಾರೆ. ಯುಡಿಎಫ್ ಅಭ್ಯರ್ಥಿ, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ಎ.ಕೆ.ಎಂ. ಅಶ್ರಫ್ ಕಳೆದ ಐದು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ ಎಂದು ಆರೋಪಿಸಿದ್ದಾರೆ.

ಕೋವಿಡ್ ಕಾರಣಕ್ಕೆ ಕೇರಳದಿಂದ ಕರ್ನಾಟಕಕ್ಕೆ ಬರುವ ರಸ್ತೆಗಳನ್ನು ತಡೆದಿರುವ ಬಿಜೆಪಿ ನೇತೃತ್ವದ ಕರ್ನಾಟಕ ಸರ್ಕಾರದ ಕ್ರಮವನ್ನು ಮುಂದಿಟ್ಟುಕೊಂಡು ಎಲ್‌ಡಿಎಫ್ ಹಾಗೂ ಯುಡಿಎಫ್, ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡಿವೆ. ಕೇರಳದಿಂದ ಕರ್ನಾಟಕಕ್ಕೆ ಪ್ರವೇಶಿಸುವವರ ಮೇಲೆ ಈಗಲೂ ಕರ್ನಾಟಕವು ಕೆಲವು ನಿರ್ಬಂಧಗಳನ್ನು ವಿಧಿಸಿದೆ. ಇದರಿಂದಾಗಿ ಕಾಸರಗೋಡು ಜಿಲ್ಲೆಯಿಂದ ಚಿಕಿತ್ಸೆಗಾಗಿ ಮಂಗಳೂರಿಗೆ ಬರುವ ರೋಗಿಗಳು ತೊಂದರೆ ಅನುಭವಿಸುವಂತಾಗಿದೆ.

ಶಕ್ತಿ ಪ್ರದರ್ಶನ: ಮಂಜೇಶ್ವರ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಸುರೇಂದ್ರನ್ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಕೆಯ ಸಂದರ್ಭವನ್ನು ಬಿಜೆಪಿಯು ಶಕ್ತಿಪ್ರದರ್ಶನಕ್ಕೆ ವೇದಿಕೆಯಾಗಿ ಬಳಸಿಕೊಂಡಿತು.

'ಪ್ರಚಾರದ ಆರಂಭದ ದಿನದಿಂದಲೇ ನಮಗೆ ಒಳ್ಳೆಯ ಪ್ರತಿಕ್ರಿಯೆ ಬರುತ್ತಿದೆ. ಆದ್ದರಿಂದ ಈ ಬಾರಿ ಸುರೇಂದ್ರನ್ ಅವರ ಗೆಲುವು ನಿಶ್ಚಿತ' ಎಂದು ಪಕ್ಷದ ಸ್ಥಳೀಯ ನಾಯಕ ಹರೀಶ್‌ಚಂದ್ರ ಮಂಜೇಶ್ವರ ಹೇಳಿದ್ದಾರೆ.

ಎಡರಂಗದ ಸ್ಮಾರಕಕ್ಕೆ ಬಿಜೆಪಿ ಅಭ್ಯರ್ಥಿಯ ಪುಷ್ಪನಮನ

ಆಲಪ್ಪುಳ (ಪಿಟಿಐ): ಸಿಪಿಎಂ ಮತ್ತು ಸಿಪಿಐ ನಿರ್ಮಿಸಿರುವ ಪುನ್ನಪ್ರ ವಯಲಾರ್ ಚಳವಳಿ ಸ್ಮಾರಕಕ್ಕೆ ಬಿಜೆಪಿ ಅಭ್ಯರ್ಥಿ ಸಂದೀಪ್ ವಾಚಸ್ಪತಿ ಅವರು ಪುಷ್ಪ ನಮನ ಸಲ್ಲಿಸಿದ್ದು ವಿವಾದಕ್ಕೆ ಕಾರಣವಾಗಿದೆ. ನಾಮಪತ್ರ ಸಲ್ಲಿಕೆಗೆ ಮೊದಲು ಈ ಸ್ಮಾರಕಕ್ಕೆ ಭೇಟಿ ನೀಡಿದ ಸಂದೀಪ್ ಅವರು, 'ಭಾರತ್ ಮಾತಾ ಕೀ ಜೈ' ಎಂದು ಘೋಷಣೆ ಕೂಗಿದರು.

ತಿರುವಾಂಕೂರಿನ ಪ್ರಧಾನಿಯಾಗಿದ್ದ ಸರ್. ಸಿ.ಪಿ. ರಾಮಸ್ವಾಮಿ ಅಯ್ಯರ್ ಅವರ 'ದುರಾಡಳಿತ'ದ ವಿರುದ್ಧ ಕಮ್ಯುನಿಸ್ಟ್ ಪಕ್ಷಗಳು 1946ರಲ್ಲಿ ನಡೆಸಿದ್ದ ಚಳವಳಿಯಲ್ಲಿ ನೂರಾರು ಕಾರ್ಯಕರ್ತರು ಬಲಿಯಾಗಿದ್ದರು. ಅವರ ಸ್ಮರಣೆಗೆ ಆಲಪ್ಪುಳ ಸಮೀಪದ ದೊಡ್ಡ ಸ್ಮಶಾನವೊಂದರಲ್ಲಿ ಈ ಸ್ಮಾರಕವನ್ನು ನಿರ್ಮಿಸಲಾಗಿದೆ.

ಸಂದೀಪ್ ಅವರು ಸ್ಮಾರಕಕ್ಕೆ ಅತಿಕ್ರಮಣ ಪ್ರವೇಶ ಮಾಡಿದ್ದಾರೆ ಎಂದು ಎಡಪಕ್ಷಗಳು ಆರೋಪಿಸಿವೆ. ಸಂದೀಪ್ ಅವರ ವಿರುದ್ಧ ಸಿಪಿಐ ಜಿಲ್ಲಾ ಕಾರ್ಯದರ್ಶಿಯು ದೂರು ದಾಖಲಿಸಿದ್ದಾರೆ.

ಆದರೆ, ಸಂದೀಪ್ ಅವರು ತಮ್ಮ ನಡವಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. 'ಕಮ್ಯುನಿಸ್ಟ್ ನಾಯಕರ ಅತಿ ದೊಡ್ಡ ವಂಚನೆಯ ಸಂಕೇತವಾಗಿ ಈ ಸ್ಮಾರಕ ಇದೆ. ಮುಗ್ಧ ಕಾರ್ಯಕರ್ತರನ್ನು ಇಲ್ಲಿ ಬಿಟ್ಟು ನಾಯಕರು ಪರಾರಿಯಾಗಿದ್ದರು' ಎಂದು ಅವರು ಹೇಳಿದ್ದಾರೆ.

ರಾಜಕೀಯ 'ತಂತ್ರಗಾರಿಕೆ' ಬದಲಿಸಿದ ಕಾಂಗ್ರೆಸ್

• ಬಸವರಾಜ್ ಸಂಪಳ್ಳಿ

ವಿಜಯಪುರ: ಸಿಂದಗಿ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಘೋಷಣೆಗೆ ಮುನ್ನವೇ ಕಾಂಗ್ರೆಸ್ ಪಕ್ಷವು ಅಭ್ಯರ್ಥಿಯನ್ನು ಘೋಷಣೆ ಮಾಡುವ ಮೂಲಕ ತನ್ನ ಸಾಂಪ್ರದಾಯಕ 'ರಾಜಕೀಯ ತಂತ್ರಗಾರಿಕೆ' ಬದಲಿಸಿದೆ.

ಬಿಜೆಪಿ, ಜೆಡಿಎಸ್ ಸೂಕ್ತ ಅಭ್ಯರ್ಥಿಗಳಿಗಾಗಿ ಇನ್ನೂ ತಡಕಾಡುತ್ತಿರುವ ಸನ್ನಿವೇಶದಲ್ಲಿ ಕಾಂಗ್ರೆಸ್ ಪಕ್ಷವು, ಕೇವಲ 10 ದಿನಗಳ ಹಿಂದೆ ಪಕ್ಷಕ್ಕೆ ಸೇರ್ಪಡೆಯಾಗಿದ್ದ ಅಶೋಕ ಮನಗೂಳಿ ಅವರಿಗೆ ಅಭ್ಯರ್ಥಿಯಾಗಿ ಘೋಷಿಸಿದೆ.

ಸಿಂದಗಿ ಕ್ಷೇತ್ರಕ್ಕೆ ಇದುವರೆಗೆ ನಡೆದ ಚುನಾವಣೆಗಳಲ್ಲಿ ಬಹುತೇಕ ಹಿಂದುಳಿದ ಸಮುದಾಯದವರಿಗೆ ಮಣೆ ಹಾಕುತ್ತಾ ಬಂದಿದ್ದ ಕಾಂಗ್ರೆಸ್ ಇದೀಗ ಕ್ಷೇತ್ರದಲ್ಲಿ ಪ್ರಬಲ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಸೇರಿದ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಹೊಸ ಪ್ರಯೋಗಕ್ಕೆ ಕೈಹಾಕಿದೆ.

'ಆಡಳಿತ ಪಕ್ಷವಾದ ಬಿಜೆಪಿ ಉಪ ಚುನಾವಣೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಲಿದೆ. ಕಳೆದ ಮೂರು ಚುನಾವಣೆಯಲ್ಲಿ ಹಿಂದುಳಿದ ವರ್ಗದವರಿಗೆ ಟಿಕೆಟ್ ನೀಡಿದ್ದರೂ ಕಾಂಗ್ರೆಸ್ ಗೆಲ್ಲಲು ಸಾಧ್ಯವಾಗಿಲ್ಲ. ಜೆಡಿಎಸ್ ಶಾಸಕರಾಗಿದ್ದ ಎಂ.ಸಿ.ಮನಗೂಳಿ ನಿಧನದಿಂದ ಕ್ಷೇತ್ರದಲ್ಲಿ ಅವರ ಕುಟುಂಬದ ಮೇಲೆ ಅನುಕಂಪ ಇದೆ. ಅಶೋಕ ಮನಗೂಳಿ ಅವರನ್ನೇ ಕಣಕ್ಕಿಳಿಸುವುದು ಸೂಕ್ತ' ಎಂದು ತಿಳಿ ಹೇಳುವ ಮೂಲಕ ಟಿಕೆಟ್ ಆಕಾಂಕ್ಷಿಗಳ ಬಂಡಾಯವನ್ನು ಆರಂಭದಲ್ಲೇ ಶಮನ ಮಾಡಿದೆ.



ಬೇಷರತ್ ಆಗಿ ಕಾಂಗ್ರೆಸ್ ಸೇರಿದ್ದೆ. ಟಿಕೆಟ್ ಸಿಕ್ಕಿರುವುದು ಬಹಳ ಸಂತೋಷವಾಗಿದೆ. ಜಯಗಳಿಸುವ ವಿಶ್ವಾಸವಿದೆ

ಅಶೋಕ ಮನಗೂಳಿ, ಕಾಂಗ್ರೆಸ್ ಅಭ್ಯರ್ಥಿ, ಸಿಂದಗಿ

ಕೈಜೋಡಿಸಲು ಮನವಿ: 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ, 'ನಮ್ಮ ಪಕ್ಷದ ನಾಯಕರು ನನ್ನ ಮೇಲೆ ನಂಬಿಕೆ ಮತ್ತು ವಿಶ್ವಾಸ ಇಟ್ಟು ಟಿಕೆಟ್ ನೀಡಿದ್ದಾರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಠಲ ಕೋಳೂರು ಹಾಗೂ ಸ್ಥಳೀಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವೆ. ತಂದೆಯವರು ಎರಡೂವರೆ ವರ್ಷಗಳಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯ ಹಾಗೂ ಸಿದ್ಧರಾಮಯ್ಯ ಸರ್ಕಾರದ ಸಾಧನೆ ಮುಂದಿಟ್ಟುಕೊಂಡು ಚುನಾವಣೆ ಎದುರಿಸುತ್ತೇನೆ' ಎಂದು ಹೇಳಿದರು.


ತಿದ್ದುಪಡಿ

ಎಂ.ಸಿ.ಮನಗೂಳಿ ಅವರ ನಿಧನದಿಂದ ತೆರವಾಗಿರುವ ಸಿಂದಗಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಅಶೋಕ ಮನಗೂಳಿ ಅವರನ್ನು ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಶುಕ್ರವಾರದ (ಮಾರ್ಚ್ 19ರ) ಸಂಚಿಕೆಯಲ್ಲಿ ಈ ಮಾಹಿತಿ ತಪ್ಪಾಗಿತ್ತು. -ಸಂ

ಗೃಹಿಣಿಯರಿಗೆ ₹3,000: ಕಮಲ್ ಪಕ್ಷದ ಪ್ರಣಾಳಿಕೆ

ಕೊಯಮತ್ತೂರು (ಪಿಟಿಐ): ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷದ ಮುಖ್ಯಸ್ಥ ಹಾಗೂ ನಟ ಕಮಲಹಾಸನ್ ಅವರು ತಮ್ಮ ಪಕ್ಷದ ಪ್ರಣಾಳಿಕೆಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದಾರೆ.

ಗೃಹಿಣಿಯರಿಗೆ ತಿಂಗಳಿಗೆ ₹3,000 ಸಹಾಯಧನ ನೀಡುವ ಭರವಸೆ ನೀಡಿದ್ದಾರೆ.


ಕಮಲ ಹಾಸನ್

ಎಐಎಡಿಎಂಕೆ ಹಾಗೂ ಡಿಎಂಕೆ ಪಕ್ಷಗಳು ಮಹಿಳೆಯರಿಗೆ ತಲಾ ₹1,000 ಹಾಗೂ ₹1,500 ಸಹಾಯಧನ ನೀಡುವ ಬಗ್ಗೆ ತಮ್ಮ ಪ್ರಣಾಳಿಕೆಯಲ್ಲಿ ಇತ್ತೀಚೆಗೆ ಘೋಷಿಸಿದ್ದವು. ಇದರ ಬೆನ್ನಲ್ಲೇ ಬಿಡುಗಡೆಯಾಗಿರುವ ಕಮಲ್ ಪಕ್ಷದ ಪ್ರಣಾಳಿಕೆಯು ಸಹಾಯಧನವನ್ನು ಮೂರು ಸಾವಿರ ರೂಪಾಯಿಗೆ ಏರಿಸಿದೆ. ಆದರೆ, ಗೃಹಿಣಿಯರಿಗೆ ನೀಡುವ ಈ ಸಹಾಯಧನವನ್ನು 'ಮೌಲ್ಯಯುತ ಹಕ್ಕಿನ ನೆರವು' ಎಂದು ಕರೆದಿರುವ ಕಮಲ್, ಇದು ಉಚಿತ ಕೊಡುಗೆ ಅಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

'ರಾಜಕೀಯಕ್ಕೆ ದ್ವೇಷ ಬಳಸುತ್ತಿರುವ ಬಿಜೆಪಿ'

ಲಾಹೌಲ್ (ಅಸ್ಸಾಂ) (ಪಿಟಿಐ): ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ, ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ಅಸ್ಸಾಂನಲ್ಲಿ ಜಾರಿ ಮಾಡುವುದಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಭರವಸೆ ನೀಡಿದ್ದಾರೆ.

ಡಿಬ್ರುಗಢ ಜಿಲ್ಲೆಯ ಲಾಹೌಲ್‌ನಲ್ಲಿ ಕಾಲೇಜು ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದ ಅವರು, ಕೇಂದ್ರದಲ್ಲಿ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಉಳಿದ ರಾಜ್ಯಗಳಲ್ಲೂ ಸಿಎಎ ಜಾರಿಗೆ ತಡೆ ನೀಡಲಾಗುವುದು ಎಂದು ಹೇಳಿದರು.

'ಯಾವ ಧರ್ಮವೂ ದ್ವೇಷವನ್ನು ಬಿತ್ತುವುದಿಲ್ಲ. ಹಿಂದೂ ಧರ್ಮದಲ್ಲಿ ದ್ವೇಷದ ಬಗ್ಗೆ ಎಲ್ಲಿ ಉಲ್ಲೇಖಿಸಲಾಗಿದೆ ಹೇಳಿ? ಆದರೆ ಬಿಜೆಪಿ ಧರ್ಮವನ್ನು ರಾಜಕೀಯಕ್ಕೆ ಬಳಸುತ್ತಿಲ್ಲ ಬದಲಿಗೆ ದ್ವೇಷವನ್ನು ಬಳಸಿಕೊಳ್ಳುತ್ತಿದೆ. ಸಮಾಜವನ್ನು ವಿಭಜಿಸಲು ದ್ವೇಷವನ್ನು ಹರಡುತ್ತಿದೆ. ಬಿಜೆಪಿ ಎಲ್ಲೆಲ್ಲಿ ಹೀಗೆ ದ್ವೇಷ ಬಿತ್ತಿದೆಯೋ ಅಲ್ಲೆಲ್ಲಾ ಕಾಂಗ್ರೆಸ್ ಪಕ್ಷವು ಪ್ರೀತಿ, ಸಹೋದರತ್ವ ಮತ್ತು ಸಾಮರಸ್ಯ ಉತ್ತೇಜಿಸಲು ಶ್ರಮಿಸುತ್ತದೆ' ಎಂದು ರಾಹುಲ್ ಹೇಳಿದರು.

ಆರ್‌ಎಸ್‌ಎಸ್ ಬಗ್ಗೆ ಪ್ರಸ್ತಾಪಿಸಿದ ಅವರು, 'ದೇಶವನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಸಂಘ ಪರಿವಾರ ಯತ್ನಿಸುತ್ತಿದೆ. ಆದರೆ ಭವಿಷ್ಯದ ಪ್ರಜೆಗಳಾದ ಯುವಜನರು ಪ್ರೀತಿ ಮತ್ತು ವಿಶ್ವಾಸದಿಂದ ಇದನ್ನು ತಡೆಯಬೇಕಿದೆ' ಎಂದು ಅಭಿಪ್ರಾಯಪಟ್ಟರು.


ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅಸ್ಸಾಂನ ಡಿಬ್ರುಗಢ ಜಿಲ್ಲೆಯ ಚುಬಾ ಚಹಾ ತೋಟದಲ್ಲಿ ಕಾರ್ಮಿಕರ ಜೊತೆ ಊಟ ಮಾಡಿದರು ಪಿಟಿಐ ಚಿತ್ರ

20 ವರ್ಷಗಳ ಹಿಂದೆ ಅಸ್ಸಾಂ ಹಿಂಸಾಚಾರದಿಂದ ಕೂಡಿತ್ತು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಶಾಂತಿ ಹಾಗೂ ಅಭಿವೃದ್ಧಿಯನ್ನು ಖಚಿತಪಡಿಸಿದೆ. ಬಿಜೆಪಿಯ ಉದ್ದೇಶ ಒಡೆಯುವುದು. ಆದರೆ ನಮ್ಮ ಉದ್ದೇಶ ಜೋಡಿಸುವುದು ಎಂದರು.

'ದ್ವೇಷ ಹಾಗೂ ನಿರುದ್ಯೋಗದ ನಡುವೆ ನೇರ ಸಂಬಂಧವಿದೆ. ದ್ವೇಷ ಹೆಚ್ಚಿದರೆ ನಿರುದ್ಯೋಗ ಹೆಚ್ಚುತ್ತದೆ. ನಿರುದ್ಯೋಗ ಹೆಚ್ಚಿದಾಗಲೂ ದ್ವೇಷ ಹುಟ್ಟುತ್ತದೆ. ವ್ಯವಹಾರ ನಡೆಯಲು ಅಥವಾ ಉದ್ಯೋಗಾವಕಾಶಗಳು ಸೃಷ್ಟಿಯಾಗಲು ಸಾಮರಸ್ಯ ಮತ್ತು ಸಹೋದರತ್ವ ಇರಬೇಕು' ಎಂದು ರಾಹುಲ್ ವಿವರಿಸಿದರು.

'ಬಿಜೆಪಿಯು ಅಸ್ಸಾಂನ ಸಂಪನ್ಮೂಲಗಳನ್ನು ಮಾರಾಟಕ್ಕಿಟ್ಟಿದೆ. ರಾಜ್ಯದ ಚಹಾ ಕಂಪನಿಗಳು, ಗುವಾಹಟಿ ವಿಮಾನ ನಿಲ್ದಾಣವನ್ನು ಅದಾನಿ ಹಾಗೂ ಹೊರಗಿನವರಿಗೆ ಮಾರಾಟ ಮಾಡಿದೆ ಎಂದು ಅವರು ಆರೋಪಿಸಿದರು. ರಾಜ್ಯದ ಸಂಪನ್ಮೂಲಗಳು ಅಸ್ಸಾಮಿಗರ ಜೇಬಿಗೆ ಸೇರಬೇಕು' ಎಂದು ಅಭಿಪ್ರಾಯಪಟ್ಟರು.

'ಅಸ್ಸಾಂನಲ್ಲಿ ಸರ್ಕಾರವು ಐದು ಭರವಸೆಗಳನ್ನು ನೀಡಿತ್ತು. ಐದು ವರ್ಷಗಳಲ್ಲಿ ಐದು ಲಕ್ಷ ಸರ್ಕಾರಿ ಉದ್ಯೋಗ, 200 ಯೂನಿಟ್‌ವರೆಗೆ ಉಚಿತ ವಿದ್ಯುತ್, ಚಹಾ ತೋಟಗಳ ಕಾರ್ಮಿಕರಿಗೆ ₹365 ದಿನಗೂಲಿ, ಗೃಹಿಣಿಯರಿಗೆ ತಿಂಗಳಿಗೆ ₹2000 ಸಹಾಯಧನ ಹಾಗೂ ಸಿಎಎ ಜಾರಿ ಮಾಡುವುದಿಲ್ಲ ಎಂಬ ಭರವಸೆ ನೀಡಿತ್ತು. ಬಿಜೆಪಿಯ ಹಾಗೆ ಪೊಳ್ಳು ಭರವಸೆಗಳನ್ನು ಕಾಂಗ್ರೆಸ್ ನೀಡುವುದಿಲ್ಲ' ಎಂದು ಹೇಳಿದರು.

'ಪಕ್ಷ ಅಧಿಕಾರಕ್ಕೆ ಬಂದರೆ ಖಾಲಿಯಿರುವ ಎಲ್ಲ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಶಿಕ್ಷಣ, ಆರೋಗ್ಯ ವಲಯದಲ್ಲಿ ಉದ್ಯೋಗ ಸೃಷ್ಟಿಸಲು ಆದ್ಯತೆ ನೀಡಲಾಗುತ್ತದೆ' ಎಂದರು.

ಶನಿವಾರ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಅಲಾಸ್ಕದ ಆಂಕರೇಜ್‌ನಲ್ಲಿ ನಡೆದ ಉನ್ನತ ಮಟ್ಟದ ಸಭೆ

ಚೀನಾ-ಅಮೆರಿಕ ರಾಜತಾಂತ್ರಿಕರ ವಾಗ್ವಾದ

ವಾಷಿಂಗ್ಟನ್ (ಪಿಟಿಐ): ಜಾಗತಿಕ ಸ್ಥಿರತೆ ಸೇರಿದಂತೆ ಅಂತರರಾಷ್ಟ್ರೀಯ ವಿದ್ಯಮಾನಗಳನ್ನು ಚರ್ಚಿಸಲು ಶುಕ್ರವಾರ ನಡೆದ ಉನ್ನತ ಸಭೆಯಲ್ಲಿ ಅಮೆರಿಕ ಹಾಗೂ ಚೀನಾದ ರಾಜತಾಂತ್ರಿಕರ ನಡುವೆ ವಾಗ್ವಾದ ನಡೆಯಿತು.

ಚೀನಾದ ನಡೆಗಳಿಂದ ಜಾಗತಿಕ ಶಾಂತಿ–ಸ್ಥಿರತೆಗೆ ಬೆದರಿಕೆವೊಡ್ಡುತ್ತಿವೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕೆನ್ ಅವರು ಚೀನಾದ ರಾಜತಾಂತ್ರಿಕರಿಗೆ ಕಟು ಮಾತುಗಳಲ್ಲಿ ಹೇಳಿದ ಘಟನೆಗೂ ಈ ಸಭೆ ಸಾಕ್ಷಿಯಾಯಿತು.

ಚೀನಾದ ನಿಯೋಗವೂ ಖಡಕ್ ಮಾತುಗಳಲ್ಲಿ ತಿರುಗೇಟು ನೀಡಿತು.

ಜೋ ಬೈಡನ್ ಅವರು ಅಧ್ಯಕ್ಷರಾದ ನಂತರ, ಅಲಾಸ್ಕದ ಅಂಕರೇಜ್‌ನಲ್ಲಿ ಇದೇ ಮೊದಲ ಬಾರಿಗೆ ಅಮೆರಿಕ ಹಾಗೂ ಚೀನಾದ ರಾಜತಾಂತ್ರಿಕರು ಮುಖಾಮುಖಿಯಾಗಿದ್ದಾರೆ.

ಚೀನಾದ ಕಮ್ಯುನಿಸ್ಟ್ ಪಾರ್ಟಿಯ ವಿದೇಶಾಂಗ ವ್ಯವಹಾರಗಳ ಆಯೋಗದ ನಿರ್ದೇಶಕ ಯಾಂಗ್ ಜಿಯೆಚಿ, ವಿದೇಶಾಂಗ ಸಚಿವ ವಾಂಗ್ ಯಿ ಚೀನಾ ನಿಯೋಗದ ನೇತೃತ್ವ ವಹಿಸಿದ್ದಾರೆ.

'ಅಮೆರಿಕ ಪ್ರಸ್ತಾಪಿಸುವ ವಿಷಯಗಳು ಕೇವಲ ಅಮೆರಿಕ ಹಾಗೂ ಚೀನಾಕ್ಕೆ ಮಾತ್ರ ಸಂಬಂಧಪಡುವುದಿಲ್ಲ. ನಮ್ಮ ನೆರಹೊರೆಯ ರಾಷ್ಟ್ರಗಳು ಸೇರಿ ಇಡೀ ವಿಶ್ವಕ್ಕೇ ಪ್ರಸ್ತುತವಾಗಲಿವೆ' ಎಂದು ಬ್ಲಿಂಕೆನ್ ಖಡಕ್ಕಾಗಿ ಹೇಳಿದರು.


ಅಲಾಸ್ಕದ ಅಂಕರೇಜ್‌ನಲ್ಲಿ ನಡೆದ ಸಭೆಯಲ್ಲಿ ಅಮೆರಿಕ ಹಾಗೂ ಚೀನಾದ ರಾಜತಾಂತ್ರಿಕರು ಪಾಲ್ಗೊಂಡಿದ್ದರು – ಎಎಫ್‌ಪಿ ಚಿತ್ರ

'ಎಲ್ಲ ದೇಶಗಳು ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಶಾಂತಿ–ಸೌಹಾರ್ದವಾಗಿ ಬಗೆಹರಿಸಿಕೊಳ್ಳಬೇಕು ಎಂದು ಅಮೆರಿಕ ಬಯಸುತ್ತದೆ. ಈ ಮಾರ್ಗ ಅನುಸರಿಸಿದರೆ ಜಾಗತಿಕ ಶಾಂತಿ–ಸ್ಥಿರತೆ ಸಾಧ್ಯ. ಆದರೆ, ಈ ಮಾರ್ಗ ಬಿಟ್ಟು ಬೇರೆ ದಾರಿಯಲ್ಲಿ ಸಾಗಿದರೆ ಈ ಜಗತ್ತು ಹಿಂಸೆ, ಅಸ್ಥಿರತೆಯಿಂದ ನಲುಗುವುದು ಖಚಿತ' ಎಂದು ಬ್ಲಿಂಕೆನ್ ಅವರು ಚೀನಾ ನಿಯೋಗವನ್ನು ಉದ್ದೇಶಿಸಿ ಹೇಳಿದರು.

'ದೇಶೀಯವಾಗಿ, ಜಾಗತಿಕವಾಗಿ ಆದ್ಯತೆಯ ವಿಷಯಗಳು ಕುರಿತು ಚರ್ಚಿಸಲು ಈ ಸಭೆ ಉತ್ತಮ ಅವಕಾಶ ಒದಗಿಸಿದೆ. ಈ ವಿಷಯದಲ್ಲಿ ಬೈಡನ್ ಆಡಳಿತದ ಉದ್ದೇಶ ಹಾಗೂ ಅನುಸರಿಸುವ ಮಾರ್ಗ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ' ಎಂದೂ ಹೇಳಿದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಯಾಂಗ್, 'ಕೈಬೆರಳೆಣಿಕೆಯಷ್ಟು ದೇಶಗಳು ರೂಪಿಸಿರುವ ನಿಯಮಗಳನ್ನು ಅನುಸರಿಸಲು ಚೀನಾ ಸಿದ್ಧವಿಲ್ಲ' ಎಂದರು.

'ವಿಶ್ವಸಂಸ್ಥೆ ರೂಪಿಸಿದ ನಿಯಮಗಳನ್ನು ಕೇಂದ್ರವಾಗಿರಿಸಿಕೊಂಡಿರುವ ಅಂತರರಾಷ್ಟ್ರೀಯ ವ್ಯವಸ್ಥೆಯನ್ನು ಚೀನಾ ಅನುಸರಿಸುತ್ತದೆ. ವಿಶ್ವ ಸಮುದಾಯವೂ ಇದನ್ನೇ ಗೌರವಿಸುತ್ತದೆ' ಎಂದು ಬ್ಲಿಂಕೆನ್ ಅವರಿಗೆ ತಿರುಗೇಟು ನೀಡಿದರು.

'ಅಮೆರಿಕ ಹಾಗೂ ಚೀನಾ ತಮ್ಮದೇ ಶೈಲಿಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿವೆ. ಆದರೆ, ಅಮೆರಿಕ ಎಷ್ಟರ ಮಟ್ಟಿಗೆ ಪ್ರಜಾತಾಂತ್ರಿಕ ಮೌಲ್ಯಗಳನ್ನು ಪಾಲಿಸುತ್ತಿದೆ ಎಂಬುದನ್ನು ಜಗತ್ತು ಈಗ ಮೌಲ್ಯಮಾಪನ ಮಾಡಬೇಕಾಗಿದೆ' ಎಂದೂ ಯಾಂಗ್ ಕಟುವಾದ ಪದಗಳಲ್ಲಿ ಹೇಳಿದರು.

'ಅಮೆರಿಕ ತನ್ನ ಕಾರ್ಯವೈಖರಿ ಬದಲಿಸಿಕೊಳ್ಳುವುದು ಅಗತ್ಯ' ಎಂದೂ ಯಾಂಗ್ ಹೇಳಿದರು.

ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸಲ್ಲಿವನ್, 'ಚೀನಾದೊಂದಿಗೆ ಸಂಘರ್ಷವನ್ನು ಅಮೆರಿಕ ಬಯಸುವುದಿಲ್ಲ. ನಮ್ಮ ಜನರಿಗಾಗಿ, ನಮ್ಮ ಮಿತ್ರರಾಷ್ಟ್ರಗಳ ಹಿತಾಸಕ್ತಿ ಕಾಪಾಡಲು ನಾವು ಹೋರಾಡುತ್ತೇವೆ' ಎಂದರು.

'ಕೇವಲ ತನ್ನ ಮಿತ್ರ ರಾಷ್ಟ್ರ ಎಂಬ ಕಾರಣಕ್ಕೆ ಅಮೆರಿಕ ಕೆಲವು ದೇಶಗಳ ಪರವಾಗಿ ಮಾತನಾಡಲು ಆರಂಭಿಸಿದರೆ, ಪ್ರತಿರೋಧ ಒಡ್ಡಲು ಶುರುಮಾಡಿದರೆ, ಅಂತರರಾಷ್ಟ್ರೀಯ ಸಂಬಂಧಗಳಿಗೆ ಧಕ್ಕೆ ತಪ್ಪಿದ್ದಲ್ಲ' ಎಂದು ಯಾಂಗ್ ತಿರುಗೇಟು ನೀಡಿದರು.

'ಅದಿರು ಖರೀದಿ: ಇ-ಹರಾಜು ಪ್ರಕ್ರಿಯೆ ಕೈಬಿಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕಬ್ಬಿಣದ ಅದಿರಿನ ಮಾರಾಟ ಮತ್ತು ಖರೀದಿಗೆ ಕಡ್ಡಾಯಗೊಳಿಸಿರುವ ಇ–ಹರಾಜು ಪ್ರಕ್ರಿಯೆ ಕೈಬಿಡುವಂತೆ ಭಾರತೀಯ ಖನಿಜ ಉದ್ಯಮಗಳ ಒಕ್ಕೂಟ (ಫಿಮಿ)ದ ದಕ್ಷಿಣ ವಲಯ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಧಾರವಾಡದ ಸಮಾಜ ಪರಿವರ್ತನ ಸಮುದಾಯದ ಪ್ರಕರಣದ ವಿಚಾರಣೆ ನಡೆಸಿ ನೀಡಲಾದ 2013ರ ಆದೇಶದಂತೆ, ಕರ್ನಾಟಕದಲ್ಲಿ ಇ–ಹರಾಜಿನ ಮೂಲಕವೇ ಅದಿರಿನ ಖರೀದಿ ಮತ್ತು ಮಾರಾಟಕ್ಕೆ ಅನುಮತಿ ನೀಡಲಾಗಿದೆ. ಆದರೆ, ದೇಶದ ಇತರೆಡೆ ಈ ಪದ್ಧತಿ ಇಲ್ಲದ್ದರಿಂದ ಈ ಪ್ರಕ್ರಿಯೆ ಅಗತ್ಯವಿಲ್ಲ ಎಂದು ಫಿಮಿ ಅರ್ಜಿಯಲ್ಲಿ ತಿಳಿಸಲಾಗಿದೆ.

ಈ ಸಂಬಂಧ ರಚಿಸಲಾದ ಮೇಲ್ವಿಚಾರಣಾ ಸಮಿತಿ ಹಾಗೂ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ)ಗಳು ಇ–ಹರಾಜು ಪ್ರಕ್ರಿಯೆ ಕೈಬಿಡಲು ಈಗಾಗಲೇ ಸಮ್ಮತಿ ಸೂಚಿಸಿವೆ ಎಂದು ಅರ್ಜಿದಾರರ ಪರ ವಕೀಲ ಕೃಷ್ಣನ್ ವೇಣುಗೋಪಾಲ್ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠಕ್ಕೆ ಶುಕ್ರವಾರ ಕೋರಿದರು.

ಅಲ್ಲದೆ, ತುರ್ತಾಗಿ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ನ್ಯಾಯಾಲಯದಲ್ಲಿ ಎಂದಿನಂತೆ ಭೌತಿಕ ಕಲಾಪ ಆರಂಭಿಸಿದಾಗ ಈ ಅರ್ಜಿಯ ವಿಚಾರಣೆ ನಡೆಸುವುದಾಗಿ ಮೊದಲು ತಿಳಿಸಿದ್ದ ಪೀಠ, ಅರ್ಜಿದಾರರ ಕೋರಿಕೆಯ ಮೇರೆಗೆ ತುರ್ತು ವಿಚಾರಣೆ ನಡೆಸಲು ಸಮಯ ನಿಗದಿಗೊಳಿಸಲು ಒಪ್ಪಿಗೆ ನೀಡಿತು.

ಇ–ಹರಾಜಿನ ಮೂಲಕ ಅದಿರನ್ನು ಮಾರಾಟ ಮಾಡುವುದಕ್ಕೂ ಪರಿಸರಕ್ಕೆ ಹಾನಿ ಉಂಟಾಗುವುದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಸಿಇಸಿ 2019ರಲ್ಲಿ ಸಲ್ಲಿಸಲಾದ ವರದಿಯಲ್ಲಿ ಸ್ಪಷ್ಟಪಡಿಸಿದೆ. ಅಲ್ಲದೆ, ಸುಪ್ರೀಂ ಕೋರ್ಟ್ ವಿಧಿಸಿದ್ದ ಎರಡು ವರ್ಷಗಳ ಅವಧಿಯೂ ಮುಗಿದಿದ್ದು, ಅಕ್ರಮ ಗಣಿಗಾರಿಕೆ ತಡೆಗೆ ಆರಂಭಿಸಲಾಗಿದ್ದ ಇ–ಹರಾಜು ಪ್ರಕ್ರಿಯೆಯ ಉದ್ದೇಶವೂ ಈಡೇರಿದೆ. ಹಾಗಾಗಿ, ಕರ್ನಾಟಕದಲ್ಲಿ ಜಾರಿಯಲ್ಲಿರುವ ಇ–ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿ ಗಣಿ ಗುತ್ತಿಗೆದಾರರೊಂದಿಗೆ ಒಪ್ಪಂದದ ಮೂಲಕ ಖರೀದಿ ಮಾಡುವುದಕ್ಕೆ ಅವಕಾಶ ನೀಡಬೇಕು ಎಂದು ಅರ್ಜಿಯಲ್ಲಿ ಆಗ್ರಹಿಸಲಾಗಿದೆ.

ಇ–ಹರಾಜು ಪ್ರಕ್ರಿಯೆಯು ಕಬ್ಬಿಣದ ಅದಿರಿನ ವಹಿವಾಟಿನ ಮೇಲೆ ಸಾಕಷ್ಟು ಹೊಡೆತ ನೀಡಿದ್ದಲ್ಲದೆ, ಸರ್ಕಾರದ ಆದಾಯದ ಮೇಲೂ ಪರಿಣಾಮ ಬೀರಿದೆ. ಮೇಲಾಗಿ, ಗಣಿಗಾರಿಕೆಗೆ ಸಂಬಂಧಿಸಿ 2013ರಲ್ಲಿ ಪರಿಚಯಿಸಲಾದ ಉಪಗ್ರಹ ಆಧರಿತ ಕಣ್ಗಾವಲು ವ್ಯವಸ್ಥೆಯಿಂದ ಸಾಕಷ್ಟು ಬದಲಾವಣೆಗಳು ಕಂಡುಬಂದಿವೆ ಎಂದೂ ಫಿಮಿ ತಿಳಿಸಿದೆ.

ಕಲಬುರ್ಗಿ ರೈಲ್ವೆ ವಿಭಾಗ ಆರಂಭ ಕೈಬಿಟ್ಟ ವಿಚಾರ ರಾಜ್ಯಸಭೆಯಲ್ಲಿ ಪ್ರಸ್ತಾಪ

ಖರ್ಗೆ ಜೊತೆ ಚರ್ಚಿಸಿ ಅಂತಿಮ ತೀರ್ಮಾನ: ಗೋಯಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕಲಬುರ್ಗಿಯಲ್ಲಿ ರೈಲ್ವೆ ವಿಭಾಗ ಆರಂಭಿಸುವುದು ಕಾರ್ಯಸಾಧುವಲ್ಲ ಎಂಬ ತಜ್ಞರ ಅಧ್ಯಯನ ವರದಿಯ ಮೇರೆಗೆ ಸರ್ಕಾರ ಪ್ರಸ್ತಾವವನ್ನು ಕೈಬಿಟ್ಟಿದೆ ಎಂದು ರೈಲ್ವೆ ಸಚಿವ ಪೀಯೂಷ್ ಗೋಯಲ್ ರಾಜ್ಯಸಭೆಯಲ್ಲಿ ಶುಕ್ರವಾರ ಸ್ಪಷ್ಟಪಡಿಸಿದರು.


'ರೈಲ್ವೆ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಎಂಟು ವರ್ಷಗಳ ಹಿಂದೆಯೇ ಬಜೆಟ್‌ನಲ್ಲಿ ಕಲಬುರ್ಗಿ ರೈಲ್ವೆ ವಿಭಾಗ ಸ್ಥಾಪನೆ ಕುರಿತು ಘೋಷಿಸಿದ್ದರು. ಈಗ ಕಲ್ಯಾಣ ಕರ್ನಾಟಕ ಭಾಗದಿಂದಲೇ ಬಿಜೆಪಿಯ ಐವರು ಸಂಸದರಿದ್ದರೂ ರೈಲ್ವೆ ವಿಭಾಗಕ್ಕೆ ಅನುಮೋದನೆ ದೊರೆತಿಲ್ಲವೇಕೆ' ಎಂಬ ಕಾಂಗ್ರೆಸ್‌ನ ಜಿ.ಸಿ. ಚಂದ್ರಶೇಖರ್ ಅವರ ಪ್ರಶ್ನೆಗೆ ಗೋಯಲ್ ಉತ್ತರಿಸಿದರು.

ಅಗತ್ಯ ಅಧ್ಯಯನ ನಡೆಸದೆಯೇ, ಕೇವಲ ಚುನಾವಣೆಯನ್ನೇ ಉದ್ದೇಶವಾಗಿಸಿ ಆ ಘೋಷಣೆ ಮಾಡಲಾಗಿತ್ತು. ಅಲ್ಲಿ ವಿಭಾಗ ಆರಂಭ ಕಾರ್ಯಸಾಧುವಲ್ಲ ಎಂಬ ಕಾರಣದಿಂದ ವಿಭಾಗ ಸ್ಥಾಪನೆ ಕೈಬಿಡಲಾಗಿದೆ ಎಂದು ಗೋಯಲ್ ಪುನರುಚ್ಚರಿಸಿದರು.

'ಅಗತ್ಯ ಅಧ್ಯಯನದ ಬಳಿಕವೇ ರೈಲ್ವೆ ವಿಭಾಗದ ಘೋಷಣೆ ಮಾಡಲಾಗಿತ್ತು. ಮೂರು ರಾಜ್ಯಗಳನ್ನು ಒಳಗೊಂಡ ವಿಭಾಗ ಸ್ಥಾಪನೆ ಅಗತ್ಯವಿದೆ ಎಂದು ಹುಬ್ಬಳ್ಳಿ ರೈಲ್ವೆ ವಲಯದ ವ್ಯವಸ್ಥಾಪಕರಾಗಿದ್ದ ಮಿತ್ತಲ್ ಸಲಹೆ ನೀಡಿದ್ದರು. ಈಗ ಕಾರ್ಯಸಾಧುವಲ್ಲ ಎಂದಾದಲ್ಲಿ, ವಿಭಾಗ ಸ್ಥಾಪನೆ ಉದ್ದೇಶಕ್ಕೆ ನೀಡಲಾದ ಭೂಮಿಯನ್ನು ಮರಳಿ ನೀಡಿಲ್ಲವೇಕೆ, ಆ ಭೂಮಿಗೆ ತಂತಿಬೇಲಿ ಹಾಕಿದ್ದೇಕೆ' ಎಂದು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದರು.

ಪ್ರಾಯೋಗಿಕ ಸ್ಥಿತಿಗತಿ ಹಾಗೂ ಲಾಭ–ನಷ್ಟದ ಲೆಕ್ಕಾಚಾರದೊಂದಿಗೆ ರೈಲ್ವೆ ವಿಭಾಗ ಸ್ಥಾಪಿಸಲಾಗುತ್ತದೆ. ಈ ಸಂಬಂಧ ತಾರತಮ್ಯ ನೀತಿ ಅನುಸರಿಸಲು ಆಗದು. ಆದರೂ, ಈ ಕುರಿತು ಖರ್ಗೆ ಅವರೊಂದಿಗೆ ಪ್ರತ್ಯೇಕವಾದ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಚಿವ ಗೋಯಲ್ ತಿಳಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,557
ಇಂದಿನ ಅಂತ್ಯ	14,744
▲	186
ದಿನದ ಗರಿಷ್ಠ	14,788

ವಿನಿಮಯ ದರ

$ ಡಾಲರ್	72.52
£ ಪೌಂಡ್	100.98
€ ಯುರೊ	86.46
¥ ಯೆನ್ (100ಕ್ಕೆ)	66.58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹385
12 ಮೊಟ್ಟೆಗೆ	₹52

ಮೈಸೂರು

100 ಮೊಟ್ಟೆಗೆ	₹388

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1225(1250)
ಸೂರ್ಯಕಾಂತಿ (ರಿಫೈನ್ಡ್)	₹1750 (1770)
ಪಾಮೋಲಿನ್	₹1198 (1215)

ನಕಲಿ ರಶೀದಿ ಸೃಷ್ಟಿಸಿ ಜಿಎಸ್‌ಟಿ ವಂಚನೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ನಕಲಿ ರಸೀದಿಗಳನ್ನು ಸೃಷ್ಟಿಸಿ ಜಿಎಸ್‌ಟಿ ವಂಚಿಸುತ್ತಿದ್ದ ಜಾಲವನ್ನು ಇಲ್ಲಿನ ಕೇಂದ್ರ ಜಿಎಸ್‌ಟಿ ಅಧಿಕಾರಿಗಳ ತಂಡ ಪತ್ತೆ ಮಾಡಿದೆ. ಇಬ್ಬರನ್ನು ಬಂಧಿಸಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಕೋರ್ಟ್ ತನಿಖೆಗಾಗಿ ಆರೋಪಿಗಳನ್ನು ಏ.1 ರವರೆಗೆ ಜಿಎಸ್‌ಟಿ ಅಧಿಕಾರಿಗಳ ವಶಕ್ಕೆ ನೀಡಿತು.

ಶ್ರೀನಿವಾಸ ಟ್ರೇಡರ್ಸ್‌ನ ಛತ್ರಭೋಜ ಭಾನುಸಾಲಿ ಹಾಗೂ ಶ್ಯಾಮ್ ಟ್ರೇಡರ್ಸ್‌ನ ಶ್ರೀಧರ್ ಹೆಗ್ಡೆ ಬಂಧಿತರು. ಶಿರಸಿ, ಪುತ್ತೂರು, ಮಂಗಳೂರು, ಚಿತ್ರದುರ್ಗ ಸೇರಿ ರಾಜ್ಯದ ವಿವಿಧೆಡೆ ಅಡಿಕೆ ಪೂರೈಕೆಗೆ ಸಂಬಂಧಿಸಿ ನಕಲಿ ರಸೀದಿಗಳನ್ನು ಈ ಜಾಲ ನೀಡುತ್ತಿತ್ತು. ಜೊತೆಗೆ ಕೆಲ ಟ್ರಾನ್ಸ್‌ಪೋರ್ಟ್ ಕಂಪನಿಗಳೂ ಶಾಮೀಲಾಗಿರುವುದು ಪತ್ತೆಯಾಗಿದೆ.

ಕಂಪನಿಗಳು ರಸೀದಿಯಲ್ಲಿ ನೀಡಿದ್ದ ವಿಳಾಸಕ್ಕೆ ಹೋಗಿ ನೋಡಿದಾಗ ಪೀಠೋಪಕರಣ, ಕಂಪ್ಯೂಟರ್, ದಾಖಲೆಗಳು ಯಾವುದೂ ಇರಲಿಲ್ಲ. ಈ ವಿಳಾಸವನ್ನು ಕೇವಲ ಜಿಎಸ್‌ಟಿ ನೋಂದಣಿಗಾಗಿ ಬಳಸಲಾಗಿದೆ ಎಂಬುದು ಖಚಿತವಾಗಿದೆ. ಬಂಧಿತರಿಂದ ದಾಖಲೆಗಳು ಹಾಗೂ ಫೋನ್ ಸಂಭಾಷಣೆ ವಿವರಗಳನ್ನು ಅಧಿಕಾರಿಗಳು ಕಲೆ ಹಾಕಿದ್ದಾರೆ.

₹17 ಕೋಟಿಯಷ್ಟು ಜಿಎಸ್‌ಟಿ ವಂಚಿಸಿರುವುದು ಪತ್ತೆಯಾಗಿದ್ದು, ₹3.2 ಕೋಟಿ ವಸೂಲಿ ಮಾಡಲಾಗಿದೆ. ಕೇಂದ್ರ ಜಿಎಸ್‌ಟಿ ಆಯುಕ್ತ ಇಮಾಮುದ್ದೀನ್ ಅಹ್ಮದ್ ನೇತೃತ್ವದಲ್ಲಿ ಸಹಾಯಕ ಆಯುಕ್ತ ರಾಜೇಶ್ ಪೂಜಾರಿ, ಅಧೀಕ್ಷಕರಾದ ರಾಜಗೋಪಾಲ್, ಪುಷ್ಪೇಂದ್ರ ಸಿಂಗ್, ಇನ್‌ಸ್ಪೆಕ್ಟರ್‌ಗಳಾದ ಪಾರ್ಥಸಾರಥಿ, ಶೈಲೇಂದ್ರ ಜೈನ್, ಅರ್ಪಿತ್ ಕರ್ಮಾ, ಅಭಿನವ ಕುಮಾರ್ ಅವರನ್ನು ಒಳಗೊಂಡ ತಂಡ ಈ ಕಾರ್ಯಾಚರಣೆ ನಡೆಸಿದೆ.

ಮುಂಬೈ ಧಾರಣೆ

ಶೇಂಗಾ

19-3-2021

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1575 (1585)
ಸೋಯಾ ಕಚ್ಚಾ	1230 (1250)
ಪಾಮ್ ವಾರದ ಡೆಲಿವರಿ	1196 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1710 (1730)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
44,650 (44,550)
ಬೆಳ್ಳಿ ಕೆ.ಜಿ
66,700 (66,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಚಿನ್ನ ₹ 168 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಶುಕ್ರವಾರ ಪ್ರತಿ 10 ಗ್ರಾಂಗೆ ₹ 168ರಷ್ಟು ಏರಿಕೆ ಕಂಡಿದೆ. 10 ಗ್ರಾಂ ಚಿನ್ನವು ₹ 44,580ಕ್ಕೆ ಮಾರಾಟವಾಗಿದೆ.

ಚಿನ್ನದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಳ ಆಗಿದ್ದರ ಪರಿಣಾಮವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಬೆಲೆ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ. ಕೆ.ಜಿ. ಬೆಳ್ಳಿ ಬೆಲೆಯಲ್ಲಿ ₹ 135ರಷ್ಟು ಇಳಿಕೆ ಆಗಿ, ₹ 66,706ರಂತೆ ಮಾರಾಟವಾಗಿದೆ.

ಮೂಡಿಸ್ ಅನಾಲಿಟಿಕ್ಸ್ ಸಂಸ್ಥೆಯ ಅಂದಾಜು

ಶೇಕಡ 12ರಷ್ಟು ಬೆಳವಣಿಗೆ



ನವದೆಹಲಿ (ಪಿಟಿಐ): ದೇಶದ ಅರ್ಥ ವ್ಯವಸ್ಥೆಯು 2021ರಲ್ಲಿ ಶೇಕಡ 12ರಷ್ಟು ಬೆಳವಣಿಗೆ ಸಾಧಿಸುವ ನಿರೀಕ್ಷೆ ಇದೆ ಎಂದು ಮೂಡಿಸ್ ಅನಾಲಿಟಿಕ್ಸ್ ಹೇಳಿದೆ.

ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಅರ್ಥ ವ್ಯವಸ್ಥೆಯು ಶೇ (–)7.5ರಷ್ಟು ಕುಸಿತ ಕಂಡಿತ್ತು. ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಅರ್ಥ ವ್ಯವಸ್ಥೆಯು ಶೇ 0.4ರಷ್ಟು ಬೆಳವಣಿಗೆ ಕಂಡಿದೆ. ಈ ಚೇತರಿಕೆಯು ದೇಶದ ಜಿಡಿಪಿ ಬೆಳವಣಿಗೆ ಹೆಚ್ಚುವ ನಿರೀಕ್ಷೆ ಉಂಟುಮಾಡಿದೆ ಎಂದು ಮೂಡಿಸ್ ಹೇಳಿದೆ.

ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಗೊಳಿಸಲು ಆರಂಭಿಸಿದ ನಂತರ ದೇಶಿ ಮಾರುಕಟ್ಟೆಯಲ್ಲಿ ಹಾಗೂ ವಿದೇಶಗಳ ಮಾರುಕಟ್ಟೆಗಳಲ್ಲಿ ಬೇಡಿಕೆಯು ಚೇತರಿಕೆ ಕಾಣುತ್ತಿದೆ. ಇದರಿಂದಾಗಿ ಈಚಿನ ತಿಂಗಳುಗಳಲ್ಲಿ ತಯಾರಿಕೆಯು ಹೆಚ್ಚಳ ಆಗಿದೆ. ‘ಖಾಸಗಿ ವಲಯಗಳಿಂದ ಬರುವ ಬೇಡಿಕೆಗಳು, ವಿದೇಶಿ ಮೂಲದಿಂದ ಬರುವ ಹೂಡಿಕೆಗಳು ಮುಂದಿನ ಕೆಲವು ತ್ರೈಮಾಸಿಕಗಳಲ್ಲಿ ಏರಿಕೆ ಕಾಣಲಿವೆ ಎಂಬುದು ನಮ್ಮ ನಿರೀಕ್ಷೆ. ಇದು 2021ರಲ್ಲಿ ಆಂತರಿಕವಾಗಿ ಬೇಡಿಕೆ ಹೆಚ್ಚಳವಾಗುವುದಕ್ಕೆ ನೆರವಾಗಲಿದೆ’ ಎಂದು ಮೂಡಿಸ್ ಅಭಿಪ್ರಾಯ ವ್ಯಕ್ತಪಡಿಸಿದೆ.

ಹಣಕಾಸು ಹಾಗೂ ಆರ್ಥಿಕ ನೀತಿಗಳು ಬೆಳವಣಿಗೆಗೆ ಪೂರಕವಾಗಿ ಇರಲಿವೆ ಎಂದು ಅದು ಅಂದಾಜಿಸಿದೆ. ‘ರೆಪೊ ದರವು ಈಗ ಶೇ 4ರಷ್ಟು ಇದೆ. ಈ ವರ್ಷದಲ್ಲಿ ರೆಪೊ ದರವು ಈ ಮಟ್ಟಕ್ಕಿಂತ ಕಡಿಮೆ ಬರುವ ನಿರೀಕ್ಷೆಯನ್ನು ನಾವು ಹೊಂದಿಲ್ಲ’ ಎಂದು ಮೂಡಿಸ್ ಹೇಳಿದೆ. ಆದಾಯ ತೆರಿಗೆ ಪ್ರಮಾಣವನ್ನು ತಗ್ಗಿಸುವಂತಹ ಆರ್ಥಿಕ ಉತ್ತೇಜನದ ನೇರ ಕ್ರಮಗಳು ಈಗಿನ ಪರಿಸ್ಥಿತಿಯಲ್ಲಿ ಜಾರಿಗೆ ಬರಲಿಕ್ಕಿಲ್ಲ ಎಂದು ಅದು ಭವಿಷ್ಯ ನುಡಿದಿದೆ.

2021ರಲ್ಲಿ ಆರ್ಥಿಕ ಪುನಶ್ಚೇತನಕ್ಕೆ ಇರುವ ಪ್ರಮುಖ ಸವಾಲು ಕೋವಿಡ್–19ರ ಎರಡನೆಯ ಅಲೆ ಎಂದು ಸಂಸ್ಥೆ ಎಚ್ಚರಿಸಿದೆ. ‘ಆದರೆ ಕೋವಿಡ್–19 ಪ್ರಕರಣಗಳು ಮತ್ತೆ ಹೆಚ್ಚುತ್ತಿರುವುದು ಕೆಲವು ರಾಜ್ಯಗಳಿಗೆ ಮಾತ್ರ ಸೀಮಿತವಾಗಿರುವಂತೆ ಕಾಣುತ್ತಿರುವುದು ಸಮಾಧಾನಕರ. ಪರಿಸ್ಥಿತಿ ಹದಗೆಟ್ಟರೆ ರಾಜ್ಯ ಸರ್ಕಾರಗಳು ಸೀಮಿತ ಪ್ರದೇಶದಲ್ಲಿ ಮಾತ್ರ ಕರ್ಫ್ಯೂನಂತಹ ಕ್ರಮಗಳನ್ನು ಜಾರಿಗೊಳಿಸಬಹುದು ಎಂಬುದು ನಮ್ಮ ಲೆಕ್ಕಾಚಾರ’ ಎಂದು ಮೂಡಿಸ್ ಹೇಳಿದೆ.

ನಾಯಕರ ವಿರುದ್ಧ ಕ್ರಮ: ಟ್ವಿಟರ್ ಸಮೀಕ್ಷೆ

ನವದೆಹಲಿ (ಪಿಟಿಐ): ಜನಸಾಮಾನ್ಯರಿಗೆ ತಾನು ರೂಪಿಸಿರುವ ನಿಯಮಗಳನ್ನು ಜಾಗತಿಕ ನಾಯಕರಿಗೂ ಅನ್ವಯಿಸಬೇಕೇ, ಅವರು ನಿಯಮಗಳನ್ನು ಉಲ್ಲಂಘಿಸಿದರೆ ತಾನು ಯಾವ ಬಗೆಯ ಕ್ರಮ ಜರುಗಿಸಬೇಕು ಎಂಬ ಬಗ್ಗೆ ಟ್ವಿಟರ್ ಸಾರ್ವಜನಿಕರಿಂದ ಅಭಿಪ್ರಾಯ ಕೋರಿದೆ.



ಸಾರ್ವಜನಿಕ ವಾಗ್ವಾದಗಳ ಆರೋಗ್ಯವನ್ನು ಕಾಪಾಡುವ ಬಯಕೆ ತನಗಿದೆ, ತನ್ನ ಮೂಲಕ ನಡೆಯುವ ರಾಜಕೀಯ ಚರ್ಚೆಗಳ ಸ್ವರೂಪ ಬದಲಾಗುತ್ತಿರುವ ಕಾರಣ ಜಾಗತಿಕ ನಾಯಕರ ವಿಚಾರದಲ್ಲಿ ತನ್ನ ನೀತಿಗಳನ್ನು ಮರುಪರಿಶೀಲನೆಗೆ ಒಳಪಡಿಸಲಾಗುತ್ತಿದೆ ಎಂದು ಟ್ವಿಟರ್ ಹೇಳಿದೆ.

ಈ ಸಮೀಕ್ಷೆಯು ಏಪ್ರಿಲ್ 12ರವರೆಗೆ ನಡೆಯಲಿದೆ. ಒಟ್ಟು 14 ಭಾಷೆಗಳಲ್ಲಿ ಪ್ರಶ್ನಾವಳಿ ಲಭ್ಯವಿರಲಿದೆ.

641 ಅಂಶ ಏರಿಕೆ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಹೂಡಿಕೆದಾರರು ಶುಕ್ರವಾರದ ವಹಿವಾಟಿನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಎಫ್‌ಎಂಸಿಜಿ (ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳು) ಮತ್ತು ಐ.ಟಿ. ವಲಯದ ಷೇರುಗಳ ಖರೀದಿಗೆ ಉತ್ಸಾಹ ತೋರಿಸಿದರು. ಇದರಿಂದಾಗಿ ದೇಶದ ಷೇರುಪೇಟೆಗಳು ಐದು ದಿನಗಳ ನಕಾರಾತ್ಮಕ ವಹಿವಾಟಿನಿಂದ ಹೊರಬಂದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವಾದ ಸೆನ್ಸೆಕ್ಸ್ ಶುಕ್ರವಾರ 641 ಅಂಶ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 186 ಅಂಶ ಚೇತರಿಕೆ ದಾಖಲಿಸಿತು.



ದೇಶದ ಹಲವು ರಾಜ್ಯಗಳಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿದ್ದರೂ, ಸ್ಥಳೀಯವಾಗಿ ಅಲ್ಲಲ್ಲಿ ಜಾರಿಯಾಗಿರುವ ಲಾಕ್‌ಡೌನ್ ಕ್ರಮಗಳು ಆರ್ಥಿಕ ಚಟುವಟಿಕೆಗಳಿಗೆ ಅಡ್ಡಿ ಉಂಟುಮಾಡುವಂತಿದ್ದರೂ ವರ್ತಕರು, ಹೂಡಿಕೆದಾರರು ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ.

ಎನ್‌ಟಿಪಿಸಿ, ಎಚ್‌ಯುಎಲ್, ಪವರ್ ಗ್ರಿಡ್, ರಿಲಯನ್ಸ್ ಇಂಡಸ್ಟ್ರೀಸ್, ಐಟಿಸಿ, ಅಲ್ಟ್ರಾಟೆಕ್ ಸಿಮೆಂಟ್ ಮತ್ತು ಎಚ್‌ಸಿಎಲ್ ಟೆಕ್ ಕಂಪನಿ ಷೇರುಗಳು ಹೆಚ್ಚಿನ ಗಳಿಕೆ ಕಂಡವು. ಎಲ್‌ಆ್ಯಂಡ್‌ಟಿ, ಟೆಕ್ ಮಹೀಂದ್ರ, ಬಜಾಜ್ ಆಟೊ ಮತ್ತು ಟೈಟಾನ್ ಷೇರುಗಳು ಇಳಿಕೆ ದಾಖಲಿಸಿದವು. ಈ ವಾರದ ಅವಧಿಯಲ್ಲಿ ಸೆನ್ಸೆಕ್ಸ್ ಒಟ್ಟು 933 ಅಂಶಗಳಷ್ಟು, ನಿಫ್ಟಿ 286 ಅಂಶಗಳಷ್ಟು ಇಳಿಕೆ ಕಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	900 - 9050
ನಡುಗೋಲು	1,000- 1,050
ರಾಶಿ	1,200-1,300
ರಾಶಿ ಉತ್ತಮ	1,300-1,400
ಜರಡಿ	1,500-1,550
ಹೇರಕಿದ್ದು	1,900-2,000
ಹಸಿರು ಸಾಧಾರಣ	1,300-1,400
ಹಸಿರು ಉತ್ತಮ	1,700-1,750
ಹಸಿರು ಅತಿ ಉತ್ತಮ	1,900-2,000
ಕಾಳು ಮೆಣಸು -	355

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-40500
ಹಳತು	42500-50500

ಕುಮಟಾ

ಚಿಪ್ಪು	26169-29089
ಕೋಕ	18099-28889
ಫ್ಯಾಕ್ಟರಿ	13869-17529
ಹಳೆಚಾಲಿ	38569-40809
ಹೊಸಚಾಲಿ	35169-37699

ಕುಂದಾಪುರ

ಹಳೆಚಾಲಿ	33000-49500
ಹೊಸಚಾಲಿ	32000-40500

ಪುತ್ತೂರು

ಕೋಕ	9500-24000
ಹೊಸತು	28500-40500

ಸಿದ್ದಾಪುರ

ಬಿಳಿಗೋಟು	23699-30089
ಚಾಲಿ	34689-36899
ಕೋಕ	21099-28809
ಕೆಂಪುಗೋಟು	26669-29469
ರಾಶಿ	39609-41899
ತಟ್ಟಿಬೆಟ್ಟೆ	32109-38189

ಶಿರಸಿ

ಬೆಟ್ಟೆ	21899-39299
ಬಿಳಿಗೋಟು	16099-31878
ಚಾಲಿ	26829-37811
ರಾಶಿ	37999-42399

ಯಲ್ಲಾಪುರ

ಬಿಳಿಗೋಟು	22122-31612
ಚಾಲಿ	31899-40401
ಕೋಕ	19199-29299
ಕೆಂಪುಗೋಟು	28812-33699
ರಾಶಿ	39899-45500
ತಟ್ಟಿಬೆಟ್ಟೆ	33799-39419

ಶಿವಮೊಗ್ಗ

ಬೆಟ್ಟೆ	40000-43389
ಗೊರಬಲು	16000-31369
ರಾಶಿ	39600-42644
ಸರಕು	50109-75510

ಸಾಗರ

ಬಿಳಿಗೋಟು	24299-25399
ಚಾಲಿ	33799-33799
ಕೋಕ	28899-28899
ಕೆಂಪುಗೋಟು	29129-29129
ರಾಶಿ	41399-41399

ಚಿತ್ರದುರ್ಗ

ಆಪಿ	41800-42200
ಬೆಟ್ಟೆ	33429-33869
ಕೆಂಪುಗೋಟು	29500-29900
ರಾಶಿ	41339-41779

ರೇಷ್ಮೆಗೂಡು
ರಾಮನಗರ

ಮಿಶ್ರ ತಳಿ (ಸಿ.ಬಿ):	232-394
ದ್ವಿತಳಿ (ಬಿ.ವಿ):	204-443

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9950	---	9,875	---ಸೆಂಟ್ಸ್
ಎಸಿ	4060	---	3,850	
ಆರ್‌ಪಿ	5150	---	5,175	
ಆರ್‌ಸಿ	3000	---	2,925	--- ಡಾಲರ್ಸ್

ಉದ್ಯೋಗಿಗಳ ವೇತನ ಹೆಚ್ಚಿಸಲಿದೆ ಟಿಸಿಎಸ್

ನವದೆಹಲಿ (ಪಿಟಿಐ): 2021–22ನೇ ಆರ್ಥಿಕ ವರ್ಷಕ್ಕೆ ಅನ್ವಯವಾಗುವಂತೆ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯು ತನ್ನ ನೌಕರರ ವೇತನ ಹೆಚ್ಚಿಸಲಿದೆ. ಇದರಿಂದಾಗಿ ಕಂಪನಿಯ 4.7 ಲಕ್ಷ ಉದ್ಯೋಗಿಗಳಿಗೆ ಪ್ರಯೋಜನ ಆಗಲಿದೆ.

ಆರು ತಿಂಗಳ ಅವಧಿಯಲ್ಲಿ ಟಿಸಿಎಸ್ ತನ್ನ ನೌಕರರ ವೇತನ ಹೆಚ್ಚಿಸುತ್ತಿರುವುದು ಇದು ಎರಡನೆಯ ಬಾರಿ. ವೇತನ ಹೆಚ್ಚಳವು ಏಪ್ರಿಲ್‌ನಿಂದ ಅನ್ವಯ ಆಗಲಿದೆ ಎಂದು ಕಂಪನಿ ತಿಳಿಸಿದೆ.

‘ಈ ಕಷ್ಟಕಾಲದಲ್ಲಿ ಹೊಂದಿಕೊಳ್ಳುವ ಮನೋಭಾವ, ಹೊಸತನ್ನು ಹುಡುಕುವ ಬಯಕೆ ತೋರಿದ ನಮ್ಮೆಲ್ಲ ಸಹಭಾಗಿಗಳಿಗೆ ಕೃತಜ್ಞರಾಗಿದ್ದೇವೆ. ನಮ್ಮ ಸಹಭಾಗಿಗಳ ಬಗ್ಗೆ ನಾವು ಹೊಂದಿರುವ ಬದ್ಧತೆಯ ದ್ಯೋತಕ ವೇತನದಲ್ಲಿನ ಹೆಚ್ಚಳ’ ಎಂದು ವಕ್ತಾರರು ಹೇಳಿದ್ದಾರೆ.

ಈಗ ಆಗಲಿರುವ ವೇತನ ಹೆಚ್ಚಳ ಪರಿಗಣಿಸಿದರೆ, ಟಿಸಿಎಸ್ ಉದ್ಯೋಗಿಗಳ ವೇತನವು ಆರು ತಿಂಗಳ ಅವಧಿಯಲ್ಲಿ ಸರಾಸರಿ ಶೇ 12–14ರಷ್ಟು ಹೆಚ್ಚಳ ಕಂಡಂತೆ ಆಗುತ್ತದೆ ಎಂದು ಮೂಲಗಳು ಹೇಳಿವೆ.

2021ನೆಯ ಹಣಕಾಸು ವರ್ಷದಲ್ಲಿ ವೇತನ ಹೆಚ್ಚಳದ ಘೋಷಣೆಯನ್ನು ಮೊದಲು ಮಾಡಿದ ಐ.ಟಿ. ಸೇವಾ ಕಂಪನಿ ಟಿಸಿಎಸ್.


ಮಂತ್ರಾಲಯದ ಗುರುರಾಯ

• ಯು.ಪಿ. ಪುರಾಣಿಕ್

ಅಪಾರ ಮಹಿಮರೂ ದಯಾಳುಗಳೂ ಯತಿಶ್ರೇಷ್ಠರೂ ಆಗಿರುವ ಶ್ರೀ ರಾಘವೇಂದ್ರಸ್ವಾಮಿಗಳ ಜನ್ಮದಿನ ಎಂದರೆ ಅವರ ಭಕ್ತರಿಗೆ ವಿಶೇಷವಾದ ದಿನ...

ಇಂದು ರಾಘವೇಂದ್ರ ಸ್ವಾಮೀಜಿ ಜನ್ಮದಿನ. ಇದು ಅವರ 426ನೇ ಜನ್ಮದಿನ. ಗುರುಸಾರ್ವಭೌಮರಾದ ರಾಘವೇಂದ್ರ ಸ್ವಾಮಿಗಳು ಕ್ರಿ.ಶ. 1595 ಮನ್ಮಥನಾಮ ಸಂವತ್ಸರ ಫಾಲ್ಗುಣ ಶುದ್ಧ ಸಪ್ತಮಿ ಗುರುವಾರ, ತಮಿಳುನಾಡಿನ ಭುವನಗಿರಿಯಲ್ಲಿ, ಬೀಗಮುದ್ರೆ ಮನೆತನದ ಗೋಪಮ್ಮ ಹಾಗೂ ತಿಮ್ಮಣ್ಣ ಭಟ್ಟ ದಂಪತಿಯ ಉದರದಲ್ಲಿ ತಿರುಪತಿ ತಿಮ್ಮಪ್ಪನ ಹರಕೆಯಿಂದ ಜನ್ಮವೆತ್ತಿದರು. ಮಗುವಿಗೆ ‘ವೆಂಕಟನಾಥ’ ಎಂದೇ ಹೆಸರಿಡಲಾಯಿತು. ವೆಂಕಟನಾಥನಿಗೆ ಪ್ರಾಥಮಿಕ ಗುರುಗಳು ಅಕ್ಕ ವೆಂಕಟಾಂಬೆಯ ಪತಿ ಲಕ್ಷ್ಮೀನರಸಿಂಹ ಆಚಾರ್ಯ; ಮುಂದೆ ಹೆಚ್ಚಿನ ವಿದ್ಯಾಭ್ಯಾಸ ಸುಧೀಂದ್ರತೀರ್ಥರಿಂದ ದೊರೆಯಿತು.

ಬ್ರಹ್ಮಲೋಕದ ಶಂಕುಕರ್ಣನೆಂಬ ದೇವತೆ, ಬ್ರಹ್ಮನ ಶಾಪಕ್ಕೆ ಗುರಿಯಾಗಿ ಶಾಪವನ್ನು ವರವಾಗಿ ಸ್ವೀಕರಿಸಿ ಕೃತಯುಗದಲ್ಲಿ ಹಿರಣ್ಯ ಕಶಿಪುವೆಂಬ ರಾಕ್ಷಸನ ಉದರದಲ್ಲಿ ‘ಭಕ್ತ ಪ್ರಹ್ಲಾದ’ನಾಗಿ, ದ್ವಾಪರದಲ್ಲಿ ಬಾಹ್ಲಿಕ ರಾಜರಾಗಿ, ಕಲಿಯುಗದಲ್ಲಿ ವ್ಯಾಸರಾಯರಾಗಿ ಹಾಗೂ ಕೊನೆಯ ಅವತಾರವಾಗಿ ರಾಘವೇಂದ್ರರಾಗಿ ಭೂಲೋಕದಲ್ಲಿ ನಾಲ್ಕು ಅವತಾರ ಎತ್ತಿದರು ಎಂಬ ನಂಬಿಕೆ ಭಕ್ತರಲ್ಲಿ ಇದೆ. ರಾಘವೇಂದ್ರ ಸ್ವಾಮಿಗಳು ಕೃತಯುಗದಲ್ಲಿ ಪ್ರಹ್ಲಾದರಾಜನಾಗಿ ಜನ್ಮವೆತ್ತಿದಾಗ ಹತ್ತು ಸಹಸ್ರ ವರ್ಷ ಹರಿನಾಮ ಸ್ಮರಣೆ ಮಾಡಿ ಪುಣ್ಯದ ಕಣಜವನ್ನೇ ತಮ್ಮದಾಗಿರಿಸಿ ಕೊಂಡರು. ತಾವು ಸಂಪಾದಿಸಿದ ಅಪಾರ ಪುಣ್ಯವನ್ನು ಹಂಚಿ ಜನರ ಬವಣೆಯನ್ನು ನೀಗಿಸಲೆಂದೇ ರಾಯರು ತಮ್ಮ 76ನೇ ವರ್ಷದಲ್ಲಿ ಅಂದರೆ ಕ್ರಿ.ಶ. 1671 ವಿರೋಧಿನಾಮ ಸಂವತ್ಸರ ಶ್ರಾವಣ ಕೃಷ್ಣ ಬಿದಿಗೆಯಂದು ಮಂತ್ರಾಲಯದ ಮಂಚಾಲಮ್ಮನ ಸನ್ನಿಧಿಯಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶಿಸಿದರು; ಬೃಂದಾವನದಲ್ಲಿ ತಾವು ಏಳುನೂರು ವರ್ಷಗಳು ನೆಲೆಸುವುದಾಗಿ ತಿಳಿಸಿದ್ದಾರೆ.



ರಾಘವೇಂದ್ರಸ್ವಾಮಿಗಳು

ರಾಯರು ಬಯಸಿ ನೆಲೆಸಿರುವ ಮಂತ್ರಾಲಯದ ಮಹಿಮೆ ಬಣ್ಣಿಸಲಾಗದಷ್ಟು ಅಪಾರವಾಗಿದೆ. ಕೃತಯುಗದಲ್ಲಿ ಪ್ರಹ್ಲಾದರು ಯಜ್ಞ ಮಾಡಿದ ಸ್ಥಳ, ತ್ರೇತಾಯುಗದಲ್ಲಿ ರಾಮ–ಲಕ್ಷ್ಮಣರು ವಿಶ್ರಮಿಸಿದ ಬಂಡೆಯಿಂದ ನಿರ್ಮಿಸಿದ ಬೃಂದಾವನದ ಸ್ಥಳ, ದ್ವಾಪರದಲ್ಲಿ ಅನುಸಾಲ್ವನೆಂಬ ರಾಜ ಪಾಂಡವರ ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿಹಾಕಿ ಪಾಂಡವರನ್ನು ಹಿಮ್ಮೆಟ್ಟಿದ ಸ್ಥಳ, ಮಂಚಾಲಮ್ಮನ ಸನ್ನಿಧಿ – ಇಂತಹ ಪುಣ್ಯಸ್ಥಳದಲ್ಲಿ ನೆಲೆಸಿರುವ ಗುರುಸಾರ್ವಭೌಮರು ಭಕ್ತರ ಪಾಲಿಗೆ ಕಲಿಯುಗದ ಕಲ್ಪತರು. ರಾಯರು ಬೃಂದಾವನಸ್ಥರಾಗಿ ಮುನ್ನೂರೈವತ್ತು ವಸಂತಗಳು ಉರುಳಿವೆ; ವಿಶ್ವದಾದ್ಯಂತ ಎರಡು ಸಾವಿರಕ್ಕೂ ಹೆಚ್ಚಿನ ಬೃಂದಾವನಗಳು ನಿರ್ಮಾಣವಾಗಿವೆ.

ರಾಘವೇಂದ್ರ ಸ್ವಾಮಿಗಳು ಭವರೋಗವೈದ್ಯರು ಹಾಗೂ ಪವಾಡ ಪುರುಷರು ಎಂದೇ ಭಕ್ತರು ನಂಬಿದ್ದಾರೆ. ಮಾಂಸವನ್ನು ಫಲಪುಷ್ಪಾದಿಗಳಾಗಿ ಮಾಡಿದ ಹಾಗೂ ಒಣಕೆಯನ್ನೇ ಚಿಗುರಿಸಿ ಜೀವತುಂಬಿ ಗಿಡವನ್ನಾಗಿ ಮಾಡಿದ ಕಥೆ ಅವರ ಜೀವನ ಚರಿತ್ರೆಯಲ್ಲಿ ಬರುತ್ತದೆ. ರಾಯರು ಬೃಂದಾವನಸ್ಥರಾಗಿ 135 ವರ್ಷಗಳ ನಂತರ, ಕ್ರಿ.ಶ. 1806ರಲ್ಲಿ, ಸರ್ ಥಾಮಸ್ ಮುನ್ರೋ ಅವರಿಗೆ ಬೃಂದಾವನದಿಂದ ಹೊರಬಂದು ದರ್ಶನ ನೀಡಿದರೆಂಬ ಪ್ರತೀತಿಯೂ ಇದೆ.

ಮಂತ್ರಾಲಯ ಒಂದು ಶಾಂತಿವನದಂತಿದ್ದು, ಭಕ್ತಾದಿಗಳು ತಮ್ಮ ಜೀವನದ ಜಂಜಾಟವನ್ನು ಸಂಪೂರ್ಣ ಮರೆತು ಇಲ್ಲಿ ನೆಮ್ಮದಿಯನ್ನು ಅನುಭವಿಸುತ್ತಾರೆ.

ಭಾರತ–ಇಂಗ್ಲೆಂಡ್ ಟಿ20 ಸರಣಿಯ ಕೊನೆಯ ಪಂದ್ಯ ಇಂದು: ಗೆದ್ದವರಿಗೆ ಕಿರೀಟ

ಮೊಟೇರಾ ಅಂಗಳದಲ್ಲಿ 'ಫೈನಲ್' ರಂಗು


ರಿಷಭ್ ಪಂತ್ (ಎಡ) ಮತ್ತು ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಅಹಮದಾಬಾದ್ (ಪಿಟಿಐ): ಟಾಸ್ ಜಯಿಸಿದರೆ ಮಾತ್ರ ಪಂದ್ಯದಲ್ಲಿ ಗೆಲ್ಲಲು ಸಾಧ್ಯವೆಂಬ ನಂಬಿಕೆಯನ್ನು ಗುರುವಾರ ಹುಸಿ ಮಾಡಿರುವ ಭಾರತ ತಂಡವು ಇಂಗ್ಲೆಂಡ್ ಎದುರಿನ ಟಿ20 ಕ್ರಿಕೆಟ್ ಸರಣಿ ಜಯಿಸುವ ವಿಶ್ವಾಸದಲ್ಲಿದೆ.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ಐದನೇ ಹಾಗೂ ಕೊನೆಯ ಪಂದ್ಯದಲ್ಲಿ ಜಯಿಸಿದ ತಂಡಕ್ಕೆ ಸರಣಿ ಕಿರೀಟ ಒಲಿಯಲಿದೆ. 2–2ರಿಂದ ಸಮಬಲ ಸಾಧಿಸಿರುವ ತಂಡಗಳ ನಡುವಣದ ಈ ಪಂದ್ಯವು ಕ್ರಿಕೆಟ್ ಅಭಿಮಾನಿಗಳ ಕುತೂಹಲಕ್ಕೆ ಕಾರಣವಾಗಿದೆ.

ಸರಣಿಯ ಮೊದಲ ಮೂರು ಪಂದ್ಯಗಳಲ್ಲಿ ಟಾಸ್ ಜಯಿಸಿದವರೇ ಮೇಲುಗೈ ಸಾಧಿಸಿದ್ದರು. ರಾತ್ರಿಯ ಇಬ್ಬನಿಯಲ್ಲಿ ಬೌಲಿಂಗ್ ಮಾಡುವುದು ಕಷ್ಟ ಎಂಬ ಕಾರಣಕ್ಕೆ ಟಾಸ್ ಗೆದ್ದ ನಾಯಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದರು. ಇದೇ ಕಾರಣಕ್ಕೆ ಇಂಗ್ಲೆಂಡ್ 2–1ರಿಂದ ಮುನ್ನಡೆಯನ್ನೂ ಸಾಧಿಸಿತ್ತು. ನಾಲ್ಕನೇ ಪಂದ್ಯದಲ್ಲಿಯೂ ಟಾಸ್ ಜಯಿಸಿದ್ದ ಏಯಾನ್ ಮಾರ್ಗನ್ ಬಳಗವು ಜಯದ ನಿರೀಕ್ಷೆಯಲ್ಲಿತ್ತು.

ಆದರೆ, ತಾವು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಎದುರಿಸಿದ ಮೊದಲ ಎಸೆತವನ್ನೇ ಸಿಕ್ಸರ್‌ಗೆತ್ತುವ ಮೂಲಕ ಭರ್ಜರಿ ಬ್ಯಾಟಿಂಗ್ ಮಾಡಿದ್ದ ಸೂರ್ಯ ಕುಮಾರ್ ಯಾದವ್ ತಂಡದ ಜಯದ ರೂವಾರಿಯಾಗಿದ್ದರು. ಮುಂಬೈ ತಂಡದ ಸೂರ್ಯ ಮಿಂಚಿನ ಅರ್ಧ ಶತಕ ಬಾರಿಸಿದ್ದರು. ಶಾರ್ದೂಲ್ ಠಾಕೂರ್ ಮೂರು ವಿಕೆಟ್ ಗಳಿಸಿದ್ದರು.

ಆದರೆ ಆರಂಭಿಕ ಜೋಡಿ ರೋಹಿತ್ ಶರ್ಮಾ ಮತ್ತು ಕೆ.ಎಲ್. ರಾಹುಲ್ ಅವರು ಹೊಸ ಚೆಂಡನ್ನು ಎಚ್ಚರಿಕೆಯಿಂದ ಆಡಿದ್ದರು. ರಾಹುಲ್ ಈ ಸರಣಿಯಲ್ಲಿ ಆಡಿದ ನಾಲ್ಕನೇ ಪಂದ್ಯದಲ್ಲಿ ಎರಡಂಕಿ ತಲುಪಿದ್ದರು. ಅವರಿಗೆ ಇನ್ನೊಂದು ಅವಕಾಶ ಸಿಗಬಹುದು. ಅವರಿಗೆ ವಿಶ್ರಾಂತಿ ಕೊಟ್ಟರೆ, ಎಡಗೈ ಬ್ಯಾಟ್ಸ್‌ಮನ್ ಶಿಖರ್ ಧವನ್ ಕಣಕ್ಕಿಳಿಯಬಹುದು. ಇಶಾನ್ ಕಿಶನ್ ಗಾಯಗೊಂಡಿದ್ದು ಲಭ್ಯರಿಲ್ಲ.

ಮುಖ್ಯಾಂಶಗಳು
- ಸರಣಿಯಲ್ಲಿ 2–2ರ ಸಮಬಲ ಸಾಧಿಸಿರುವ ಉಭಯ ತಂಡಗಳು
- ಮತ್ತೊಂದು ಅವಕಾಶದ ನಿರೀಕ್ಷೆಯಲ್ಲಿ ಕೆ.ಎಲ್. ರಾಹುಲ್
- ಪದಾರ್ಪಣೆಯ ಪಂದ್ಯದಲ್ಲಿ 2 ವಿಕೆಟ್ ಗಳಿಸಿದ್ದ ರಾಹುಲ್ ಚಾಹರ್

ಸರಣಿಯಲ್ಲಿ ಎರಡು ಅರ್ಧಶತಕ ಹೊಡೆದಿರುವ ವಿರಾಟ್ ಕೊಹ್ಲಿ ಗುರುವಾರದ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವ ಸಂದರ್ಭದಲ್ಲಿ ಸ್ನಾಯು-ಸೆಳೆತಕ್ಕೊಳಗಾಗಿದ್ದರು. ಆದ್ದರಿಂದ ಕೊನೆಯ ಹಂತದ ಓವರ್‌ಗಳಲ್ಲಿ ಅವರು ಡಗ್‌ಔಟ್‌ನಲ್ಲಿ ಕುಳಿತಿದ್ದರು. ಉಪನಾಯಕ ರೋಹಿತ್ ಉಸ್ತುವಾರಿ ವಹಿಸಿದ್ದರು. ಅನುಭವಿ ಭುವನೇಶ್ವರ್ ಕುಮಾರ್, ಶಾರ್ದೂಲ್ ಮತ್ತು ಮಧ್ಯಮವೇಗಿ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಸ್ಥಾನ ಉಳಿ-ಸಿಕೊಳ್ಳಲಿದ್ದಾರೆ. ಸ್ಪಿನ್ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಮತ್ತು ಪದಾರ್ಪಣೆ ಪಂದ್ಯದಲ್ಲಿ ಎರಡು ವಿಕೆಟ್ ಗಳಿಸಿದ ರಾಹುಲ್ ಚಾಹರ್ ಮತ್ತೊಂದು ಅವಕಾಶ ಪಡೆದರೆ ಅಚ್ಚರಿಯಿಲ್ಲ.

ಇಂಗ್ಲೆಂಡ್ ತಂಡವೂ ಹೆಚ್ಚಿನ ಬದಲಾವಣೆ ಮಾಡುವ ಸಾಧ್ಯತೆ ಕಡಿಮೆ ಇದೆ. ಜೇಸನ್ ರಾಯ್ ಮತ್ತು ಜೋಸ್ ಬಟ್ಲರ್ ಅವರು ಉತ್ತಮ ಆರಂಭ ನೀಡುತ್ತಿದ್ದಾರೆ. ನಾಯಕ ಏಯಾನ್ ಮಾರ್ಗನ್ ಬಿಟ್ಟರೆ ಉಳಿದ ಬ್ಯಾಟ್ಸ್‌ಮ-ನ್‌ಗಳು ಉತ್ತಮ ಲಯದಲ್ಲಿದ್ದಾರೆ. ಜೋಫ್ರಾ ಆರ್ಚರ್ 'ಆಲ್‌ರೌಂಡ್' ಆಟದಲ್ಲಿ ಮಿಂಚಿದ್ದಾರೆ. ಮಾರ್ಕ್ ವುಡ್, ಕ್ರಿಸ್ ಜೋರ್ಡಾನ್ ಅವರು ಈ ಹಿಂದಿನ ಪಂದ್ಯಗಳಲ್ಲಿ ಭಾರತದ ಬ್ಯಾಟಿಂಗ್‌ಗೆ ಆರಂಭದಲ್ಲಿಯೇ ಪೆಟ್ಟು ನೀಡಿದ್ದಾರೆ. ಅವರನ್ನು ಎದುರಿಸಿ ನಿಂತರೆ ದೊಡ್ಡ ಮೊತ್ತವನ್ನು ಗಳಿಸಲು ಆತಿಥೇಯರಿಗೆ ಸಾಧ್ಯವಾಗಲಿದೆ.

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ),, ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಶಿಖರ್ ಧವನ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ಯಜುವೇಂದ್ರ ಚಾಹಲ್, ಭುವನೇಶ್ವರ್ ಕುಮಾರ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ನವದೀಪ್ ಸೈನಿ, ದೀಪಕ್ ಚಾಹರ್, ರಾಹುಲ್ ತೆವಾಟಿಯಾ.
ಇಂಗ್ಲೆಂಡ್: ಏಯಾನ್ ಮಾರ್ಗನ್ (ನಾಯಕ), ಜೋಸ್ ಬಟ್ಲರ್, ಜೇಸನ್ ರಾಯ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಬೆನ್ ಸ್ಟೋಕ್ಸ್, ಮೋಯಿನ್ ಅಲಿ, ಆದಿಲ್ ರಶೀದ್,ಕ್ರಿಸ್ ಜೋರ್ಡಾನ್, ಮಾರ್ಕ್ ವುಡ್, ಸ್ಯಾಮ್ ಕರನ್, ಟಾಮ್ ಕರನ್, ಸ್ಯಾಮ್ ಬಿಲಿಂಗ್ಸ್, ಜಾನಿ ಬೆಸ್ಟೊ, ಜೋಫ್ರಾ ಆರ್ಚರ್, ರೀಚ್ ಟಾಪ್ಲೆ

ಪಂದ್ಯ ಆರಂಭ: ರಾತ್ರಿ 7

ನೇರಪ್ರಸಾರ: ಸ್ಟಾರ್ ನೆಟ್‌ವರ್ಕ್

ಮೂರನೇ ಅಂಪೈರ್ ತೀರ್ಪು: ವಿರಾಟ್ ಅಸಮಾಧಾನ

ಅಹಮದಾಬಾದ್ (ಪಿಟಿಐ): ಗುರುವಾರದ ಪಂದ್ಯದಲ್ಲಿ ಮೂರನೇ ಅಂಪೈರ್ ನೀಡಿದ ಎರಡು ತೀರ್ಪುಗಳ ಬಗ್ಗೆ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಅಸಮಾಧಾನಗೊಂಡಿದ್ದಾರೆ.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡದ ಆಟಗಾರ ಸೂರ್ಯಕುಮಾರ್ ಮತ್ತು ವಾಷಿಂಗ್ಟನ್ ಸುಂದರ್ ಅವರ ಕ್ಯಾಚ್‌ಗಳ ಬಗ್ಗೆ ಆನ್‌ಫೀಲ್ಡ್ ಅಂಪೈರ್‌ಗಳು 'ಸಾಫ್ಟ್ ಸಿಗ್ನಲ್' ನೀಡಿದ್ದರು. ಮರುಪರಿಶೀಲನೆ ಮಾಡಿದ ಟಿವಿ ಅಂಪೈರ್ ಔಟ್ ನೀಡಿದ್ದರು.

'ಸಾಫ್ಟ್ ಸಿಗ್ನಲ್ ಬದಲು ಐ ಡೋಂಟ್ ನೋ (ನನಗೆ ಗೊತ್ತಿಲ್ಲ) ಎಂಬ ನಿಯಮ ಮಾಡುವುದು ಒಳಿತು. ಆನ್‌ಫೀಲ್ಡ್ ಅಂಪೈರ್‌ಗಳು ಸಾಫ್ಟ್ ಸಿಗ್ನಲ್ ಬಗ್ಗೆ ಇದನ್ನು ಅನುಕರಿಸಬಹುದು' ಎಂದು ಕೊಹ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಅಂಪೈರ್‌ಗಳ ಕೆಲವು ತೀರ್ಪುಗಳು ಪಂದ್ಯದ ಗತಿಯನ್ನೇ ಬದಲಿಸಿಬಿಡು-ತ್ತವೆ. ಈ ಪಂದ್ಯ ಮಹತ್ವದ್ದಾಗಿತ್ತು. ಅದರಲ್ಲಿ ನಾವು ಎರಡು ಬಾರಿ ಅಂಪೈರ್ ಲೋಪಗಳಿಗೆ ತುತ್ತಾದೆವು. ಭವಿಷ್ಯದಲ್ಲಿ ಇದೇ ರೀತಿ ಬೇರೆಯವರಿಗೂ ಆಗಬಹುದು' ಎಂದರು.

14ನೇ ಓವರ್‌ನಲ್ಲಿ ಸೂರ್ಯ ಕ್ಯಾಚ್ ಅನ್ನು ಬೌಂಡರಿ ಬಳಿ ಪಡೆಯುವ ಪ್ರಯತ್ನದಲ್ಲಿ ಫೀಲ್ಡರ್ ಡೇವಿಡ್ ಮಲಾನ್ ಚೆಂಡನ್ನು ನೆಲಕ್ಕೆ ಹಾಕಿದ್ದು ಟಿ.ವಿಯ ತುಣುಕಿನಲ್ಲಿ ಗೋಚರಿಸಿತ್ತು. ವಾಷಿಂಗ್ಟನ್ ಸುಂದರ್ ಕ್ಯಾಚ್ ಪಡೆಯುವ ಸಂದರ್ಭದಲ್ಲಿ ಫೀಲ್ಡರ್ ಆದಿಲ್ ರಶೀದ್ ಅವರ ಹಿಮ್ಮಡಿಯು ಬೌಂಡರಿಗೆರೆ ನವಿರಾಗಿ ತಾಗಿರುವುದು ಕೂಡ ಗೋಚರಿಸಿತ್ತು. ಆದರೆ ಈ ಎರಡೂ ತೀರ್ಪುಗಳು ಭಾರತದ ವಿರುದ್ಧವೇ ಹೊರಹೊಮ್ಮಿದವು. ಇದು ಸಾಮಾಜಿಕ ಜಾಲತಾಣಗಳಲ್ಲಿಯೂ ಚರ್ಚೆಗೆ ಗ್ರಾಸವಾಗಿದೆ.

ಮಹಿಳಾ ಕ್ರಿಕೆಟ್: ಕರ್ನಾಟಕಕ್ಕೆ ಗೆಲುವು

ಬೆಂಗಳೂರು: ಆಲ್‌ರೌಂಡ್ ಆಟ ಪ್ರದರ್ಶಿಸಿದ ಕರ್ನಾಟಕ ತಂಡ ಬಿಸಿಸಿಐ ಆಯೋಜಿಸಿರುವ ಮಹಿಳೆಯರ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ಗೆಲುವು ಸಾಧಿಸಿತು. ಚೆನ್ನೈನ ಟಿ.ಐ. ಮುರುಗಪ್ಪ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಹಿಮಾಚಲ ಪ್ರದೇಶ ತಂಡವನ್ನು ಕರ್ನಾಟಕದ ಮಹಿಳೆಯರು ನಾಲ್ಕು ವಿಕೆಟ್‌ಗಳಿಂದ ಮಣಿಸಿದರು.

ಮೊದಲು ಬ್ಯಾಟಿಂಗ್ ಮಾಡಿದ ಹಿಮಾಚಲಪ್ರದೇಶವನ್ನು 163 ರನ್‌ಗಳಿಗೆ ನಿಯಂತ್ರಿಸಿದ ಕರ್ನಾಟಕ 40.2 ಓವರ್‌ಗಳಲ್ಲಿ ಗುರಿ ಮುಟ್ಟಿತು.

ಸಂಕ್ಷಿಪ್ತ ಸ್ಕೋರು: ಹಿಮಾಚಲಪ್ರದೇಶ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 163 (ನೀನಾ ಚೌಧರಿ 20, ಚಿತ್ರಾ ಸಿಂಗ್ 53, ಮೋನಿಕಾ ದೇವಿ 26, ತನುಜಾ 30; ರಾಮೇಶ್ವರಿ ಗಾಯಕವಾಡ್ 25ಕ್ಕೆ2, ಚಂದು ವಿ 31ಕ್ಕೆ2); ಕರ್ನಾಟಕ: 40.2 ಓವರ್‌ಗಳಲ್ಲಿ 6ಕ್ಕೆ 165 (ಶುಭಾ ಎಸ್ ಔಟಾಗದೆ 76, ವನಿತಾ ವಿ.ಆರ್ 41, ದಿವ್ಯಾ ಜಿ 23; ರೇಣುಕಾ ಸಿಂಗ್ 28ಕ್ಕೆ2, ತನುಜಾ 29ಕ್ಕೆ2). ಫಲಿತಾಂಶ: ಕರ್ನಾಟಕಕ್ಕೆ 4 ವಿಕೆಟ್‌ಗಳ ಜಯ.

ಪ್ರಸಿದ್ಧ ಕೃಷ್ಣನಿಗೆ ಕೂಡಿಬಂದ ಕಾಲ

ಭಾರತ ಏಕದಿನ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಕನ್ನಡಿಗ ಬೌಲರ್

• ಗಿರೀಶ ದೊಡ್ಡಮನಿ


ಪ್ರಸಿದ್ಧ ಕೃಷ್ಣ

ಬೆಂಗಳೂರು: 'ಭಾರತ ತಂಡಕ್ಕೆ ಆಯ್ಕೆಯಾಗಿದ್ದು ಅಚ್ಚರಿ ಮೂಡಿಸಿಲ್ಲ. ನಾನು ಇದನ್ನು ನಿರೀಕ್ಷಿಸಿದ್ದೆ. ರಾಷ್ಟ್ರೀಯ ತಂಡದ ಸಂಭವನೀಯರಲ್ಲಿ ಸ್ಥಾನ ಪಡೆಯುವ ಕುರಿತು ನನ್ನ ಹೆಸರು ಹಲವು ದಿನಗಳಿಂದ ಕೇಳಿಬರುತ್ತಿ-ದ್ದ ಕುರಿತು ಅರಿವು ಇತ್ತು. ಆದ್ದರಿಂದ ಆಡುವ ಅವಕಾಶ ಸಿಕ್ಕ ಎಲ್ಲ ದೇಶಿ ಪಂದ್ಯಗಳಲ್ಲಿಯೂ ಉತ್ತಮ ಸಾಮರ್ಥ್ಯ ನೀಡುವ ಪ್ರಯತ್ನ ಮಾಡಿದ್ದೇನೆ. ಬಹಳ ದಿನಗಳಿಂದ ನಿರೀಕ್ಷಿಸಿದ್ದ ಕಾಲ ಈಗ ಕೂಡಿಬಂದಿದೆ'–

ಈ ಮಾತುಗಳನ್ನು ಹೇಳುವಾಗ, 25 ವರ್ಷದ ಮುರಳಿಕೃಷ್ಣ ಪ್ರಸಿದ್ಧ ಕೃಷ್ಣನ ಧ್ವನಿಯಲ್ಲಿ ಆತ್ಮವಿಶ್ವಾಸವಿತ್ತು. ಎಂದಿನ ಶಾಂತತೆಯೂ ಮೇಳೈಸಿತ್ತು. ಅದಕ್ಕೆ ಕಾರಣ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಹೋದ ವರ್ಷದ ಜನವರಿಯಲ್ಲಿ ಹೇಳಿದ್ದ ಮಾತು.

'ಟಿ20 ವಿಶ್ವಕಪ್ ತಂಡದಲ್ಲಿ ಅಚ್ಚರಿಯ ಆಯ್ಕೆಯೊಂದು ಇರಲಿದೆ. ಅದು ಪ್ರಸಿದ್ಧ ಕೃಷ್ಣ' ಎಂದು ಆಗ ಕೊಹ್ಲಿ ಸುದ್ದಿಗೋಷ್ಠಿಯಲ್ಲಿಯೇ ಹೇಳಿದ್ದರು.

2015ರಲ್ಲಿಯೇ ರಣಜಿ ಟ್ರೋಫಿಗೆ ಪದಾರ್ಪಣೆ ಮಾಡಿರುವ ಈ ಸ್ವಿಂಗ್ ಚತುರ, ಕರ್ನಾಟಕ ತಂಡದಲ್ಲಿ ಆರ್. ವಿನಯಕುಮಾರ್, ಎಸ್. ಅರವಿಂದ್ ಅವರ ನಂತರ ಮಧ್ಯಮವೇಗದ ಬೌಲಿಂಗ್‌ಗೆ ಶಕ್ತಿ ತುಂಬಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟಿ20 ಟೂರ್ನಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಮೂರು ವರ್ಷಗಳಿಂದ ಮಿಂಚುತ್ತಿದ್ದಾರೆ. ಅವರ ಎಸೆತಗಳ ಸ್ವಿಂಗ್, ಯಾರ್ಕರ್, ವೇಗ ಮತ್ತು ಕಟರ್‌ಗಳನ್ನು ಕೊಹ್ಲಿ ಗಮನಿಸಿದ್ದರು. ಆಗಿನಿಂದಲೂ ಕನ್ನಡಿಗನಿಗೆ ಭಾರತ ತಂಡದ ಕರೆ ಯಾವಾಗ ಬರುವುದೆಂಬ ಕುತೂಹಲ ರಾಜ್ಯದ ಕ್ರಿಕೆಟ್ ವಲಯದಲ್ಲಿ ಇತ್ತು. ಬಹುಶಃ 2020ರಲ್ಲಿ ಕೊರೊನಾ ವೈರಸ್ ಹಾವಳಿ ಇರದೇ ಹೋಗಿದ್ದರೆ, ಆಸ್ಟ್ರೇ-ಲಿಯಾದಲ್ಲಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ ಆಯೋಜನೆಯಾಗುತ್ತಿತ್ತು. ಅದರಲ್ಲಿ ಪ್ರಸಿದ್ಧ ಆಡುವ ಸಾಧ್ಯತೆ ಇತ್ತು.

ಆದರೆ, ಕೊರೊನಾದಿಂದಾಗಿ ಸರಣಿಗಳು ರದ್ದಾದವು. ನವೆಂಬರ್ ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ಪ್ರವಾಸ ಮಾಡಿದ ಕೊಹ್ಲಿ ಬಳಗದಲ್ಲಿ ಕೃಷ್ಣನ ಹೆಸರು ಇರಲಿಲ್ಲ. ಯಾರ್ಕರ್ ಪರಿಣತ ತಂಗರಸು ನಟರಾಜನ್‌ಗೆ ಅದೃಷ್ಟ ಒಲಿದಿತ್ತು. ಅವರು ತಮ್ಮ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರು. ಇದೀಗ ಏಕದಿನ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿರುವ ಪ್ರಸಿದ್ಧ ಅಂತಿಮ ಹನ್ನೊಂದರ ಬಳಗದಲ್ಲಿ ಸ್ಥಾನ ಗಿಟ್ಟಿಸುವುದು ಸುಲಭವಲ್ಲ.

ಏಕೆಂದರೆ, ತಂಡದಲ್ಲಿ ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಟಿ. ನಟರಾಜನ್, ಅನುಭವಿ ಭುವನೇಶ್ವರ್ ಕುಮಾರ್ ಇದ್ದಾರೆ. ಈ ಹಿಂದಿನ ಪಂದ್ಯಗಳಲ್ಲಿ ತಮಗೆ ಸಿಕ್ಕ ಅವಕಾಶಗಳನ್ನು ಅವರೆಲ್ಲ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡಕ್ಕಾಗಿ ಪ್ರತಿಭಾಶೋಧ ಆರಂಭಿಸಿರುವ ಭಾರತ ತಂಡದ ವ್ಯವಸ್ಥಾಪಕ ಸಮಿತಿಯು ಪ್ರಸಿದ್ಧನಿಗೆ ಒಂದು ಪಂದ್ಯದಲ್ಲಿ ಆಡುವ ಅವಕಾಶ ಕೊಡುವ ಸಾಧ್ಯತೆಯನ್ನೂ ಅಲ್ಲಗಳೆ-ಯುವಂತಿಲ್ಲ. ಒಂದೊಮ್ಮೆ ಅವಕಾಶ ಸಿಕ್ಕರೆ ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚುವ ಉತ್ಸಾಹದಲ್ಲಿ ಪ್ರಸಿದ್ಧ ಇದ್ದಾರೆ.

'ಬಹಳಷ್ಟು ಸಿದ್ಧತೆ ಮಾಡಿಕೊಂಡಿದ್ದೇನೆ. ವಿಜಯ್ ಹಜಾರೆ ಟ್ರೋಫಿಯಲ್ಲಿಯೂ ಚೆನ್ನಾಗಿ ಆಡಿದ್ದು ಆತ್ಮವಿಶ್ವಾಸದ ವೃದ್ಧಿಸಿದೆ. ಟೂರ್ನಿಯಲ್ಲಿ ನಮ್ಮ ತಂಡ ಸೆಮಿಫೈನಲ್ ತಲುಪಿತ್ತು. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ನನಗೆ ಬಹಳಷ್ಟು ಅವಕಾಶಗಳನ್ನು ಕೊಟ್ಟಿದೆ. ರಾಜ್ಯ ತಂಡದ ಸಹಆಟ-ಗಾರರಿಂದ ಬಹಳಷ್ಟು ಕಲಿತಿದ್ದೇನೆ. ರಾಷ್ಟ್ರೀಯ ತಂಡದಲ್ಲಿಯೂ ಛಾಪು ಒತ್ತುವ ಭರವಸೆ ನನಗಿದೆ' ಎಂದು ಬಲಗೈ ಮಧ್ಯಮವೇಗಿ ಪ್ರಸಿದ್ಧ 'ಪ್ರಜಾವಾಣಿ'ಗೆ ಹೇಳಿದರು. ದೇಶಿ ಏಕದಿನ ಟೂರ್ನಿಯಲ್ಲಿ ಅವರು 14 ವಿಕೆಟ್‌ಗಳನ್ನು ಗಳಿಸಿದ್ದರು.

ರಾಜ್ಯದ ಎಸ್. ಅರವಿಂದ್ ನಂತರ ರಾಷ್ಟ್ರೀಯ ತಂಡದಲ್ಲಿ ಅವಕಾಶ ಪಡೆದ ಕರ್ನಾಟಕದ ಮಧ್ಯಮವೇಗದ ಬೌಲರ್ ಇವರಾಗಿದ್ದಾರೆ. ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ದೊಡ್ಡಗಣೇಶ್, ಡೇವಿಡ್ ಜಾನ್ಸನ್, ಆರ್. ವಿನಯಕುಮಾರ್, ಅಭಿಮನ್ಯು ಮಿಥುನ್ ಅವರೂ ಭಾರತ ತಂಡದಲ್ಲಿ ಮಿಂಚಿದವರು. ಅವರ ಹಾದಿಯಲ್ಲಿ ಈಗ ಪ್ರಸಿದ್ಧ ಇದ್ದಾರೆ.

ಪ್ರಸಿದ್ಧ ಕೃಷ್ಣ (ಬೌಲಿಂಗ್)

ಮಾದರಿ	ಪಂದ್ಯ	ಎಸೆತಗಳು	ರನ್	ವಿಕೆಟ್	ಶ್ರೇಷ್ಠ	ಐದು ವಿಕೆಟ್
ಪ್ರಥಮದರ್ಜೆ	9	1,480	689	34	49ಕ್ಕೆ5	1
ಲಿಸ್ಟ್ ಎ	48	2,169	1,869	81	33ಕ್ಕೆ6	2
ಟಿ20	40	836	1,183	33	30ಕ್ಕೆ4	-
ಐಪಿಎಲ್	24	515	801	18	30ಕ್ಕೆ4	-

ಪ್ರತಿಭೆಗೆ ಸಂದ ಫಲ: ರವಿ

'ಬಾಲ್ಯದಿಂದಲೂ ನಮ್ಮ ಅಕಾಡೆಮಿಯಲ್ಲಿಯೇ ತರಬೇತಿ ಪಡೆದ ಪ್ರಸಿದ್ಧಕೃಷ್ಣ ಬಹಳ ಪ್ರತಿಭಾವಂತ ಹುಡುಗ. ಮಧ್ಯಮವೇಗದ ಬೌಲಿಂಗ್ ತಂತ್ರಗಳನ್ನು ಅಪಾರ ಶ್ರಮ ಮತ್ತು ಪ್ರೀತಿಯಿಂದ ಅಭ್ಯಾಸ ಮಾಡುತ್ತಾರೆ. ದೃಢ ನಿಶ್ಚಯ ಮತ್ತು ಆತ್ಮವಿಶ್ವಾಸದಿಂದ ಬೌಲಿಂಗ್ ಮಾಡುತ್ತಾರೆ. ಅವರ ಪ್ರತಿಭೆಗೆ ತಕ್ಕ ಅವಕಾಶ ಈಗ ಲಭಿಸಿರುವುದು ಸಂತಸ' ಎಂದು ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್‌ನ ಹಿರಿಯ ಕೋಚ್ ಬಿ.ಕೆ. ರವಿ ಹೇಳಿದ್ದಾರೆ.

ಪಾಂಡೆಗಿಲ್ಲ ಅವಕಾಶ

ಭಾರತ ಏಕದಿನ ಕ್ರಿಕೆಟ್ ತಂಡದಲ್ಲಿ ಕರ್ನಾಟಕದ ಮನೀಷ್ ಪಾಂಡೆಗೆ ಅವಕಾಶ ಲಭಿಸಿಲ್ಲ. ಮುಂಬೈನ ಸೂರ್ಯಕುಮಾರ್ ಯಾದವ್ ಮತ್ತು ಬರೋಡಾದ ಆಲ್‌ರೌಂಡರ್ ಕೃಣಾಲ್ ಪಾಂಡ್ಯ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ.

ಹೋದ ವರ್ಷದ ಫೆಬ್ರು-ವರಿಯಲ್ಲಿ ನ್ಯೂಜಿಲೆಂಡ್‌ನಲ್ಲಿ ಮನೀಷ್ ಪಾಂಡೆ ಏಕದಿನ ಪಂದ್ಯ ಆಡಿದ್ದರು. ಹೋದ ಡಿಸೆಂಬರ್‌ನಲ್ಲಿ ಕ್ಯಾನ್‌ಬೆರಾದಲ್ಲಿ ಆಸ್ಟ್ರೇಲಿಯಾ ಎದುರು ಟಿ20 ಪಂದ್ಯದಲ್ಲಿ ಆಡಿದ್ದರು. ಅದರ ನಂತರ ಗಾಯದ ಕಾರಣ ದೇಶಿ ಟೂರ್ನಿಗಳಲ್ಲಿ ಆಡಿರಲಿಲ್ಲ.

ಗುರುವಾರ ಇಂಗ್ಲೆಂಡ್ ವಿರುದ್ಧದ ಟಿ20 ಪಂದ್ಯದಲ್ಲಿ ಅರ್ಧಶತಕ ಬಾರಿಸಿದ್ದ ಸೂರ್ಯಕುಮಾರ್ ಯಾದವ್ ಸ್ಥಾನ ಗಳಿಸಿದ್ದಾರೆ.

ಮಾರ್ಚ್ 23, 26 ಮತ್ತು 28ರಂದು ಏಕದಿನ ಪಂದ್ಯಗಳು ಪುಣೆಯಲ್ಲಿ ಆಯೋಜನೆಗೊಂಡಿವೆ.

ತಂಡ ಇಂತಿದೆ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಶಿಖರ್ ಧವನ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್ (ವಿಕೆಟ್‌ಕೀಪರ್), ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಕೃಣಾಲ್ ಪಾಂಡ್ಯ, ವಾಷಿಂಗ್ಟನ್ ಸುಂದರ್, ಟಿ. ನಟರಾಜನ್, ಭುವನೇಶ್ವರ್, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್.

ಬ್ಯಾಡ್ಮಿಂಟನ್: ಲಕ್ಷ್ಯಗೆ ಸೋಲು


ಮಾರ್ಕ್ ಕಲ್ಜೊವ್

ಬರ್ಮಿಂಗ್‌ಹ್ಯಾಂ (ಪಿಟಿಐ): ಭಾರತದ ಯುವ ಆಟಗಾರ ಲಕ್ಷ್ಯ ಸೇನ್ ಅವರು ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ನಿರಾಸೆ ಅನುಭವಿಸಿದರು. ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಮಾರ್ಕ್ ಕಲ್ಜೊವ್ ಎದುರು ಸೇನ್ 17-21, 21-16, 17-21ರಲ್ಲಿ ಸೋತರು.

ಮಹಿಳೆಯರ ಡಬಲ್ಸ್ ಜೋಡಿ ಅಶ್ವಿನಿ ಪೊನ್ನಪ್ಪ ಮತ್ತು ಎನ್.ಸಿಕ್ಕಿ ರೆಡ್ಡಿ ಕೂಡ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರು.

55 ನಿಮಿಷಗಳ ಹಣಾಹಣಿಯ ಎರಡನೇ ಗೇಮ್‌ನಲ್ಲಿ ಲಕ್ಷ್ಯ ಸೇನ್ ಎದುರಾಳಿಗೆ ತಿರುಗೇಟು ನೀಡಿದರು. ಆದರೆ ನಿರ್ಣಾಯಕ ಗೇಮ್‌ನಲ್ಲಿ ಮತ್ತೆ ಆಧಿಪತ್ಯ ಸ್ಥಾಪಿಸಿದ ಕಲ್ಜೊವ್ ಪಂದ್ಯ ಗೆದ್ದು ಸಂಭ್ರಮಿಸಿದರು. ಅಶ್ವಿನಿ ಮತ್ತು ಸಿಕ್ಕಿ ರೆಡ್ಡಿ ನೆದರ್ಲೆಂಡ್ಸ್‌ನ ಸೆಲೆನಾ ಪೀಕ್ ಮತ್ತು ಚೆರಿಲ್ ಸೀನೆನ್ ಜೋಡಿಗೆ 22-24, 12-21ರಲ್ಲಿ ಮಣಿದರು. ಈ ಪಂದ್ಯ 39 ನಿಮಿಷಗಳಲ್ಲಿ ಮುಗಿಯಿತು. ಪುರುಷರ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಡೆನ್ಮಾರ್ಕ್‌ನ ಕಿಮ್ ಆಸ್ಟ್ರುಪ್ ಮತ್ತು ಆ್ಯಂಡರ್ಸ್ ಸ್ಕಾರುಪ್ ಎದುರು 16-21, 21-11, 17-21ರಲ್ಲಿ ಸೋತರು.

ಪುರುಷರ ಸಿಂಗಲ್ಸ್‌ನಲ್ಲಿ ಸಮೀರ್ ವರ್ಮಾ ಡೆನ್ಮಾರ್ಕ್‌ನ ಆ್ಯಂಡರ್ಸ್ ಆ್ಯಂಟೊನ್ಸೆನ್ ವಿರುದ್ಧ 20–22, 10–21ರಲ್ಲಿ ಪರಾಭವಗೊಂಡರು. ಮಿಶ್ರ ಡಬಲ್ಸ್‌ನಲ್ಲಿ ಧ್ರುವ ಕಪಿಲಾ ಮತ್ತು ಮೇಘನಾ ಜಕ್ಕಂಪುಡಿ ಜೋಡಿ ಡೆನ್ಮಾರ್ಕ್‌ನ ನಿಕ್ಲಾಸ್ ನೊಹ್ರ್ ಮತ್ತು ಅಮೇಲಿ ಮಗೆಲುಂಡ್ ಜೋಡಿಗೆ 19–21, 8–21ರಲ್ಲಿ ಮಣಿಯಿತು.

ತಿರುಗೇಟು ನೀಡುವ ಛಲದಲ್ಲಿ ಭಾರತ

ಲಖನೌ (ಪಿಟಿಐ): ಏಕದಿನ ಸರಣಿಯಲ್ಲಿ ಅನುಭವಿಸಿದ ನಿರಾಸೆ ಮರೆತು ಹೊಸ ಹುರುಪಿನಲ್ಲಿ ಕಣಕ್ಕೆ ಇಳಿಯಲು ಸಜ್ಜಾಗಿರುವ ಭಾರತ ಮಹಿಳೆಯರ ತಂಡ ದಕ್ಷಿಣ ಆಫ್ರಿಕಾ ತಂಡದ ಎದುರಿನ ಟಿ20 ಸರಣಿಯಲ್ಲಿ ಪುಟಿದೇಳುವ ನಿರೀಕ್ಷೆಯಲ್ಲಿದೆ.

ಏಕಾನ ಮೈದಾನದಲ್ಲಿ ನಡೆದ ಏಕದಿನ ಸರಣಿಯಲ್ಲಿ ಮಿಥಾಲಿ ರಾಜ್ ನಾಯಕತ್ವದಲ್ಲಿ ಕಣಕ್ಕೆ ಇಳಿದಿದ್ದ ಭಾರತ ಐದು ಪಂದ್ಯಗಳಲ್ಲಿ ಒಂದನ್ನು ಮಾತ್ರ ಗೆದ್ದುಕೊಂಡಿತ್ತು.

ಶನಿವಾರ ಆರಂಭವಾಗಲಿರುವ ಟಿ20 ಸರಣಿಯಲ್ಲಿ ಭಾರತ ತಂಡವು ಎದುರಾಳಿಯನ್ನು ಮಣಿಸುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ಸಂಜೆ 7.00

ಬಾಕ್ಸಿಂಗ್: ಸೆಮಿಗೆ ನಿಖತ್

ನವದೆಹಲಿ (ಪಿಟಿಐ): ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 2019ರ ವಿಶ್ವ ಚಾಂಪಿಯನ್ ಪಲ್ಸೇವಾ ಎಕಟೇರಿನಾ ಎದುರು ಭರ್ಜರಿ ಜಯ ಸಾಧಿಸಿದ ಭಾರತದ ಬಾಕ್ಸರ್ ನಿಖತ್ ಜರೀನ್ ಮತ್ತೊಮ್ಮೆ ಅಮೋಘ ಪಂಚ್‌ಗಳ ಮೂಲಕ ಮಿಂಚಿದರು. ಎರಡು ಬಾರಿಯ ವಿಶ್ವ ಚಾಪಿಯನ್ ಕಜಕಸ್ತಾನದ ನಜೀಂ ಕೈಜಬೆ ವಿರುದ್ಧ ಗೆಲುವು ದಾಖಲಿಸಿದ ನಿಖತ್ ಇಸ್ತಾಂಬುಲ್‌ನಲ್ಲಿ ನಡೆಯುತ್ತಿರುವ ಬೋಸ್ಫೊರಸ್ ಬಾಕ್ಸಿಂಗ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆ ಇರಿಸಿದರು.

ಶುಕ್ರವಾರ ನಡೆದ ಮಹಿಳೆಯರ 51 ಕೆಜಿ ವಿಭಾಗದ ಬೌಟ್‌ನಲ್ಲಿ ನಿಖತ್ 4–1ರಿಂದ ಕೈಜಬೆ ಅವರನ್ನು ಮಣಿಸಿದರು. 2014ರಿಂದ 2016ರ ವರೆಗೆ ಕೈಜಬೆ ಇಲ್ಲಿ ಚಾಂಪಿಯನ್ ಆಗಿದ್ದರು. ಗೌರವ್ ಸೋಳಂಕಿ 57 ಕೆಜಿ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಸ್ಥಳೀಯ ಅಯ್ಕೊಲ್ ಮಿಜಾನ್ ಎದುರು ಗೌರವ್ ಜಯ ಗಳಿಸಿದರು. ಈ ಬೌಟ್‌ನಲ್ಲಿ ಉಭಯ ಬಾಕ್ಸರ್‌ಗಳು ಪ್ರತಿಕ್ಷಣವೂ ಜಿದ್ದಾಜಿದ್ದಾಯ ಹೋರಾಟ ಪ್ರದರ್ಶಿಸಿ-ದರು. ಆದರೆ ತಾಂತ್ರಿಕವಾಗಿ ಪಾರಮ್ಯ ಮೆರೆದ ಸೋಳಂಕಿ 4–1ರಲ್ಲಿ ಜಯ ಸಾಧಿಸಿದರು.

ಮಹಿಳಾ ವಿಭಾಗದ 57 ಕೆಜಿ ವಿಭಾಗದಲ್ಲಿ ಸೋನಿಯಾ ಲಾಥರ್, 60 ಕೆಜಿ ವಿಭಾಗದಲ್ಲಿ ಪರ್ವೀನ್ ಮತ್ತು 69 ಕೆಜಿ ವಿಭಾಗದಲ್ಲಿ ಜ್ಯೋತಿ, ಕ್ವಾರ್ಟರ್ ಫೈನಲ್ ಬೌಟ್‌ಗಳನ್ನು ಸೋತು ಹೊರಬಿದ್ದರು. ಪುರುಷರ 63 ಕೆಜಿ ವಿಭಾಗದ ಬೌಟ್‌ನಲ್ಲಿ ಶಿವ ಥಾಪಾ 1–4ರಲ್ಲಿ ಟರ್ಕಿಯ ಹಕನ್ ದೋಗನ್‌ಗೆ ಮಣಿದು ನಿರಾಸೆ ಅನುಭವಿಸಿದರು.

ಜರೀನ್ ನಾಲ್ಕರ ಘಟ್ಟದ ಬೌಟ್‌ನಲ್ಲಿ, 2019ರ ವಿಶ್ವ ಚಾಂಪಿ-ಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಟರ್ಕಿಯ ಬುಸೇನಾಜ್ ಕಕಿರೊಗ್ಲು ವಿರುದ್ಧ ಅವರು ಸೆಣಸುವರು.

ತಾಂಜಾನಿಯಾದ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಸಮಿಯಾ ಪ್ರಮಾಣ


ಸಮಿಯಾ ಸುಲುಹು ಹಸನ್

ದಾರ್ ಎಸ್ ಸಲಾಂ: ತಾಂಜಾನಿಯಾದ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಸಮಿಯಾ ಸುಲುಹು ಹಸನ್ ಅವರು ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿ-ದ್ದಾರೆ.

ಸಂಪುಟ ಸದಸ್ಯರು ಮತ್ತು ಮುಖ್ಯ ನ್ಯಾಯಮೂರ್ತಿ ಅವರ ಸಮ್ಮುಖದಲ್ಲಿ ಸಮಿಯಾ ಸುಲುಹು ಹಸನ್ ಪ್ರಮಾಣ ವಚನ ಸ್ವೀಕರಿಸಿದರು. ಹಿಜಾಬ್ ಧರಿಸಿದ್ದ ಸಮಿಯಾ ಅವರು ಬಲಗೈಯಲ್ಲಿ ಕುರಾನ್ ಹಿಡಿದು ತಾಂಜಾನಿಯಾದ ಅಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸಿದರು.

ಈ ವೇಳೆ ಮಾಜಿ ಅಧ್ಯಕ್ಷರುಗಳಾದ ಆಲಿ ಹಸನ್ ಮ್ವಿನಿ, ಜಕಾಯ ಕಿಕ್ವೆತೆ ಮತ್ತು ಅಬೀದ್ ಕರುಮೆ ಉಪಸ್ಥಿತರಿ-ದ್ದರು.

ವಲಸಿಗರಿಗೆ ಪೌರತ್ವ: ಎರಡು ಮಸೂದೆಗಳಿಗೆ ಅಮೆರಿಕದ ಕೆಳಮನೆ ಅನುಮೋದನೆ

ವಾಷಿಂಗ್ಟನ್ (ಪಿಟಿಐ): ಕೃಷಿ ಕಾರ್ಮಿಕರು ಸೇರಿದಂತೆ ವಿವಿಧ ವರ್ಗದ ವಲಸಿಗರಿಗೆ ಹಾಗೂ ಎಚ್–1ಬಿ ವೀಸಾ ಅಡಿ ಅಮೆರಿಕಕ್ಕೆ ಬಂದವರ ಮಕ್ಕಳಿಗೆ ಪೌರತ್ವ ನೀಡಲು ದಾರಿ ಸುಗಮಗೊಳಿಸುವ ಎರಡು ಮಹತ್ವದ ಮಸೂದೆಗಳಿಗೆ ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ (ಕೆಳಮನೆ) ಅನುಮೋದನೆ ನೀಡಿದೆ.


'ಅಮೆರಿಕನ್ ಡ್ರೀಮ್ ಆ್ಯಂಡ್ ಪ್ರಾಮೀಸ್ ಆ್ಯಕ್ಟ್–2021' ಮಸೂದೆಗೆ ಕೆಳಮನೆ 228–197 ಮತಗಳಿಂದ ಅನುಮೋದನೆ ನೀಡಿತು. ಸೆನೆಟ್‌ನ ಅನುಮೋದನೆ ದೊರೆತ ನಂತರ, ಈ ಮಸೂದೆ ಕಾಯ್ದೆ ರೂಪದಲ್ಲಿ ಜಾರಿಯಾಗುವುದು.

'ನಾನು ಈ ಮಸೂದೆಯನ್ನು ಬೆಂಬಲಿಸುತ್ತೇನೆ. ಮಹತ್ವದ ಈ ಮಸೂದೆಗೆ ಅನುಮೋದನೆ ನೀಡಿರುವ ಹೌಸ್ ಆಫ್ ರೆಪ್ರೆಸೆಂಟೇಟಿವ್‌ಅನ್ನು ಅಭಿನಂದಿಸುತ್ತೇನೆ' ಎಂದು ಅಧ್ಯಕ್ಷ ಜೋ ಬೈಡನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಗುವಾಗಿದ್ದಾಗ ಪಾಲಕರೊಂದಿಗೆ ಅಮೆರಿಕಕ್ಕೆ ಬಂದವರಿಗೆ 'ಡ್ರೀಮರ್ಸ್' ಎಂದು ಕರೆಯಲಾಗುತ್ತದೆ. ಇವರನ್ನು ಸೇರಿದಂತೆ ವಿವಿಧ ವರ್ಗದ ವಲಸಿಗರು ಅಮೆರಿಕದ ಪೌರತ್ವದ ನಿರೀಕ್ಷೆಯಲ್ಲಿ-ದ್ದಾರೆ.

ಟಿಟಿ: ಸತ್ಯನ್, ಸುತೀರ್ಥಾಗೆ ಒಲಿಂಪಿಕ್ಸ್ ಟಿಕೆಟ್


ಸುತೀರ್ಥಾ


ಜಿ. ಸತ್ಯನ್

ದೋಹಾ (ಪಿಟಿಐ): ಭಾರತದ ಟೇಬಲ್ ಟೆನಿಸ್ ಪಟುಗಳಾದ ಜಿ.ಸತ್ಯನ್ ಹಾಗೂ ಸುತೀರ್ಥಾ ಮುಖರ್ಜಿ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ. ಇಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ಗೇಮ್ಸ್ ಏಷ್ಯನ್ ಅರ್ಹತಾ ಟೂರ್ನಿಯಲ್ಲಿ ಜಿ ಸತ್ಯನ್ ಅವರು 11-5, 11-8, 11-9, 11-2ರಿಂದ ಪಾಕಿಸ್ತಾನದ ಮುಹಮ್ಮದ್ ರಮೀಜ್ ಎದುರು ಗೆದ್ದರು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಸತ್ಯನ್ ಅವರು ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತದ ಶರತ್ ಕಮಲ್ ಅವರನ್ನು ಸೋಲಿಸಿದ್ದರು.

ವಿಶ್ವ ರ‍್ಯಾಂಕಿಂಗ್ ಹಾಗೂ ಗುರುವಾರ ಪಾಕಿಸ್ತಾನದ ರಮೀಜ್ ಅವರನ್ನು ಮಣಿಸಿದ್ದ ಆಧಾರದ ಮೇಲೆ ಶರತ್ ಕೂಡ ಟೋಕಿಯೊ ಕೂಟಕ್ಕೆ ತೆರಳುವುದು ಖಚಿತವಾಗಿದೆ.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ವಿಶ್ವ ಕ್ರಮಾಂಕದಲ್ಲಿ 62ನೇ ಸ್ಥಾನದಲ್ಲಿರುವ ಮಣಿಕಾ ಬಾತ್ರಾ ಅವರು ಗುರುವಾರ 11-7, 7-11, 4-11, 11-4, 5-11, 4-11ರಿಂದ ಸುತೀರ್ಥಾ ಮುಖರ್ಜಿ ಎದುರು ಸೋತರು. ಇದರೊಂದಿಗೆ ಸುತೀರ್ಥಾ ಒಲಿಂಪಿಕ್ಸ್ ಅರ್ಹತೆ ಪಡೆದರೆ, ರ‍್ಯಾಂಕಿಂಗ್ ಆಧಾರದಲ್ಲಿ ಮಣಿಕಾ ಕೂಡ ಅರ್ಹತೆ ಗಳಿಸಲಿದ್ದಾರೆ.

ವಿಶ್ವದಾದ್ಯಂತ ನಡೆಯುತ್ತಿರುವ ಅರ್ಹತಾ ಸುತ್ತಿನ ಟೂರ್ನಿಗಳು ಮುಗಿದ ಬಳಿಕ ಐಟಿಟಿಎಫ್, ಮಣಿಕಾ ಹಾಗೂ ಶರತ್ ಅವರ ಒಲಿಂಪಿಕ್ಸ್ ಅರ್ಹತೆಯನ್ನು ಖಚಿತಪಡಿಸಲಿದೆ.

ಸತ್ಯನ್ ಅವರು ಮೊದಲ ಬಾರಿಗೆ ಒಲಿಂಪಿಕ್ಸ್ ಅರ್ಹತೆ ಗಳಿಸಿದ್ದಾರೆ.

ವಿಜೇಂದರ್ ಜಯದ ಓಟಕ್ಕೆ ಲಾಪ್ಸನ್ ತಡೆ

ಪಣಜಿ (ಪಿಟಿಐ): ತೀವ್ರ ಕುತೂಹಲ ಕೆರಳಿಸಿದ್ದ 'ಬ್ಯಾಟಲ್ ಆಫ್ ಶಿಪ್' ಬಾಕ್ಸಿಂಗ್ ಸ್ಪರ್ಧೆಯಲ್ಲಿ ಭಾರತದ ವಿಜೇಂದರ್ ಸೋಲು ಅನುಭವಿಸಿದರು. ಶುಕ್ರವಾರ ರಾತ್ರಿ ಇಲ್ಲಿ ನಡೆದ ಬೌಟ್‌ನಲ್ಲಿ ವಿಜೇಂದರ್, ರಷ್ಯಾದ ಆರ್ಟಿಶ್ ಲಾಪ್ಸನ್ ಎದುರು ಮುಗ್ಗರಿಸಿದರು. ಇದರೊಂದಿಗೆ ವೃತ್ತಿಪರ ಸರ್ಕೀಟ್‌ನಲ್ಲಿ ಅವರ 12 ಗೆಲುವುಗಳ ಓಟಕ್ಕೆ ತಡೆ ಬಿದ್ದಿತು.

ಮಾಂಡೋವಿ ನದಿಯಲ್ಲಿ 'ಮೆಜೆಸ್ಟಿಕ್ ಪ್ರೈಡ್ ಕ್ಯಾಸಿನೊ' ಎಂಬ ಹಡಗಿನ ಮೇಲೆ ನಡೆದ ಈ ಎಂಟು ಸುತ್ತುಗಳ ಬೌಟ್‌ನಲ್ಲಿ ಲಾಪ್ಸನ್ ವಿಜೇಂದರ್ ಅವರನ್ನು ಕಂಗೆಡಿಸಿದರು. ತಮ್ಮ ಎತ್ತರ ಶರೀರದ ಸಂಪೂರ್ಣ ಲಾಭ ಪಡೆದರು.

ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಫೈನಲ್‌ಗೆ ದಿವ್ಯಾಂಶ್, ಅಂಜುಮ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿರುವ ಭಾರತದ ದಿವ್ಯಾಂಶ್ ಸಿಂಗ್ ಪನ್ವರ್, ಅಂಜುಮ್ ಮೌದ್ಗಿಲ್ ಹಾಗೂ ಅರ್ಜುನ್ ಬಬುತಾ ಅವರು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿಯ 10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ ಫೈನಲ್ ತಲುಪಿದ್ದಾರೆ.

ಇಲ್ಲಿಯ ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ದಿನವಾದ ಶುಕ್ರವಾರ 18 ವರ್ಷದ ದಿವ್ಯಾಂಶ್, ಅರ್ಹತಾ ಸುತ್ತಿನಲ್ಲಿ 629.1 ಪಾಯಿಂಟ್‌ಗಳೊಂದಿಗೆ ಆರನೇ ಸ್ಥಾನ ಗಳಿಸಿದರು. ಅರ್ಜುನ್ (631.8) ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಈ ವಿಭಾಗದ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನವು ದಕ್ಷಿಣ ಕೊರಿಯಾದ ತೇಯುನ್ ನ್ಯಾಮ್ (632.1) ಅವರ ಪಾಲಾಯಿತು. ಇಸ್ರೇಲ್‌ನ ಸೆರ್ಜಿ ರಿಕ್ಟರ್ 631.8 ಪಾಯಿಂಟ್‌ನೊಂದಿಗೆ ಎರಡನೇ ಸ್ಥಾನ ಗಳಿಸಿದರು.

ಭಾರತದ ದಿವ್ಯಾಂಶ್ ಅವರು 2019ರಲ್ಲಿ ಬೀಜಿಂಗ್‌ನಲ್ಲಿ ನಡೆದ ವಿಶ್ವಕಪ್‌ನ 10 ಮೀ. ಏರ್ ರೈಫಲ್‌ನಲ್ಲಿ ಬೆಳ್ಳಿ ಪದಕ ಗೆಲ್ಲುವ ಮೂಲಕ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ್ದಾರೆ.

ಮಹಿಳಾ ವಿಭಾಗದ 10 ಮೀ. ಏರ್ ರೈಫಲ್ ಅರ್ಹತಾ ಸುತ್ತಿನಲ್ಲಿ ಅಂಜುಮ್ ಅವರು ಎರಡನೇ ಸ್ಥಾನ ಗಳಿಸುವ ಮೂಲಕ ಫೈನಲ್ ತಲುಪಿದರು. ಅವರು 629.6 ಪಾಯಿಂಟ್ ಗಳಿಸಿದರು. ಈ ವಿಭಾಗದಲ್ಲಿ ವಿಶ್ವದ ಅಗ್ರಕ್ರಮಾಂಕದ ಶೂಟರ್ ಆಗಿರುವ ಇಳವೆನಿಲ್ ವಾಳರಿವನ್ 626.7 ಪಾಯಿಂಟ್ಸ್‌ನೊಂದಿಗೆ 12ನೇ ಸ್ಥಾನ ಗಳಿಸುವ ಮೂಲಕ ಫೈನಲ್ ಅವಕಾಶ ತಪ್ಪಿಸಿಕೊಂಡರು. ಈ ವಿಭಾಗದಲ್ಲಿ ಹಂಗರಿಯ ಈಸ್ತರ್ ಡೆನೆಸ್ (629.8 ಪಾಯಿಂಟ್ಸ್) ಅಗ್ರಸ್ಥಾನ ಗಳಿಸಿದರು. ಅಮೆರಿಕದ ಕರೋಲಿನ್ ಮೇರಿ (629.1) ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಲೈಂಗಿಕ ದೌರ್ಜನ್ಯ ಆರೋಪದಿಂದ ಕುಗ್ಗಿಲ್ಲ: ಬಾಬರ್

ಕರಾಚಿ (ಪಿಟಿಐ): 'ಲೈಂಗಿಕ ದೌರ್ಜನ್ಯ ಆರೋಪವು ನನ್ನ ವೃತ್ತಿಜೀವನದ ಮೇಲೆ ದುಷ್ಪರಿಣಾಮ ಬೀರಿಲ್ಲ. ಆದ್ದರಿಂದ ಮುಂಬರುವ ದಕ್ಷಿಣ ಆಫ್ರಿಕಾ ಮತ್ತು ಜಿಂಬಾಬ್ವೆ ಪ್ರವಾಸದಲ್ಲಿ ನೈಜ ಸಾಮರ್ಥ್ಯ ತೋರಲು ಸಜ್ಜಾಗಿದ್ದೇನೆ' ಎಂದು ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕ ಬಾಬರ್ ಆಜಂ ಶುಕ್ರವಾರ ತಿಳಿಸಿದ್ದಾರೆ.

ಬಾಬರ್ ಮೇಲೆ ದೂರು ಸಲ್ಲಿಸಿರುವ ಹಮೀಜಾ ಮುಖ್ತರ್ ಎಂಬ ಮಹಿಳೆ ಬಾಬರ್ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದೂ ಮದುವೆಯಾಗುವುದಾಗಿ ನಂಬಿಸಿ ವಂಚಿಸಿದ್ದಾರೆಂದೂ ಆರೋಪಿಸಿದ್ದಾರೆ. ಈ ಸಂಬಂಧ ಬಾಬರ್ ಮೇಲೆ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಲಾಹೋರ್‌ನ ನ್ಯಾಯಾಲಯವೊಂದು ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿಯ ಸೈಬರ್ ಕ್ರೈಂ ಘಟಕಕ್ಕೆ ಸೂಚಿಸಿದೆ.

ಡಿಸ್ಕಸ್ ಥ್ರೊ: ಟೋಕಿಯೊ ಕೂಟಕ್ಕೆ ಕಮಲ್ ಪ್ರೀತ್


ಕಮಲ್‌ಪ್ರೀತ್ ಕೌರ್

ಪಟಿಯಾಲ (ಪಿಟಿಐ): ಡಿಸ್ಕಸ್ ಥ್ರೊ ಪಟು ಕಮಲ್‌ಪ್ರೀತ್ ಕೌರ್ ಅವರು ರಾಷ್ಟ್ರೀಯ ದಾಖಲೆಯೊಂದಿಗೆ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ್ದಾರೆ. ಇಲ್ಲಿ ನಡೆದ ಫೆಡರೇಷನ ಕಪ್ ರಾಷ್ಟ್ರೀಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಅವರು 65.06 ಮೀಟರ್ ದೂರ ಡಿಸ್ಕಸ್ ಎಸೆದು ತಮ್ಮ ವೈಯಕ್ತಿಕ ಶ್ರೇಷ್ಠ ಸಾಧನೆಯನ್ನು ಉತ್ತಮಪಡಿಸಿಕೊಂಡರು.

ಪಂಜಾಬ್‌ನ 25 ವರ್ಷದ ಕೌರ್, ತಮ್ಮ ಮೊದಲ ಯತ್ನದಲ್ಲೇ ಈ ಸಾಧನೆ ಮಾಡಿದರು. ಆದರೆ ಉಳಿದ ಐದು ಪ್ರಯತ್ನಗಳನ್ನು ಫೌಲ್ ಮಾಡಿದರು. ಒಲಿಂಪಿಕ್ಸ್ ಅರ್ಹತೆಗೆ 63.50 ಮೀ. ಮಾನದಂಡ ನಿಗದಿಪಡಿಸಲಾಗಿತ್ತು. 2018ರಲ್ಲಿ 61.04 ಮೀ. ದೂರ ಎಸೆದಿದ್ದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿತ್ತು.

ಇದಲ್ಲದೆ ಕೌರ್ ಅವರು ಒಂಬತ್ತು ವರ್ಷಗಳ ಹಿಂದೆ ಕೃಷ್ಣಾ ಪೂನಿಯಾ (64.76) ಸ್ಥಾಪಿಸಿದ್ದ ರಾಷ್ಟ್ರೀಯ ದಾಖಲೆಯನ್ನು ಮೀರಿದರು.

ಈ ವಿಭಾಗದಲ್ಲಿ ಸೀಮಾ ಪೂನಿಯಾ (62.64 ಮೀ.) ಬೆಳ್ಳಿ ಗೆದ್ದುಕೊಂಡರೆ, ದೆಹಲಿಯ ಸೋನಾಲ್ ಗೋಯಲ್ (52.11 ಮೀ.) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಹಿಮಾ ದಾಸ್‌ಗೆ ಚಿನ್ನ: ಮಹಿಳೆಯರ 200 ಮೀಟರ್ ಓಟದಲ್ಲಿ ತಾರಾ ಅಥ್ಲೀಟ್, ಅಸ್ಸಾಂನ ಹಿಮಾ ದಾಸ್ ನೂತನ ಕೂಟ ದಾಖಲೆಯೊಂದಿಗೆ ಅಗ್ರಸ್ಥಾನ ಗಳಿಸಿದರು. 23.21 ಸೆಕೆಂಡುಗಳಲ್ಲಿ ಅವರು ಗುರಿ ತಲುಪಿದರು. ಇದರೊಂದಿಗೆ ಸೆಮಿಫೈನಲ್ ಹೀಟ್‌ನಲ್ಲಿ ತಮಿಳುನಾಡಿನ ಎಸ್.ಧನಲಕ್ಷ್ಮಿ ಎದುರು ಅನುಭವಿಸಿದ್ದ ಹಿನ್ನಡೆಗೆ ಮುಯ್ಯಿ ತೀರಿಸಿಕೊಂಡರು.

ಧನಲಕ್ಷ್ಮಿ (23.39 ಸೆ.) ಬೆಳ್ಳಿ ಪದಕ ಗೆದ್ದರೆ, ಅರ್ಚನಾ ಸುಶೀಂದ್ರನ್ (23.60 ಸೆ.) ಕಂಚು ತಮ್ಮದಾಗಿಸಿಕೊಂಡರು.


ಪ್ರಶಸ್ತಿಯೊಂದಿಗೆ ದಿಶಾ ಖಂಡೋಜಿ ಮತ್ತು ವೈಭವ್ ಕೃಷ್ಣ

ಟೆನಿಸ್: ವೈಭವ್, ದಿಶಾಗೆ ಚಾಂಪಿಯನ್ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಭವ್ ಕೃಷ್ಣ ಶ್ರೀರಾಮ್ ಮತ್ತು ದಿಶಾ ಸಂತೋಷ್ ಖಂಡೋಜಿ ಇಲ್ಲಿನ ಟೆನಿಸ್ 360 ಅಕಾಡೆಮಿಯಲ್ಲಿ ನಡೆದ ರಾಜ್ಯ ಟೆನಿಸ್ ಸಂಸ್ಥೆಯ ಟ್ಯಾಲೆಂಟ್ ಸೀರಿಸ್‌ನ 16 ವರ್ಷದೊಳಗಿನವರ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ಆರನೇ ಶ್ರೇಯಾಂಕದ ವೈಭವ್ ನಾಲ್ಕನೇ ಶ್ರೇಯಾಂಕಿತ ಸುಚಿರ್ ಚೇತನ್ ಶೇಷಾದ್ರಿ ವಿರುದ್ಧ 6-3, 5-7, 6-2ರಲ್ಲಿ ಗೆಲುವು ಸಾಧಿಸಿದರು. ಬಾಲಕಿಯರ ವಿಭಾಗದಲ್ಲಿ ಮೂರನೇ ಶ್ರೇಯಾಂಕದ ಕಾಜಲ್ ರಮಿಸೆಟ್ಟಿ ಅವರನ್ನು 6-4, 6-4ರಲ್ಲಿ ಮಣಿಸಿದ ದಿಶಾ ಪ್ರಶಸ್ತಿ ಮುಡಿಗೇರಿಸಿಕೊಂಡರು.